ಮಂಗಳವಾರ, ಡಿಸೆಂಬರ್ 28, 2021 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖ • ಪಾಸ್‌ವರ್ಡ್ ಮುಚ್ಚಿಟ್ಟ ತನಿಖಾ ಸಂಸ್ಥೆ

ಸರ್ಕಾರದ ಪೋರ್ಟಲ್ ಹ್ಯಾಕ್ ತನಿಖೆಗೆ ಸಿಸಿಬಿ ಅಡ್ಡಿ?

• ಅಕ್ರಂ ಮೊಹಮ್ಮದ್

ಬೆಂಗಳೂರು: ಅಂತರರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ವಿರುದ್ಧ ದಾಖಲಾಗಿದ್ದ ಪ್ರಕರಣ ತನಿಖೆಯಲ್ಲಿ ನಗರದ ಸಿಸಿಬಿ ಪೊಲೀಸರು ಸಿಐಡಿಯ ಸೈಬರ್ ಅಪರಾಧ ಪೊಲೀಸ್ ಠಾಣೆಯ (ಸಿಸಿಪಿಎಸ್) ಅಧಿಕಾರಿಗಳಿಗೆ ಅಸಹಕಾರ ತೋರಿದ್ದರು ಎಂಬ ಸಂಗತಿ ಆರೋಪಪಟ್ಟಿಯಲ್ಲೇ ಬಹಿರಂಗವಾಗಿದೆ.

ರಾಜ್ಯ ಸರ್ಕಾರದ ಇ–ಸಂಗ್ರಹಣಾ ವ್ಯವಸ್ಥೆಯ ಪೋರ್ಟಲ್ ಅನ್ನು ಹ್ಯಾಕ್ ಮಾಡಿದ್ದ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಸಿಸಿಪಿಎಸ್ ಪೊಲೀಸರು ಸಲ್ಲಿರುವ ಆರೋಪಪಟ್ಟಿ ಜತೆಗೆ ಒದಗಿಸಿರುವ ದಾಖಲೆಗಳು ಸಿಸಿಬಿ ಪೊಲೀಸರ ನಡೆಯ ಕುರಿತು ಸಂಶಯಕ್ಕೆ ಕಾರಣವಾಗಿವೆ. ಹ್ಯಾಕರ್ ಶ್ರೀಕೃಷ್ಣನಿಂದ ವಶಕ್ಕೆ ಪಡೆದಿದ್ದ ಹಾರ್ಡ್ ಡಿಸ್ಕ್ ಮತ್ತು ಇತರ ಉಪಕರಣಗಳಿಂದ ಸಂಗ್ರಹಿಸಿದ್ದ ಮಾಹಿತಿಯನ್ನು ಹಂಚಿಕೊಳ್ಳುವಂತೆ ಸಿಐಡಿ ಅಧಿಕಾರಿಗಳು ಸಿಸಿಬಿ ಪೊಲೀಸರಿಗೆ 2021ರ ಜ.12ರಂದು ಪತ್ರ ಬರೆದಿದ್ದರು.

ಶ್ರೀಕೃಷ್ಣ

‘ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯಲ್ಲೂ ತಿರುಚಿರದ ಹಾಗೂ ನಮ್ಮ ತನಿಖೆಗೆ ಅಡ್ಡಿಯಾಗದ ರೀತಿಯಲ್ಲಿ ನಾವು ಕೋರಿರುವ ಮಾಹಿತಿಗಳನ್ನು ಒದಗಿಸಬೇಕು’ ಎಂದು ಸಿಐಡಿ ಅಧಿಕಾರಿಗಳು ಪತ್ರದಲ್ಲಿ ಉಲ್ಲೇಖಿಸಿದ್ದರು.

ಇ–ಸಂಗ್ರಹಣಾ ಪೋರ್ಟಲ್ ಹ್ಯಾಕ್ ಮಾಡಿ ₹ 11.55 ಕೋಟಿ ದೋಚಿದ್ದ ಪ್ರಕರಣದಲ್ಲಿ ಶ್ರೀಕಿ ಮೊದಲನೇ ಆರೋಪಿ. ಈ ಪ್ರಕರಣದಲ್ಲಿ ಸಿಸಿಬಿ ಪೊಲೀಸರು ಒದಗಿಸಿದ್ದ ಶ್ರೀಕಿಯ ಹಾರ್ಡ್ ಡಿಸ್ಕ್‌ಗಳ ಫೊರೆನ್ಸಿಕ್ ಇಮೇಜ್ ಪ್ರತಿಗಳಲ್ಲಿದ್ದ ಮಾಹಿತಿಯನ್ನು ನಿಗೂಢ ಲಿಪಿಗೆ ಪರಿವರ್ತಿಸಲಾಗಿತ್ತು (ಎನ್‌ಕ್ರಿಪ್ಟೆಡ್) ಮತ್ತು ತಪ್ಪಾದ ಪಾಸ್‌ವರ್ಡ್‌ಗಳನ್ನು ಒದಗಿಸಿದ್ದರು ಎಂಬುದೂ ಆರೋಪಪಟ್ಟಿಯಲ್ಲಿದೆ.

2020ರ ಜನವರಿಯಲ್ಲೇ ಸಿಐಡಿ ಅಧಿಕಾರಿಗಳು ಮಾಹಿತಿ ಕೋರಿ ದ್ದರು. ಅದೇ ತಿಂಗಳಿನಲ್ಲಿ ಸಿಸಿಬಿ ಅಧಿಕಾರಿಗಳು ಮಾಹಿತಿ ಒದಗಿಸಿದ್ದರು. HARDDISK_SRIKI.001 ಎಂಬ ಹೆಸರಿನ ಇ–ಕಡತದಲ್ಲಿದ್ದ ಮಾಹಿತಿಯನ್ನು ಎನ್‌ಕ್ರಿಪ್ಟ್ ಮಾಡಲಾಗಿತ್ತು ಮತ್ತು ಸಿಸಿಬಿ ಸಿಬ್ಬಂದಿ ಸರಿಯಾದ ಪಾಸ್‌ವರ್ಡ್‌ಗಳನ್ನೂ ಒದಗಿಸಿರಲಿಲ್ಲ. ಈ ಕಾರಣಕ್ಕಾಗಿ ಸಿಐಡಿ ಅಧಿಕಾರಿಗಳು ಪತ್ರ ಬರೆದು ಆಕ್ಷೇಪಿಸಿದ್ದರು ಎಂದು ನ್ಯಾಯಾಲಯಕ್ಕೆ ತಿಳಿಸಲಾಗಿದೆ.

Sriki MacJ, sriki-Damaged and MacBook Silver - ಎಂಬ ಹೆಸರಿನಲ್ಲಿ ಪ್ರತ್ಯೇಕವಾಗಿ ಒದಗಿಸಿದ್ದ 3 ಹಾರ್ಡ್ ಡಿಸ್ಕ್‌ಗಳಲ್ಲಿನ ಮಾಹಿತಿಯನ್ನೂ ಎನ್‌ಕ್ರಿಪ್ಟ್ ಮಾಡಲಾಗಿತ್ತು. ಆ ಬಳಿಕವೇ ಸಿಐಡಿ ಅಧಿಕಾರಿಗಳು, ‘ಯಾವುದೇ ರೀತಿಯಲ್ಲೂ ತಿರುಚಿರದ ಮತ್ತು ತನಿಖೆಗೆ ಅಡ್ಡಿಯಾಗದ ರೀತಿಯಲ್ಲಿ ಮಾಹಿತಿ ಒದಗಿಸಬೇಕು’ ಎಂಬುದಾಗಿ ಪತ್ರ ಬರೆದಿದ್ದರು ಎಂಬ ಉಲ್ಲೇಖ ಆರೋಪಪಟ್ಟಿಯಲ್ಲಿದೆ.

ಪತ್ರಕ್ಕೆ ಪ್ರತಿಕ್ರಿಯಿಸಿದ್ದ ಸಿಸಿಬಿ ಅಧಿಕಾರಿಗಳು, ತಮ್ಮ ತಾಂತ್ರಿಕ ಕೇಂದ್ರದ ಅಧಿಕಾರಿಯೊಬ್ಬರನ್ನು ಸಿಸಿಪಿಎಸ್ ಠಾಣೆಗೆ ನಿಯೋಜಿಸುವುದಾಗಿ ತಿಳಿಸಿದ್ದರು. ಅವರ ನೆರವಿನಲ್ಲಿ ಮಾಹಿತಿ ಸಂಗ್ರಹಿಸಲು ಸೂಚಿಸಿದ್ದರು. ಮಾಹಿತಿ ಸಂಗ್ರಹ ಮತ್ತು ಶ್ರೀಕೃಷ್ಣನನ್ನು ವಶಕ್ಕೆ ಪಡೆಯುವ ವಿಚಾರದಲ್ಲಿ ಸಿಸಿಪಿಎಸ್ ಪೊಲೀಸರು ಸಿಸಿಬಿ ವಿರುದ್ಧ ಎರಡು ಬಾರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು ಎಂಬ ಮಾಹಿತಿಯೂ ದಾಖಲೆಯಲ್ಲಿದೆ.

ಕಾಶ್ಮೀರದ ನೆಲ ಮಾರಾಟಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ಸರ್ಕಾರ ಸೋಮವಾರ ದೇಶದ ರಿಯಲ್ ಎಸ್ಟೇಟ್ ಹೂಡಿಕೆದಾರರೊಂದಿಗೆ ₹18,300 ಕೋಟಿ ಮೊತ್ತದ 39 ತಿಳಿವಳಿಕೆ ಪತ್ರಗಳಿಗೆ ಸಹಿ ಹಾಕಿದ್ದು, ಈ ಮೂಲಕ ಕಾಶ್ಮೀರದ ನೆಲ ದೇಶದ ಇತರ ಭಾಗಗಳಿಗೂ ಮುಕ್ತವಾಗಿದೆ.

ಈ ಮೊದಲು ಕಾಶ್ಮೀರದ ಕಾಯಂ ನಿವಾಸಿಗಳಲ್ಲದೆ ಹೊರಗಿನವರು ನಿವೇಶನ ಖರೀದಿಸುವಂತಿರಲಿಲ್ಲ. ಕೇಂದ್ರವು 2019ರ ಆಗಸ್ಟ್‌ನಲ್ಲಿ 370ನೇ ವಿಧಿ ರದ್ದುಪಡಿಸಿದ ಕಾರಣ ರಾಜ್ಯದ ವಿಶೇಷ ಸ್ಥಾನಮಾನ ರದ್ದಾಗಿದ್ದು, ವಸತಿ ಮತ್ತು ವಾಣಿಜ್ಯ ಕಟ್ಟಡಗಳ ನಿರ್ಮಾಣಕ್ಕಾಗಿ ಇದೀಗ ರಿಯಲ್ ಎಸ್ಟೇಟ್ ಉದ್ಯಮಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವುದು ಸಾಧ್ಯವಾಗಿದೆ.

ಬಿಜೆಪಿ, ಕಾಂಗ್ರೆಸ್‌ಗೆ ಮುಖಭಂಗ

ಚಂಡೀಗಡ ಪಾಲಿಕೆ: ಎಎಪಿಗೆ ಮೇಲುಗೈ

ಪ್ರಜಾವಾಣಿ ವಾರ್ತೆ

ಚಂಡೀಗಡ: ಆಮ್ ಆದ್ಮಿ ಪಕ್ಷವು ಚಂಡೀಗಡ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಭಾರಿ ಜಯ ಗಳಿಸಿದೆ. ಪಂಜಾಬ್ ವಿಧಾನಸಭಾ ಚುನಾವಣೆ ಹೊಸ್ತಿಲಲ್ಲಿ ಪಕ್ಷಕ್ಕೆ ಈ ಗೆಲುವು ಭಾರಿ ಹುರುಪು ತಂದಿದೆ. ಪಂಜಾಬ್‌ನಲ್ಲಿ ಈಗಾಗಲೇ 20 ಶಾಸಕರನ್ನು ಹೊಂದಿರುವ ಎಎಪಿ, ಪಾಲಿಕೆ ಚುನಾವಣಾ ಗೆಲುವಿನ ಉತ್ಸಾಹದಿಂದ ವಿಧಾನಸಭಾ ಚುನಾವಣಾ ಕಣಕ್ಕೆ ಧುಮುಕಲು ಸಜ್ಜಾಗಿದೆ.

ರಾಜ್ಯದ ಪ್ರಮುಖ ಪಕ್ಷಗಳಾದ ಕಾಂಗ್ರೆಸ್, ಎಸ್‌ಎಡಿ, ಬಿಜೆಪಿ ಪಾಲಿಕೆ ಚುನಾವಣೆಯಲ್ಲಿ ಹಿನ್ನಡೆ ಅನುಭವಿಸಿವೆ. ಆಮ್ ಆದ್ಮಿ ಪಕ್ಷವು, ರಾಜ್ಯದಲ್ಲಿ ಬದಲಾಗುತ್ತಿರುವ ರಾಜಕೀಯದ ಲಾಭ ಪಡೆಯುವ ನಿರೀಕ್ಷೆಯಿದೆ. ಈ ಗೆಲುವನ್ನು ಪಂಜಾಬ್ ವಿಧಾನಸಭಾ ಚುನಾವಣೆಯ ಮುನ್ನುಡಿ ಎಂಬ ಅರ್ಥದಲ್ಲಿ ಎಎಪಿ ನಾಯಕರು ನೋಡುತ್ತಿದ್ದಾರೆ.

ಎಎಪಿ ಜಯವು ಪಂಜಾಬ್‌ನಲ್ಲಿ ಭಾರಿ ಬದಲಾವಣೆಯನ್ನು ಬೊಟ್ಟು ಮಾಡುತ್ತದೆ. ಬದಲಾವಣೆಗೆ ಪಂಜಾಬ್ ಸಿದ್ಧವಾಗಿದ್ದು, ಜನರು ಎಎಪಿಯನ್ನು ಆಯ್ಕೆ ಮಾಡಿದ್ದಾರೆ

ಅರವಿಂದ ಕೇಜ್ರಿವಾಲ್,
ದೆಹಲಿ ಮುಖ್ಯಮಂತ್ರಿ

ಬಿಜೆಪಿ–ಎಎಪಿ ಒಟ್ಟಾಗಿ ಚುನಾವಣೆ ಎದುರಿಸಿದ್ದವು. ಮೇಯರ್ ಆಯ್ಕೆಯಲ್ಲಿ ಆ ಪಕ್ಷಗಳೇ ಹೊಂದಾಣಿಕೆ ಮಾಡಿಕೊಂಡರೆ, ಮತದಾನವೇ ಬೇಕಿರುವುದಿಲ್ಲ

ಸುಭಾಷ್ ಚಾವ್ಲಾ,
ಚಂಡೀಗಡ ಕಾಂಗ್ರೆಸ್ ಘಟಕದ ಅಧ್ಯಕ್ಷ

ಚಂಡೀಗಡ ಪಾಲಿಕೆಯ 35 ವಾರ್ಡ್‌ಗಳ ಪೈಕಿ 14 ವಾರ್ಡ್‌ಗಳಲ್ಲಿ ಎಎಪಿ ಮೋಡಿ ಮಾಡಿದೆ. ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿರುವ ಬಿಜೆಪಿ 12 ಸ್ಥಾನಗಳನ್ನು ಗಳಿಸಿದೆ. ಕಾಂಗ್ರೆಸ್ 8 ಹಾಗೂ ಎಸ್‌ಎಡಿ 1 ಸ್ಥಾನಗಳಲ್ಲಿ ಗೆದ್ದಿವೆ.

ಈ ಚುನಾವಣೆಯು ಬಿಜೆಪಿಗೆ ಭಾರಿ ಹಿನ್ನಡೆ ಉಂಟುಮಾಡಿದ್ದು, ಮೇಯರ್ ಆಗಿದ್ದ ಬಿಜೆಪಿಯ ರವಿಕಾಂತ್ ಶರ್ಮಾ ಹಾಗೂ ಮಾಜಿ ಮೇಯರ್ ದವೇಶ್ ಮೌದ್ಗಿಲ್ ಅವರನ್ನು ಎಎಪಿ ಅಭ್ಯರ್ಥಿಗಳು ಪರಾಭವಗೊಳಿಸಿದ್ದಾರೆ.

ಕಾಂಗ್ರೆಸ್ ಅತಿಹೆಚ್ಚು, ಅಂದರೆ ಶೇ 29.79ರಷ್ಟು ಮತ ಗಳಿಸಿದೆ. ಬಿಜೆಪಿ ಶೇ 29.30, ಎಎಪಿ ಶೇ 27.08ರಷ್ಟು ಮತಗಳನ್ನು ಪಡೆದುಕೊಂಡಿವೆ.



ಪಿಟಿಸಿಎಲ್: ಕಂದಾಯ ಇಲಾಖೆಯಲ್ಲೇ ಉಳಿದ ತಿದ್ದುಪಡಿ ಪ್ರಸ್ತಾವ

ದಲಿತರ ಹೋರಾಟ ಅರಣ್ಯರೋದನ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಭೂಹೀನರನ್ನಾಗಿ ಮಾಡುವುದನ್ನು ತಡೆಯುವ ಉದ್ದೇಶದಿಂದ ಜಾರಿಗೆ ತಂದ ಎಸ್‌ಸಿ, ಎಸ್‌ಟಿ ಭೂ ಪರಭಾರೆ ನಿಷೇಧ ಕಾಯ್ದೆ (ಪಿಟಿಸಿಎಲ್) ಈಗ ಇದ್ದೂ ಇಲ್ಲದಂತಾಗಿದೆ. ಕಾಯ್ದೆ ತಿದ್ದುಪಡಿ ಮಾಡಬೇಕು ಎಂಬ ದಲಿತ ಹೋರಾಟಗಾರರ ಕೂಗು ಅರಣ್ಯರೋದನವಾಗಿಯೇ ಉಳಿದಿದೆ.

ಮುಖ್ಯಮಂತ್ರಿ ಆಗಿದ್ದ ದೇವರಾಜ ಅರಸು ಅವರು 1979ರ ಜನವರಿ 1ರಿಂದ ಜಾರಿಗೆ ಬರುವಂತೆ ಪಿಟಿಸಿಎಲ್ ಕಾಯ್ದೆಯನ್ನು ಕರ್ನಾಟಕದಲ್ಲಿ ಜಾರಿಗೆ ತಂದರು. ಕಾಯ್ದೆ ಜಾರಿಗೆ ಮುನ್ನ ಮತ್ತು ನಂತರ ಪರಿಶಿಷ್ಟರಿಗೆ ಮಂಜೂರಾಗುವ ಜಮೀನುಗಳನ್ನು ಪರಭಾರೆ ಮಾಡಲು ಸರ್ಕಾರದ ಪೂರ್ವಾನುಮತಿ ಅತ್ಯವಶ್ಯ ಎಂಬ ಷರತ್ತು ಇದೆ.

ಕಾಯ್ದೆ ಉಲ್ಲಂಘಿಸಿ ಭೂಮಿ ಪರಭಾರೆ ಆಗಿದ್ದಲ್ಲಿ ಮರು ಮಂಜೂರಾತಿ ಕೋರಿ ಮೂಲ ಮಂಜೂರಾತಿದಾರರು ಅಥವಾ ಅವರ ವಾರಸುದಾರರು ಉಪವಿಭಾಗಾಧಿಕಾರಿಗೆ ಅರ್ಜಿ ಸಲ್ಲಿಸಬಹುದು. ಪರಭಾರೆಯಾದ ಇಂತಿಷ್ಟೇ ದಿನಗಳಲ್ಲಿ ಅರ್ಜಿ ಸಲ್ಲಿಸಬೇಕು ಎಂಬ ಕಾಲಮಿತಿ ಇರಲಿಲ್ಲ.

ನೆಕ್ಕಂಟಿ ರಾಮಲಕ್ಷ್ಮಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 'ಸಮುಚಿತ ಸಮಯದೊಳಗೆ ಅರ್ಜಿ ಸಲ್ಲಿಸಬೇಕು' ಎಂದು 2017ರ ಅಕ್ಟೋಬರ್ 26ರಲ್ಲಿ ತಿಳಿಸಿತು.

ಪಿಟಿಸಿಎಲ್ ಕಾಯ್ದೆಗೆ ಸಣ್ಣ ತಿದ್ದುಪಡಿ ಆಗಬೇಕಿದೆ. ಈ ಬಗ್ಗೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚಿಸಿದ್ದೇನೆ. ಮುಖ್ಯಮಂತ್ರಿ ಕೂಡ ಭರವಸೆ ನೀಡಿದ್ದಾರೆ ಎನ್.ಮಹೇಶ್, ಶಾಸಕರು, ಕೊಳ್ಳೇಗಾಲ

'ಇದಾದ ನಂತರ ಪಿಟಿಸಿಎಲ್ ಕಾಯ್ದೆ ಉಲ್ಲಂಘನೆಯಾಗಿದೆ ಎಂದು ಉಪವಿಭಾಗಾಧಿಕಾರಿ, ಜಿಲ್ಲಾಧಿಕಾರಿ ನ್ಯಾಯಾಲಯಗಳಲ್ಲಿ ಸಲ್ಲಿಕೆಯಾಗುತ್ತಿರುವ ಅರ್ಜಿಗಳಲ್ಲಿ ಪರಿಶಿಷ್ಟರಿಗೆ ವಿರುದ್ಧವಾದ ಆದೇಶಗಳು ಹೊರ ಬೀಳುತ್ತಿವೆ. ಭೂಮಿ ಪರಭಾರೆಯಾದ ನಿರ್ದಿಷ್ಟ ಸಮಯದೊಳಗೆ ಅರ್ಜಿ ಸಲ್ಲಿಸಿಲ್ಲ ಎಂಬ ಒಂದೇ ಕಾರಣ ನೀಡಿ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ. ನಿರ್ದಿಷ್ಟ ಸಮಯ ಎಂದರೆ ಎಷ್ಟು ಎಂಬುದನ್ನೂ ಸುಪ್ರೀಂ ಕೋರ್ಟ್ ಹೇಳಿಲ್ಲ. ರಿಯಲ್ ಎಸ್ಟೇಟ್ ಮಾಫಿಯಾಕ್ಕೆ ಅಧಿಕಾರಿಗಳು ಮಣಿಯುತ್ತಿದ್ದಾರೆ. 3 ಸಾವಿರಕ್ಕೂ ಹೆಚ್ಚು ಅರ್ಜಿಗಳನ್ನು ವಜಾಗೊಂಡಿವೆ' ಎಂಬುದು ಅರ್ಜಿದಾರರ ಅಳಲು.

'ಈ ಹಿಂದಿನ ಎಲ್ಲಾ ಪ್ರಕರಣಗಳಲ್ಲೂ ಸುಪ್ರೀಂ ಕೋರ್ಟ್ ಪಿಟಿಸಿಎಲ್ ಕಾಯ್ದೆಯ ಉದ್ದೇಶವನ್ನು ಎತ್ತಿ ಹಿಡಿದಿವೆ. ನೆಕ್ಕಂಟಿ ರಾಮಲಕ್ಷ್ಮಿ ಪ್ರಕರಣದಲ್ಲಿ ಸರ್ಕಾರದ ಪರ ವಕೀಲರು ಕೋರ್ಟ್‌ಗೆ ಹಾಜರಾಗಲೇ ಇಲ್ಲ. ಕಾಯ್ದೆಯ ಉದ್ದೇಶವನ್ನು ಮನವರಿಕೆ ಮಾಡಿಕೊಡಲೇ ಇಲ್ಲ' ಎಂದು ಪಿಟಿಸಿಎಲ್ ಹೋರಾಟಗಾರ ಚಳ್ಳಕೆರೆ ಶಾಂತಕುಮಾರ್ ಹೇಳಿದರು.

'ಕಾಯ್ದೆಗೆ ಸಮಗ್ರ ತಿದ್ದುಪಡಿ ತರಬೇಕು ಎಂದು ಒತ್ತಾಯಿಸಿ ದಲಿತ ಸಂಘಟನೆಗಳು ನಿತ್ಯ ಹೋರಾಟ ನಡೆಸುತ್ತಿವೆ. ಸರ್ಕಾರ ಜಾಣಗುರುಡು ಪ್ರದರ್ಶಿಸುತ್ತಿದೆ. ಮನವಿ ಪತ್ರ ಪಡೆದು ಹೋಗುವ ಸಚಿವರು ಕಸದ ಬುಟ್ಟಿಗೆ ಬಿಸಾಸುತ್ತಿದ್ದಾರೆ. ದಲಿತರ ಭೂಮಿ ಖರೀದಿಸಿ ರಿಯಲ್ ಎಸ್ಟೇಟ್ ವಹಿವಾಟು ನಡೆಸಿರುವ ರಾಜಕಾರಣಿಗಳಿಗೆ ಈ ಕಾಯ್ದೆ ಬೇಡವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಸಚಿವ ಆರ್.ಅಶೋಕ್ ಅವರ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಆದರೆ, ಅವರು ಸಂಪರ್ಕಕ್ಕೆ ಬರಲಿಲ್ಲ.

ಸದನ ಸಮಿತಿಯಿಂದಲೂ ಶಿಫಾರಸು

'ಕರ್ನಾಟಕ ವಿಧಾನ ಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಕೂಡ ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ಶಿಫಾರಸು ಮಾಡಿದೆ. ಕಾನೂನು ಇಲಾಖೆಯೂ ಸಮ್ಮತಿ ಸೂಚಿಸಿದೆ. ಆದರೆ, ಕಂದಾಯ ಸಚಿವರ ಕಚೇರಿಯಲ್ಲಿ ಕಡತ ಮೂರು ತಿಂಗಳಿಂದ ಬಾಕಿ ಉಳಿದಿದೆ' ಎಂದು ಪಿಟಿಸಿಎಲ್ ಹೋರಾಟಗಾರ ಎಂ.ಎಚ್. ಮಂಜುನಾಥ್ ತಿಳಿಸಿದರು.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶಾಸಕರು, ವಿಧಾನ ಪರಿಷತ್ತಿನ ಸದಸ್ಯರು ಸದನದಲ್ಲಿ ಎತ್ತುತ್ತಿಲ್ಲ. ಯಾರೊಬ್ಬರಿಗೂ ಸಮುದಾಯದ ಜನರ ಬಗ್ಗೆ ಕಾಳಜಿ ಇಲ್ಲ' ಬೇಸರ ವ್ಯಕ್ತಪಡಿಸಿದರು.

'ಅಹೋರಾತ್ರಿ ಹೋರಾಟ'

'ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರದಿದ್ದರೆ, ಕಾಯ್ದೆ ಇದ್ದೂ ಉಪಯೋಗವಿಲ್ಲ. ಬೆಳಗಾವಿ ಅಧಿವೇಶನದಲ್ಲೂ ತಿದ್ದುಪಡಿ ಮಸೂದೆ ಮಂಡನೆಯಾಗಲಿಲ್ಲ. ದಲಿತರ ಬಗ್ಗೆ ಕಾಳಜಿ ಇಲ್ಲದಿದ್ದರೆ ಕಾಯ್ದೆಯನ್ನೇ ಸರ್ಕಾರ ರದ್ದು ಮಾಡಲಿ' ಎಂದು ಪಿಟಿಸಿಎಲ್ ಬಾಧಿತರ ಹೋರಾಟ ಸಮಿತಿ ಅಧ್ಯಕ್ಷ ಹರಿರಾಮ್ ಹೇಳಿದರು.

'ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಿಂದ ಹೋರಾಟ ಪ್ರಬಲಗೊಳಿಸಲಾಗುವುದು. ಸರ್ಕಾರ ಸ್ಪಂದಿಸದಿದ್ದರೆ ಕುಟುಂಬ ಸಮೇತ ಅಹೋರಾತ್ರಿ ಪ್ರತಿಭಟನೆ ನಡೆಸಲಾಗುವುದು' ಎಂದು ಅವರು ಎಚ್ಚರಿಸಿದರು.

ಭೋವಿ ಅಭಿವೃದ್ಧಿ ನಿಗಮಕ್ಕೆ ₹2 ಸಾವಿರ ಕೋಟಿ ಅನುದಾನ ಬೇಡಿಕೆ: ಧರಣಿ

ಪ್ರಜಾವಾಣಿ ವಾರ್ತೆ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಭೋವಿ ಸಮುದಾಯದ ವಿವಿಧ ಸಂಘಟನೆಗಳ ಸದಸ್ಯರು ಸೋಮವಾರ ಧರಣಿ ನಡೆಸಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು: ಭೋವಿ ಅಭಿವೃದ್ಧಿ ನಿಗಮಕ್ಕೆ ₹2 ಸಾವಿರ ಕೋಟಿ ಅನುದಾನ ಬಿಡುಗಡೆ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಿಲ ಕರ್ನಾಟಕ ಭೋವಿ ಯುವ ವೇದಿಕೆಯ (ಕ್ರಾಂತಿ) ನೇತೃತ್ವದಲ್ಲಿ ಸೋಮವಾರ ಧರಣಿ ನಡೆಸಲಾಯಿತು.

ಅಖಿಲ ಕರ್ನಾಟಕ ಭೋವಿ ಕಲ್ಲು-ಬಂಡೆ-ಮಣ್ಣು, ಕಟ್ಟಡ ಕಾರ್ಮಿಕ ವೇದಿಕೆ ಹಾಗೂ ಕಲ್ಲು-ಬಂಡೆ ಕುಟ್ಟಿಕಾರರ ಹೋರಾಟ ಸಮಿತಿಯ ಸದಸ್ಯರೂ ಧರಣಿಯಲ್ಲಿ ಭಾಗವಹಿಸಿದ್ದರು.

'ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದ ನೇಮಕಾತಿಯಲ್ಲಿ ಅಕ್ರಮಗಳಾಗಿವೆ. ಅನುದಾನವನ್ನೂ ದುರ್ಬಳಕೆ ಮಾಡಲಾಗಿದೆ. 2017ರಿಂದ ಈವರೆಗೂ ನಡೆದಿರುವ ಅವ್ಯವಹಾರದ ಬಗ್ಗೆ ಹೈಕೋರ್ಟ್‌ನ ಹಾಲಿ ನ್ಯಾಯಾಧೀಶರಿಂದ ಸಮಗ್ರ ತನಿಖೆ ನಡೆಸಬೇಕು. ಭ್ರಷ್ಟ ಅಧಿಕಾರಿಗಳು ಹಾಗೂ ದಲ್ಲಾಳಿಗಳ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ರೀತ್ಯ ಕ್ರಮ ಕೈಗೊಳ್ಳಬೇಕು' ಎಂದು ಧರಣಿ ನಿರತರು ಒತ್ತಾಯಿಸಿದರು.

'ಗಣಿಗಾರಿಕೆ, ಅರಣ್ಯ ಹಾಗೂ ಪರಿಸರ ಸಂರಕ್ಷಣೆಯ ನೆಪವೊಡ್ಡಿ ಸಮುದಾಯದ ಕುಲಕಸುಬನ್ನೇ ನಿರ್ಬಂಧಿಸಲಾಗಿದೆ. ಹೀಗಾಗಿ ಅನೇಕ ಕುಟುಂಬಗಳು ಬೀದಿಗೆ ಬಂದಿವೆ. ಕಲ್ಲು-ಬಂಡೆ ಒಡೆದು ಜೀವನ ಸಾಗಿಸುತ್ತಿದ್ದ ಬಡವರ ಮೇಲೆ ಹಲವು ಪ್ರಕರಣಗಳನ್ನು ದಾಖಲಿಸಲಾಗಿದೆ. ಇದರಿಂದ ಅವರು ವರ್ಷಗಟ್ಟಲೇ ನ್ಯಾಯಾಲಯಕ್ಕೆ ಅಲೆಯುವಂತಾಗಿದೆ. ಹೀಗಾಗಿ ಪ್ರಕರಣಗಳನ್ನೆಲ್ಲಾ ಕೂಡಲೇ ಕೈಬಿಡಬೇಕು' ಎಂದು ಆಗ್ರಹಿಸಿದರು. 'ಸೈಜು ಕಲ್ಲು ಸಿದ್ಧಪಡಿಸುವ ಹಾಗೂ ಬಂಡೆ ಒಡೆಯುವುದಕ್ಕೆ ಸಂಬಂಧಿಸಿದ ನೇರ ಗುತ್ತಿಗೆಯನ್ನು ಭೋವಿ ಜನಾಂಗದವರಿಗೇ ಮಂಜೂರಾತಿ ಮಾಡಬೇಕು' ಎಂದು ಒತ್ತಾಯಿಸಿದರು.

'ವಿಧಾನಸೌಧದ ಮುಂಭಾಗದಲ್ಲಿ ಭೋವಿ ಸಮುದಾಯದ ಆದಿಗುರು ಸಿದ್ಧರಾಮೇಶ್ವರರ ಕಂಚಿನ ಪುತ್ಥಳಿ ನಿರ್ಮಿಸಬೇಕು. ಸ್ವಾತಂತ್ರ್ಯ ಸೇನಾನಿ ಬೆಳವಡಿ ವಡ್ಡರ ಯಲ್ಲಣ್ಣ ಹೆಸರಿನಲ್ಲಿ ಪ್ರಾಧಿಕಾರ ರಚಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಅವೈಜ್ಞಾನಿಕ ಹಾಗೂ ಸಂವಿಧಾನ ಬಾಹಿರವಾಗಿರುವ ನ್ಯಾ.ಸದಾಶಿವ ಆಯೋಗದ ವರದಿಯನ್ನು ರದ್ದುಪಡಿಸಬೇಕು. ಭೋವಿ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರನ್ನು ಕೂಡಲೇ ನೇಮಕ ಮಾಡಬೇಕು' ಎಂದು ಅಖಿಲ ಕರ್ನಾಟಕ ಭೋವಿ ಯುವ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ವೈ.ಕೊಟ್ರೇಶ್ ತಿಳಿಸಿದರು.

ರಾಜ್ಯದಲ್ಲಿ ಆಡಳಿತ ಯಂತ್ರವೇ ಇಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಆಡಳಿತ ಯಂತ್ರವೇ ಇಲ್ಲ. ಇಂತಹ ಸ್ಥಿತಿಯಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಷಯ ಯಾವ ಪರಿಣಾಮವನ್ನೂ ಬೀರುವುದಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಮುಖ್ಯಮಂತ್ರಿ ಬದಲಾವಣೆ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ಆಡಳಿತ ಯಂತ್ರ ನಿಷ್ಕ್ರಿಯಗೊಂಡಿದೆ. ವರ್ಗಾವಣೆಗೆ ಲಂಚ ಕೊಟ್ಟು ಅಧಿಕಾರಿಗಳಿಗೆ ಸಾಕಾಗಿದೆ. ಈ ಸರ್ಕಾರ ತೊಲಗಬೇಕು ಎಂದು ಅಧಿಕಾರಿಗಳು ಬಯಸುತ್ತಿದ್ದಾರೆ. ಜನರ ಆಶಯವೂ ಅದೇ ಆಗಿದೆ' ಎಂದರು.

ಕಾಂಗ್ರೆಸ್ ಪಕ್ಷವು ಮೇಕೆದಾಟುವಿನಿಂದ ಬೆಂಗಳೂರಿಗೆ ಹಮ್ಮಿಕೊಂಡಿರುವ ಪಾದಯಾತ್ರೆಗೆ ರಾತ್ರಿ ಕರ್ಫ್ಯೂ ಜಾರಿಯಿಂದ ತೊಂದರೆ ಆಗುವುದಿಲ್ಲ. ಕೋವಿಡ್ ನಿಯಂತ್ರಣ ಮಾರ್ಗಸೂಚಿ ಪಾಲಿಸಿಕೊಂಡು ಪಾದಯಾತ್ರೆ ನಡೆಸಲಾಗುವುದು. ಕೋವಿಡ್ ನೆಪವೊಡ್ಡಿ ಪಾದಯಾತ್ರೆ ತಡೆಯಲು ಆಗುವುದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ಸಿದ್ದರಾಮಯ್ಯ

ಕೋವಿಡ್ ಇರುವಾಗಲೇ ಬಿಜೆಪಿಯವರು ಜನಾಶೀರ್ವಾದ ಯಾತ್ರೆ ಮಾಡಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಈಗ ಉತ್ತರ ಪ್ರದೇಶದಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ. ಅವರಿಗೊಂದು ಕಾನೂನು, ಕಾಂಗ್ರೆಸ್ ಪಕ್ಷಕ್ಕೆ ಒಂದು ಕಾನೂನು ಇದೆಯಾ ಎಂದು ಪ್ರಶ್ನಿಸಿದರು.

ನಿರುದ್ಯೋಗ, ಭ್ರಷ್ಟಾಚಾರ, ಹಸಿವು, ಬಡತನದಂತಹ ಜ್ವಲಂತ ಸಮಸ್ಯೆಗಳಿಂದ ಜನರ ದಿಕ್ಕು ತಪ್ಪಿಸಲು ಬಿಜೆಪಿ ಸರ್ಕಾರ ಮತಾಂತರ ನಿಷೇಧ ಮಸೂದೆ ತಂದಿದೆ ಎಂದರು.

ವಾರದಲ್ಲೇ ರದ್ದು: ಮುಂದೆ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ. ಸರ್ಕಾರ ರಚನೆಯಾದ ವಾರದೊಳಗೆ ಅಥವಾ ವಿಧಾನಮಂಡಲದ ಮೊದಲ ಅಧಿವೇಶನದಲ್ಲೇ ಮತಾಂತರ ನಿಷೇಧ ಮಸೂದೆಯನ್ನು ರದ್ದು ಮಾಡಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

ದ್ವಿತೀಯ ಪಿಯು ಪ್ರಶ್ನೆ ಪತ್ರಿಕೆಗಳಲ್ಲಿ ದೋಷ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಮಧ್ಯವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳಲ್ಲಿ ಸಾಕಷ್ಟು ಲೋಪಗಳು, ಮುದ್ರಣ ದೋಷಗಳು ಇದ್ದ ಬಗ್ಗೆ ದೂರುಗಳು ಕೇಳಿ ಬಂದಿವೆ.

ಇತ್ತೀಚೆಗಷ್ಟೇ ಮಧ್ಯವಾರ್ಷಿಕ ಪರೀಕ್ಷೆಗಳು ಪೂರ್ಣಗೊಂಡಿದ್ದವು. ವಿವಿಧ ವಿಷಯಗಳ ಪ್ರಶ್ನೆ ಪತ್ರಿಕೆಗಳಲ್ಲಿ ಪ್ರಶ್ನೆಗಳನ್ನೇ ತಪ್ಪಾಗಿ ಕೇಳಲಾಗಿದೆ. ಕೆಲವು ಪ್ರಶ್ನೆಗಳು ಪುನರಾವರ್ತನೆ ಆಗಿವೆ. ಲೆಕ್ಕಶಾಸ್ತ್ರ, ಗಣಿತ, ರಸಾಯನ ವಿಜ್ಞಾನ, ಇಂಗ್ಲಿಷ್ ಸೇರಿದಂತೆ ಹಲವು ಪ್ರಶ್ನೆ ಪತ್ರಿಕೆಗಳಲ್ಲಿ ಲೋಪಗಳು ಆಗಿವೆ ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

ಈ ಬಾರಿ ಪದವಿಪೂರ್ವ ಶಿಕ್ಷಣ ಇಲಾಖೆಯೇ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿ, ಪರೀಕ್ಷೆಗಳನ್ನು ನಡೆಸಿದೆ. ಪ್ರತಿ ವರ್ಷ ಮಧ್ಯ ವಾರ್ಷಿಕ ಪರೀಕ್ಷೆಗೆ ಪ್ರಶ್ನೆ ಪತ್ರಿಕೆಗಳನ್ನು ಪ್ರಾಂಶುಪಾಲರ ಸಂಘದಿಂದ ಜಿಲ್ಲಾ ಮಟ್ಟದಲ್ಲೇ ಮುದ್ರಿಸಿ, ಪರೀಕ್ಷೆ ನಡೆಸಲಾಗುತ್ತಿತ್ತು.

ಪರೀಕ್ಷೆಗಳು ಮುಗಿಯುತ್ತಿದ್ದಂತೆಯೇ ಪ್ರಶ್ನೆ ಪತ್ರಿಕೆಗಳಲ್ಲಿ ಆಗಿರುವ ಲೋಪಗಳನ್ನು ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಇಲಾಖೆ ನಿರ್ದೇಶಕರ ಗಮನಕ್ಕೆ ತಂದಿದ್ದಾರೆ.

'ಯಾವ ಕಾರಣಕ್ಕೆ ದೋಷಗಳು ಆಗಿವೆ ಎಂಬ ಬಗ್ಗೆ ನಿರ್ದೇಶಕರಿಂದ ಮಾಹಿತಿ ಕೇಳಿದ್ದೇನೆ' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಹೇಳಿದ್ದಾರೆ.

ಗಾಂಧಿ ಚಿಂತನೆ ಬಂಧಿಸಲು ಸಾಧ್ಯವಿಲ್ಲ: ರಾಹುಲ್

ನವದೆಹಲಿ (ಪಿಟಿಐ): ಛತ್ತೀಸಗಡದ ರಾಯ್‌ಪುರದಲ್ಲಿ ನಡೆದ 'ಧರ್ಮ ಸಂಸತ್' ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧಿ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವುದನ್ನು ಖಂಡಿಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, 'ಗಾಂಧಿ ಅವರ ಚಿಂತನೆಗಳನ್ನು ಬಂಧಿಸಲು ಸಾಧ್ಯವಿಲ್ಲ' ಎಂದಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ರಾಹುಲ್ ಗಾಂಧಿ, 'ನೀವು ನನ್ನನ್ನು ಕಟ್ಟಿಹಾಕಬಹುದು, ತೊಂದರೆ ನೀಡಬಹುದು, ನನ್ನ ದೇಹವನ್ನು ನಾಶ ಮಾಡಬಹುದು, ಆದರೆ ನನ್ನ ಚಿಂತನೆಗಳನ್ನು ನಾಶ ಮಾಡಲು ನಿಮ್ಮಿಂದ ಸಾಧ್ಯವಿಲ್ಲ' ಎಂಬ ಮಹಾತ್ಮ ಗಾಂಧಿಯವರ ಹೇಳಿಕೆಯನ್ನು ಉಲ್ಲೇಖಿಸಿದ್ದಾರೆ.

ಭಾನುವಾರ ರಾಯ್‌ಪುರದಲ್ಲಿ ನಡೆದ ಧರ್ಮ ಸಂಸತ್ ಕಾರ್ಯಕ್ರಮದಲ್ಲಿ ಕಾಳಿಚರಣ್, ಮಹಾತ್ಮ ಗಾಂಧಿ ವಿರುದ್ಧ ಅವಹೇಳನಕಾರಿ ಪದವನ್ನು ಬಳಸಿದ್ದರು ಮತ್ತು ಧರ್ಮದ ರಕ್ಷಣೆಗಾಗಿ ಕಟ್ಟಾ ಹಿಂದೂ ನಾಯಕನನ್ನು ಸರ್ಕಾರದ ಮುಖ್ಯಸ್ಥನನ್ನಾಗಿ ಆಯ್ಕೆ ಮಾಡುವಂತೆ ಜನರಲ್ಲಿ ಕೇಳಿಕೊಂಡಿದ್ದರು.

'ರಾಜಕೀಯದ ಮೂಲಕ ರಾಷ್ಟ್ರವನ್ನು ವಶಪಡಿಸಿಕೊಳ್ಳುವುದು ಇಸ್ಲಾಂನ ಗುರಿಯಾಗಿದೆ. ನಮ್ಮ ಮುಂದೆಯೇ ಅವರು 1947ರಲ್ಲಿ (ವಿಭಜನೆಯನ್ನು ಉಲ್ಲೇಖಿಸಿ) ದೇಶಗಳನ್ನು ವಶಪಡಿಸಿಕೊಂಡರು. ಅವರು ಮೊದಲು ಇರಾನ್, ಇರಾಕ್ ಮತ್ತು ಅಫ್ಗಾನಿಸ್ತಾನವನ್ನು ವಶಪಡಿಸಿಕೊಂಡರು. ಬಳಿಕ ಅವರು ರಾಜಕೀಯದ ಮೂಲಕವೇ ಬಾಂಗ್ಲಾದೇಶ ಮತ್ತು ಪಾಕಿಸ್ತಾನವನ್ನು ವಶಪಡಿಸಿಕೊಂಡರು. ಗಾಂಧಿಯನ್ನು ಕೊಂದ ನಾಥೂರಾಂ ಗೋಡ್ಸೆಗೆ ನಾನು ನಮಸ್ಕರಿಸುತ್ತೇನೆ' ಎಂದಿದ್ದರು.

ಈ ಹೇಳಿಕೆಯು ಕಾಂಗ್ರೆಸ್ ನಾಯಕರನ್ನು ಕೆರಳಿಸಿತ್ತು.

ಮುಖಂಡನ ವಿರುದ್ಧ ಎಫ್‌ಐಆರ್

ರಾಯ್‌ಪುರ: ಮಹಾತ್ಮ ಗಾಂಧಿಯವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಮತ್ತು ಅವರ ಹಂತಕ ನಾಥೂರಾಮ್ ಗೋಡ್ಸೆಯನ್ನು ಹೊಗಳಿದ್ದ ಹಿಂದೂ ಧಾರ್ಮಿಕ ಮುಖಂಡ ಕಾಳಿಚರಣ್ ಮಹಾರಾಜ್ ವಿರುದ್ಧ 'ದ್ವೇಷಪೂರಿತ ಹಾಗೂ ಪ್ರಚೋದನಕಾರಿ' ಹೇಳಿಕೆ ನೀಡಿದ ಆರೋಪದ ಮೇಲೆ ಛತ್ತೀಸ್‌ಗಡ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಕಾಂಗ್ರೆಸ್ ನಾಯಕ ಪ್ರಮೋದ್ ದುಬೆ ನೀಡಿರುವ ದೂರಿನ ಆಧಾರದ ಮೇಲೆ ತಿಕ್ರಾಪುರ ಪೊಲೀಸ್ ಠಾಣೆಯಲ್ಲಿ ಐಪಿಸಿಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

'ಶಬರಿಮಲೆ: ವೈದ್ಯಕೀಯ ಸೌಲಭ್ಯ ಕಲ್ಪಿಸಿ'

ಕೊಚ್ಚಿ (ಪಿಟಿಐ): ಶಬರಿಮಲೆಯ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಜರುಗುವ ಮಂಡಲ ಪೂಜೆ-ಸಂಕ್ರಾಂತಿ ಉತ್ಸವಕ್ಕೆ ಆಗಮಿಸುವ ಭಕ್ತರಿಗೆ ಅಗತ್ಯ ವೈದ್ಯಕೀಯ ಸೇವೆ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೇರಳ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ.

'ಈಗಾಗಲೇ ಒದಗಿಸಿರುವ ತುರ್ತು ವೈದ್ಯಕೀಯ ಸೇವೆ ಮತ್ತು ಹೃದ್ರೋಗ ಕೇಂದ್ರಗಳಲ್ಲಿ ಕೊರತೆ ಕಂಡು ಬಂದರೆ ಸೂಕ್ತ ಆದೇಶಗಳನ್ನು ಕೋರಿ ವರದಿ ಸಲ್ಲಿಸುವ ಮೂಲಕ ನ್ಯಾಯಾಲಯದ ಗಮನಕ್ಕೆ ತರಬೇಕು' ಎಂದು ನ್ಯಾಯಮೂರ್ತಿಗಳಾದ ಅನಿಲ್ ಕೆ.ನರೇಂದ್ರನ್ ಮತ್ತು ಪಿ.ಜಿ. ಅಜಿತ್ ಕುಮಾರ್ ಅವರನ್ನೊಳಗೊಂಡ ನ್ಯಾಯಪೀಠ ಹೇಳಿದೆ.

ಮಂಗಳವಾರ, ಡಿಸೆಂಬರ್ 28, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೋವಿಡ್ ಪರೀಕ್ಷೆ ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಆರೋಗ್ಯ ಕಾರ್ಯಕರ್ತ ಸೋಮವಾರ ಕೋವಿಡ್ ಪರೀಕ್ಷೆಗಾಗಿ ಮಹಿಳೆಯೊಬ್ಬರಿಂದ ಮಾದರಿ ಸಂಗ್ರಹಿಸಿದರು

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

75 ಸ್ವಾತಂತ್ರ್ಯದ ಅಮೃತಮಹೋತ್ಸವ





ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಂತ್ರಸ್ತರ ನೆರವಿಗೆ ಸರ್ಕಾರದ ಐತಿಹಾಸಿಕ ನಿರ್ಧಾರ

ರಾಜ್ಯದಲ್ಲಿ 2021ನೇ ಜುಲೈನಿಂದ ನವೆಂಬರ್‌ವರೆಗೆ ಉಂಟಾದ ಅತಿವೃಷ್ಟಿ ಹಾಗೂ ಪ್ರವಾಹದಿಂದ ಸಂತ್ರಸ್ತರಾದ ವಿವಿಧ ವರ್ಗದ ಜನರ ಹಿತರಕ್ಷಣೆಗೆ ಸರ್ಕಾರವು ಹಲವಾರು ಪರಿಹಾರ ಕ್ರಮಗಳನ್ನು ಕೈಗೊಂಡಿದೆ.

ಬೆಳೆ ಹಾನಿ ಪರಿಹಾರಕ್ಕಾಗಿ ಕೇಂದ್ರ ಸರ್ಕಾರ ನಿಗದಿಪಡಿಸಿದ್ದ ದರದ ಜೊತೆಗೆ ಹೆಚ್ಚುವರಿ ಪರಿಹಾರ ನೀಡಲು ರಾಜ್ಯ ಸರ್ಕಾರದ ಐತಿಹಾಸಿಕ ತೀರ್ಮಾನ

ರೂ. ಪ್ರತಿ ಹೆಕ್ಟೇರ್‌ಗೆ

ಬೆಳೆ ವಿಧ	ಎಸ್‌ಡಿಆರ್‌ಎಫ್ ಮಾರ್ಗಸೂಚಿ ದರ	ರಾಜ್ಯ ಸರ್ಕಾರದ ಹೆಚ್ಚುವರಿ ದರ	ಪರಿಷ್ಕೃತ ದರ
ಮಳೆಯಾಶ್ರಿತ	6,800	6,800	13,600
ನೀರಾವರಿ	13,500	11,500	25,000
ತೋಟಗಾರಿಕೆ	18,000	10,000	28,000

ಪರಿಷ್ಕೃತ ದರದಲ್ಲಿ ಬೆಳೆ ಪರಿಹಾರ ಹಣ ಪಾವತಿಸಲು ಅಂದಾಜು ರೂ. 1,200 ಕೋಟಿ ಹೆಚ್ಚುವರಿ ವೆಚ್ಚ

ಅತಿವೃಷ್ಟಿಯಿಂದ ಬೆಳೆ ಹಾನಿಗೊಂಡ ರೈತರಿಗೆ ಪರಿಹಾರ ಹೆಚ್ಚಳ

- ರಾಜ್ಯದಲ್ಲಿ 2021ನೇ ಜುಲೈ ಇಂದ ನವೆಂಬರ್‌ವರೆಗೆ ಉಂಟಾದ ನೆರೆ ಹಾವಳಿಯಿಂದ 12.52 ಲಕ್ಷ ಹೆಕ್ಟೇರ್ ಬೆಳೆ ಹಾನಿ
- ಬೆಳೆ ಹಾನಿಯ ಜಂಟಿ ಸಮೀಕ್ಷೆಯ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ನಮೂದಿಸಿದ ಒಂದು ವಾರದೊಳಗೆ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಬೆಳೆ ಹಾನಿ ಪರಿಹಾರ ಜಮೆ ಮಾಡಲು ಕ್ರಮ
- ಈವರೆಗೂ ಸುಮಾರು 14.4 ಲಕ್ಷ ರೈತರ ಬ್ಯಾಂಕ್ ಖಾತೆಗೆ ರೂ. 926.40 ಕೋಟಿ ಮೊತ್ತ ಜಮೆ
- ಕಳೆದ ಒಂದು ತಿಂಗಳಿನಲ್ಲಿ ಸುಮಾರು 12.90 ಲಕ್ಷ ರೈತರಿಗೆ ರೂ. 796.00 ಕೋಟಿ ಬೆಳೆ ಹಾನಿ ಪರಿಹಾರ ಪಾವತಿ.

ಪ್ರವಾಹದಿಂದ ಹಾನಿಗೊಳಗಾದ ಮನೆಗಳಿಗೆ ಪರಿಹಾರ

- ಮನೆಗಳ ಹಾನಿಯ ಪ್ರಮಾಣಕ್ಕೆ ಅನುಗುಣವಾಗಿ ರೂ. 50,000 ದಿಂದ ರೂ. 5 ಲಕ್ಷದವರೆಗೆ ಪರಿಹಾರ. ಇದು ಎಸ್.ಡಿ.ಆರ್.ಎಫ್. / ಎನ್.ಡಿ.ಆರ್.ಎಫ್ ಮಾರ್ಗಸೂಚಿಯ ಪರಿಹಾರಕ್ಕಿಂತ ಹೆಚ್ಚು
- ಈವರೆಗೆ 23,872 ಮನೆಗಳಿಗೆ ರೂ. 171.20 ಕೋಟಿ ಪರಿಹಾರ ಪಾವತಿ
- ಜಲಾವೃತ ಕುಟುಂಬಗಳಿಗೆ ರಾಜ್ಯದ ಹೆಚ್ಚುವರಿ ಮೊತ್ತ ಸೇರಿ ಒಟ್ಟು ರೂ. 10,000/– ದಂತೆ ತುರ್ತು ಪರಿಹಾರ ಪಾವತಿ. ಈವರೆಗೆ 85,860 ಕುಟುಂಬಗಳಿಗೆ ಪರಿಹಾರ ಪಾವತಿ
- ಪ್ರವಾಹದಿಂದ ಬಾಧಿತರಾದ ಸಂತ್ರಸ್ತರ ನೆರವಿಗಾಗಿ ಪರಿಷ್ಕೃತ ದರದಲ್ಲಿ ಪರಿಹಾರ ಪಾವತಿಸಲು ಸರ್ಕಾರದಿಂದ ರೂ. 3,326.86 ಕೋಟಿ ವೆಚ್ಚ

ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಕೇಂದ್ರ, ಉತ್ತರ ಪ್ರದೇಶ ಸರ್ಕಾರದ ವಿರುದ್ಧ ಹರಿಹಾಯ್ದ ಸಂಸದ ವರುಣ್ ಗಾಂಧಿ

ರಾತ್ರಿ ಕರ್ಫ್ಯೂ, ಹಗಲು ರ್‍ಯಾಲಿ ಏಕೆ?

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ಸಂಸದ ವರುಣ್ ಗಾಂಧಿ ಅವರು ತಮ್ಮದೇ ಪಕ್ಷದ ವಿರುದ್ಧ ಮತ್ತೊಮ್ಮೆ ಹರಿಹಾಯ್ದಿದ್ದಾರೆ. 'ರಾತ್ರಿ ಕರ್ಫ್ಯೂ ಹೇರುವುದು ಮತ್ತು ಹಗಲಿನಲ್ಲಿ ರ್‍ಯಾಲಿ ನಡೆಸಿ ಲಕ್ಷಾಂತರ ಜನರನ್ನು ಸೇರಿಸುವುದು ಸಾಮಾನ್ಯ ಜನರ ತರ್ಕಕ್ಕೆ ನಿಲುಕದು. ಉತ್ತರ ಪ್ರದೇಶದ ಆರೋಗ್ಯ ವ್ಯವಸ್ಥೆಯ ಸೀಮಿತ ಸಾಮರ್ಥ್ಯವನ್ನು ಗಣನೆಗೆ ತೆಗೆದುಕೊಂಡು, ಅಪಾಯಕಾರಿ ಓಮೈಕ್ರಾನ್ ಸೋಂಕು ಹರಡುವಿಕೆಯನ್ನು ತಡೆಯುವುದು ಮುಖ್ಯವೇ ಅಥವಾ ರಾಜಕೀಯ ಬಲ ಪ್ರದರ್ಶನ ಮುಖ್ಯವೇ ಎಂಬುದನ್ನು ಪ್ರಾಮಾಣಿಕವಾಗಿ ನಿರ್ಧರಿಸಬೇಕಿದೆ' ಎಂದು ಅವರು ಹೇಳಿದ್ದಾರೆ.

ಕೋವಿಡ್–19 ಹರಡುವಿಕೆ ತಡೆಯುವ ಉದ್ದೇಶದಿಂದ ಇತ್ತೀಚಿನ ದಿನಗಳಲ್ಲಿ ರಾತ್ರಿ ಕರ್ಫ್ಯೂ ಹೇರಿರುವ ರಾಜ್ಯಗಳಲ್ಲಿ ಉತ್ತರ ಪ್ರದೇಶವೂ ಒಂದು.

ಸೋಂಕು ಗರಿಷ್ಠ ಮಟ್ಟದಲ್ಲಿ ಹರಡುವುದು ಹಗಲಿನಲ್ಲಿಯೇ ಹೊರತು ರಾತ್ರಿ ಅಲ್ಲ. ಏಕೆಂದರೆ ರಾತ್ರಿಯಲ್ಲಿ ರಸ್ತೆಯಲ್ಲಿ ಹೆಚ್ಚು ಜನಸಂಚಾರ ಇರುವುದಿಲ್ಲ. ಜನ ಸೇರುವಂತಹ ಕಾರ್ಯಕ್ರಮಗಳನ್ನು ಕಡಿಮೆ ಮಾಡಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇಲ್ಲದೇ ಇದ್ದರೆ ಕಾರ್ಯಕ್ರಮ ನಡೆದ ಸ್ಥಳಗಳು ಕೋವಿಡ್ ಕ್ಲಸ್ಟರ್‌ಗಳಾಗಬಹುದು ಎಂದು ವರುಣ್ ಹೇಳಿದ್ದಾರೆ.

ಮಹಾರಾಷ್ಟ್ರ ಸರ್ಕಾರಕ್ಕೆ ಕೇಂದ್ರ ಸರ್ಕಾರವು 2021ರ ಮಾರ್ಚ್‌ನಲ್ಲಿ ಬರೆದ ಪತ್ರವೊಂದನ್ನು ವರುಣ್ ಉಲ್ಲೇಖಿಸಿದ್ದಾರೆ. ಕೋವಿಡ್ ಹರಡುವಿಕೆ ತಡೆಯಲು ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯ ಲಾಕ್‌ಡೌನ್‌ನಿಂದ ಹೆಚ್ಚಿನ ಉಪಯೋಗ ಆಗದು ಎಂದು ಈ ಪತ್ರದಲ್ಲಿ ಸೂಚಿಸಲಾಗಿತ್ತು ಎಂದು ಅವರು ಹೇಳಿದ್ದಾರೆ.

ರ್‍ಯಾಲಿಗಳನ್ನು ನಡೆಸುವುದನ್ನು ನಿಲ್ಲಿಸಬೇಕು ಎಂದು ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಶೇಖರ್ ಕುಮಾರ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇತ್ತೀಚೆಗೆ ಮನವಿ ಮಾಡಿದ್ದರು.

ಉತ್ತರ ಪ್ರದೇಶ ಮತ್ತು ಕೇಂದ್ರದ ಬಿಜೆಪಿ ಸರ್ಕಾರಗಳನ್ನು ವರುಣ್ ಅವರು ಇತ್ತೀಚೆಗೆ ಕಟುವಾಗಿ ವಿಮರ್ಶೆಗೆ ಒಳಪಡಿಸುತ್ತಿದ್ದಾರೆ. ಕೃಷಿ ಕಾಯ್ದೆಗಳ ವಿಚಾರದಲ್ಲಿಯೂ ಅವರು ಸರ್ಕಾರವನ್ನು ಟೀಕಿಸಿದ್ದರು. ಲಖಿಂಪುರ ಖೇರಿಯಲ್ಲಿ ರೈತರ ಮೇಲೆ ಎಸ್‌ಯುವಿ ಹರಿಸಿದ ಪ್ರಕರಣದ ಮುಖ್ಯ ಆರೋಪಿ ಆಶಿಶ್ ಮಿಶ್ರಾ ಅವರ ತಂದೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದೂ ಆಗ್ರಹಿಸಿದ್ದರು.

ಜನತಂತ್ರದ ಹಬ್ಬ 2021

ನೀತಿ ನಿರೂಪಕರು ಹೋರಾಟದ ಮುಂಚೂಣಿಯಲ್ಲಿ ನಿಲ್ಲಬೇಕು. ಮನೆಯಲ್ಲಿಯೇ ಉಳಿಯಲು ಜನರಿಗೆ ಸ್ಫೂರ್ತಿ ಆಗಬೇಕು

ವರುಣ್ ಗಾಂಧಿ, ಸಂಸದ

ಅಮರಿಂದರ್, ದಿಂಡ್ಸಾ ಪಕ್ಷದ ಜತೆಗೆ ಬಿಜೆಪಿ ಜಂಟಿ ಪ್ರಣಾಳಿಕೆ

ನವದೆಹಲಿ (ಪಿಟಿಐ): ಪಂಜಾಬ್ ಮಾಜಿ ಮುಖ್ಯಮಂತ್ರಿ ಕ್ಯಾಪ್ಟನ್ ಅಮರೀಂದರ್ ಸಿಂಗ್ ಅವರ ಪಂಜಾಬ್ ಲೋಕ ಕಾಂಗ್ರೆಸ್ ಮತ್ತು ಸುಖದೇವ್ ದಿಂಡ್ಸಾ ಅವರ ಶಿರೋಮಣಿ ಅಕಾಲಿ ದಳ (ಸಂಯುಕ್ತ) ಪಕ್ಷಗಳ ಜೊತೆ ಸೇರಿ ಪಂಜಾಬ್ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಬಿಜೆಪಿ ಅಧಿಕೃತವಾಗಿ ಘೋಷಿಸಿದೆ. ಈ ಪಕ್ಷಗಳೆಲ್ಲಾ ಸೇರಿ ಜಂಟಿ ಪ್ರಣಾಳಿಕೆ ಹೊರಡಿಸುವುದಾಗಿ ಕೇಂದ್ರ ಸಚಿವ, ಪಂಜಾಬ್ ವಿಧಾನಸಭೆ ಚುನಾವಣೆಗೆ ಬಿಜೆಪಿ ಉಸ್ತುವಾರಿ ಗಜೇಂದ್ರ ಸಿಂಗ್ ಶೆಖಾವತ್ ಸೋಮವಾರ ತಿಳಿಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಕ್ಯಾ. ಅಮರೀಂದರ್ ಸಿಂಗ್ ಮತ್ತು ದಿಂಡ್ಸಾ ಅವರು ಶಾ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಭೇಟಿ ಮಾಡಿದ್ದರು. ಆ ವೇಳೆ ಮೂರು ಪಕ್ಷಗಳು ಮೈತ್ರಿ ಮಾಡಿಕೊಳ್ಳುವ ಕುರಿತು ನಿರ್ಧರಿಸಲಾಯಿತು. ಮೂರೂ ಪಕ್ಷಗಳ ಇಬ್ಬರು ನಾಯಕರಿರುವ ಜಂಟಿ ಸಮಿತಿ ರಚಿಸಿ ಸೀಟು ಹಂಚಿಕೆ ಕುರಿತು ನಿರ್ಧರಿಸಲಾಗುವುದು ಎಂದು ಶೆಖಾವತ್ ತಿಳಿಸಿದ್ದಾರೆ.

ಅಮಿತ್ ಶಾ, ಅಮರಿಂದರ್ ಸಿಂಗ್ ಮತ್ತು ಸುಖದೇವ್ ಸಿಂಗ್ ದಿಂಡ್ಸಾ ಅವರು ಭೇಟಿಯಾಗಿ ಸೋಮವಾರ ಚರ್ಚೆ ನಡೆಸಿದರು ಪಿಟಿಐ ಚಿತ್ರ

ಮೋದಿ ರ್‍ಯಾಲಿಗೆ ಜನ ಸೇರಿಸಲು ಜಿಲ್ಲಾಡಳಿತದಿಂದ ಸೂಚನೆ

ಲಖನೌ: ಪ್ರಧಾನಿ ನರೇಂದ್ರ ಮೋದಿ ಅವರ ರ್‍ಯಾಲಿ ಉತ್ತರ ಪ್ರದೇಶದ ಕಾನ್ಪುರದಲ್ಲಿ ಮಂಗಳವಾರ ಆಯೋಜನೆ ಆಗಿದೆ. ರ್‍ಯಾಲಿಗೆ ಸುಮಾರು 75 ಸಾವಿರ ಜನರನ್ನು ಕರೆತರುವಂತೆ ಸರ್ಕಾರದ ವಿವಿಧ ಇಲಾಖೆಗಳಿಗೆ ಕಾನ್ಪುರದ ಜಿಲ್ಲಾಡಳಿತ ಅಧಿಕೃತ ಸೂಚನೆ ನೀಡಿದೆ.

ಮೋದಿ ಅವರು ಕಾನ್ಪುರದ ಮೆಟ್ರೊ ರೈಲು ಉದ್ಘಾಟಿಸಿದ ಬಳಿಕ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ.

ಆರೋಗ್ಯ, ಆಹಾರ, ತೋಟಗಾರಿಕೆ, ಸಮಾಜ ಕಲ್ಯಾಣ, ಕಾರ್ಮಿಕ, ಗ್ರಾಮೀಣಾಭಿವೃದ್ಧಿ ಮತ್ತು ಇತರ ಇಲಾಖೆಗಳಿಗೆ ಸುತ್ತೋಲೆ ಕಳುಹಿಸಲಾಗಿದೆ. ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳು, ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು, ಪಂಚಾಯಿತಿ ಸಹಾಯಕರು ಹಾಗೂ ಇತರರು ಸಭೆಯಲ್ಲಿ ಹಾಜರಿರಬೇಕು ಎಂದು ಜಿಲ್ಲಾಧಿಕಾರಿಯವರು ಸುತ್ತೋಲೆಯಲ್ಲಿ ಸೂಚಿಸಿದ್ದಾರೆ. ಸಭೆಯಲ್ಲಿ ಪಾಲ್ಗೊಳ್ಳುವವರಿಗೆ ಸಾರಿಗೆ, ಆಹಾರ ಮತ್ತು ವಸತಿ ವ್ಯವಸ್ಥೆ ಮಾಡಬೇಕು ಎಂದು ಹೇಳಲಾಗಿದೆ.

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಭಾನುವಾರ ಪ್ರಯಾಗ್‌ರಾಜ್‌ನಲ್ಲಿ ನಡೆಸಿದ ರ್‍ಯಾಲಿಯಲ್ಲಿ ಸರ್ಕಾರಿ ನೌಕರರು ಪಾಲ್ಗೊಳ್ಳಬೇಕು ಎಂದು ಪ್ರಯಾಗ್‌ರಾಜ್ ಜಿಲ್ಲಾಡಳಿತ ಸೂಚಿಸಿತ್ತು. ರಾಜ್ಯದ ವಿವಿಧ ಭಾಗಗಳಲ್ಲಿ ನಡೆದ ಮೋದಿ ಅವರ ಸಭೆಗಳ ವೇಳೆಯೂ ಜನರನ್ನು ಸರ್ಕಾರವೇ ಕರೆತಂದಿತ್ತು ಎಂಬ ವರದಿಗಳು ಇವೆ.

ಪಕ್ಷದ ರ್‍ಯಾಲಿಗಳಿಗಾಗಿ ಸರ್ಕಾರದ ಇಲಾಖೆಗಳನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ವಿಪಕ್ಷಗಳು ಟೀಕಿಸಿವೆ. ಪ್ರಯಾಗ್‌ರಾಜ್‌ನಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ಜನರನ್ನು ಸೇರಿಸಲು ಸರ್ಕಾರದ ಇಲಾಖೆಗಳನ್ನು ಬಿಜೆಪಿ ಬಳಸಿಕೊಂಡಿದೆ ಎಂದು ಸಮಾಜವಾದಿ ಪಕ್ಷ (ಎಸ್‌ಪಿ) ಆರೋಪಿಸಿದೆ. ಅಲ್ಲದೇ, ಈ ಕುರಿತು ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ. ಉತ್ತರ ಪ್ರದೇಶದಲ್ಲಿ ಚುನಾವಣೆಗಳು ನ್ಯಾಯಯುತವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಆಯೋಗಕ್ಕೆ ಎಸ್‌ಪಿ ಮನವಿ ಮಾಡಿದೆ. ಪ್ರಧಾನಿ ಸಭೆ ನಡೆಯುವ ಸ್ಥಳಕ್ಕೆ ಜನರನ್ನು ಕರೆದೊಯ್ಯಲು ಪ್ರಾದೇಶಿಕ ಸಾರಿಗೆ ಕಚೇರಿಯ ಸಹಾಯ ಪಡೆದು ಸಾವಿರಾರು ಖಾಸಗಿ ಮತ್ತು ಸರ್ಕಾರಿ ಬಸ್ಸುಗಳನ್ನು ನಿಯೋಜನೆ ಮಾಡಲಾಗಿದೆ. ಮುಖ್ಯಮಂತ್ರಿಯೇ ಸರ್ಕಾರಿ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ಪತ್ರದಲ್ಲಿ ಹೇಳಲಾಗಿದೆ.

ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಬಿಜೆಪಿಯನ್ನು ಟೀಕಿಸಿದ್ದಾರೆ. ಸರ್ಕಾರದ ಸಂಪನ್ಮೂಲಗಳನ್ನು ಬಳಸಿಕೊಂಡು ಮೋದಿ ರ್‍ಯಾಲಿಗಳಿಗೆ ಜನರನ್ನು ಸೇರಿಸಲಾಗುತ್ತಿದೆ. ಬಿಜೆಪಿ ಪ್ರಾಮಾಣಿಕವಾಗಿ ಸಾರ್ವಜನಿಕ ಸಮಾವೇಶವನ್ನು ಎಂದಾದರೂ ನಡೆಸಿದೆಯೇ ಎಂದು ಕೇಳಿದ್ದಾರೆ.

ಸುದ್ದಿ 2 ನಿಮಿಷ

ಕಂತೆ ಕಂತೆ ನೋಟು ಇಟ್ಟಿದ್ದ ಉದ್ಯಮಿ ಪೀಯೂಷ್ ಜೈನ್ ಬಂಧನ

ಕಾನ್ಪುರ (ಪಿಟಿಐ): ತೆರಿಗೆ ವಂಚನೆ ಆರೋಪದ ಮೇಲೆ ಉತ್ತರಪ್ರದೇಶದ ಕಾನ್ಪುರದ ಸುಗಂಧ ದ್ರವ್ಯ ಉದ್ಯಮಿ ಪೀಯೂಷ್ ಜೈನ್ ಅವರನ್ನು ಬಂಧಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಡಿ.24ರಂದು ಉದ್ಯಮಿಯ ಮನೆ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ ಸುಮಾರು ₹ 177 ಕೋಟಿ ನಗದನ್ನು ಮನೆಯಿಂದ ವಶಪಡಿಸಿಕೊಂಡಿದ್ದರು. ಮುಂದಿನ ಕ್ರಮ ಕೈಗೊಳ್ಳಲು ಉದ್ಯಮಿಯನ್ನು ಕಾನ್ಪುರದಿಂದ ಅಹಮದಾಬಾದ್‌ಗೆ ಕರೆದೊಯ್ಯಲಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಜೈನ್ ಒಡೆತನದ ವಿವಿಧ ಕಡೆ ಸರಣಿ ದಾಳಿ ನಡೆಸಿದ ಅಧಿಕಾರಿಗಳು ನಗದು ಸೇರಿದಂತೆ ₹ 257 ಕೋಟಿ ಮೌಲ್ಯಕ್ಕೂ ಅಧಿಕ ಚಿನ್ನ ಮತ್ತು ಬೆಳ್ಳಿಯನ್ನು ವಶಪಡಿಸಿಕೊಳ್ಳಲಾಗಿತ್ತು.

ಸರಕು ಸಾಗಣೆದಾರರಿಂದ ನಕಲಿ ಇನ್‌ವಾಯ್ಸ್ ಮತ್ತು ಇ-ವೇ ಬಿಲ್‌ಗಳಿಲ್ಲದೆ ಸರಕುಗಳ ರವಾನೆಗೆ ಸಂಬಂಧಿಸಿದ ಹಣ ಇದಾಗಿದೆ ಎಂದು ಆರೋಪಿಸಲಾಗಿದೆ.

ಪೀಯೂಷ್ ಜೈನ್ ಅವರು, ಒಡೊಕೆಮ್ ಕೈಗಾರಿಕೆ ಹೊಂದಿದ್ದು, ಈ ಕಂಪನಿಯು ಸುಗಂಧ ದ್ರವ್ಯಕ್ಕೆ ಸಂಬಂಧಿಸಿದ ಉತ್ಪನ್ನವನ್ನು ಹಲವು ಕಂಪನಿಗಳಿಗೆ ಸರಬರಾಜು ಮಾಡುತ್ತದೆ. ಕಾನ್ಪುರ ಮಾತ್ರವಲ್ಲದೆ, ಉದ್ಯಮಿಗೆ ಸಂಬಂಧಿಸಿದ ಮುಂಬೈ, ಗುಜರಾತ್‌ನ ಸ್ಥಳಗಳ ಮೇಲೂ ಐಟಿ ದಾಳಿ ನಡೆಸಿತ್ತು.

ಕಾಶ್ಮೀರದಲ್ಲಿ ಲಘು ಹಿಮಪಾತ

ಶ್ರೀನಗರ: ಕಾಶ್ಮೀರ ಕಣಿವೆಯ ಕೆಲ ಭಾಗಗಳಲ್ಲಿ ಸೋಮವಾರ ಲಘು ಪ್ರಮಾಣದ ಹಿಮ ಸುರಿದಿದ್ದು, ಬಹುತೇಕ ಪ್ರದೇಶಗಳಲ್ಲಿ ಕೆಲ ಹೊತ್ತು ಮಳೆಯಾಗಿದೆ. ಇದರ ಪರಿಣಾಮ ಶೀತ ಗಾಳಿಯ ತೀವ್ರತೆ ಕಡಿಮೆಯಾಗಿದೆ.

ಬೇಸಿಗೆ ರಾಜಧಾನಿ ಶ್ರೀನಗರದಲ್ಲಿ ಭಾನುವಾರ ರಾತ್ರಿ –2.2 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದ್ದು, ಕಣಿವೆಯ ಹೆಬ್ಬಾಗಿಲು ಕ್ವಾಜಿಗುಂಡದಲ್ಲಿ –1.2, ಕೊಕರ್‌ನಾಗ್‌ನಲ್ಲಿ –2.3, ಕುಪ್ವಾರ –1.5, ಪಹಲ್ಗಾಮ್‌ನಲ್ಲಿ –4.1, ಗುಲ್‌ಮಾರ್ಗ್‌ನಲ್ಲಿ –6 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

'ಗುಲ್‌ಮಾರ್ಗ್, ಸೋನಾಮಾರ್ಗ್ ಹಾಗೂ ಪಹಲ್ಗಾಮ್ ಸೇರಿದಂತೆ ಉತ್ತರ ಹಾಗೂ ದಕ್ಷಿಣ ಕಾಶ್ಮೀರದ ಬಹುತೇಕ ಭಾಗಗಳಲ್ಲಿ ಲಘು ಪ್ರಮಾಣದ ಹಿಮ ಸುರಿದಿದೆ' ಎಂದು ಹವಾಮಾನ ಇಲಾಖೆ ಅಧಿಕಾರಿಗಳು ತಿಳಿಸಿದರು.

ಜಲ ವಿದ್ಯುತ್; ₹ 28,000 ಕೋಟಿ ಹೂಡಿಕೆ ಯೋಜನೆಗಳಿಗೆ ಅಡಿಗಲ್ಲು

ಡಬಲ್ ಎಂಜಿನ್ ಸರ್ಕಾರದಿಂದ ಪ್ರಯೋಜನ: ಮೋದಿ

ಮಂಡಿ, ಹಿಮಾಚಲ ಪ್ರದೇಶ (ಪಿಟಿಐ): ರಾಜ್ಯ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷದ ಡಬಲ್ ಎಂಜಿನ್ ಸರ್ಕಾರ ಇರುವುದರಿಂದ ಹಿಮಾಚಲ ಪ್ರದೇಶದ ಜನರಿಗೆ ಅಭಿವೃದ್ಧಿ ಯೋಜನೆಗಳು ಹಾಗೂ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ವೇಗ ದೊರಕಲು ಸಹಕಾರಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದರು.

ರಾಜ್ಯದಲ್ಲಿ ಜೈರಾಮ್ ಠಾಕೂರ್ ನೇತೃತ್ವದ ಬಿಜೆಪಿ ಸರ್ಕಾರದ ನಾಲ್ಕನೇ ವರ್ಷಾಚರಣೆಯ ಅಂಗವಾಗಿ ಮಂಡಿಯ ಪಡಲ್ ಮೈದಾನದಲ್ಲಿ ಆಯೋಜಿಸಿದ್ದ ರ್‍ಯಾಲಿ ಉದ್ದೇಶಿಸಿ ಅವರು ಮಾತನಾಡಿದರು.

'ಕೇಂದ್ರವು ಆಯುಷ್ಮಾನ್ ಭಾರತ್ ಯೋಜನೆಯನ್ನು ಪ್ರಾರಂಭಿಸಿದೆ. ಹಿಮಾಚಲ ಪ್ರದೇಶ ಸರ್ಕಾರವು ಹಿಮ್‌ಕೇರ್ ಎಂಬ ಇದೇ ರೀತಿಯ ಯೋಜನೆಯನ್ನು ಪ್ರಾರಂಭಿಸಿದೆ. ಇದರಿಂದ ರಾಜ್ಯದ ಒಟ್ಟು 1.25 ಲಕ್ಷ ಜನರು ಈ ಯೋಜನೆಗಳ ಅಡಿಯಲ್ಲಿ ಉಚಿತ ಚಿಕಿತ್ಸೆಯನ್ನು ಪಡೆದಿದ್ದಾರೆ' ಎಂದರು.

'ಉತ್ತಮವಾದ ಜೀವನಶೈಲಿ ನಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದ್ದು, ಇದರಲ್ಲಿ ವಿದ್ಯುತ್ ಪೂರೈಕೆ ಪ್ರಮುಖ ಪಾತ್ರ ವಹಿಸುತ್ತದೆ' ಎಂದ ಪ್ರಧಾನಿ ಮೋದಿ, ರಾಜ್ಯದಲ್ಲಿ ಪ್ರಾರಂಭಿಸಲಾದ ವಿದ್ಯುತ್ ಯೋಜನೆಗಳು ಹೆಚ್ಚಿನ ವಿದ್ಯುತ್ ಉತ್ಪಾದಿಸುವಲ್ಲಿ ಮಹತ್ವದ್ದಾಗಿವೆ ಎಂದು ಹೇಳಿದರು.

ಇದಕ್ಕೂ ಮುನ್ನ ₹11,000 ಕೋಟಿ ವೆಚ್ಚದ ಜಲ ವಿದ್ಯುತ್ ಯೋಜನೆಗಳು ಹಾಗೂ ₹28,197 ಕೋಟಿ ಮೊತ್ತದ 287 ಹೂಡಿಕೆ ಯೋಜನೆಗಳಿಗೆ ಮೋದಿ ಅವರು ಅಡಿಗಲ್ಲು ನೆರವೇರಿಸಿದರು.

ಇದೇ ಸಮಯದಲ್ಲಿ ಸುಮಾರು 30 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ 'ರೇಣುಕಾಜಿ' ಅಣೆಕಟ್ಟು ಯೋಜನೆಗೂ ಚಾಲನೆ ನೀಡಿದರು. ಹಿಮಾಚಲದ ಸಿರಮೌರಿ ಜಿಲ್ಲೆಯಲ್ಲಿ ನಿರ್ಮಾಣವಾಗಲಿರುವ ರೇಣುಕಾಜಿ ಅಣೆಕಟ್ಟಿನಿಂದ 40 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗಲಿದೆ. ₹7,000 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಈ ಅಣೆಕಟ್ಟಿನಿಂದ ದೆಹಲಿಗೆ ನೀರು ಪೂರೈಕೆ ಸಾಧ್ಯವಾಗಲಿದೆ. ಇಲ್ಲಿಂದ ದೆಹಲಿಗೆ ವಾರ್ಷಿಕ ಸುಮಾರು 50 ಕೋಟಿ ಕ್ಯೂಬಿಕ್ ಮೀಟರ್‌ಗಳಷ್ಟು ನೀರು ದೊರೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹2,080 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ 111 ಮೆಗಾವ್ಯಾಟ್ ಸಾಮರ್ಥ್ಯದ ಸಾವಡಾ–ಕುಡ್ಡು ಜಲ ವಿದ್ಯುತ್ ಯೋಜನೆಯನ್ನು ಪ್ರಧಾನಿ ಮೋದಿ ಅವರು ರಾಜ್ಯದ ಜನರ ಬಳಕೆಗೆ ಸಮರ್ಪಿಸಿದರು. ಇಲ್ಲಿ ಪ್ರತಿ ವರ್ಷ 38 ಕೋಟಿ ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದ್ದು, ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ ₹120 ಕೋಟಿ ಆದಾಯ ತಂದುಕೊಡಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಮದರ್ ತೆರೇಸಾರ ಚಾರಿಟಿಯ ಬ್ಯಾಂಕ್ ಖಾತೆ ರದ್ದು'

ಮಮತಾ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): 'ಮದರ್ ತೆರೇಸಾ ಸ್ಥಾಪಿಸಿದ ಮಿಷನರೀಸ್ ಆಫ್ ಚಾರಿಟಿಯ ಎಲ್ಲಾ ಬ್ಯಾಂಕ್ ಖಾತೆಗಳನ್ನು ಕೇಂದ್ರವು ಸ್ಥಗಿತಗೊಳಿಸಿದೆ' ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಮವಾರ ಆರೋಪಿಸಿದ್ದಾರೆ.

'ಕ್ರಿಸ್‌ಮಸ್ ಸಂದರ್ಭದಲ್ಲಿ ಕೇಂದ್ರವು ಭಾರತದಲ್ಲಿ ಮದರ್ ತೆರೇಸಾ ಅವರ ಮಿಷನರೀಸ್ ಆಫ್ ಚಾರಿಟಿಯ ಎಲ್ಲಾ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದೆ ಎಂದು ಕೇಳಿ ಆಘಾತವಾಯಿತು! ಈ ಕ್ರಮದಿಂದ ಮಿಷನರೀಸ್ ಆಫ್ ಚಾರಿಟಿಯ 22,000 ರೋಗಿಗಳು ಮತ್ತು ಉದ್ಯೋಗಿಗಳು ಆಹಾರ ಮತ್ತು ಔಷಧಿಗಳಿಲ್ಲದೆ ಕಂಗಾಲಾಗಿದ್ದಾರೆ' ಎಂದು ಬ್ಯಾನರ್ಜಿ ಟ್ವೀಟ್ ಮಾಡಿದ್ದಾರೆ.

ಮುಖ್ಯಮಂತ್ರಿಗೆ ನಾಟಿ ವೈದ್ಯರಿಂದ ಚಿಕಿತ್ಸೆ: ವಿಡಿಯೊ ವೈರಲ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಲ್ಲಿ ಈಚೆಗೆ ನಡೆದ ವಿಧಾನಮಂಡಲ ಚಳಿಗಾಲದ ಅಧಿವೇಶನದ ವೇಳೆ, ಮಂಡಿ ನೋವಿಗೆ ನಾಟಿ ವೈದ್ಯರಿಂದ ಚಿಕಿತ್ಸೆ ಪಡೆದಿರುವ ಫೋಟೊಗಳು ಹಾಗೂ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಸೋಮವಾರ ವೈರಲ್ ಆಗಿವೆ.

ಮೈಸೂರು ಮೂಲದವರು ಎನ್ನಲಾದ ನಾಟಿ ವೈದ್ಯ ಲೋಕೇಶ್ ಟೇಕಲ್ ಎನ್ನುವವರಿಂದ 10 ದಿನಗಳವರೆಗೆ ಚಿಕಿತ್ಸೆ ಪಡೆದಿದ್ದಾರೆ. ಅಧಿವೇಶನದಲ್ಲಿ ಪಾಲ್ಗೊಳ್ಳುವುದಕ್ಕಾಗಿ ಮುಖ್ಯಮಂತ್ರಿಯು ತಾಲ್ಲೂಕಿನ ಮಚ್ಛೆ ಹೊರವಲಯದಲ್ಲಿರುವ ವಿಟಿಯು ಅತಿಥಿಗೃಹದಲ್ಲಿ ವಾಸ್ತವ್ಯ ಹೂಡಿದ್ದರು. ಆಗ, ಚಿಕಿತ್ಸೆ ಪಡೆದಿದ್ದಾರೆ. ಇನ್ನೂ ಒಂದು ತಿಂಗಳವರೆಗೆ ವನಸ್ಪತಿ ಔಷಧಿ ಬಳಸುವ ಪದ್ಧತಿಯ ಚಿಕಿತ್ಸೆಗೆ ಒಳಗಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚರ್ಮದ ಸಮಸ್ಯೆಗೆ ಚಿಕಿತ್ಸೆ ಪಡೆದಿದ್ದ ವಿಧಾನಪರಿಷತ್ ಸದಸ್ಯ ಲಕ್ಷ್ಮಣ ಸವದಿ ಅವರು, ನಾಟಿ ವೈದ್ಯ ಲೋಕೇಶ ಅವರನ್ನು ಮುಖ್ಯಮಂತ್ರಿಗೆ ಪರಿಚಯಿಸಿದ್ದರು ಎನ್ನಲಾಗಿದೆ.

'ಮಂಡಿ ನೋವಿನ ಕಾರಣಕ್ಕೆ ಬೊಮ್ಮಾಯಿ ಅವರು ಚಿಕಿತ್ಸೆಗಾಗಿ ವಿದೇಶಕ್ಕೆ ತೆರಳುತ್ತಾರೆ, ಚಿಕಿತ್ಸೆ ಹಾಗೂ ಗುಣಮುಖರಾಗಲು ಬಹಳ ಸಮಯ ಬೇಕಾಗಿರುವುದರಿಂದ ಅಧಿಕಾರದಿಂದ ಕೆಳಗಿಳಿಯಲಿದ್ದಾರೆ' ಎಂಬ ವದಂತಿಗಳು ಹಬ್ಬಿದ್ದವು.

ಮುಖ್ಯಮಂತ್ರಿ ಬೊಮ್ಮಾಯಿ ಬೆಳಗಾವಿಯಲ್ಲಿ ನಾಟಿ ವೈದ್ಯರಿಂದ ಚಿಕಿತ್ಸೆ ಪಡೆದರು

600ರ ಗಡಿಯಲ್ಲಿ ಸೋಂಕು; ದೆಹಲಿ, ಮುಂಬೈ ಅಧಿಕ ಪ್ರಕರಣ

ಒಂದೇ ದಿನ 150 ಓಮೈಕ್ರಾನ್ ಪ್ರಕರಣ ಪತ್ತೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಭಾರತದಲ್ಲಿ ಒಂದೇ ದಿನದಲ್ಲಿ 150ಕ್ಕೂ ಹೆಚ್ಚು ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿದ್ದು, ಗೋವಾ ಮತ್ತು ಮಣಿಪುರದಲ್ಲಿ ಮೊದಲ ಪ್ರಕರಣಗಳು ದಾಖಲಾಗಿವೆ. ದೇಶದಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆ 600ರ ಸನಿಹಕ್ಕೆ ಬಂದಿದೆ.

ಆರೋಗ್ಯ ಸಚಿವಾಲಯವು ಸೋಮವಾರ ಬೆಳಿಗ್ಗೆ ನೀಡಿದ ಮಾಹಿತಿ ಪ್ರಕಾರ, 156 ಜನರಲ್ಲಿ ಸೋಂಕು ಪತ್ತೆಯಾಗಿದ್ದು, ಒಟ್ಟು ಪ್ರಕರಣಗಳ ಸಂಖ್ಯೆ 578ಕ್ಕೆ ತಲುಪಿದೆ. ಈ ಪೈಕಿ 151 ಜನರು ಗುಣಮುಖರಾಗಿದ್ದಾರೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

ಮುಂಬೈನಲ್ಲಿ 11 ಸೇರಿದಂತೆ ಮಹಾರಾಷ್ಟ್ರದಲ್ಲಿ 26, ಹರಿಯಾಣದಲ್ಲಿ 2, ಉತ್ತರಾಖಂಡದಲ್ಲಿ ಮೂರು, ಗುಜರಾತಿನಲ್ಲಿ 24 ಪ್ರಕರಣಗಳು ವರದಿಯಾಗಿವೆ. ತಾಂಜಾನಿಯಾದಿಂದ ಮಣಿಪುರಕ್ಕೆ ಬಂದಿದ್ದ 48 ವರ್ಷದ ವ್ಯಕ್ತಿಯಲ್ಲಿ ಸೋಂಕು ದೃಢಪಟ್ಟಿದೆ. ಇದು ಈಶಾನ್ಯ ರಾಜ್ಯಗಳಲ್ಲಿ ದಾಖಲಾದ ಮೊದಲ ಓಮೈಕ್ರಾನ್ ಪ್ರಕರಣವಾಗಿದೆ. ಬ್ರಿಟನ್‌ನಿಂದ ಗೋವಾದ ಪಣಜಿಗೆ ಬಂದ 8 ವರ್ಷದ ಬಾಲಕನಲ್ಲಿ ಓಮೈಕ್ರಾನ್ ಇದೆ ಎಂಬುದು ಖಚಿತಪಟ್ಟಿದೆ.

19 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸೋಂಕು ಕಂಡುಬಂದಿದೆ. ಈವರೆಗೆ ದೆಹಲಿಯಲ್ಲಿ ಅತಿಹೆಚ್ಚು (142) ಪ್ರಕರಣಗಳು ವರದಿಯಾಗಿವೆ. ಎರಡನೇ ಸ್ಥಾನದಲ್ಲಿ ಮಹಾರಾಷ್ಟ್ರ ಇದ್ದು, ಇಲ್ಲಿ 141 ಸೋಂಕಿತರು ಇದ್ದಾರೆ. ಕೇರಳದಲ್ಲಿ 57, ಗುಜರಾತಿನಲ್ಲಿ 59, ರಾಜಸ್ಥಾನದಲ್ಲಿ 43, ತೆಲಂಗಾಣದಲ್ಲಿ 41 ಮಂದಿಗೆ ಓಮೈಕ್ರಾನ್ ತಗುಲಿದೆ.

ಕರ್ನಾಟಕದ ನೆರೆಯ ರಾಜ್ಯಗಳಾದ ಕೇರಳದಲ್ಲಿ 1,824 ಮತ್ತು ಮಹಾರಾಷ್ಟ್ರದಲ್ಲಿ 1,648 ಕೋವಿಡ್ ಪ್ರಕರಣಗಳು ಸೋಮವಾರ ದೃಢಪಟ್ಟಿವೆ. ಈ ಎರಡು ರಾಜ್ಯಗಳಲ್ಲಿ ಅತಿ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ.

15–18 ವರ್ಷದವರಿಗೆ ಲಸಿಕೆ: ಮಾರ್ಗಸೂಚಿ ಬಿಡುಗಡೆ

ಈಗಾಗಲೇ ಕೋವಿಡ್ ಲಸಿಕೆಯ ಎರಡೂ ಡೋಸ್ ಪಡೆದುಕೊಂಡಿರುವವರಿಗೆ ಮುನ್ನೆಚ್ಚರಿಕಾ ಡೋಸ್ ನಿಡುವ ಮತ್ತು ಇನ್ನಷ್ಟೇ ಲಸಿಕೆ ಹಾಕಿಸಿಕೊಳ್ಳಬೇಕಿರುವ 15–18 ವರ್ಷದ ಯುವಜನರ ಲಸಿಕಾ ಅಭಿಯಾನಕ್ಕೆ ಸಂಬಂಧಿಸಿದ ಮಾರ್ಗಸೂಚಿಯನ್ನು ಕೇಂದ್ರ ಆರೋಗ್ಯ ಸಚಿವಾಲಯವು ಸೋಮವಾರ ಬಿಡುಗಡೆ ಮಾಡಿದೆ. ಅಗತ್ಯಕ್ಕೆ ತಕ್ಕಂತೆ ಈ ಮಾರ್ಗಸೂಚಿಗಳಲ್ಲಿ ಬದಲಾವಣೆ ಮಾಡಲಾಗುತ್ತದೆ ಎಂದು ಸಚಿವಾಲಯವು ಹೇಳಿದೆ.

- 15–18 ವರ್ಷದವರಿಗೆ ಲಸಿಕೆ ನೀಡುವ ಕಾರ್ಯಕ್ರಮವು ಜನವರಿ 3ರಿಂದ ಆರಂಭವಾಗಲಿದೆ. ಇದಕ್ಕಾಗಿ ಕೋವಿನ್ ಪೋರ್ಟಲ್‌ನಲ್ಲಿ ಜನವರಿ 1ರಿಂದಲೇ ನೋಂದಣಿ ಆರಂಭಿಸಬಹುದು. ಈ ವರ್ಗದ ಫಲಾನುಭವಿಗಳಿಗೆ ಕೋವ್ಯಾಕ್ಸಿನ್ ಲಸಿಕೆಯನ್ನು ಮಾತ್ರ ನೀಡಲಾಗುತ್ತದೆ
- ವೈದ್ಯಕೀಯ ಸಿಬ್ಬಂದಿ ಮತ್ತು ಮುಂಚೂಣಿಯ ಕೋವಿಡ್ ಹೋರಾಟಗಾರರಿಗೆ ಮುನ್ನೆಚ್ಚರಿಕೆ ಡೋಸ್ ಆಗಿ, ಮೂರನೇ ಡೋಸ್ ನೀಡುವ ಕಾರ್ಯಕ್ರಮವು ಜನವರಿ 10ರಿಂದ ಆರಂಭವಾಗಲಿದೆ. ಯಾವುದೇ ಲಸಿಕೆಯ ಎರಡನೇ ಡೋಸ್ ಹಾಕಿಸಿಕೊಂಡು 9 ತಿಂಗಳು ಆಗಿರುವವರಿಗೆ ಆದ್ಯತೆ ನೀಡಲಾಗುತ್ತದೆ
- 60 ವರ್ಷ ಮೇಲ್ಪಟ್ಟವರಿಗೆ ಮುನ್ನೆಚ್ಚರಿಕೆ ಡೋಸ್ ಆಗಿ, ಮೂರನೇ ಡೋಸ್ ನೀಡುವ ಕಾರ್ಯಕ್ರಮವು ಜನವರಿ 10ರಿಂದ ಆರಂಭವಾಗಲಿದೆ. ಆದರೆ ವೈದ್ಯರ ಸಲಹೆಯ ಆಧಾರದ ಮೇಲಷ್ಟೇ ಇವರಿಗೆ ಮುನ್ನೆಚ್ಚರಿಕೆ ಡೋಸ್ ನೀಡಲಾಗುತ್ತದೆ. ಯಾವುದೇ ಲಸಿಕೆಯ ಎರಡನೇ ಡೋಸ್ ಹಾಕಿಸಿಕೊಂಡು 9 ತಿಂಗಳು ಆಗಿರುವವರಿಗೆ ಆದ್ಯತೆ ನೀಡಲಾಗುತ್ತದೆ

- ವಿಧಾನಸಭೆ ಚುನಾವಣೆ ನಡೆಯಲಿರುವ ಉತ್ತರ ಪ್ರದೇಶ, ಗೋವಾ, ಮಣಿಪುರ, ಪಂಜಾಬ್ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ಕೋವಿಡ್ ಲಸಿಕೆ ಕಾರ್ಯಕ್ರಮಕ್ಕೆ ವೇಗ ತುಂಬಬೇಕು ಎಂದು ಚುನಾವಣಾ ಆಯೋಗವು ಸೂಚಿಸಿದೆ
- ಕೇರಳದಲ್ಲಿ ಡಿಸೆಂಬರ್ 31ರಂದು ರಾತ್ರಿ 10ರ ನಂತರ ಹೊಸ ವರ್ಷಾಚರಣೆಗೆ ಅವಕಾಶ ನಿಷೇಧಿಸಲಾಗಿದೆ. ಡಿ.30ರಿಂದ 2022ರ ಜನವರಿ 2ರ ವರೆಗೆ ಈ ನಿರ್ಬಂಧ ಇರಲಿದೆ

ಓಮೈಕ್ರಾನ್‌ನಿಂದ ಗುಣಮುಖರಾದ ವ್ಯಕ್ತಿಯೊಬ್ಬರನ್ನು ಅಹಮದಾಬಾದ್‌ನಲ್ಲಿ ಆಸ್ಪತ್ರೆ ಸಿಬ್ಬಂದಿ ಬೀಳ್ಕೊಟ್ಟರು—ಪಿಟಿಐ ಚಿತ್ರ

ಬೂಸ್ಟರ್ ಗೊಂದಲ

ಕೋವಿಡ್ ತಡೆಗೆ ನೀಡಲಾಗುವ ಲಸಿಕೆಯ ಮೂರನೇ ಡೋಸ್ ಅನ್ನು ಕೇಂದ್ರ ಸರ್ಕಾರವು 'ಮುನ್ನೆಚ್ಚರಿಕೆ ಡೋಸ್' ಎಂದು ಕರೆದಿರುವುದು ಗೊಂದಲ ಮೂಡಿಸಿದೆ. ಬೇರೆ ದೇಶಗಳಲ್ಲಿ ಇದನ್ನು ಬೂಸ್ಟರ್ ಡೋಸ್ ಎಂದು ಕರೆಯಲಾಗುತ್ತಿದೆ. ಆದರೆ, ಮೂಲ ಲಸಿಕೆಗಿಂತ ಭಿನ್ನವಾದ ಲಸಿಕೆಯನ್ನು ಮಾತ್ರ ಬೂಸ್ಟರ್ ಡೋಸ್ ಎಂದು ಹೇಳುತ್ತಾರೆ. ಲಸಿಕೆ ಪೋರ್ಟಲ್ ಕೋವಿನ್‌ನಲ್ಲಿ ಸರ್ಕಾರ ಸೂಚಿಸಿದ ಹೆಸರನ್ನೇ ಬಳಸಲಾಗುವುದು ಎಂದು ಕೋವಿನ್ ಮುಖ್ಯಸ್ಥ ಆರ್.ಎಸ್. ಶರ್ಮಾ ಹೇಳಿದ್ದಾರೆ.

'ಸರ್ಕಾರವು ಮುನ್ನೆಚ್ಚರಿಕೆ ಡೋಸ್ ಎಂದರೆ, ಕೋವಿನ್‌ನಲ್ಲಿ ಕೂಡ ಅದು ಹಾಗೆಯೇ ಇರುತ್ತದೆ. ಆದರೆ, 4 ಮತ್ತು 5ನೇ ಡೋಸ್‌ಗೆ ಏನು ಹೇಳಬಹುದು ಎಂಬುದನ್ನು ನನಗೆ ಊಹೆ ಮಾಡಲು ಆಗುತ್ತಿಲ್ಲ' ಎಂದು ಶರ್ಮಾ ಹೇಳಿದ್ದಾರೆ.

'ಮೊದಲ ಎರಡು ಡೋಸ್‌ಗಳಂತೆಯೇ ಮೂರನೇ ಡೋಸ್ ಕೂಡ ಇರುತ್ತದೆಯೇ ಎಂಬುದು ನನಗೆ ತಿಳಿದಿಲ್ಲ' ಎಂದು ಅವರು ಹೇಳಿದ್ದಾರೆ.

ಡಾ.ಮಲ್ಲಿಕಾ ಘಂಟಿಗೆ ಡಾ.ಶಿಮುಶ ಪ್ರಶಸ್ತಿ ಪ್ರದಾನ

ಘರ್ ವಾಪಸಿ: ನಮ್ಮನ್ನು ಎಲ್ಲಿ ಇಡುತ್ತೀರಿ?

ಪ್ರಜಾವಾಣಿ ವಾರ್ತೆ

ಹಾವೇರಿ: 'ಮತಾಂತರ ಆದವರು ಘರ್ ವಾಪಸಿಯಾಗಿ ಎಂದು ಯುವ ಸಂಸದರೊಬ್ಬರು ಕರೆ ನೀಡಿದ್ದಾರೆ. ನಾವು ಘರ್ ವಾಪಸಿಯಾದರೆ ನೀವು ನಮ್ಮನ್ನು ಎಲ್ಲಿ ಇಡುತ್ತೀರಿ? ತಲೆಯಲ್ಲಾ? ಅಥವಾ ಕಾಲಲ್ಲ? ಎಂಬುದನ್ನು ಸ್ಪಷ್ಟಪಡಿಸಿ' ಎಂದು ವಿಶ್ರಾಂತ ಕುಲಪತಿ ಡಾ.ಮಲ್ಲಿಕಾ ಘಂಟಿ ಖಾರವಾಗಿ ಪ್ರಶ್ನಿಸಿದರು.

ನಗರದ ಬಸವಕೇಂದ್ರ ಹೊಸಮಠದಲ್ಲಿ ಲಿಂ.ಜಗದ್ಗುರು ನೈಫಂಟಿನ ಸಿದ್ಧಬಸವ ಮುರುಘರಾಜೇಂದ್ರ ಸ್ವಾಮೀಜಿ ಹಾಗೂ ಅಥಣಿ ಮುರುಘೇಂದ್ರ ಶಿವಯೋಗಿಗಳ ಸ್ಮರಣೋತ್ಸವದ ನಿಮಿತ್ತ 'ಶರಣ ಸಂಸ್ಕೃತಿ ಉತ್ಸವ–2021' ಹಾಗೂ ಡಾ.ಶಿವಮೂರ್ತಿ ಮುರುಘಾ ಶರಣರ ಪೀಠಾರೋಹಣದ ತೃತೀಯ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಡಾ.ಶಿಮುಶ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

'ಘರ್ ವಾಪಸಿ' ಮಾತನ್ನು ಜನತಾ ನ್ಯಾಯಾಲಯದೊಳಗೆ ಇಟ್ಟು, ಜನರ ತೀರ್ಪು ಏನಿದೆ ಎಂಬುದನ್ನು ಕೇಳಬೇಕಿದೆ. 12ನೇ ಶತಮಾನದಲ್ಲಿ ಬ್ರಾಹ್ಮಣನಾಗಿ ಹುಟ್ಟಿದ ಬಸವಣ್ಣನನ್ನು ಬ್ರಾಹ್ಮಣ ಎಂದು ಆ ಸಮಾಜ ಇಂದಿಗೂ ಒಪ್ಪಿಕೊಂಡಿಲ್ಲ. ಕಾರಣ ಆ ಸಮಾಜದೊಳಗಿದ್ದ ಕಂದಾಚಾರವನ್ನು ಬಯಲಿಗೆಳೆದು, ಶ್ರೇಣೀಕರಣ ವ್ಯವಸ್ಥೆಯನ್ನು ವಿರೋಧಿಸಿದ್ದರು ಎಂದರು.

ಹಿಂದೂ ಧರ್ಮದ ಕಂದಾಚಾರ ಖಂಡಿಸಿದ ಶರಣರಾದ ಬಸವಣ್ಣ, ಕಾಳವ್ವೆ, ಗೊಗ್ಗವ್ವೆ ಅವರನ್ನು ಎಲ್ಲಿ ಇಡುತ್ತೀರಿ? ಬೌದ್ಧ ಧರ್ಮ ಸ್ವೀಕರಿಸಿದ ಡಾ.ಅಂಬೇಡ್ಕರ್ ಅವರನ್ನು ವಾಪಸ್ ಕರೆ ತರುತ್ತೀರಾ? ಎಂದು ಸವಾಲೆಸೆದರು.

ಆಹಾರ ಸಂಸ್ಕೃತಿ ಬಗ್ಗೆ ದೊಡ್ಡ ರಾಜಕಾರಣ ನಡೆಯುತ್ತಿದೆ. ನಮ್ಮ ಮನೆಯಲ್ಲಿ ಇರುವುದನ್ನು ನಾವು ತಿನ್ನುತ್ತೇವೆ. ರಾಜಕಾರಣ ಮತ್ತು ಹಿಂದುತ್ವಕ್ಕೆ ನನ್ನ ಪ್ರಶ್ನೆ ಇಷ್ಟೆ. ಇದನ್ನೇ ತಿನ್ನಿ ಎಂದು ತಾಕೀತು ಮಾಡಲು ನಿಮಗೆ ಯಾವ ಅಧಿಕಾರವಿದೆ. ಅಂಬೇಡ್ಕರ್ ಅವರು ಅಕ್ಷರ, ಸ್ವಾಭಿಮಾನ ನೀಡದಿದ್ದರೆ ನಾನು ಇಂದು ತಲೆಯ ಮೇಲೆ ಹೂ ಹಾಕಿಸಿಕೊಂಡು ಪ್ರಶಸ್ತಿ ಪಡೆಯುತ್ತಿರಲಿಲ್ಲ ಎಂದರು.

ಹಾವೇರಿ ನಗರದ ಬಸವಕೇಂದ್ರ ಹೊಸಮಠದಲ್ಲಿ 'ಶರಣ ಸಂಸ್ಕೃತಿ ಉತ್ಸವ–2021' ಕಾರ್ಯಕ್ರಮದಲ್ಲಿ ವಿಶ್ರಾಂತ ಕುಲಪತಿ ಡಾ.ಮಲ್ಲಿಕಾ ಘಂಟಿ ಅವರಿಗೆ 'ಡಾ.ಶಿಮುಶ ಪ್ರಶಸ್ತಿ'ಯನ್ನು ಚಿತ್ರದುರ್ಗದ ಮುರುಘಾ ಶರಣರು ಪ್ರದಾನ ಮಾಡಿದರು —ಪ್ರಜಾವಾಣಿ ಚಿತ್ರ

ಮಾಧ್ಯಮಗಳ ವಿರುದ್ಧ ಕಿಡಿ

70–80ರ ದಶಕದಲ್ಲಿ ಮಾತನ್ನು ಕೇಳುವ ವ್ಯವಧಾನವಿತ್ತು. ಇಂದು ಮಾತನ್ನು ತಿರುಚುವ ಕೆಲಸವನ್ನು ಮಾಧ್ಯಮಗಳು ಮಾಡುತ್ತಿವೆ. ಮಾತನಾಡಲು ಭಯ ಪಡುವ ವಾತಾವರಣ ಸೃಷ್ಟಿಯಾಗಿದೆ. 21ನೇ ಶತಮಾನದಲ್ಲಿ 12 ಶತಮಾನದ ನೆಮ್ಮದಿಯ ಬದುಕು ಮರುಕಳಿಸುವುದಕ್ಕಾಗಿ ನಮ್ಮಂಥವರು ಮಾತನಾಡುವ ಅಗತ್ಯತೆ ಇದೆ ಎಂದು ಮಾಧ್ಯಮಗಳ ವಿರುದ್ಧ ವಿಶ್ರಾಂತ ಕುಲಪತಿ ಡಾ.ಮಲ್ಲಿಕಾ ಘಂಟಿ ಕಿಡಿಕಾರಿದರು.

ಕೋವಿಡ್ ಪರೀಕ್ಷೆ ಸಂಖ್ಯೆ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪರೀಕ್ಷೆಗಳ ಸಂಖ್ಯೆ ಇಳಿಮುಖ ಮಾಡಿರುವುದರಿಂದ ಸೋಂಕಿತರ ಪ್ರಮಾಣ ತುಸು ತಗ್ಗಿದೆ. ಸೋಮವಾರ 58,495 ಪರೀಕ್ಷೆಗಳನ್ನು ನಡೆಸಲಾಗಿದ್ದು, 289 ಮಂದಿಯಲ್ಲಿ ಸೋಂಕು ದೃಢಪಟ್ಟಿವೆ. ಸದ್ಯ 7,449 ಮಂದಿ ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

18 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿವೆ. ಸೋಂಕು ದೃಢ ಪ್ರಮಾಣ ಶೇ 0.49 ರಷ್ಟಿದೆ. ಬೆಂಗಳೂರು ನಗರದಲ್ಲಿ 172 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಕೊಡಗು 37, ತುಮಕೂರು 15, ದಕ್ಷಿಣ ಕನ್ನಡ 12, ಕೋಲಾರದಲ್ಲಿ 10 ಪ್ರಕರಣಗಳು ವರದಿಯಾಗಿವೆ.

ಉಳಿದ ಜಿಲ್ಲೆಗಳ ಪೈಕಿ ಬಾಗಲಕೋಟೆ, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೀದರ್, ಚಾಮರಾಜನಗರ, ಚಿತ್ರದುರ್ಗ, ಗದಗ, ಹಾವೇರಿ, ಕೊಪ್ಪಳ, ರಾಯಚೂರು ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 30.04 ಲಕ್ಷ ದಾಟಿದೆ.

ಸೋಂಕಿತರಲ್ಲಿ 254 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.59 ಲಕ್ಷ ದಾಟಿದೆ. ಬೆಂಗಳೂರಿನಲ್ಲಿ 6,063 ಸೋಂಕಿತರಿದ್ದಾರೆ. ರಾಮನಗರ, ರಾಯಚೂರು, ಕಲಬುರಗಿ, ವಿಜಯಪುರ ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 10ಕ್ಕಿಂತ ಕಡಿಮೆಯಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ ಇಬ್ಬರು, ಕೊಡಗು ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.38 ರಷ್ಟು ಇದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,316ಕ್ಕೆ ಏರಿಕೆಯಾಗಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

30,04,876 ▲ ಒಟ್ಟು ಸೋಂಕಿತರು (30,04,587 ನಿನ್ನೆಯ ವಿವರ)

7,449 ▲ ಸಕ್ರಿಯ ಪ್ರಕರಣಗಳು

29,59,082 ▲ ಗುಣಮುಖರಾದವರು

38,257 ಒಟ್ಟು ಸಾವು ▼

ದಿನದ ಮಾಹಿತಿ

ಹೊಸ ಪ್ರಕರಣ	289	▼
ಗುಣಮುಖ	254	▲
ಸಾವು	04	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

'ರಾತ್ರಿ ಕರ್ಫ್ಯೂ ವಾಪಸ್ ಇಲ್ಲ'



ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ರಾತ್ರಿ ಕರ್ಫ್ಯೂ ಜಾರಿಗೊಳಿಸುವ ನಿರ್ಧಾರವನ್ನು ಹಿಂಪಡೆಯುವುದಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಆರೋಗ್ಯದ ದೃಷ್ಟಿಯಿಂದ ರಾತ್ರಿ ಕರ್ಫ್ಯೂ ಜಾರಿಗೊಳಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಬೇರೆ ಯಾವುದೇ ಉದ್ದೇಶವಿಲ್ಲ' ಎಂದರು.

ವ್ಯಾಪಾರ, ವಹಿವಾಟು ನಡೆಯಬೇಕೆಂಬುದು ಸರ್ಕಾರದ ಭಾವನೆ ಕೂಡ. ಈಗಾಗಲೇ ಆರ್ಥಿಕತೆ ಚೇತರಿಕೆಯಾಗಿದೆ. ಅದು ಮುಂದುವರಿದುಕೊಂಡು ಹೋಗಬೇಕಿದೆ ಎಂದು ಹೇಳಿದರು. ಪಕ್ಷದ ಆಂತರಿಕ ಚರ್ಚೆ: ಮಂಗಳವಾರ ಮತ್ತು ಬುಧವಾರ ಹುಬ್ಬಳ್ಳಿಯಲ್ಲಿ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ ನಡೆಯಲಿದೆ. ಪಕ್ದದ ಆಂತರಿಕ ವಿಚಾರಗಳ ಕುರಿತು ಅಲ್ಲಿ ಚರ್ಚೆ ನಡೆಯಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.ಪಕ್ಷ ಮತ್ತು ಸರ್ಕಾರದ ನಡುವೆ ಉತ್ತಮ ಬಾಂಧವ್ಯವಿದೆ. ಮುಂದಿನ ದಿನಗಳಲ್ಲಿ ನಿರೀಕ್ಷೆಗೂ ಮೀರಿದ ರೀತಿಯಲ್ಲಿ ಸರ್ಕಾರ ಕೆಲಸ ಮಾಡಲಿದೆ ಎಂದರು.

'ರಾತ್ರಿ ಕರ್ಫ್ಯೂ ಪ್ರಯೋಜನವಿಲ್ಲ'

ರಾಮನಗರ: 'ಶೇ 50ರಷ್ಟು ನಿರ್ಬಂಧ ವಿಧಿಸುವುದರಿಂದ ಯಾವುದೇ ಪ್ರಯೋಜನ ಇಲ್ಲ. ವರ್ತಕರಿಗೆ ಅವರದ್ದೇ ಆದ ಕಷ್ಟಗಳಿವೆ. ರಾತ್ರಿ ಕರ್ಫ್ಯೂ ಪ್ರಯೋಜನವಿಲ್ಲ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಮಂಗಳವಾರ, ಡಿಸೆಂಬರ್ 28, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 359 | ಪುಟ 16
• www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕ್ಷೇಮ ಕುಶಲ
ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚು ಆದ್ಯತೆ ನೀಡಬೇಕು; ಮನಃಸಂತೋಷವಿಲ್ಲ ಎಂದಾದರೆ, ಜೀವನದಲ್ಲಿ ಉತ್ಸಾಹವೇ ಕುಂದಿಹೋಗುತ್ತದೆ...

ಸಂಖ್ಯೆ-ಸುದ್ದಿ
ಕೇರಳಕ್ಕೆ ಅತ್ಯುತ್ತಮ ಆರೋಗ್ಯ
ಉತ್ತರ ಪ್ರದೇಶಕ್ಕೆ ಅನಾರೋಗ್ಯ

ಹಿಂದಿ ಹೇರಿಕೆ ವಿರುದ್ಧ ಧ್ವನಿ ಎತ್ತಿ: ಎಚ್‌ಡಿಕೆ 4
ಗಡಿಯಲ್ಲಿ 8,500 ಬಂಕರ್‌ಗಳ ನಿರ್ಮಾಣ 9

ಸೆನ್ಸೆಕ್ಸ್	ನಿಫ್ಟಿ	₹/$
57,420 ▲	17,086 ▲	75 ▲

ಮೆಟ್ರೊ ರೈಲು: ರಾತ್ರಿ 10ರ ಬಳಿಕ ಸಂಚಾರ ವಿರಳ

ಬೆಂಗಳೂರು: ಮಂಗಳವಾರದಿಂದ ರಾತ್ರಿ ಕರ್ಫ್ಯೂ ಜಾರಿಗೊಳಿಸಿರುವುದರಿಂದ ರಾತ್ರಿ 10ರ ಬಳಿಕ ಮೆಟ್ರೊ ರೈಲುಗಳ ಆವರ್ತನವನ್ನು ಕಡಿಮೆ ಮಾಡಿರುವ ಬೆಂಗಳೂರು ಮೆಟ್ರೊ ರೈಲು ನಿಗಮ, ರಾತ್ರಿ 11ರ ತನಕ ಸೇವೆ ಮುಂದುವರಿಸಲು ನಿರ್ಧರಿಸಿದೆ.

'10 ಗಂಟೆ ಬಳಿಕ ರೈಲುಗಳ ಸಂಖ್ಯೆಯನ್ನು ನಿಗದಿಗಿಂತ ಕಡಿಮೆ ಮಾಡಲಾಗಿದ್ದು, ಮಂಗಳವಾರದಿಂದ ಜಾರಿಗೆ ಬರಲಿದೆ. ಆದರೆ, ನಾಲ್ಕು ಕೊನೆಯ ನಿಲ್ದಾಣಗಳಿಂದ ಕೊನೆಯ ರೈಲು ಎಂದಿನಂತೆ ರಾತ್ರಿ 11 ಗಂಟೆಗೆ ಹೊರಡಲಿದೆ. ಬೆಳಿಗ್ಗೆ ರೈಲು ಹೊರಡುವ ಸಮಯದಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಬದನೆಕಾಯಿ ಕೆ.ಜಿ.ಗೆ ₹200 8

ಚಿನಕುರಳಿ
ಪ್ರಕಾಶ್ ಶೆಟ್ಟಿ

ಸ್ವಯಂಪ್ರೇರಿತ ಕ್ರಮ ಕೈಗೊಳ್ಳಲು ಮುಖ್ಯ ನ್ಯಾಯಮೂರ್ತಿ ರಮಣಗೆ ವಕೀಲರ ಮನವಿ

ದ್ವೇಷ ಭಾಷಣ: 'ಸುಪ್ರೀಂ'ಗೆ ಮೊರೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಜನಾಂಗೀಯ ಶುದ್ಧೀಕರಣಕ್ಕಾಗಿ ಮುಸ್ಲಿಮರ ನರಮೇಧ ನಡೆಸಬೇಕು' ಎಂದು ಕರೆ ಕೊಟ್ಟಿದ್ದ 'ದ್ವೇಷ ಭಾಷಣ'ದ ವಿರುದ್ಧ ಸ್ವಯಂಪ್ರೇರಿತವಾಗಿ ವಿಚಾರಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್‌ನ ಕೆಲವು ಹಿರಿಯ ವಕೀಲರು ಸೇರಿದಂತೆ ವಕೀಲರ ಗುಂಪೊಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರಿಗೆ ಮನವಿ ಕೊಟ್ಟಿದೆ.

ಈ ರೀತಿಯಲ್ಲಿ ಮಾತನಾಡುವುದೇ ಸರಿ ಎಂಬ ಸನ್ನಿವೇಶ ಈಗ ನಿರ್ಮಾಣ ಆಗಿದೆ. ಹಾಗಾಗಿ, ಹೀಗೆ ಮಾತನಾಡುವುದನ್ನು ತಡೆಯುವುದಕ್ಕೆ ನ್ಯಾಯಾಲಯದ ಮಧ್ಯಪ್ರವೇಶ ಅಗತ್ಯವಾಗಿದೆ ಎಂದು ಪತ್ರದಲ್ಲಿ ಪ್ರತಿಪಾದಿಸಲಾಗಿದೆ.

ಕೇಂದ್ರದ ಮಾಜಿ ಸಚಿವ ಸಲ್ಮಾನ್ ಖುರ್ಷಿದ್, ಪಟ್ನಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಂಜನಾ ಪ್ರಕಾಶ್, ಹಿರಿಯ ವಕೀಲರಾದ ದುಷ್ಯಂತ ದವೆ, ಪ್ರಶಾಂತ್ ಭೂಷಣ್, ಬಸವ ಪಿ. ಪಾಟೀಲ ಮತ್ತು ಇತರರು ಈ ಪತ್ರ ಬರೆದಿದ್ದಾರೆ. ಹಿಂದೂ ಯುವ ವಾಹಿನಿ ಸಂಘಟನೆಯು ದೆಹಲಿ ಮತ್ತು ಹರಿದ್ವಾರದಲ್ಲಿ ಕ್ರಮವಾಗಿ ಇದೇ 17 ಮತ್ತು 19ರಂದು ಆಯೋಜಿಸಿದ್ದ ಕಾರ್ಯಕ್ರಮಗಳಲ್ಲಿ 'ದ್ವೇಷ ಭಾಷಣ' ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಇಂತಹ ಭಾಷಣ ಮಾಡಿದವರ ಮೇಲೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ನೇರವಾಗಿ ಕ್ರಮ ಕೈಗೊಳ್ಳಬೇಕು ಎಂದು ಪತ್ರದಲ್ಲಿ ಆಗ್ರಹಿಸಲಾಗಿದೆ.

4ನೇ ಪುಟ ನೋಡಿ

ಮತಾಂತರ: ಹೇಳಿಕೆ ಹಿಂಪಡೆದ ತೇಜಸ್ವಿ ಸೂರ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಉಡುಪಿ: 'ಈಚೆಗೆ ಉಡುಪಿಯ ಕೃಷ್ಣಮಠದಲ್ಲಿ ನಡೆದ ವಿಶ್ವಾರ್ಪಣಂ ಕಾರ್ಯಕ್ರಮದಲ್ಲಿ ಮಾತನಾಡಿದ ಕೆಲವು ವಿಚಾರಗಳು ಅನವಶ್ಯಕ ವಿವಾದಗಳಿಗೆ

ಎಡೆಮಾಡಿಕೊಡುತ್ತಿರುವ ಕಾರಣ ಹೇಳಿಕೆಗಳನ್ನು ಹಿಂಪಡೆಯುತ್ತಿದ್ದೇನೆ' ಎಂದು ಸಂಸದ ಹಾಗೂ ಬಿಜೆಪಿ ರಾಷ್ಟ್ರೀಯ ಯುವ ಮೋರ್ಚಾ ಅಧ್ಯಕ್ಷ ತೇಜಸ್ವಿ ಸೂರ್ಯ ಟ್ವೀಟ್ ಮಾಡಿದ್ದಾರೆ.

ಸೂರ್ಯ ಹೇಳಿದ್ದು ಏನು?:

'ಯಾವುದೋ ಕಾರಣಕ್ಕೆ ಹಿಂದೂ ಧರ್ಮದಿಂದ ಕ್ರಿಶ್ಚಿಯನ್, ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡವರನ್ನು ಮರಳಿ ಹಿಂದೂ ಧರ್ಮಕ್ಕೆ ಕರೆತಂದರೆ ಸಾಲದು. ಪಾಕಿಸ್ತಾನದಲ್ಲಿರುವ ಮುಸ್ಲಿಮರನ್ನೂ ಹಿಂದೂಗಳಾಗಿ ಪರಿವರ್ತಿಸಬೇಕಾಗಿರುವುದು ಹಿಂದೂಗಳ ಆದ್ಯ ಕರ್ತವ್ಯವಾಗಬೇಕು' ಎಂದಿದ್ದರು.

'ಮನೆಯ ಪಕ್ಕದಲ್ಲಿರುವ, ಮೊಹಲ್ಲಾದಲ್ಲಿರುವವರನ್ನು ಹಿಂದೂ ಧರ್ಮಕ್ಕೆ ಕರೆತರುವುದಲ್ಲ; ಅಸಾಧ್ಯವಾದುದನ್ನು ಸಾಧ್ಯವಾಗಿಸುವ ದೊಡ್ಡ ಕನಸುಗಳನ್ನು ಕಾಣಬೇಕು. ಭ್ರಾಂತಿಯಿಂದ ಹೊರಬಂದು ಹಿಂದೂ ಧರ್ಮದ ಪುನರುತ್ಥಾನ ಮಾಡಬೇಕು. ಈ ಮೂಲಕ ಭಾರತ ಪ್ರಪಂಚಕ್ಕೆ ಜಗದ್ಗುರುವಾಗಬೇಕು' ಎಂದು ಅವರು ಪ್ರತಿಪಾದಿಸಿದ್ದರು.

'ಹಿಂದೆ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಒತ್ತಡಗಳಿಗೆ ಮಣಿದು ಹಿಂದೂ ಧರ್ಮ ತ್ಯಜಿಸಿದವರನ್ನೆಲ್ಲ ಮರಳಿ ಹಿಂದೂ ಧರ್ಮಕ್ಕೆ ಕರೆತರಲು ಪ್ರತಿ ದೇವಸ್ಥಾನ ಹಾಗೂ ಮಠಗಳು ವಾರ್ಷಿಕ ಗುರಿ ಹಾಕಿಕೊಳ್ಳಬೇಕು. ಟಿಪ್ಪು ಜಯಂತಿಯಂದೇ ಹಿಂದೂ ಧರ್ಮಕ್ಕೆ ಕರೆತರುವ ಕೆಲಸ ಆರಂಭವಾಗಬೇಕು' ಎಂದಿದ್ದರು.

ಬಿಜೆಪಿ ಸರ್ಕಾರ ಇತ್ತೀಚೆಗಷ್ಟೇ ಬೆಳಗಾವಿ ಅಧಿವೇಶನದಲ್ಲಿ ಮತಾಂತರ ನಿಷೇಧ ಮಸೂದೆಯನ್ನು ಅಂಗೀಕರಿಸಿತ್ತು. ವಿಧಾನಪರಿಷತ್ತಿನಲ್ಲಿ ಮಸೂದೆ ಮಂಡನೆಯಾಗಿಲ್ಲ. ಯಾರೇ ಆದರೂ ಮತಾಂತರಕ್ಕೆ ಯತ್ನಿಸುವುದು ಅಪರಾಧವಾಗಿದ್ದು, ಅಂತಹವರನ್ನು 10 ವರ್ಷಗಳ ಕಾಲ ಜೈಲಿಗೆ ಹಾಕುವ ಅಂಶವನ್ನೂ ಮಸೂದೆ ಒಳಗೊಂಡಿದೆ. ಇದರ ಬೆನ್ನಲ್ಲೇ ತೇಜಸ್ವಿ ಅವರ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ.

ಸಂತರು ಹೇಳಿದ್ದೇನು?

ಹರಿದ್ವಾರದಲ್ಲಿ ನಡೆದಿದ್ದ ಧರ್ಮ ಸಂಸತ್‌ನಲ್ಲಿ ಸ್ವಾಮೀಜಿಗಳು ಮಾಡಿದ್ದ ಭಾಷಣದ ವಿಡಿಯೊಗಳ ಟ್ವಿಟರ್ ಲಿಂಕ್‌ಗಳನ್ನು ವಕೀಲರು ತಮ್ಮ ಪತ್ರದಲ್ಲಿ ಲಗತ್ತಿಸಿದ್ದಾರೆ.

'ಮ್ಯಾನ್ಮಾರ್‌ನಲ್ಲಿ ಜನಾಂಗೀಯ ಶುದ್ಧೀಕರಣ ಮಾಡಿದಂತೆ ಇಲ್ಲಿಯೂ ಜನಾಂಗೀಯ ಶುದ್ಧೀಕರಣ ಮಾಡಬೇಕು. ಇದಕ್ಕಾಗಿ ಪ್ರತೀ ಹಿಂದೂ ಸಾಯಲು ಮತ್ತು ಸಾಯಿಸಲು ಸಿದ್ಧನಾಗಬೇಕು. ದೇಶದ ಪ್ರತೀ ಹಿಂದೂ, ಪೊಲೀಸರು, ಸೈನಿಕರು ಶಸ್ತ್ರಾಸ್ತ್ರ ಕೈಗೆತ್ತಿಕೊಳ್ಳಬೇಕು. ಈ ಮೂಲಕ ಈ ಶುದ್ಧೀಕರಣ ಅಭಿಯಾನದಲ್ಲಿ ಭಾಗಿಯಾಬೇಕು' ಎಂದು ಸ್ವಾಮಿ ಪ್ರಬೋಧಾನಂದ ಅವರು ಧರ್ಮ ಸಂಸತ್‌ನಲ್ಲಿ ಕರೆ ನೀಡಿದ್ದರು.

4ನೇ ಪುಟ ನೋಡಿ

ಕೋವಿಡ್: ಅಗತ್ಯ ಆಧರಿಸಿ ಸ್ಥಳೀಯ ನಿರ್ಬಂಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೊರೊನಾ ವೈರಾಣುವಿನ ರೂಪಾಂತರ ತಳಿ ಡೆಲ್ಟಾ ಸೋಂಕು ಗಣನೀಯ ಪ್ರಮಾಣದಲ್ಲಿಯೇ ಇದೆ, ಹೊಸ ರೂಪಾಂತರ ತಳಿ ಓಮೈಕ್ರಾನ್ ಸೋಂಕು 19 ರಾಜ್ಯಗಳಲ್ಲಿ ಪತ್ತೆಯಾಗಿದೆ. ಹಾಗಾಗಿ, ರಾಜ್ಯಗಳು ಜಾಗರೂಕವಾಗಿಯೇ ಇರಬೇಕು ಎಂದು ಕೇಂದ್ರ ಸರ್ಕಾರವು ಸೂಚಿಸಿದೆ. ಹಬ್ಬದ ಸಂದರ್ಭದಲ್ಲಿ ಜನದಟ್ಟಣೆಯನ್ನು ನಿಯಂತ್ರಿಸುವುದಕ್ಕಾಗಿ ಅಗತ್ಯದ ಆಧಾರದಲ್ಲಿ ಸ್ಥಳೀಯವಾಗಿ ನಿರ್ಬಂಧ ಅಥವಾ ನಿಷೇಧಗಳನ್ನು ಹೇರಬಹುದು ಎಂದು ಸಲಹೆ ಮಾಡಿದೆ.

ನಿರ್ಬಂಧಗಳ ಬಗ್ಗೆ ಹೊರಡಿಸಲಾಗಿದ್ದ ಅಧಿಸೂಚನೆಯ ಸಿಂಧುತ್ವವನ್ನು 2022ರ ಜನವರಿ 31ರವರೆಗೆ ಕೇಂದ್ರ ಗೃಹ ಸಚಿವಾಲಯವು ವಿಸ್ತರಿಸಿದೆ.

ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ಪತ್ರ ಬರೆದಿದ್ದಾರೆ. ಮಾಸ್ಕ್ ಧರಿಸುವಿಕೆ, ಅಂತರ ಕಾಯ್ದುಕೊಳ್ಳುವಿಕೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಭಲ್ಲಾ ಸೂಚಿಸಿದ್ದಾರೆ.

ಲಸಿಕೆ ಚುರುಕುಗೊಳಿಸಿ ಆಯೋಗ ಸೂಚನೆ

ವಿಧಾನಸಭೆಗೆ ಚುನಾವಣೆ ನಡೆಯಲಿರುವ ಐದು ರಾಜ್ಯಗಳಲ್ಲಿ ಕೋವಿಡ್ ಲಸಿಕೆ ನೀಡುವ ಪ್ರಕ್ರಿಯೆಯನ್ನು ಚುರುಕುಗೊಳಿಸುವಂತೆ ಚುನಾವಣಾ ಆಯೋಗವು ಸೋಮವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಮುಖ್ಯ ಚುನಾವಣಾ ಆಯುಕ್ತ ಸುಶೀಲ್ ಚಂದ್ರ ಮತ್ತು ಇಬ್ಬರು ಆಯುಕ್ತರಾದ ರಾಜೀವ್ ಕುಮಾರ್ ಮತ್ತು ಅನೂಪ್ ಚಂದ್ರ ಪಾಂಡೆ ಅವರಿಗೆ ಉತ್ತರ ಪ್ರದೇಶ, ಪಂಜಾಬ್, ಉತ್ತರಾಖಂಡ, ಗೋವಾ ಮತ್ತು ಮಣಿಪುರದ ಕೋವಿಡ್ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡಿದ ಬಳಿಕ ಈ ಸೂಚನೆ ನೀಡಲಾಗಿದೆ. ಚುನಾವಣೆಯನ್ನು ಮುಂದೂಡುವ ಬಗ್ಗೆ ಆಯೋಗವು ಈ ವರೆಗೆ ಯಾವುದೇ ನಿರ್ಧಾರ ಕೈಗೊಂಡಿಲ್ಲ ಎಂದು ಮೂಲಗಳು ಹೇಳಿವೆ.

ಬಿಡಿಎ ಅಕ್ರಮ: ತನಿಖೆಗೆ ಅಡ್ಡಗಾಲು

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ (ಬಿಡಿಎ) ನಡೆದಿರುವ ಅಕ್ರಮ ಚಟುವಟಿಕೆ ಮತ್ತು ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸಲ್ಲಿಸಿರುವ 49 ಪ್ರಸ್ತಾವಗಳನ್ನು ತನ್ನ ಬಳಿಯೇ ಇರಿಸಿಕೊಂಡಿರುವ ನಗರಾಭಿವೃದ್ಧಿ ಇಲಾಖೆ, ತನಿಖೆಗೆ ಅಡ್ಡಗಾಲು ಹಾಕುತ್ತಿದೆ.

ಸಾರ್ವಜನಿಕರು ನೀಡಿದ್ದ ದೂರುಗಳನ್ನು ಆಧರಿಸಿ ಪ್ರಾಥಮಿಕ ತನಿಖೆ ನಡೆಸಿದ್ದ ಎಸಿಬಿ, ಆರೋಪಿತ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ಎಫ್‌ಐಆರ್ ದಾಖಲಿಸಲು ಅನುಮತಿ ಕೋರಿದ್ದ 24 ಪ್ರಕರಣಗಳ ಕುರಿತು ನಗರಾಭಿವೃದ್ಧಿ ಇಲಾಖೆ ಹಲವು ತಿಂಗಳಿಂದ ಪ್ರತಿಕ್ರಿಯಿಸಿಲ್ಲ.

ನವೆಂಬರ್ 19ರಿಂದ 23ರವರೆಗೆ ಸ್ವಯಂಪ್ರೇರಿತ ಕಾರ್ಯಾಚರಣೆ ನಡೆಸಿದ್ದ ತನಿಖಾ ಸಂಸ್ಥೆ, ಬಿಡಿಎನಲ್ಲಿ ನಡೆದಿರುವ ನೂರಾರು ಕೋಟಿ ಮೊತ್ತದ ಭ್ರಷ್ಟಾಚಾರ ಪ್ರಕರಣಗಳನ್ನು ಪತ್ತೆಹಚ್ಚಿತ್ತು.

3B ಪುಟ ನೋಡಿ

'ಮಾಹಿತಿ ಪಡೆದು ಸೂಕ್ತ ಕ್ರಮ'

'ತನಿಖೆಗೆ ಅನುಮತಿ ಕೋರಿ ಎಸಿಬಿ ಸಲ್ಲಿಸುವ ಪ್ರಸ್ತಾವಗಳನ್ನು ನಿಯಮಾನುಸಾರ ವಿಲೇವಾರಿ ಮಾಡುವ ಕ್ರಮವಿದೆ. ಬಿಡಿಎ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ತನಿಖೆಗೆ ಅನುಮತಿ ಕೋರಿರುವ ಕಡತಗಳು ಬಾಕಿ ಇರುವುದು ನನ್ನ ಗಮನಕ್ಕೆ ಬಂದಿಲ್ಲ. ನಗರಾಭಿವೃದ್ಧಿ ಇಲಾಖೆಯಿಂದ ಮಾಹಿತಿ ಪಡೆದು, ಸೂಕ್ತ ಕ್ರಮ ಜರುಗಿಸಲಾಗುವುದು' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಮುಖ್ಯಮಂತ್ರಿ ಬದಲಾವಣೆ ಇಲ್ಲ'

ಹುಬ್ಬಳ್ಳಿ: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಿರೀಕ್ಷೆ ಮೀರಿ ಕೆಲಸ ಮಾಡುತ್ತಿದ್ದಾರೆ. ಅವರೊಬ್ಬ ಪ್ರಾಮಾಣಿಕ ಹಾಗೂ ಬದ್ಧತೆ ಇರುವ ಮುಖ್ಯಮಂತ್ರಿ. ಯಾವುದೇ ಕಾರಣಕ್ಕೂ ಅವರನ್ನು ಬದಲಾವಣೆ ಮಾಡುವುದಿಲ್ಲ. ಮುಂದಿನ ವಿಧಾನಸಭಾ ಚುನಾವಣೆ ಅವರ ನೇತೃತ್ವದಲ್ಲಿಯೇ ನಡೆಯಲಿದೆ' ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಸ್ಪಷ್ಟಪಡಿಸಿದರು. 4

ಎಪಿಎಲ್ ಕುಟುಂಬಕ್ಕೂ ₹1 ಲಕ್ಷ ಪರಿಹಾರಕ್ಕೆ ಚಿಂತನೆ: ಮುಖ್ಯಮಂತ್ರಿ

ಬೆಂಗಳೂರು: 'ಕೋವಿಡ್‌ನಿಂದ ಮೃತಪಟ್ಟ ಎಪಿಎಲ್ ಕುಟುಂಬದವರಿಗೆ ₹1 ಲಕ್ಷ ಪರಿಹಾರ ನೀಡುವ ಬಗ್ಗೆ ಸಕಾರಾತ್ಮಕ ಚಿಂತನೆ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.



ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರಿಗೆ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪರಿಹಾರ ಧನ ವಿತರಿಸಿ ಅವರು ಮಾತನಾಡಿದರು.

'ಬಿಪಿಎಲ್ ಮಾತ್ರವಲ್ಲದೇ ಎಪಿಎಲ್ ಕುಟುಂಬಕ್ಕೂ ಕೇಂದ್ರ ಸರ್ಕಾರದಿಂದ ತಲಾ ₹50 ಸಾವಿರ ಪರಿಹಾರ ನೀಡಲಾಗುತ್ತಿದೆ. ರಾಜ್ಯ ಸರ್ಕಾರ ಬಿಪಿಎಲ್ ಕುಟುಂಬಕ್ಕೆ ಮಾತ್ರ ₹1 ಲಕ್ಷ ಸೇರಿಸಿ ಒಟ್ಟು ₹1.50 ಲಕ್ಷ ಕೊಡುತ್ತಿದೆ. ಈ ಒಂದು ಲಕ್ಷವನ್ನು ಎಪಿಎಲ್ ಕುಟುಂಬಕ್ಕೂ ನೀಡಬೇಕು' ಎಂದು ಶಾಸಕ ಬಿ.ಝಡ್. ಜಮೀರ್ ಅಹಮ್ಮದ್ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಹಣಕಾಸಿನ ಸ್ಥಿತಿಗತಿ ನೋಡಿಕೊಂಡು ಸಕಾರಾತ್ಮಕ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

ವೈಕುಂಠ ಸಮಾರಾಧನೆ
ಪೂಜ್ಯ ಶ್ರೀ ಆರ್.ಎಲ್.ಜಾಲಪ್ಪ
ಮಾಜಿ ಕೇಂದ್ರ ಮತ್ತು ರಾಜ್ಯ ಸಚಿವರು.
ಶ್ರೀ ದೇವರಾಜ್ ಅರಸ್ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು.
ಈಡಿಗ ರತ್ನ
ಶ್ರೀ ದೇವರಾಜ್ ಅರಸ್ ಪ್ರಶಸ್ತಿ ಪುರಸ್ಕೃತರು.
ಅಹಿಂದ ನಾಯಕರು.
ಶಿಕ್ಷಣ ಮತ್ತು ಪರಿಸರ ಪ್ರೇಮಿ.
ತ್ರಿವಿಧ ದಾಸೋಹಿಗಳು
ವೃದ್ಧರ ಆಶ್ರಯದಾತರು.
ಸಾವಿರಾರು ಕುಟುಂಬಗಳಿಗೆ ಉದ್ಯೋಗದಾತರು.



ಶ್ರೀ ಆರ್.ಎಲ್.ಜಾಲಪ್ಪ
19-10-1925 to 17-12-2021

ವೈಕುಂಠ ಸಮಾರಾಧನೆ
ದಿನಾಂಕ: 29-12-2021 ರ ಬುಧವಾರ ಮಧ್ಯಾಹ್ನ 12 ಗಂಟೆ.
ಸ್ಥಳ: ಆರ್.ಎಲ್. ಜಾಲಪ್ಪ ಕ್ಯಾಂಪಸ್, ಕೊಡಿಗೇಹಳ್ಳಿ, ದೊಡ್ಡಬಳ್ಳಾಪುರ.
ಸರ್ವರೂ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖ ತಪ್ತರು:
ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮೊಮ್ಮಕ್ಕಳು ಹಾಗೂ ಮರಿಮೊಮ್ಮಕ್ಕಳು.
ಶ್ರೀ ದೇವರಾಜ್ ಅರಸ್ ವಿದ್ಯಾಸಂಸ್ಥೆಯ ಸಿಬ್ಬಂದಿ ವರ್ಗ,
ವಿದ್ಯಾರ್ಥಿಗಳು ಹಾಗೂ ಅಭಿಮಾನಿಗಳು.

ಕರ್ನಾಟಕ ಸರ್ಕಾರ
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ – ಬೆಂಗಳೂರು ಗ್ರಾಮಾಂತರ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಕೊಠಡಿ ಸಂಖ್ಯೆ: 207, 2ನೇ ಮಹಡಿ, ಬೀರಸಂದ್ರ ಗ್ರಾಮ, ವಿಶ್ವನಾಥಪುರ ಅಂಚೆ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110
ದೂರವಾಣಿ ಸಂಖ್ಯೆ: 080–29787452 E-mail: dhobengalururural-hfws@karnataka.gov.in

ಸಂಖ್ಯೆ: ಸರಬ/02/2021–22 ದಿನಾಂಕ: 27.12.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ದ್ವಿ ಲಕೋಟೆ ಪದ್ಧತಿ

ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳಲ್ಲಿ ವೈದ್ಯಕೀಯ ಉಪಕರಣಗಳು/ಸಾಧನ ಸಲಕರಣೆಗಳ ದುರಸ್ಥಿ ಮತ್ತು ಬಣ್ಣದ ಕುರಿತು ರೂ. 10.00 ಲಕ್ಷಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್, ಇವರು ಕ್ರಿಯಾ ಯೋಜನೆಯಲ್ಲಿ ಬಿಡುಗಡೆ ಮಾಡಲಾಗಿದ್ದು, ದ್ವಿ ಲಕೋಟೆ ಪದ್ಧತಿಯಲ್ಲಿ **'E-Procurement'** ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತರು ವೆಬ್‌ಸೈಟ್ **http://www.eproc.karnataka.gov.in** ರ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಬಹುದು.

ಕ್ರ.ಸಂ	ವಿವರ	
1	ಇ–ಪ್ರೊಕ್ಯೂಮೆಂಟ್ ಮೂಲಕ ಖಾಲಿ ಟೆಂಡರ್ ಪಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ	11–01–2022, ಸಮಯ ಸಂಜೆ: 05:30
2	ಟೆಂಡರ್‌ನ ಅಂದಾಜು ಮೊತ್ತ	ರೂ. 10.00 ಲಕ್ಷ
3	ಇ .ಎಂ.ಡಿ. ಹಣ	ಟೆಂಡರ್ ಮೊತ್ತಕ್ಕೆ ಶೇ. 2.5 ರಷ್ಟು (ರೂ. 25,000/–)
4	ಟೆಂಡರ್ ಅನ್ನು ತೆರೆಯುವ ದಿನಾಂಕ	
	ಅ) ತಾಂತ್ರಿಕ ಬಿಡ್	14–01–2022, ಸಮಯ ಮಧ್ಯಾಹ್ನ: 12:30
	ಆ) ವಾಣಿಜ್ಯ ಬಿಡ್	ಯಶಸ್ವಿ ತಾಂತ್ರಿಕ ಟೆಂಡರ್‌ದಾರರಿಗೆ ತಿಳಿಸಲಾಗುವುದು
5	ಟೆಂಡರ್ ತೆರೆಯುವ ಸ್ಥಳ (Online Bid Opening)	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, #207, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು

ಹೆಚ್ಚಿನ ವಿವರಗಳಿಗೆ **www.eproc.karnataka.gov.in** ಮೂಲಕ ಮಾಹಿತಿ ಪಡೆಯಬಹುದು.
ಸಹಿ/–ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ
ವಾಸಾಸಂಇ/ಉನಿಕ/ಶಿರಡಿ ಸಾಯಿ/ಬೆಂಗ್ರಾಜಿ/343/2021–22 ಬೆಂಗಳೂರು ಗ್ರಾಮಾಂತರ ಜಿಲ್ಲೆ
ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಐಕಿಯಾ ಮಾರಾಟ ಮೇಳ

ಬೆಂಗಳೂರು: ಗೃಹಬಳಕೆಯ ಉತ್ಪನ್ನಗಳ ಮಾರಾಟ ಕಂಪನಿ 'ಐಕಿಯಾ', ಚಳಿಗಾಲದ ಮಾರಾಟ ಮೇಳವನ್ನು ಆಯೋಜಿಸಿದೆ. ಇದು ಜನವರಿ 15ರವರೆಗೆ ಚಾಲ್ತಿಯಲ್ಲಿ ಇರಲಿದೆ.

ಕಂಪನಿಯ ಭೌತಿಕ ಮಳಿಗೆಗಳಲ್ಲಿ ಹಾಗೂ ಆನ್‌ಲೈನ್ ಮಳಿಗೆಯಲ್ಲಿ ಈ ಮಾರಾಟ ಮೇಳ ಇರಲಿದೆ. ಬೆಂಗಳೂರಿಗರು ಕಂಪನಿಯ ಆನ್‌ಲೈನ್ ಮಳಿಗೆಯ (www.ikea.com/in/en/) ಮೂಲಕ ಉತ್ಪನ್ನಗಳನ್ನು ಖರೀದಿಸಬಹುದು. ಚಳಿಗಾಲದ ಮಾರಾಟ ಮೇಳದಲ್ಲಿ ಗ್ರಾಹಕರಿಗೆ ಶೇ 40ರವರೆಗೆ ರಿಯಾಯಿತಿ ಇರಲಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ಸಂ:ಬೆಂಅಪ್ರಾ/ನಯೋಸ/CLU-25/1494/2021-22 ದಿನಾಂಕ:24.12.2021

ಪ್ರಕಟಣೆ

ಶ್ರೀ ಜಿ.ಶಶಿಕಾಂತ್, ನಂ.271, ಬಾಲಾಜಿ ನಿಲಯ, ದಾಸರ ಹೊಸಹಳ್ಳಿ, ಬಂಗಾರಪೇಟೆ-563 114 ರವರು ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಾಟಂನಲ್ಲೂರು ಗ್ರಾಮದ ಸರ್ವೆ ನಂ.60/2 ರಲ್ಲಿನ 37.75 ಗುಂಟೆ ಮತ್ತು ಸರ್ವೆ ನಂ.60/17ರಲ್ಲಿ 01 ಎಕರೆ 0.75 ಗುಂಟೆ ಒಟ್ಟು 01 ಎಕರೆ 38.50 ಗುಂಟೆ (02 ಗುಂಟೆ ಖರಾಬ್‌ನ್ನು ಹೊರತುಪಡಿಸಿ) ವಿಸ್ತೀರ್ಣದ ಜಮೀನಿನ ಪೈಕಿ 30 ಗುಂಟೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಾಣಿಜ್ಯ ವಲಯಕ್ಕಾಗಿ, ಉಳಿಕೆ 01 ಎಕರೆ 8.50 ಗುಂಟೆ ವಿಸ್ತೀರ್ಣದ ಜಮೀನನ್ನು ಕೃಷಿ ವಲಯದಿಂದ ವಸತಿ ವಲಯಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡುವುದರಿಂದ ವಸತಿ ಮತ್ತು ವಾಣಿಜ್ಯ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಹಾಗೂ ವಸತಿ ಮತ್ತು ವಾಣಿಜ್ಯ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರನ್ವಯ, ಸದರಿ ಭೂ ಉಪಯೋಗ ಬದಲಾವಣೆ ಕುರಿತಂತೆ ಯಾರಿಂದಲಾದರೂ ಸಲಹೆ/ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆಯ ದಿನಾಂಕದಿಂದ 15 ದಿವಸಗಳೊಳಗಾಗಿ ಸಲಹೆ/ಆಕ್ಷೇಪಣೆಗಳನ್ನು ಲಿಖಿತ ಮೂಲಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜಕ ಸದಸ್ಯರವರಿಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. 15 ದಿವಸಗಳ ನಂತರ ಸಲ್ಲಿಸಲಾಗುವ ಆಕ್ಷೇಪಣೆಗಳಿಗೆ ಮಾನ್ಯತೆ ನೀಡಲಾಗುವುದಿಲ್ಲ.

ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು
BDA/PRO/CLU/53/2021-22

ಬಿಬಿಎಂಪಿ: ₹2,555 ಕೋಟಿ ಆಸ್ತಿ ತೆರಿಗೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ 9 ತಿಂಗಳಲ್ಲಿ ₹2,555 ಕೋಟಿ ಆಸ್ತಿ ತೆರಿಗೆಯನ್ನು ಬಿಬಿಎಂಪಿ ಸಂಗ್ರಹಿಸಿದೆ. ಈ ಮೂಲಕ ತೆರಿಗೆ ಸಂಗ್ರಹ ಗುರಿಯಲ್ಲಿ ಶೇ 63ರಷ್ಟು ಸಾಧನೆ ಮಾಡಿದ್ದು, ಈ ಪೈಕಿ ಯಲಹಂಕ ವಲಯದಲ್ಲಿ ಅತೀ ಹೆಚ್ಚು ಶೇ 76.10ರಷ್ಟು ತೆರಿಗೆ ವಸೂಲಿಯಾಗಿದೆ.

'ಲಾಕ್‌ಡೌನ್ ಇದ್ದ ಸಂದರ್ಭದಲ್ಲೂ ಆನ್‌ಲೈನ್ ಮೂಲಕ ಅಧಿಕ ಪ್ರಮಾಣದ ತೆರಿಗೆ ಪಾವತಿಯಾಗಿದೆ. ಆಸ್ತಿ ತೆರಿಗೆ ವಸೂಲಿ ಅಭಿಯಾನ ಆರಂಭಿಸಲಾಗಿದೆ. ಪ್ರತಿ ಬುಧವಾರ ಈ ಅಭಿಯಾನ ನಡೆಯುತ್ತಿದೆ. ತೆರಿಗೆ ಬಾಕಿ ಉಳಿಸಿಕೊಂಡಿರುವ 3 ಲಕ್ಷಕ್ಕೂ ಹೆಚ್ಚು ಸುಸ್ತಿದಾರರ ಪೈಕಿ 1.41 ಲಕ್ಷ ಆಸ್ತಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಅದರಿಂದಲೇ ₹150 ಕೋಟಿ ಹೆಚ್ಚುವರಿ ತೆರಿಗೆ ಸಂಗ್ರಹವಾಗಿದೆ. ಹೊಸ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಜೋಡಣೆ ಮಾಡುವ ಕಾರ್ಯವನ್ನು ಚುರುಕುಗೊಳಿಸಲಾಗಿದೆ. ಇದೆಲ್ಲದರ ಪರಿಣಾಮ ಇಷ್ಟು ಪ್ರಮಾಣದ ತೆರಿಗೆ ಸಂಗ್ರಹ ಸಾಧ್ಯವಾಗಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಲಯ	ವಾರ್ಷಿಕ ಗುರಿ(₹ಗಳಲ್ಲಿ)	ಈವರೆಗೆ ವಸೂಲಾಗಿರುವ ತೆರಿಗೆ (₹ಗಳಲ್ಲಿ)	ಶೇಕಡವಾರು
ಯಲಹಂಕ	341	259.49	76.10
ಮಹದೇವಪುರ	996.10	656.58	65.91
ದಾಸರಹಳ್ಳಿ	120.23	70.64	58.75
ಆರ್.ಆರ್.ನಗರ	262.81	174.36	66.34
ಬೊಮ್ಮನಹಳ್ಳಿ	432.94	270.06	62.38
ದಕ್ಷಿಣ	623.11	382.61	61.40
ಪಶ್ಚಿಮ	465.12	260.12	55.92
ಪೂರ್ವ	759.22	481.97	63.48
ಒಟ್ಟು	4,000	2,555	63.89

ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡವರಿಗೆ ಮೊದಲ ಹಂತದಲ್ಲಿ ನೋಟಿಸ್ ನೀಡಬೇಕು. ಅದಕ್ಕೂ ಜಗ್ಗದಿದ್ದರೆ ವಾರಂಟ್ ಜಾರಿ ಮಾಡಿ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತರು ಕಂದಾಯ ವಿಭಾಗದ ಅಧಿಕಾರಿಗಳಿಗೆ ಈ ಹಿಂದೆ ತಾಕೀತು ಮಾಡಿದ್ದರು. ಹೊಸ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಸೇರಿಸುವ ಸಂಬಂಧ ಜಿಐಎಸ್ ಮತ್ತು ಡ್ರೋನ್ ಮೂಲಕ ಸರ್ವೆ ನಡೆಸುವಂತೆಯೂ ತಿಳಿಸಿದ್ದರು.

'ಅಂತೆಯೇ ಮೊದಲು ನೋಟಿಸ್, ನಂತರ ಜಪ್ತಿ ವಾರಂಟ್ ನೀಡಿದೆವು. ತೆರಿಗೆ ಪಾವತಿಸುವ ತನಕ ಬಿಡದೆ ಬೆನ್ನತ್ತಿದ್ದರಿಂದ ಇಷ್ಟು ಪ್ರಮಾಣದಲ್ಲಿ ತೆರಿಗೆ ವಸೂಲಿ ಸಾಧ್ಯವಾಗಿದೆ. ಕಳೆದ ಸಾಲಿನಲ್ಲಿ ಮಾರ್ಚ್ ಅಂತ್ಯಕ್ಕೆ ಯಲಹಂಕ ವಲಯದಲ್ಲಿ ₹207 ಕೋಟಿ ಸಂಗ್ರಹವಾಗಿತ್ತು. ಈಗ ಡಿಸೆಂಬರ್ ಅಂತ್ಯಕ್ಕೇ ₹259.49 ಕೋಟಿ ಸಂಗ್ರಹವಾಗಿದೆ. ಮಾರ್ಚ್ ವೇಳೆಗೆ ಗುರಿ ಮೀರಿ ತೆರಿಗೆ ವಸೂಲಿ ಆಗಲಿದೆ' ಎಂದು ಯಲಹಂಕ ವಿಭಾಗದ ಉಪ ಆಯುಕ್ತ (ಕಂದಾಯ) ಶಿವೇಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

ಕರ್ನಾಟಕ ಸರ್ಕಾರ
(ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ)
ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ
ಚಿಕ್ಕತಿರುಪತಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ
ಇ–ಟೆಂಡರ್ ಪ್ರಕಟಣೆ
ತಿದ್ದುಪಡಿ

ಮಾನ್ಯ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ: ಡಿವಿಎಸ್(1)ಸಿಆರ್:65/2021–22, ದಿನಾಂಕ: 06–11–2021, ಆದೇಶದ ಮೇರೆಗೆ ಈ ಮೂಲಕ ಸಮಸ್ತ ಜನಗಳಿಗೆ ತಿಳಿಯಪಡಿಸುವುದೇನೆಂದರೆ ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದ 2021–22 ನೇ ಸಾಲಿನ ಭಕ್ತಾದಿಗಳ ಅನುಕೂಲಕ್ಕಾಗಿ ಹಾಗೂ ಅನ್ನದಾಸೋಹ ಭವನಕ್ಕೆ 1500 ಲೀಟರ್ ಆರ್‌ಓ ಪ್ಲಾಟ್ (ಶುದ್ಧ ಕುಡಿಯುವ ನೀರಿನ ಘಟಕ) ಮತ್ತು **DG SET 150 KV** (ಶಬ್ಧ ರಹಿತ ಜನರೇಟರ್) ಖರೀದಿಸಲು ಟೆಂಡರ್ ಪ್ರಕ್ರಿಯೆಯನ್ನು ಇ–ಟೆಂಡರ್ ಮೂಲಕ ನಡೆಸಲಾಗುತ್ತದೆ. ಸವಾಲುದಾರರು ಟೆಂಡರ್ ಹಾಕಲು ಕೊನೆಯ ದಿನಾಂಕ: 27/12/2021 ರಿಂದ 03/01/2022 ರ ಸಂಜೆ 6–00 ಗಂಟೆಯವರೆಗೆ ಇರುತ್ತದೆ. 1500 ಲೀಟರ್ ಆರ್‌ಓ ಪ್ಲಾಟ್ (ಶುದ್ಧ ಕುಡಿಯುವ ನೀರಿನ ಘಟಕ) ಮತ್ತು **DG SET 150 KV** (ಶಬ್ಧ ರಹಿತ ಜನರೇಟರ್) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04/01/2022 ರಂದು ಬೆಳಿಗ್ಗೆ 6–01 ಗಂಟೆಗೆ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 05–01–2022 ರಂದು 06.02 ಗಂಟೆಗೆ. ಹೆಚ್ಚಿನ ವಿವರಗಳನ್ನು ದೇವಾಲಯದ ಕಚೇರಿಯಿಂದ ಪಡೆಯಬಹುದು.
ವೆಬ್‌ಸೈಟ್‌ನಲ್ಲಿ ನೋಂದಾಯಿಸ ತಕ್ಕ ಇ.ಎಂ.ಡಿ ಮೊಬಲಗು 1500 ಲೀಟರ್ ಆರ್‌ಓ ಪ್ಲಾಟ್ (ಶುದ್ಧ ಕುಡಿಯುವ ನೀರಿನ ಘಟಕ) **DG SET 150 KV** ರೂ. 1,00,000/– ರೂಪಾಯಿಗಳು.
ಸಹಿ/– ದೇವಾಲಯ ನಿರ್ವಾಹಣಾಧಿಕಾರಿ

PUBLIC NOTICE
ICICI Bank · ICICI Bank Limited
Registered office: Landmark, Race Course Circle, Vadodara 390 007.
Corporate office: ICICI Bank Towers, Bandra-Kurla Complex, Mumbai 400 051.
ಚಿನ್ನ ಹರಾಜು ಕಂ ಆಹ್ವಾನ ಪ್ರಕಟಣೆ
ಈ ಕೆಳಗಿನ ಸಾಲಗಾರರಿಗೆ, ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ("ಐಸಿಐಸಿಐ ಬ್ಯಾಂಕ್") ಇವರಿಂದ ಪಡೆದಿದ್ದ ಚಿನ್ನಾಭರಣಗಳ ಮೇಲಿನ ಸಾಲ ಸೌಲಭ್ಯಕ್ಕೆ ("ಫೆಸಿಲಿಟಿ") ಸಂಬಂಧಿತ ಸಂಪೂರ್ಣ ಬಾಕಿಮೊತ್ತವನ್ನು ಮರುಪಾವತಿಸಬೇಕೆಂದು ಸೂಚನೆ ನೀಡಲಾಗಿತ್ತು. ಅದಾಗ್ಯೂ ಸಾಲಗಾರರು ವಿಫಲರಾಗಿದ್ದರಿಂದ, ಸದರಿ ಅಡಮಾನ ಚಿನ್ನಾಭರಣಗಳನ್ನು 07–01–2022ರಂದು ಹರಾಜು ಹಾಕುವುದು ಅನಿವಾರ್ಯವಾಗಿದೆ. ಯಾವುದೇ ... ಪೂರ್ವ ಸೂಚನೆ ನೀಡದೆಯೇ ಖಾತೆಯನ್ನು ಕೈಬಿಡುವ/ಹರಾಜು ದಿನಾಂಕ ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ. ಸದರಿ ಹರಾಜನ್ನು https://gold.samil.in ಮೂಲಕ ಆನ್‌ಲೈನ್‌ನಲ್ಲಿ 12:30 ರಿಂದ 3:30 ಗಂಟೆಯೊಳಗೆ ಕೈಗೊಳ್ಳಲಾಗುತ್ತದೆ. ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು ವೆಬ್‌ಸೈಟ್‌ಗೆ ಲಾಗಿನ್ ಮಾಡಿರಿ. ಒಂದು ವೇಳೆ ಸಾಲಗಾರರು ಮೃತರಾಗಿದ್ದಲ್ಲಿ, ಅವರ ಉತ್ತರಾಧಿಕಾರಿಗಳಿಗೆ ಎಲ್ಲಾ ಷರತ್ತುಗಳು ಅನ್ವಯಿಸುತ್ತದೆ, ಯಾವುದೇ ಪೂರ್ವ ಸೂಚನೆ ನೀಡದೆಯೇ ಸದರಿ ಹರಾಜು ದಿನಾಂಕವನ್ನು ಬದಲಾಯಿಸುವ ಹಕ್ಕನ್ನು ಐಸಿಐಸಿಐ ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.
(ಸಾಲದ ಖಾತೆ ಸಂ. / ಗ್ರಾಹಕರ ಹೆಸರು — ಶಾಖೆ ಹೆಸರು: ಬೆಂಗಳೂರು, ಕೋಲಾರ, ತುಮಕೂರು ಇತ್ಯಾದಿ)
ದಿನಾಂಕ: 28–12–2021
ಸ್ಥಳ: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ರಾಮನಗರ, ತುಮಕೂರು
ಸಹಿ/– ಅಧಿಕೃತ ಅಧಿಕಾರಿ, ಐಸಿಐಸಿಐ ಬ್ಯಾಂಕ್ ಲಿಮಿಟೆಡ್ ಪರವಾಗಿ

ಹೋಟೆಲ್ ಬಿಲ್ ₹80 ಸಾವಿರ ನೀಡದ ಅಧಿಕಾರಿ

ಸಾಗರ: ಹಾಲಿ ಕಾರ್ಗಲ್ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿಯಾಗಿರುವ ಜಗದೀಶ್ ನಾಯ್ಕ್ ಅವರು ಸ್ಥಳೀಯ ಹೋಟೆಲ್ ಒಂದರಲ್ಲಿ ದೀರ್ಘಕಾಲ ಊಟ, ತಿಂಡಿ ಮಾಡಿ ₹ 80 ಸಾವಿರ ನೀಡದೇ ಸತಾಯಿಸುತ್ತಿರುವ ವಿಷಯ ಇಲ್ಲಿಯ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರಸ್ತಾಪವಾಯಿತು.

'ಬಾಕಿ ಹಣ ವಸೂಲಾಗದಿದ್ದರೆ ತಾನು ವಿಷ ಕುಡಿಯಬೇಕಾದೀತೆಂದು ಊಟ, ತಿಂಡಿ ನೀಡಿದ ಹೋಟೆಲ್ ಮಾಲೀಕ ನನ್ನ ಬಳಿ ಬಂದು ಅಹವಾಲು ತೋಡಿಕೊಂಡಿದ್ದಾರೆ. ಕೂಡಲೇ ಆ ಹೋಟೆಲ್ ಮಾಲೀಕರಿಗೆ ನೀಡಬೇಕಾದ ಬಾಕಿ ಪಾವತಿ ಮಾಡಿ' ಎಂದು ಶಾಸಕ ಎಚ್. ಹಾಲಪ್ಪ ಹರತಾಳು ಅಧಿಕಾರಿಗೆ ತಾಕೀತು ಮಾಡಿದರು.

ಧಾರವಾಡದಲ್ಲಿ ಜ.8,9ಕ್ಕೆ ರೈತರ ಸಭೆ

ಮೈಸೂರು: 'ರಾಜ್ಯ ಸರ್ಕಾರ ಜಾರಿಗೊಳಿಸಿರುವ ಮೂರು ಕರಾಳ ಕೃಷಿ ಕಾಯ್ದೆಯನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ, ಬಲಿಷ್ಠ ಹೋರಾಟದ ರೂಪುರೇಷೆ ಸಿದ್ಧಪಡಿಸಲು ಜ.8 ಮತ್ತು 9ರಂದು ಧಾರವಾಡದಲ್ಲಿ ಸಭೆಯನ್ನು ಆಯೋಜಿಸಲಾಗುವುದು' ಎಂದು ಜನಾಂದೋಲನಗಳ ಮಹಾಮೈತ್ರಿ ಸಂಯೋಜಕ ಎಸ್.ಆರ್.ಹಿರೇಮಠ ಸೋಮವಾರ ಇಲ್ಲಿ ತಿಳಿಸಿದರು.

'ಎಪಿಎಂಸಿ ತಿದ್ದುಪಡಿ ಕಾಯ್ದೆ, ಭೂ ಸುಧಾರಣಾ ಕಾಯ್ದೆ 2020, ಜಾನುವಾರು ಹತ್ಯಾ ನಿಷೇಧ ಹಾಗೂ ಜಾನುವಾರು ಸಂರಕ್ಷಣಾ ಕಾಯ್ದೆ 2020ರ ವಿರುದ್ಧ ರಾಜ್ಯದಾದ್ಯಂತ ಜಾಥಾ ನಡೆಸಲು ಜನಾಂದೋಲನಗಳ ಮಹಾಮೈತ್ರಿ ನಿರ್ಧರಿಸಿದೆ' ಎಂದು ನಗರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಹೇಳಿದರು.

'ಕೇಂದ್ರ ಸರ್ಕಾರವು ಮೂರು ಕರಾಳ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದಾಗಲೇ ರಾಜ್ಯ ಸರ್ಕಾರವೂ ಸಹ ವಿವಾದಿತ ಕಾನೂನುಗಳನ್ನು ವಾಪಸ್ ಪಡೆಯಬೇಕಿತ್ತು. ವಾಪಸ್ ಪಡೆಯದಿದ್ದರಿಂದ ಹೋರಾಟ ಅನಿವಾರ್ಯವಾಗಿದೆ' ಎಂದು ಪ್ರತಿಪಾದಿಸಿದರು.

ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ 'ಹಿಂಗಾರಿನ ಅತಿವೃಷ್ಟಿಯಿಂದಾಗಿ ಫಸಲು ನಷ್ಟವಾಗಿರುವ ರೈತರಿಗೆ ಪರಿಹಾರ ನೀಡಿಲ್ಲ. ಕರ್ನಾಟಕದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಗೆ ಶಕ್ತಿ ತುಂಬಲು ಅನುಸರಿಸಬೇಕಾದ ಕ್ರಮಗಳ ಕುರಿತು ಚಿಂತನೆ ನಡೆದಿದೆ. ಸದ್ಯದಲ್ಲೇ ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದು' ಎಂದರು

ದಲಿತ ಸಂಘರ್ಷ ಸಮಿತಿಯ ಚೋರನಹಳ್ಳಿ ಶಿವಣ್ಣ, ತುಮಕೂರಿನ ಯತಿರಾಜ್, ಎಐಯುಟಿಯುಸಿಯ ಚಂದ್ರಶೇಖರ ಮೇಟಿ, ರೈತ ಸಂಘದ ಹೊಸಕೋಟೆ ಬಸವರಾಜು, ಸ್ವರಾಜ್ ಇಂಡಿಯಾದ ಉಗ್ರನರಸಿಂಹೇಗೌಡ ಪತ್ರಿಕಾಗೋಷ್ಠಿಯಲ್ಲಿದ್ದರು.

ಸಾಂಸ್ಕೃತಿಕ ಉತ್ಸವ ನಾಳೆ

ಬೆಂಗಳೂರು: ಕರ್ನಾಟಕ ವಿದ್ಯಾರ್ಥಿ ಸಂಘಟನೆ(ಕೆವಿಎಸ್) ಕವಿ ಕುವೆಂಪು ಅವರ ಜನ್ಮದಿನದ ಪ್ರಯುಕ್ತ ಇದೇ 29ರ ಬುಧವಾರ ಬೆಳಿಗ್ಗೆ 10.30ಕ್ಕೆ 'ನೆಲದ ಪದ' ದೇಸಿ ಯುವ ಸಾಂಸ್ಕೃತಿಕ ಉತ್ಸವವನ್ನು ಮಾಗಡಿ ರಸ್ತೆಯಲ್ಲಿರುವ ಸ್ಫೂರ್ತಿ ಧಾಮದಲ್ಲಿ ಹಮ್ಮಿಕೊಂಡಿದೆ.

ಸಂಗೀತ ನಿರ್ದೇಶಕ ಹಂಸಲೇಖ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸ್ಫೂರ್ತಿ ಧಾಮದ ಅಧ್ಯಕ್ಷ ಎಸ್. ಮರಿಸ್ವಾಮಿ ಅಧ್ಯಕ್ಷತೆ ವಹಿಸಲಿದ್ದಾರೆ. ಗಾಯಕಿ ಎಂ.ಡಿ.ಪಲ್ಲವಿ, ನಿರ್ದೇಶಕ ಮಂಸೋರೆ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಕೆವಿಎಸ್ ಸಂಚಾಲಕ ಸರೋವರ್ ಬೆಂಕಿಕೆರೆ ಪ್ರಾಸ್ತಾವಿಕ ಮಾತನಾಡಲಿದ್ದಾರೆ.

ವಿವಿಧ ಜಿಲ್ಲೆಗಳ ಕಲಾವಿದರು ಹಾಡು, ವಾದ್ಯ, ನೃತ್ಯ, ನಾಟಕ, ಕಲೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡಲಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

515 ABWHS
CAMBRIDGE ROAD CROSS, ULSOOR, BANGALORE-560008
TENDER NOTIFICATION
Sealed Bids / Tenders are invited for awarding contract for out sourcing the Security Service in 515 Army Base Workshop High School, HR Barrack, Bangalore and the same should reach the office of the school latest by 0800 Hrs on **10.01.2022** and be opened at 1100 Hrs **on 11 Jan 2022.** Tender documents and bid format can be downloaded from Website http://www.515armyschool. co.in / downloads.

BUSINESS
Business to Business
Business
ZENITH LOANS available @4% yearly interest Business Project Takeover Property Mortgage NPA 8447587173 Agents Welcome

Financial Services
NRI'S INVESTMENT And Finance Available On Low Interest Against Properties, Land & Building, Sites, Flats, Converted & Agriculture Lands Call: 7411265189

RENTAL PROPERTIES
Accommodation Available
Villas/Bunglows
Brigade Millenium Villa J P Nagar 3 Bed Rooms With 2 Study Rooms, Modular Kitchen With Utlity & Store. N-E Facing Covered Car Parking For 3 Cars Rent Rs. 75000/- Pm Nego Contact 9449288775 9480021317

ಕ್ಲಾಸಿಫೈಡ್ಸ್ **CONNECT**

Entry Free
Grand Flea Market in Collaboration with Chittara Presents
ಬೆಂಗಳೂರು ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಮೇಳ
BANGALORE ARTS AND CRAFTS MELA
24th Dec 2021 to 2nd Jan 2022
11 AM - 7 PM
10 Days Exhibition
Karnataka Chitrakala Parishath Kumara Krupa Road, Bengaluru
80+ Stalls | Live Performance | Much More..!
Your safety is our Priority, We have taken precaution & Safety Measures to prevent transmission of covid19
For Details Contact : 9611835597 / 6364685716 | Direct from The Artisans
Visit and experience a rare contemporary form of Arts & Crafts, Clothing, Home Decor, Furniture, Handicrafts, Traditional Apparels, Women's Wear, Jewellery, Sarees, Men's Wear, Kids Wear, Toys, Organic Product, Fashion Accessories & plenty more products direct from the makers from all across India.

The Magic Show
Date : 1st Jan'22
Timings: 5 pm - 7 pm

The Puppet Show
Date : 2nd Jan'22
Timings: 5 pm - 6:30 pm

80+ Shopping Stalls | Live Performance | Much More!

REAL ESTATE SELLING
Agricultural Land
Nelamangala
AGRICULTURE land sale rates 30- 75 lacs per acre Nelemangala Hassan Tumkur road 8310414614, 9945080017

Flat
Yeshwanthpur
TWO bed- room flat 1000sft 55/ 65 lacs yeshwantpur mathikere road deepesh LIC agent 9035315797

EDUCATIONAL
Coaching Classes
THE CORPORATE ACCOUNTANT is an academy managed by professionals for training aspiring accountants to gain experience before seeking job.We offer 100% practical training using computers.Require experienced/retired accountants well versed in TALLY & statutory compliance filing online.Attractive salary.Contact 9880173407

PERSONAL
Change of Name

I, MONICA B T, R/at 118, Choodasandra, Sarjapura Hobli, Bangalore-560099, have changed my name to MONICA B THIMMAIAH vide affidavit dated 27-12-2021 sworn before notary K.V. Mani, Bangalore

I, DEBI GHOSH R/at No. 527/3, 6th C Main, Ganesh Nagar Layout, Vidyaranyapura, Bangalore -560097, have changed my name to DEVI GHOSH vide affidavit dated: 27/12/2021 Before Notary Onkarappa N.R Bangalore.

I, T.S.INDRANI (TIRUMAKUDLANARASIPUR SRINIVASARAO INDRANI) w/o Late K.B.DESHMUKH residing at 205,9th Main, 9th Cross, BEML Layout 3rd Stage, Rajarajeshwari Nagar, Bengaluru - 560098, have changed my name to INDRANI DESHMUKH vide affidavit dated 25th August 2018 sworn before notary Mr PUTTARAMAIAH, Bengaluru. Henceforth I shall be called INDRANI DESHMUKH only.

I, SUJATHA NAGARAJA M K, residing at No. 17, Poorna Prajna Road, 7th Main, Havanur Extension, Hesarghatta Road, Bangalore 560073, have changed my name from SUJATHA M K to SUJATHA NAGARAJA M K, vide Affidavit dated 25/12/2021, sworn before Kundan Babu. M., Notary, Bangalore.

I, UMESHA KARISIDDAPPA, R/at No. 8, Kanakapura Main Road, near Police Station, Thalaghattapura, Bangalore-560062, have changed my name to UMESH KARISIDDAPPA vide affidavit dated 27-12-2021 sworn before notary K.V. Mani, Bangalore

I, SANDEEP PRATAP, Residing #10A, Block-'C', Aratt Adora Apartments, Chikkbellandur, Varthur Hobli, Bangalore-35, have changed my name to SANDEEP PRATAP SINGH. vide affidavit dated 22-12-2021, before Notary, H.G.Venkataramu, Bangalore.

Lost

LOST DOCUMENTS
I, **Manjula KL,** W/o Sree Sharma N, hereby inform to general public that I have Lost My Site Documents Belongs to Site No. 181, Khatha No. 235 and 122/11, Babasabarapalya, Kengeri Hobali, Bangalore While Shifting the House. on 01/07/2019 at Kengeri, Police complaint has been given. Lost Report No. 193233/2019 Finders may please call : **9538633433** and return the documents.

LOST OF DOCUMENT
I HEMALATHA.R would like to inform the general public that i have lost my original sale deed no: BSK-1-03433-2011-12 CD NO: BSKD 122, Will paper no: BSK-3-00146-2016-17 CD No: BSKD381 and other related deeds (Khata site no: 341/35/342/438 ward no :185 yelachenahalli) during travelling on 24/10/21 10:00am to 10:15am near Kashinagar Yelachenahalli Kanakapura Main Road, where Lost report Complaint filed no :0083645/2021(KSP online) Jurisdiction Kumaraswamy Layout Police on 06/11/2021. If anyone find Kindly Contact: 8553545845

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD · ಪ್ರಜಾವಾಣಿ
BOOK YOUR REAL ESTATE

Classified Advertisement In Deccan Herald & Prajavani
SATURDAY & SUNDAY COMBO OFFER

Ordinary Per word	Bold Per word	Ordinary Semi Display Per word	Bold Semi Display Per word	Single Col CD Per sqcm
80	125	95	155	570

For More Details Contact:
Ph:080- 45557160 | 163 | 164 | M: 9880856233 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
condition apply*

ಪ್ರಜಾವಾಣಿ **ಮೂಕ ಕಥೆಗಳು**

ಮಿಲಿ
ದತ್ತು ಪಡೆಯಿರಿ
8 ವರ್ಷ. ಹೆಣ್ಣು. ಇಂಡಿ ಜಾತಿ.
ಸ್ಟೆರಿಲೈಸ್ಡ್ | ವ್ಯಾಕ್ಸಿನೇಟೆಡ್ | ಡಿವರ್ಮ್ಡ್

ಮಿಲಿ, ಚುರುಕುಮತಿಯ ಕಪ್ಪು ಸುಂದರಿ, ಸಖತ್ ಚೂಟಿಯಾಗಿದ್ದಾಳೆ. ಇವಳು ಬಹಳ ಆತ್ಮವಿಶ್ವಾಸಿ ಮತ್ತು ನಿಷ್ಠಾವಂತ ಮನೋಭಾವದವಳು. ಸಾಮಾಜಿಕವಾಗಿ ಬೆರೆಯುವುದನ್ನು ಆನಂದಿಸುತ್ತಾಳೆ ಮತ್ತು ಯಾವುದೇ ಕುಟುಂಬಕ್ಕೆ ಉತ್ತಮ ಸೇರ್ಪಡೆ ಆಗಬಲ್ಲಳು. ಇವಳು ಮನೆಯಲ್ಲಿ ಒಬ್ಬಂಟಿಯಾಗಿ ಆತಂಕ ಪಡದೆ ಉಳಿಯಬಲ್ಲಳು.

ಸಸ್ತನಿ ಗೆಡ್ಡೆಯಿಂದ ಬಳಲುತ್ತ ಬೆಂಗಳೂರಿನ ಬೀದಿಯಲ್ಲಿ ದಿಕ್ಕಿಲ್ಲದೆ ಅಲೆಯುತ್ತಿದ್ದಳು ಮಿಲಿ. ಇದೀಗ ಆರೋಗ್ಯವಾಗಿದ್ದಾಳೆ ಮತ್ತು ಕಳೆದ 6 ತಿಂಗಳಿಂದ ಕ್ಯೂಪಾ ಟ್ರಾಮಾ ಸೆಂಟರ್‌ನ ನಿವಾಸಿಯಾಗಿದ್ದಾಳೆ.

ಮಿಲಿ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು cupablr@cupaindia.org ಗೆ ಇಮೇಲ್ ಬರೆಯಿರಿ. ನಿಮಗೆ ಮಿಲಿ ಅನ್ನು ದತ್ತು ಪಡೆಯಲು ಆಗದಿದ್ದಲ್ಲಿ ನಮಗೆ ತಿಳಿಸಿ, ನಾವು ನಿಮಗೆ ಬೇರೆ ಆಯ್ಕೆಯನ್ನು ನೀಡುತ್ತೇವೆ.

ಸ್ಮಾರ್ಟ್‌ಸಿಟಿ ಯೋಜನೆಯಡಿ ವಿವಿಧ ಕಾಮಗಾರಿಗಳು ಮೇ ಅಂತ್ಯಕ್ಕೆ ಬಹುತೇಕ ಪೂರ್ಣ

ಕಬ್ಬನ್ ಉದ್ಯಾನಕ್ಕೆ ಸ್ಮಾರ್ಟ್ ರೂಪ

ಸ್ಮಾರ್ಟ್‌ಸಿಟಿ ಯೋಜನೆಯಡಿ ಬಾಲಭವನ ರಸ್ತೆಯಲ್ಲಿ ಪಾದಚಾರಿ ಮಾರ್ಗದ ನವೀಕರಣ ಕಾಮಗಾರಿ ಪ್ರಗತಿಯಲ್ಲಿದೆ (ಎಡ ಚಿತ್ರ)

ಹಡ್ಸನ್ ವೃತ್ತದಿಂದ ಕಬ್ಬನ್ ಉದ್ಯಾನ ಪ್ರವೇಶಿಸುವ ಮಾರ್ಗದಲ್ಲಿ ಸಿದ್ಧಗೊಂಡಿರುವ ನೂತನ ಪಾದಚಾರಿ ಮಾರ್ಗ–ಪ್ರಜಾವಾಣಿ ಚಿತ್ರಗಳು/ಪ್ರಶಾಂತ್ ಎಚ್‌.ಜಿ.

ತಿಂಗಳಿಗೆ 2 ಟನ್ ಗೊಬ್ಬರ

ಎಚ್‌.ಟಿ.ಬಾಲಕೃಷ್ಣ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ

‘ಕಬ್ಬನ್ ಉದ್ಯಾನದಲ್ಲಿ ಪ್ರತಿ ವಾರ 3 ಟನ್‌ಗಳಷ್ಟು ಉದುರಿದ ಎಲೆಗಳು ಸಂಗ್ರಹವಾಗುತ್ತವೆ. ಈ ಎಲೆಗಳಿಂದ ಗೊಬ್ಬರ ತಯಾರಿಸುವ ಘಟಕ ಉದ್ಯಾನದಲ್ಲೇ ಇದೆ. ಮೂರು ತಿಂಗಳಿಗೆ 6 ಟನ್‌ಗಳಷ್ಟು ಗೊಬ್ಬರ ಈ ಎಲೆಗಳಿಂದ ಸಿಗುತ್ತಿದೆ. ಅದನ್ನು ಉದ್ಯಾನದಲ್ಲಿರುವ ಗಿಡ–ಮರಗಳಿಗೆ ಮರುಬಳಕೆ ಮಾಡಲಾಗುತ್ತಿದೆ. ಹೆಚ್ಚುವರಿ ಎಲೆಗಳನ್ನು ಹುಳಿಮಾವು ಬಳಿ ಇರುವ ಜೈವಿಕ ಕೇಂದ್ರಕ್ಕೆ ಕಳಿಸಿಕೊಡಲಾಗುತ್ತಿದೆ’ ಎಂದು ಎಚ್‌.ಟಿ.ಬಾಲಕೃಷ್ಣ ತಿಳಿಸಿದರು.

‘ಟ್ರೀ ಮ್ಯಾಪಿಂಗ್’ ಯೋಜನೆಯಡಿ ಮರಗಳಿಗೆ ಹಾಕಿರುವ ಮಾಹಿತಿ ಮತ್ತು ಕ್ರಮಸಂಖ್ಯೆಯ ಫಲಕ

₹34 ಕೋಟಿ	197 ಎಕರೆ	9 ಸಾವಿರ	350	50
ಸ್ಮಾರ್ಟ್‌ಸಿಟಿ ಯೋಜನೆಯ ವೆಚ್ಚ	ಕಬ್ಬನ್ ಉದ್ಯಾನದ ವಿಸ್ತೀರ್ಣ	ಉದ್ಯಾನದಲ್ಲಿರುವ ಮರಗಳು	ಬೀದಿ ದೀಪಗಳು	ಉದ್ಯಾನದಲ್ಲಿರುವ ಸಿಸಿಟಿವಿ ಕ್ಯಾಮೆರಾಗಳು

• ಮನೋಹರ್ ಎಂ.

ಬೆಂಗಳೂರು: ಕಬ್ಬನ್ ಉದ್ಯಾನಕ್ಕೆ (ಜಯಚಾಮರಾಜೇಂದ್ರ ಒಡೆಯರ್ ಉದ್ಯಾನ) ‘ಸ್ಮಾರ್ಟ್’ ಸ್ಪರ್ಶ ನೀಡಲಾಗುತ್ತಿದೆ. ಇದಕ್ಕಾಗಿ ‘ಸ್ಮಾರ್ಟ್‌ಸಿಟಿ’ ಯೋಜನೆಯಡಿ ಉದ್ಯಾನದಲ್ಲಿ ಎರಡು ಹಂತಗಳಲ್ಲಿ ಕೈಗೆತ್ತಿಕೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿದ್ದು, 2022ರ ಮೇ ಒಳಗೆ ‘ಸ್ಮಾರ್ಟ್ ಉದ್ಯಾನ’ವಾಗಿ ಬದಲಾಗಲಿದೆ.

ಉದ್ಯಾನದ ಅಂದವನ್ನು ಮತ್ತಷ್ಟು ಹೆಚ್ಚಿಸುವ ಮೂಲ ಉದ್ದೇಶದೊಂದಿಗೆ ಎರಡು ವರ್ಷಗಳ ಹಿಂದೆ ಸ್ಮಾರ್ಟ್‌ಸಿಟಿ ಕಾಮಗಾರಿಗಳನ್ನು ಆರಂಭಿಸಲಾಗಿತ್ತು. ಆದರೆ, ಲಾಕ್‌ಡೌನ್ ಕಾಮಗಾರಿಗಳ ವೇಗ ತಗ್ಗಿಸಿತ್ತು. ಇದರಿಂದ ಗಡುವಿನೊಳಗೆ ಕಾಮಗಾರಿಗಳು ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ. ಹಲವು ಕಾಮಗಾರಿಗಳು ಮುಗಿದಿವೆ. ಉಳಿದ ಕಾಮಗಾರಿಗಳ ವೇಗ ಹೆಚ್ಚಿಸಲಾಗಿದೆ.

ಮರಗಳ ಮ್ಯಾಪಿಂಗ್: ಉದ್ಯಾನದಲ್ಲಿರುವ ಪ್ರತಿ ಮರದ ಸಂಪೂರ್ಣ ವಿವರಗಳನ್ನು ಜನರಿಗೆ ತಲುಪಿಸುವ ಉದ್ದೇಶದಿಂದ ‘ಟ್ರೀ ಮ್ಯಾಪಿಂಗ್’ ಯೋಜನೆಯಡಿ ಮರಗಳ ಹೆಸರು, ಅವುಗಳ ಮೂಲ ಮತ್ತು ವೈಶಿಷ್ಟ್ಯ ಸಾರುವ ಫಲಕಗಳನ್ನು ಅಳವಡಿಸಲಾಗಿದೆ.

ಉದ್ಯಾನದಲ್ಲಿ ಬಹಳ ವರ್ಷಗಳಷ್ಟು ಹಳೆಯದಾದ ಸಾವಿರಾರು ಮರಗಳಿದ್ದು, ಪ್ರತಿ ಮರವೂ ಭಿನ್ನವಾದ ಗುಣ ಲಕ್ಷಣಗಳನ್ನು ಒಳಗೊಂಡಿದೆ. ಹಲವು ಅಪರೂಪದ ಹಾಗೂ ಪಾರಂಪರಿಕ ಮರಗಳೂ ಉದ್ಯಾನದಲ್ಲಿದ್ದು, ಅವುಗಳ ಸಂಪೂರ್ಣ ವಿವರವುಳ್ಳ ಫಲಕ ಅಳವಡಿಸುವ ಕೆಲಸ ಈಗಾಗಲೇ ಪೂರ್ಣಗೊಂಡಿದೆ. ಈಗ ಉದ್ಯಾನಕ್ಕೆ ಬರುವವರು ಪ್ರತಿ ಮರದ ಪೂರ್ಣ ಮಾಹಿತಿ ತಿಳಿದುಕೊಳ್ಳಬಹುದು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರಜ್ಞರು ಪ್ರತಿ ಮರದ ಹೆಸರು, ವಯಸ್ಸು, ಅದರ ಗುಣ, ಮೂಲ, ಉಪಯೋಗ ಹಾಗೂ ವಿಶೇಷತೆಗಳನ್ನು ಸೂಚಿಸಿದ್ದರು. ಮರದ ಬೆಳವಣಿಗೆಗೆ ಅಡ್ಡಿಯಾಗದಂತೆ ‘ಸ್ಪ್ರಿಂಗ್’ ಮಾದರಿಯ ವಸ್ತುಗಳನ್ನು ಬಳಸಿ ಫಲಕಗಳನ್ನು ಅಳವಡಿಸಲಾಗಿದೆ. ಸಸ್ಯಗಳ ಬಗ್ಗೆ ಆಸಕ್ತಿ ಉಳ್ಳವರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಜಿಪಿಎಸ್ ಮೂಲಕವೂ ಆ ಮರದ ಮಾಹಿತಿಯನ್ನು ಡಿಜಿಟಲ್ ರೂಪದಲ್ಲೂ ನೋಡಬಹುದು.

ಕಮಲದ ಕೊಳ: ಇಲ್ಲಿರುವ ಕಮಲದ ಕೊಳವು ಉದ್ಯಾನದ ಪ್ರಮುಖ ಆಕರ್ಷಣೆ. 250ಕ್ಕೂ ಬಗೆಯ ಪಕ್ಷಿಗಳ ಆವಾಸ ಸ್ಥಾನವೂ ಇದಾಗಿತ್ತು. ಆದರೆ, 11 ವರ್ಷಗಳಿಂದ ಹೂಳು ತುಂಬಿಕೊಂಡು ಹದಗೆಟ್ಟ ಸ್ಥಿತಿಯಲ್ಲಿತ್ತು. ಕೊಳದ ನವೀಕರಣ ಹಾಗೂ ಅಭಿವೃದ್ಧಿ ಕಾಮಗಾರಿಗೆ ಸ್ಮಾರ್ಟ್‌ಸಿಟಿ ಯೋಜನೆಯ ಮೊದಲ ಹಂತದಲ್ಲೇ ಆದ್ಯತೆ ನೀಡಲಾಗಿತ್ತು.

‘ಎರಡು ಸಲ ಕೊಳ ಸ್ವಚ್ಛಗೊಳಿಸುವ ಕಾರ್ಯಕ್ಕೆ ಮುಂದಾದರೂ ಮಳೆ ನೀರು ತುಂಬಿಕೊಂಡು, ಕಾಮಗಾರಿಗೆ ತೊಡಕಾಗಿತ್ತು. ಸದ್ಯ ಕೊಳದಲ್ಲಿ ಸಂಗ್ರಹವಾಗಿದ್ದ ಹೂಳು ತೆಗೆಯುವ ಕಾರ್ಯ ಪ್ರಗತಿಯಲ್ಲಿದೆ. ಸ್ಮಾರ್ಟ್‌ಸಿಟಿ ಯೋಜನೆಯಡಿ ಕೊಳಕ್ಕೆ ಬಿದಿರು ಸಸಿಗಳ ನಡುವೆ ಮಳೆ ನೀರನ್ನು ನೇರವಾಗಿ ಹರಿಸಲು ಸಿದ್ಧತೆ ನಡೆಸಲಾಗಿದೆ. ಇದಕ್ಕಾಗಿ ಕೊಳಕ್ಕೆ ಸಂಪರ್ಕಿಸುವ ಸಣ್ಣ ಕಾಲುವೆಯೊಂದನ್ನೂ ನಿರ್ಮಿಸಲಾಗುತ್ತಿದೆ. ಇದರಲ್ಲಿ ಹಂತ ಹಂತವಾಗಿ ನೀರು ಹರಿಯಲಿದೆ. ಇದನ್ನು ಮತ್ತಷ್ಟು ಅಂದಗೊಳಿಸಲು ಕಾಲುವೆಗೆ ಅಡ್ಡವಾಗಿ ಒಂದು ಕಿರುಸೇತುವೆ ನಿರ್ಮಾಣಗೊಳ್ಳಲಿದೆ’ ಎಂದು ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಕಬ್ಬನ್ ಉದ್ಯಾನ) ಎಚ್‌.ಟಿ.ಬಾಲಕೃಷ್ಣ ವಿವರಿಸಿದರು.

‘ಸುಮಾರು ₹1.5 ಕೋಟಿ ವೆಚ್ಚದಲ್ಲಿ ಕಮಲದ ಕೊಳದ ಅಭಿವೃದ್ಧಿಯನ್ನು ಕಾಂಕ್ರೀಟ್ ಮುಕ್ತವಾಗಿ ನಡೆಸಲು ಉದ್ದೇಶಿಸಲಾಗಿದೆ. ಸಾಧ್ಯವಾದಷ್ಟು ನೈಸರ್ಗಿಕ ರೂಪದಲ್ಲೇ ಕೊಳದ ನವೀಕರಣ ಮಾಡಲಾಗುವುದು. ಕಾಲುವೆಯ ಬದಿಗಳು ಹಾಗೂ ಕೊಳದ ಖಾಲಿ ಜಾಗಗಳಲ್ಲಿ ಅಲಂಕಾರಿಕ ಕಲ್ಲುಗಳನ್ನು ಜೋಡಿಸಲಾಗುವುದು’ ಎಂದರು.

‘ಕೊಳದ ಸುತ್ತಲೂ ಜನರ ಓಡಾಟಕ್ಕೆ ಪಾದಚಾರಿ ಮಾರ್ಗ ಹಾಗೂ ರಕ್ಷಣಾ ಬೇಲಿ ಸಿದ್ಧವಾಗಲಿದೆ. ಕೊಳದಲ್ಲಿ ವಿವಿಧ ತಳಿಯ ಕಮಲದ ಸಸಿಗಳನ್ನು ಬೆಳೆಸಲಾಗುವುದು. ಕೊಳದ ಮಧ್ಯಭಾಗದಲ್ಲಿ ಎತ್ತರಕ್ಕೆ ನೀರು ಚಿಮ್ಮುವ ಕಾರಂಜಿ, ಆಮ್ಲಜನಕ ಪೂರಣ ಸಾಧನ ಹಾಗೂ ನೀರು ಶುದ್ಧೀಕರಣ ಯಂತ್ರವೂ ಇರಲಿದೆ’ ಎಂದು ಮಾಹಿತಿ ನೀಡಿದರು.

ಪಾದಚಾರಿ ಮಾರ್ಗ ಹಾಗೂ ಜಾಗಿಂಗ್ ಟ್ರ್ಯಾಕ್: ಮೊದಲ ಹಂತದಲ್ಲಿ ₹8 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿದ್ದ 8 ಕಿ.ಮೀ ಉದ್ದದ ಪಾದಚಾರಿ ಮಾರ್ಗಗಳ ನವೀಕರಣ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ. ಬಾಲಭವನ ಮಾರ್ಗ ಹಾಗೂ ಪ್ರೆಸ್‌ಕ್ಲಬ್ ಮುಂಭಾಗದ ರಸ್ತೆಗಳಲ್ಲೂ ಹೊಸ ಪಾದಚಾರಿ ಮಾರ್ಗ ನಿರ್ಮಾಣ ಪ್ರಗತಿಯಲ್ಲಿದ್ದು, ಮುಂದಿನ ವಾರಕ್ಕೆ ಈ ಮಾರ್ಗಗಳು ಸಿದ್ಧಗೊಳ್ಳಲಿವೆ.

‘ಉದ್ಯಾನದಲ್ಲಿ ಈ ಹಿಂದೆ ನಿರ್ಮಿಸಲಾಗಿದ್ದ ಪಾದಚಾರಿ ಮಾರ್ಗಗಳು ಹಾಳಾಗಿದ್ದವು. ಅದನ್ನು ತೆರವುಗೊಳಿಸಿ, ವಿವಿಧ ವಿನ್ಯಾಸಗಳಲ್ಲಿ ಮಾರ್ಗಗಳ ನವೀಕರಣಕ್ಕೆ ಯೋಜನೆ ರೂಪಿಸಲಾಗಿತ್ತು. ಸದ್ಯ ಹಡ್ಸನ್ ವೃತ್ತದಿಂದ ಸೆಂಚುರಿ ಕ್ಲಬ್‌ವರೆಗಿನ ಪಾದಚಾರಿ ಮಾರ್ಗ ಸಿದ್ಧವಾಗಿದೆ. ಉಳಿದ ಭಾಗಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳೂ ಶೇ 80ರಷ್ಟು ಪೂರ್ಣಗೊಂಡಿವೆ’ ಎಂದು ಸ್ಮಾರ್ಟ್‌ಸಿಟಿ ಯೋಜನೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಚಂದ್ರಶೇಖರ್ ಮಾಹಿತಿ ನೀಡಿದರು.

‘ಲಾಕ್‌ಡೌನ್‌ನಿಂದ ಕಾಮಗಾರಿಗಳು ನಿಧಾನವಾಗಿ ನಡೆದವು. ಉದ್ಯಾನದಲ್ಲಿ ಈಗ ಹಗಲಿನಲ್ಲಿ ಮಾತ್ರ ಕಾಮಗಾರಿಗಳನ್ನು ನಡೆಸಲಾಗುತ್ತಿದೆ. ರಜೆಯ ದಿನಗಳಲ್ಲಿ ಉದ್ಯಾನಕ್ಕೆ ಜನ ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಆ ದಿನ ಕಾಮಗಾರಿ ನಡೆಸಲು ಅವಕಾಶವಿಲ್ಲ. ಮೇ ತಿಂಗಳೊಳಗೆ ಎಲ್ಲ ಕಾಮಗಾರಿಗಳು ಪೂರ್ಣಗೊಳ್ಳಲಿವೆ’ ಎಂದರು.

ಬಾಲಭವನ ಆವರಣಕ್ಕೆ ಅಂಗವಿಕಲರ ಉದ್ಯಾನ: ‘ಸ್ಮಾರ್ಟ್‌ಸಿಟಿ ಯೋಜನೆಯಡಿ ಕಬ್ಬನ್ ಉದ್ಯಾನದಲ್ಲಿ ಅಂಗವಿಕಲರಿಗಾಗಿ ಕಿರು ಉದ್ಯಾನ ನಿರ್ಮಿಸಲು ಉದ್ದೇಶಿಸಲಾಗಿತ್ತು. ಅದಕ್ಕೆ ನಡಿಗೆದಾರರು ಹಾಗೂ ಸಾರ್ವಜನಿಕರು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಪಕ್ಕದಲ್ಲೇ ಇರುವ ಬಾಲಭವನ ಆವರಣದೊಳಗೆ ಉದ್ಯಾನ ನಿರ್ಮಿಸಲು ಚಿಂತನೆ ನಡೆಸಲಾಗಿದೆ’ ಎಂದೂ ಚಂದ್ರಶೇಖರ್ ಹೇಳಿದರು.

‘ವಾಹನ ಸಂಚಾರ ಸಂಪೂರ್ಣ ನಿರ್ಬಂಧಿಸಿ’

‘ಕಬ್ಬನ್ ಉದ್ಯಾನದಲ್ಲಿ ವಾಹನ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಕಬ್ಬನ್ ಪಾರ್ಕ್ ನಡಿಗೆದಾರರ ಸಂಘವು ಈ ವಿಚಾರದಲ್ಲಿ ಹಲವು ವರ್ಷಗಳಿಂದ ನಿರಂತರ ಹೋರಾಟ ನಡೆಸುತ್ತಿದೆ. ಆದರೂ ಪ್ರತಿದಿನ ಸಾವಿರಾರು ವಾಹನಗಳು ಉದ್ಯಾನದೊಳಗಿನ ರಸ್ತೆಗಳಲ್ಲಿ ಸಂಚರಿಸಿ, ಮಾಲಿನ್ಯ ಉಂಟು ಮಾಡುತ್ತಿವೆ’ ಎಂದು ನಡಿಗೆದಾರರ ಸಂಘದ ಅಧ್ಯಕ್ಷ ಉಮೇಶ್ ದೂರಿದರು.

‘ಕಬ್ಬನ್ ಉದ್ಯಾನದಲ್ಲಿ ಸೆಂಚುರಿ ಕ್ಲಬ್, ಟೆನ್ನಿಸ್ ಕ್ಲಬ್ ಹಾಗೂ ಸಚಿವಾಲಯ ಕ್ಲಬ್‌ಗಳಿಗೆ ಅವಕಾಶ ನೀಡಬಾರದು. ಇವು ಉದ್ಯಾನಕ್ಕೆ ಮಾರಕ. ರಜೆ ದಿನಗಳಲ್ಲಿ ಮಾತ್ರ ವಾಹನ ನಿರ್ಬಂಧಿಸಿದರೆ ಸಾಲದು. ಲಾಲ್‌ಬಾಗ್ ಮಾದರಿಯಲ್ಲಿ ಕಬ್ಬನ್ ಉದ್ಯಾನದಲ್ಲೂ ವಾಹನ ಸಂಚಾರ ಸಂಪೂರ್ಣವಾಗಿ ನಿಷೇಧಿಸಬೇಕು’ ಎಂದು ಆಗ್ರಹಿಸಿದರು.

‘ಅಸಭ್ಯ ವರ್ತನೆ ತಡೆಯಿರಿ’

ನರಸಿಂಹ ರಾಜ್

ಉದ್ಯಾನಕ್ಕೆ ಬರುವ ಕೆಲ ವಯಸ್ಕರ ವರ್ತನೆ ಮಿತಿ ಮೀರಿದೆ. ಕೆಲವರು ಮನಬಂದಂತೆ ಅಸಭ್ಯವಾಗಿ ವರ್ತಿಸುತ್ತಾರೆ. ಕೆಲ ಯುವಕ–ಯುವತಿಯರು ಸಾರ್ವಜನಿಕವಾಗಿ ಚುಂಬಿಸಿಕೊಳ್ಳುತ್ತಾರೆ. ಇದರಿಂದ ಉದ್ಯಾನಕ್ಕೆ ಬರುವವರಿಗೆ ಕಿರಿಕಿರಿಯಾಗುತ್ತಿದೆ. ಇವುಗಳನ್ನು ತಡೆಯಲು ಉದ್ಯಾನದಲ್ಲಿ ಭದ್ರತಾ ಸಿಬ್ಬಂದಿ ಇರುವುದಿಲ್ಲ. ಇರುವ ಸಿಬ್ಬಂದಿ ಸುಮ್ಮನೆ ಓಡಾಡುತ್ತಿರುತ್ತಾರೆ. ಉದ್ಯಾನದಲ್ಲಿ ಇಂತಹ ಅಸಭ್ಯ ವರ್ತನೆಗಳಿಗೆ ಕಡಿವಾಣ ಹಾಕಿದರೆ ಒಳ್ಳೆಯದು.

ನರಸಿಂಹ ರಾಜ್, ಖಾಸಗಿ ಕಂಪನಿ ಉದ್ಯೋಗಿ

‘ಪಾರ್ಕಿಂಗ್ ಮಿತಿ ಮೀರಿದೆ’

ಮಂಜುನಾಥ್

ಉದ್ಯಾನದಲ್ಲಿ ಖಾಸಗಿ ವಾಹನಗಳ ಪಾರ್ಕಿಂಗ್ ಮಿತಿ ಮೀರಿದೆ. ಹೈಕೋರ್ಟ್ ಕಡೆಯಿಂದ ಉದ್ಯಾನ ಪ್ರವೇಶಿಸುವ ಮಾರ್ಗದಲ್ಲಿ ಎರಡೂ ಬದಿ ಕಾರುಗಳನ್ನು ನಿಲ್ಲಿಸಿರುತ್ತಾರೆ. ಇದರಿಂದ ಈ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಸಮಸ್ಯೆಯಾಗಿ ದಟ್ಟಣೆ ಉಂಟಾಗುತ್ತದೆ. ಈ ರಸ್ತೆಯಲ್ಲಿ ಸಂಚಾರ ಪೊಲೀಸರ ಟೋಯಿಂಗ್ ವಾಹನ ಸಂಚರಿಸುತ್ತಲೇ ಇರುತ್ತದೆ. ಆದರೆ, ಅಲ್ಲಿ ವಾಹನ ನಿಲ್ಲಿಸುವವರ ಮೇಲೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಉದ್ಯಾನದಲ್ಲಿ ಖಾಸಗಿ ವಾಹನಗಳ ನಿಲುಗಡೆಗೆ ಅವಕಾಶ ನೀಡಲೇಬಾರದು.

ಮಂಜುನಾಥ್, ಬೆಂಗಳೂರು ನಿವಾಸಿ

ನಾಳೆ ನೀರು ಪೂರೈಕೆಯಲ್ಲಿ ವ್ಯತ್ಯಯ

ಬೆಂಗಳೂರು: ಜಲಮಂಡಳಿಯು ಕೆ.ಆರ್.ಪುರದಲ್ಲಿ ಪೈಪ್ ಜೋಡಣಾ ಕಾರ್ಯ ಹಾಗೂ ಟಿ.ಕೆ.ಹಳ್ಳಿಯಲ್ಲಿ ಪೈಪ್ ಬದಲಿಸುವ ಕಾಮಗಾರಿ ಕೈಗೆತ್ತಿಕೊಂಡಿರುವ ಕಾರಣ ಇದೇ 29ರಂದು ಬೆಳಗಿನ ಜಾವ 3 ಗಂಟೆಯಿಂದ ರಾತ್ರಿ 9 ಗಂಟೆವರೆಗೆ ನಗರದ ವಿವಿಧ ಕಡೆಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಎಲ್ಲೆಲ್ಲಿ ವ್ಯತ್ಯಯ: ಯಲಹಂಕ, ಜಕ್ಕೂರು, ಬ್ಯಾಟರಾಯನಪುರ, ವಿದ್ಯಾರಣ್ಯಪುರ, ಬಿಇಎಲ್ ಲೇಔಟ್, ಎಚ್‌ಎಂಟಿ ಲೇಔಟ್, ದಾಸರಹಳ್ಳಿ, ಶೆಟ್ಟಿಹಳ್ಳಿ, ಮಲ್ಲಸಂದ್ರ, ಬಾಗಲಗುಂಟೆ, ಟಿ.ದಾಸರಹಳ್ಳಿ, ಪೀಣ್ಯ, ರಾಜಗೋಪಾಲನಗರ, ಚೊಕ್ಕಸಂದ್ರ, ಹೆಗ್ಗನಹಳ್ಳಿ, ಎಚ್‌ಎಂಟಿ ವಾರ್ಡ್, ನಂದಿನಿ ಲೇಔಟ್, ಆರ್.ಆರ್.ನಗರ, ಕೆಂಗೇರಿ, ಉಲ್ಲಾಳ, ಅನ್ನಪೂರ್ಣೇಶ್ವರಿ ನಗರ, ಪಾಪರೆಡ್ಡಿಪಾಳ್ಯ, ಮಲ್ಲತ್ತಹಳ್ಳಿ, ಕೆಂಗುಂಟೆ, ಜಗಜ್ಯೋತಿ ಲೇಔಟ್, ಜ್ಞಾನಭಾರತಿ ಲೇಔಟ್, ಐಡಿಯಲ್ ಹೋಮ್ಸ್, ಬಿಇಎಂಎಲ್ ಲೇಔಟ್, ಪಟ್ಟಣಗೆರೆ, ಚನ್ನಸಂದ್ರ, ಕೊತ್ತನೂರು ದಿಣ್ಣೆ, ಜೆ.ಪಿ.ನಗರ 6, 7 & 8ನೇ ಹಂತ, ವಿಜಯಬ್ಯಾಂಕ್ ಲೇಔಟ್, ಕೂಡ್ಲು.

ಅಂಜನಾಪುರ, ಬೊಮ್ಮನಹಳ್ಳಿ, ಕೆ.ಆರ್.ಪುರ, ರಾಮಮೂರ್ತಿನಗರ, ಮಹದೇವಪುರ, ಎ.ನಾರಾಯಣಪುರ, ಮಾರತಹಳ್ಳಿ, ಹೂಡಿ, ವೈಟ್‌ಫೀಲ್ಡ್, ನಾಗರಬಾವಿ, ಜಿಕೆವಿಕೆ, ಸಂಜಯನಗರ, ನ್ಯೂ ಬಿಇಎಲ್ ರಸ್ತೆ, ಎಚ್‌ಎಸ್‌ಆರ್ ಲೇಔಟ್, ಜೆ.ಪಿ.ನಗರ, ಎಚ್‌ಬಿಆರ್ ಲೇಔಟ್, ದೊಮ್ಮಲೂರು, ಬನ್ನೇರುಘಟ್ಟ ರಸ್ತೆ, ಜಂಬೂಸವಾರಿ ದಿಣ್ಣೆ, ಲಗ್ಗೆರೆ, ಶ್ರೀಗಂಧದ ಕಾವಲ್, ಟೆಲಿಕಾಂ ಲೇಔಟ್, ಶ್ರೀನಿವಾಸ ನಗರ, ಬಾಹುಬಲಿ ನಗರ, ಜಾಲಹಳ್ಳಿ, ಓಎಂಬಿಆರ್, ಬೊಮ್ಮನಹಳ್ಳಿ, ಅರಕೆರೆ, ಬಿಎಚ್‌ಇಎಲ್ ಲೇಔಟ್, ಸುಂಕದಕಟ್ಟೆ, ಬ್ಯಾಡರಹಳ್ಳಿ, ಸರ್.ಎಂ.ವಿ.ಲೇಔಟ್, ಕೊಟ್ಟಿಗೆಪಾಳ್ಯ, ಎಲ್‌ಐಸಿ ಲೇಔಟ್.

ನಾಗದೇವನಹಳ್ಳಿ, ಮೈಸೂರು ರಸ್ತೆ, ಶಿರ್ಕೆ, ಚಿಕ್ಕಗೊಲ್ಲರಹಟ್ಟಿ, ಸುಬ್ಬಣ್ಣ ಗಾರ್ಡನ್, ನಾಯಂಡಹಳ್ಳಿ, ಕಾಮಾಕ್ಷಿಪಾಳ್ಯ, ರಂಗನಾಥಪುರ, ಗೋವಿಂದರಾಜನಗರ, ಕೆಎಚ್‌ಬಿ ಕಾಲೊನಿ, ಮೂಡಲಪಾಳ್ಯ, ಆದರ್ಶ ನಗರ, ಬಿಡಿಎ ಲೇಔಟ್, ಮುನೇಶ್ವರನಗರ, ಕೊಡಿಗೆಹಳ್ಳಿ, ಅಮೃತಹಳ್ಳಿ, ಕೋಗಿಲು, ಜೆ.ಪಿ. ಪಾರ್ಕ್, ಯಶವಂತಪುರ, ಸುದ್ದಗುಂಟೆ ಪಾಳ್ಯ, ಕಸವನಹಳ್ಳಿ, ಕೊನೇನ ಅಗ್ರಹಾರ, ಸುಧಾಮನಗರ, ಮುರುಗೇಶ್ ಪಾಳ್ಯ, ಎಚ್‌ಆರ್‌ಬಿಆರ್ ಲೇಔಟ್, ನಾಗವಾರ, ಬಾಲಾಜಿಲೇಔಟ್, ಬಿಜಿಎಸ್ ಲೇಔಟ್, ಎಸ್‌ಬಿಎಂ ಕಾಲೊನಿ.

ಬಿಟಿಎಸ್ ಲೇಔಟ್, ಸಾರ್ವಭೌಮನಗರ, ಹುಳಿಮಾವು, ಬಂಡೆಪಾಳ್ಯ, ಸರಸ್ವತಿ ಪುರ, ರಾಘವೇಂದ್ರ ಲೇಔಟ್, ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ರಾಮಯ್ಯ ಲೇಔಟ್, ಪ್ರಗತಿ ಲೇಔಟ್, ಸಿಲ್ಕ್ ಬೋರ್ಡ್ ಕಾಲೊನಿ, ಮಂಗಮ್ಮನಪಾಳ್ಯ, ಸಿಂಗಸಂದ್ರ, ದೇವರಚಿಕ್ಕನಹಳ್ಳಿ, ಲಕ್ಷ್ಮಿನಾರಾಯಣಪುರ, ಸೋಮಸುಂದರ ಪಾಳ್ಯ, ದೊಡ್ಡನೆಕ್ಕುಂದಿ, ಗರುಡಾಚಾರ್ ಪಾಳ್ಯ, ಸಪ್ತಗಿರಿ ಲೇಔಟ್, ಮುನೆಕೊಳಾಲ್, ಇಸ್ರೊ ಲೇಔಟ್, ಬೃಂದಾವನ ನಗರ, ತಿಗಳರಪಾಳ್ಯ, ಅಕ್ಷಯನಗರ, ರಮೇಶ್ ನಗರ, ಪಟಾಲಮ್ಮ ಲೇಔಟ್, ಗಾಯತ್ರಿಲೇಔಟ್, ಮಂಜುನಾಥ ನಗರ, ರಾಮಾಂಜನೇಯ ಲೇಔಟ್, ಮಾರೇನಹಳ್ಳಿ.

40 ಎಲೆಕ್ಟ್ರಿಕ್ ಬಸ್‌ಗಳು ಸಾರ್ವಜನಿಕ ಸೇವೆಗೆ • ಸಹಾಯಧನದ ಆಧಾರದಲ್ಲಿ ಸಾರಿಗೆ ಸಂಸ್ಥೆಗಳನ್ನು ನಡೆಸುವುದು ಕಷ್ಟ

ಆದಾಯ ಸೋರಿಕೆ ನಿಲ್ಲಲಿ: ಸಿ.ಎಂ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ಸ್ವಾಮ್ಯದ ಸಾರಿಗೆ ಸಂಸ್ಥೆಗಳಲ್ಲಿ ಆದಾಯ ಸೋರಿಕೆಯನ್ನು ತಡೆಯಬೇಕು. ಸಂಸ್ಥೆಗಳನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿ ಕಟ್ಟುವುದಕ್ಕೆ ಪೂರಕವಾಗಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕೆಲಸ ಮಾಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದ ಮುಂಭಾಗದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ) ಸ್ಮಾರ್ಟ್ ಸಿಟಿ ಯೋಜನೆಯಡಿ ಖರೀದಿಸಿರುವ 40 ಎಲೆಕ್ಟ್ರಿಕ್ ಬಸ್ ಮತ್ತು 150 ಬಿಎಸ್-6 ಬಸ್‌ಗಳನ್ನು ಸಾರ್ವಜನಿಕ ಸೇವೆಗೆ ಸಮರ್ಪಿಸಿ ಅವರು ಮಾತನಾಡಿದರು.

ಖಾಸಗಿ ಸಾರಿಗೆ ಸಂಸ್ಥೆಗಳು ಲಾಭದಲ್ಲಿವೆ. ಆದರೆ, ಸರ್ಕಾರಿ ಸಾರಿಗೆ ಸಂಸ್ಥೆಗಳು ನಷ್ಟದಲ್ಲಿವೆ. ಆದಾಯ ಸೋರಿಕೆಯೇ ಇದಕ್ಕೆ ಮುಖ್ಯ ಕಾರಣ. ಎಲ್ಲ ಹಂತದಲ್ಲೂ ಸೋರಿಕೆ ತಡಯಬೇಕು. ಇದಕ್ಕಾಗಿ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಸರ್ಕಾರಿ ಸ್ವಾಮ್ಯದ ಸಾರಿಗೆ ಸಂಸ್ಥೆಗಳನ್ನು ಮತ್ತೆ ಲಾಭದ ಸ್ಥಿತಿಗೆ ತರಬೇಕು ಎಂದು ಸೂಚಿಸಿದರು.

ವಿಧಾನಸೌಧದ ಮುಂಭಾಗ ಸೋಮವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಎಂಟಿಸಿಯ ಎಲೆಕ್ಟ್ರಿಕ್ ಬಸ್‌ಗಳ ಸಂಚಾರಕ್ಕೆ ಹಸಿರು ನಿಶಾನೆ ತೋರಿದರು. ಸಾರಿಗೆ ಸಚಿವ ಬಿ. ಶ್ರೀರಾಮುಲು, ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್, ಸಂಸದ ಪಿ.ಸಿ. ಮೋಹನ್ ಇದ್ದರು – ಪ್ರಜಾವಾಣಿ ಚಿತ್ರ

‘ಸಹಾಯಧನದ ಆಧಾರದಲ್ಲಿ ಸಾರಿಗೆ ಸಂಸ್ಥೆಗಳನ್ನು ನಡೆಸುವುದು ಕಷ್ಟ ಸಾಧ್ಯ. ಇದು ನಮ್ಮ ಮುಂದಿರುವ ಸವಾಲು. ಸಾರಿಗೆ ಸಂಸ್ಥೆಗಳ ಪುನಶ್ಚೇತನಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್. ಶ್ರೀನಿವಾಸಮೂರ್ತಿ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದೆ. ಸಮಿತಿಯ ಶಿಫಾರಸು ಆಧರಿಸಿ ಸಾರಿಗೆ ಸಂಸ್ಥೆಗಳ ಸ್ವರೂಪವನ್ನು ಮರು ವಿನ್ಯಾಸ ಮಾಡಲಾಗುವುದು’ ಎಂದು ಹೇಳಿದರು.

655 ಬಸ್ ಖರೀದಿ

90 ಎಲೆಕ್ಟ್ರಿಕ್ ಬಸ್ ಮತ್ತು 565 ಬಿಎಸ್–6 ದರ್ಜೆಯ ಬಸ್‌ಗಳನ್ನು ಬಿಎಂಟಿಸಿ ಖರೀದಿ ಮಾಡುತ್ತಿದೆ. ಮೊದಲ ಹಂತದಲ್ಲಿ 40 ಎಲೆಕ್ಟ್ರಿಕ್ ಬಸ್ ಮತ್ತು 150 ಬಿಎಸ್–6 ದರ್ಜೆಯ ಬಸ್‌ಗಳು ಪೂರೈಕೆಯಾಗಿವೆ.

ಬಿಎಸ್-6 ದರ್ಜೆಯ ವಾಹನಗಳು ಕಡಿಮೆ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತವೆ. ಅವುಗಳನ್ನು ಬಿಎಂಟಿಸಿ ಅಳವಡಿಸಿಕೊಳ್ಳುತ್ತಿರುವುದು ಸ್ವಾಗತಾರ್ಹ. ಅದರ ಜತೆಯಲ್ಲೇ ಮಾಲಿನ್ಯ ಮುಕ್ತವಾದ ಎಲೆಕ್ಟ್ರಿಕ್ ಬಸ್‌ಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕಿದೆ ಎಂದರು.

300 ಎಲೆಕ್ಟ್ರಿಕ್ ಬಸ್‌ಗಳು ಮತ್ತು 600 ಬಿಎಸ್-6 ಬಸ್‌ಗಳನ್ನು ಬಿಎಂಟಿಸಿ ಮೂಲಕ ಸೇವೆಗೆ ಒದಗಿಸುವ ಗುರಿ ಇದೆ. ಮೊದಲ ಹಂತದಲ್ಲಿ 40 ಎಲೆಕ್ಟ್ರಿಕ್ ಬಸ್‌ಗಳು ಮತ್ತು 150 ಬಿಎಸ್-6 ಬಸ್‌ಗಳನ್ನು ಈಗ ಸೇವೆಗೆ ಒದಗಿಸಲಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು.

ಅಮೆರಿಕ, ಬ್ರಿಟನ್ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಬೃಹತ್ ನಗರಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ವಿಶೇಷವಾಗಿ ಅಭಿವೃದ್ಧಿಪಡಿಸಲಾಗಿದೆ. ಅದೇ ಮಾದರಿಯಲ್ಲಿ ಬೆಂಗಳೂರಿನಲ್ಲೂ ಸಾರ್ವಜನಿಕ ಸಾರಿಗೆಯನ್ನು ಅಭಿವೃದ್ಧಿಪಡಿಸಬೇಕು ಎಂದು ಸಲಹೆ ನೀಡಿದರು.

ಸಾರಿಗೆ ಸಚಿವ ಬಿ. ಶ್ರೀರಾಮುಲು, ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್, ಸಂಸದ ಪಿ.ಸಿ. ಮೋಹನ್, ಬಿಎಂಟಿಸಿ ಅಧ್ಯಕ್ಷ ಎನ್. ಎಸ್. ನಂದೀಶ್ ರೆಡ್ಡಿ, ಉಪಾಧ್ಯಕ್ಷ ಎಂ.ಆರ್.ವೆಂಕಟೇಶ್, ವಿಧಾನ ಪರಿಷತ್ ಸದಸ್ಯ ಎಚ್.ಎಂ. ರಮೇಶ್ ಗೌಡ, ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಠಾರಿಯಾ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಅನ್ಬುಕುಮಾರ್ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಆಶ್ಲೇಷ ಬಲಿಪೂಜೆ ನೆರವೇರಿಸಿದ ನ್ಯಾಯಮೂರ್ತಿ ಅಬ್ದುಲ್ ನಜೀರ್

ಸುಬ್ರಹ್ಮಣ್ಯ: ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅಬ್ದುಲ್ ನಜೀರ್ ಅವರು ಭಾನುವಾರ ರಾತ್ರಿ ಕುಟುಂಬ ಸಮೇತ ಕುಕ್ಕೆ ಸುಬ್ರಹ್ಮಣ್ಯ ದೇವಾಲಯಕ್ಕೆ ಭೇಟಿ ನೀಡಿ ದೇವರ ದರ್ಶನ ಪಡೆದರು.

ಸೋಮವಾರ ಬೆಳಿಗ್ಗೆ ದೇವಸ್ಥಾನಕ್ಕೆ ಬಂದು ಆಶ್ಲೇಷ ಬಲಿ ಪೂಜೆ ನೆರವೇರಿಸಿದರು. ಸೋಮವಾರವೂ ಸುಬ್ರಹ್ಮಣ್ಯದಲ್ಲಿ ವಾಸ್ತವ್ಯ ಮಾಡಿರುವ ಅವರು ಮಂಗಳವಾರ ಇಲ್ಲಿಂದ ಹೊರಡಲಿದ್ದು, ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಕ್ಷೇತ್ರಕ್ಕೆ ಬಂದಿದ್ದ ನ್ಯಾಯಮೂರ್ತಿ ಅವರಿಗೆ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ವತಿಯಿಂದ ಸ್ವಾಗತ ಕೋರಲಾಯಿತು.

ಶ್ರೀಸತ್ಯಸಾಯಿ ಆಸ್ಪತ್ರೆ: 55 ಮಕ್ಕಳಿಗೆ ಉಚಿತ ಹೃದಯ ಶಸ್ತ್ರಚಿಕಿತ್ಸೆ

ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ಶ್ರೀಸತ್ಯಸಾಯಿ ಸರಳ ಮೆಮೊರಿಯಲ್ ಆಸ್ಪತ್ರೆಯು ಹೃದಯ ಸಮಸ್ಯೆಗಳನ್ನು ಎದುರಿಸುತ್ತಿದ್ದ 55 ಮಕ್ಕಳಿಗೆ ಹೃದಯ ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ನಡೆಸಿದೆ.

ಸತ್ಯಸಾಯಿ ಸಂಜೀವಿನಿ ಮಕ್ಕಳ ಹೃದಯ ಆರೈಕೆ ಕೇಂದ್ರಗಳ ಸಹಯೋಗದಲ್ಲಿ ನವೆಂಬರ್ ಮೂರನೇ ವಾರದಿಂದ ಈವರೆಗೆ 55 ಮಕ್ಕಳಿಗೆ ಹೃದಯ ಸಮಸ್ಯೆಗಳನ್ನು ಗುಣಪಡಿಸಲಾಗಿದೆ.

ನವೆಂಬರ್‌ನಲ್ಲಿ 23 ಮಕ್ಕಳು ಹಾಗೂ ಡಿಸೆಂಬರ್‌ನಲ್ಲಿ 32 ಮಕ್ಕಳಿಗೆ ಹೃದಯ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಯಿತು. ಮಕ್ಕಳ ಹೃದ್ರೋಗ ತಜ್ಞರು, ಅರಿವಳಿಕೆ ತಜ್ಞರು, ತಂತ್ರಜ್ಞರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿ ಸೇರಿದಂತೆ 20 ಮಂದಿಯ ತಂಡ ಇದಕ್ಕಾಗಿ ಕಾರ್ಯನಿರ್ವಹಿಸಿತು.

ಮಕ್ಕಳೆಲ್ಲ ಕರ್ನಾಟಕ, ಉತ್ತರ ಪ್ರದೇಶ, ಬಿಹಾರ, ಒಡಿಶಾ, ಛತ್ತೀಸಗಡ ಮತ್ತು ಜಾರ್ಖಂಡ್‌ನ ಹಿಂದುಳಿದ ಕುಟುಂಬಗಳಿಗೆ ಸೇರಿದವರಾಗಿದ್ದರು. ಆಯಾ ರಾಜ್ಯಗಳಲ್ಲಿ ಪ್ರಾಥಮಿಕ ತಪಾಸಣೆ ಒಳಪಡಿಸಿದ ನಂತರ ಶಸ್ತ್ರಚಿಕಿತ್ಸೆಗಾಗಿ ಮಕ್ಕಳನ್ನು ಸತ್ಯಸಾಯಿ ಆಸ್ಪತ್ರೆಗೆ ಕರೆತರಲಾಯಿತು ಎಂದು ಪ್ರಕಟಣೆ ತಿಳಿಸಿದೆ. ಶಸ್ತ್ರಚಿಕಿತ್ಸೆ ಪೂರ್ಣಗೊಂಡ ಮಕ್ಕಳ ಪೋಷಕರಿಗೆ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ವೈದ್ಯಕೀಯ ಪ್ರಮಾಣ ಪತ್ರಗಳನ್ನು ವಿತರಿಸಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹೈದರಾಬಾದ್‌ನ ಕಿಮ್ಸ್ ಆಸ್ಪತ್ರೆ ನಿರ್ದೇಶಕಿ ಪದ್ಮಾ ಎಸ್.ವೀರಪನೇನಿ, ‘ಶಸ್ತ್ರಚಿಕಿತ್ಸೆ ಮೂಲಕ ಮರುಜೀವ ಪಡೆದ ಎಲ್ಲ ಮಕ್ಕಳಿಗೆ ದೀರ್ಘಾಯುಷ್ಯ ಸಿಗಲಿ. ಸದ್ಗುರುಗಳು ನಡೆಸುತ್ತಿರುವ ಶಿಕ್ಷಣ, ಆರೋಗ್ಯ ಚಟುವಟಿಕೆಗಳು ಶ್ಲಾಘನೀಯ’ ಎಂದರು.

ಶ್ರೀಸತ್ಯಸಾಯಿ ಆಸ್ಪತ್ರೆಯ ಸ್ಥಾಪಕ ಮಧುಸೂದನ್ ಸಾಯಿ,‘ಮಕ್ಕಳು ನನ್ನ ಹೃದಯಕ್ಕೆ ತುಂಬಾ ಹತ್ತಿರವಾಗಿದ್ದಾರೆ. ಪ್ರತಿ ಮಗುವಿಗೆ ಉಚಿತ ಶಿಕ್ಷಣ, ಪೋಷಣೆ ಮತ್ತು ಆರೋಗ್ಯ ರಕ್ಷಣೆಯ ಹಕ್ಕಿದೆ. ಇದಕ್ಕಾಗಿ ತೆಲಂಗಾಣದಲ್ಲಿ ತಾಯಿ ಮತ್ತು ಮಕ್ಕಳ ಕೇಂದ್ರಗಳನ್ನು ಶೀಘ್ರದಲ್ಲೇ ಆರಂಭಿಸಲಾಗುವುದು’ ಎಂದರು.

ಚಾಲಕನ ತುಟಿ ಕಚ್ಚಿದವನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ನಡೆದ ಜಗಳದಲ್ಲಿ ಕಾರು ಚಾಲಕ ಸಂತೋಷ್ ಎಂಬಾತನ ತುಟಿ ಕಚ್ಚಿ ಗಾಯಗೊಳಿಸಿದ್ದ ಉದ್ಯಮಿಯೊಬ್ಬರ ಮನೆ ಕೆಲಸದ ವ್ಯಕ್ತಿಯನ್ನು ಸಂಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ರಾಜೇಶ್ ಶ್ಯಾಂ (30) ಬಂಧಿತ. ಪಿಒಪಿ ಕೆಲಸಗಾರನಾಗಿದ್ದ ಆರೋಪಿಯು ಸಂತೋಷ್ ಹಾಗೂ ಭದ್ರತಾ ಸಿಬ್ಬಂದಿ ಈಶ್ವರಪ್ಪ ಎಂಬುವರ ಜೊತೆ ನಿರ್ಮಾಣ ಹಂತದ ಕಟ್ಟಡದಲ್ಲಿ ವಾಸವಿದ್ದ. ಇದೇ 22ರ ರಾತ್ರಿ 9.30ರ ಸುಮಾರಿಗೆ ಮೂವರೂ ಕೊಠಡಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು.

ಈ ವೇಳೆ ರಾಜೇಶ್, ಈಶ್ವರಪ್ಪ ಅವರ ಮೇಲೆ ನೀರು ಸುರಿದಿದ್ದ. ಇದನ್ನು ಸಂತೋಷ್ ಪ್ರಶ್ನಿಸಿದ್ದ. ಆಗ ಇಬ್ಬರ ನಡುವೆ ಜಗಳವಾಗಿತ್ತು. ಆರೋಪಿಯು ಸಿಟ್ಟಿನಿಂದ ಸಂತೋಷ್ ತುಟಿಯನ್ನು ಕಚ್ಚಿದ್ದ. ಹೀಗಾಗಿ ಮೇಲು ತುಟಿಯ ಚರ್ಮ ಹರಿದಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

₹35 ಲಕ್ಷ ಮೌಲ್ಯದ ಚಿನ್ನದ ಆಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಕಳವು ಮಾಡಿ ತಲೆಮರೆಸಿಕೊಂಡಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಅವರಿಂದ ಒಟ್ಟು 650 ಗ್ರಾಂ ಚಿನ್ನದ ಆಭರಣ ಜಪ್ತಿ ಮಾಡಲಾಗಿದೆ. ಇದರ ಮೌಲ್ಯ ₹35 ಲಕ್ಷ ಎಂದು ಅಂದಾಜಿಸಲಾಗಿದೆ.

‘ಶೇಖ್ ಇಲ್ಯಾಸ್ ಯಾನೆ ಇಲ್ಲು (34) ಹಾಗೂ ಎರಕಲ ಕಾವಡಿ ನಾಗೇಂದ್ರ ಯಾನೆ ನಾಗ (35) ಬಂಧಿತರು. ಕಳ್ಳತನವನ್ನೇ ಕಸುಬಾಗಿಸಿಕೊಂಡಿದ್ದ ಇವರು ನಗರದಲ್ಲಿ ನಡೆದಿದ್ದ 6 ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದರು. ಐಷಾರಾಮಿ ಬದುಕು ನಡೆಸುವ ಆಸೆಯಿಂದ ತಮ್ಮ ಸಹಚರರ ಜೊತೆ ಸೇರಿ ಕಳವು ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

‘2008ರಲ್ಲಿ ಕಳವು ಮಾಡುವುದನ್ನು ಆರಂಭಿಸಿದ್ದ ಆರೋಪಿ ಇಲ್ಯಾಸ್, ಆಂಧ್ರಪ್ರದೇಶದ ಅನಂತಪುರ, ಹಿಂದೂಪುರ, ಕರ್ನಾಟಕದ ಗೌರಿಬಿದನೂರು, ಬೆಂಗಳೂರಿನ ತಾವರೆಕೆರೆ ಹಾಗೂ ಇತರೆಡೆ ತನ್ನ ಸಹಚರರ ಜೊತೆ ಸೇರಿ ಮನೆಗಳಿಗೆ ನುಗ್ಗಿ ಚಿನ್ನಾಭರಣ ದೋಚಿ ಪರಾರಿಯಾಗಿದ್ದ. ಹಲವು ಬಾರಿ ಜೈಲಿಗೆ ಹೋಗಿ ಬಂದರೂ ಕಳ್ಳತನ ನಿಲ್ಲಿಸಿರಲಿಲ್ಲ. ನಾಗೇಂದ್ರ ಕೂಡ ಅನಂತಪುರ, ಹಿಂದೂಪುರ, ಗೌರಿಬಿದನೂರು, ತುಮಕೂರಿನ ಮಧುಗಿರಿ, ಕೊರಟಗೆರೆ ಹಾಗೂ ಬೆಂಗಳೂರಿನ ವಿವಿಧೆಡೆ ನಡೆದಿದ್ದ ಕಳವು ಪ್ರಕರಣಗಳಲ್ಲಿ ಭಾಗಿಯಾಗಿ ಜೈಲುವಾಸ ಅನುಭವಿಸಿದ್ದ’ ಎಂದು ಮಾಹಿತಿ ನೀಡಿದ್ದಾರೆ.

‘ಆರೋಪಿಗಳ ಬಂಧನದಿಂದ ಹೆಣ್ಣೂರು, ಜೆ.ಪಿ.ನಗರ, ಹೆಬ್ಬಾಳ, ಡಿ.ಜೆ.ಹಳ್ಳಿ, ಕೆ.ಆರ್.ಪುರ ಹಾಗೂ ಆಡುಗೋಡಿ ಠಾಣೆಗಳ ವ್ಯಾಪ್ತಿಗಳಲ್ಲಿ ನಡೆದಿದ್ದ ತಲಾ ಒಂದು ಮನೆ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ’ ಎಂದು ತಿಳಿಸಿದ್ದಾರೆ.

ಅಪರಾಧ ಸುದ್ದಿ

ಜಪ್ತಿ ಮಾಡಿರುವ ಚಿನ್ನದ ಆಭರಣ

ಶೇಖ್ ಇಲಿಯಾಸ್

ಎರಕಲ ಕಾವಡಿ ನಾಗೇಂದ್ರ

ಆರೈಕೆಗೆ ಹೋದ ಮನೆಯಲ್ಲೇ ಚಿನ್ನಾಭರಣ ಕದ್ದ ಶುಶ್ರೂಷಕಿ

ಬೆಂಗಳೂರು: ಅನಾರೋಗ್ಯ ಪೀಡಿತ ಮಹಿಳೆಯೊಬ್ಬರ ಆರೈಕೆಗೆ ನಿಯೋಜನೆಯಾಗಿದ್ದ ಶುಶ್ರೂಷಕಿ, ಮಹಿಳೆಯ ಮನೆಯಲ್ಲಿದ್ದ ಚಿನ್ನಾಭರಣ ಕಳ್ಳತನ ಮಾಡಿದ್ದು, ಆಕೆಯನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಠಾಣೆ ವ್ಯಾಪ್ತಿಯ ವೆಂಕಟಪ್ಪ ಬಡಾವಣೆಯಲ್ಲಿ ವಾಸವಿದ್ದ ಮೇಲೂರಪ್ಪ ಎಂಬುವರ ಪತ್ನಿ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರನ್ನು ನೋಡಿಕೊಳ್ಳಲು ಡಿ ನೋವಾ ಏಜೆನ್ಸಿಯಿಂದ ಪವಿತ್ರಾ ಎಂಬಾಕೆಯನ್ನು ನಿಯೋಜಿಸಲಾಗಿತ್ತು. ಮೇಲೂರಪ್ಪನವರ ಹಿರಿಯ ಪುತ್ರಿ ಊರಿಗೆ ಹೋಗುವ ವೇಳೆ ಚಿನ್ನಾಭರಣಗಳನ್ನೆಲ್ಲಾ ಬೀರುವಿನಲ್ಲಿ ಇಟ್ಟಿದ್ದರು. ಈ ವಿಷಯವನ್ನು ತಾಯಿಗೆ ತಿಳಿಸಿದ್ದರು. ಅದನ್ನು ಕೇಳಿಸಿಕೊಂಡಿದ್ದ ಪವಿತ್ರಾ ಯಾರೂ ಇಲ್ಲದ ಹೊತ್ತಿನಲ್ಲಿ ಅದನ್ನು ಕದ್ದಿದ್ದರು. ಬಳಿಕ ತನ್ನ ತಾಯಿಯ ಆರೋಗ್ಯ ಸರಿ ಇಲ್ಲ ಎಂದು ತಿಳಿಸಿ ಕದ್ದ ಚಿನ್ನಾಭರಣಗಳೊಂದಿಗೆ ಊರಿಗೆ ಪರಾರಿಯಾಗಿದ್ದಳು’ ಎಂದು ಪೊಲೀಸರು ತಿಳಿಸಿದರು.

‘ಊರಿಗೆ ಹೋದ ಮೇಲೆ ದಿನವೂ ಕರೆ ಮಾಡಿ ಮಹಿಳೆಯ ಆರೋಗ್ಯ ವಿಚಾರಿಸುತ್ತಿದ್ದರು. ಚಿನ್ನಾಭರಣ ಕಳವು ಆಗಿರುವುದು ಮನೆಯವರ ಗಮನಕ್ಕೆ ಬಂದಿಲ್ಲ ಎಂಬುದು ಖಾತರಿಯಾದ ನಂತರ ಮತ್ತೆ ವಾಪಸ್ಸಾಗಿದ್ದಳು’ ಎಂದಿದ್ದಾರೆ.

‘ಇದೇ 10ರಂದು ಮೇಲೂರಪ್ಪನವರ ಮನೆಗೆ ಬಂದಿದ್ದ ಸಂಬಂಧಿಕರೊಬ್ಬರು ಅನಾರೋಗ್ಯ ಪೀಡಿತ ಮಹಿಳೆಯ ಕೊರಳಿನಲ್ಲಿ ಚಿನ್ನದ ಸರ ಇಲ್ಲದ್ದನ್ನು ಗಮನಿಸಿದ್ದರು. ಸರ ಹಾಕಿಕೊಳ್ಳುವಂತೆ ತಿಳಿಸಿದ್ದರು. ಆಗ ಬೀರುವಿನ ಬಾಗಿಲು ತೆರೆದು ನೋಡಿದಾಗ ಚಿನ್ನಾಭರಣ ಕಳವಾಗಿರುವುದು ಗೊತ್ತಾಗಿತ್ತು. ವಿಷಯ ತಿಳಿದೊಡನೆ ಶುಶ್ರೂಷಕಿ ಎದೆನೋವಿನ ನಾಟಕವಾಡಿದ್ದಳು. ಮನೆಯವರೇ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿಂದ ಆಕೆ ಪರಾರಿಯಾಗಿದ್ದಳು. ಅನುಮಾನಗೊಂಡಿದ್ದ ಮನೆಯವರು ಆಕೆಯ ವಿರುದ್ಧವೇ ದೂರು ದಾಖಲಿಸಿದ್ದರು. ವಿಚಾರಣೆ ವೇಳೆ ತಾನು ಕಳ್ಳತನ ಮಾಡಿದ್ದಾಗಿ ಶುಶ್ರೂಷಕಿ ಒಪ್ಪಿಕೊಂಡಿದ್ದಳು’ ಎಂದು ವಿವರಿಸಿದರು.

ಬಿಲ್ ಕೇಳಿದ್ದಕ್ಕೆ ಡಾಬಾಗೆ ಬೆಂಕಿ

ಬೆಂಗಳೂರು: ಬಿಲ್ ಪಾವತಿಸುವಂತೆ ಕೇಳಿದ್ದಕ್ಕೆ ಯುವಕರ ಗುಂಪೊಂದು ಪೆಟ್ರೋಲ್ ಸುರಿದು ಡಾಬಾಕ್ಕೆ ಬೆಂಕಿ ಹಚ್ಚಿದ್ದು, ಘಟನೆಯಲ್ಲಿ ಮನೋಜ್ ಎಂಬುವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಸೋಲದೇವನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.‘ದೊಡ್ಡಬ್ಯಾಲಕೆರೆಯಲ್ಲಿರುವ ಡಾಬಾಕ್ಕೆ ಇದೇ 24ರಂದು ಬಂದಿದ್ದ ನಾಲ್ವರು ಯುವಕರು ಊಟ ಮುಗಿಸಿ ಹರಟುತ್ತಾ ಕುಳಿತಿದ್ದರು. ಡಾಬಾ ಮುಚ್ಚಬೇಕು. ಬಿಲ್ ಪಾವತಿ ಮಾಡಿ ಎಂದು ಸಿಬ್ಬಂದಿಯೊಬ್ಬರು ಮನವಿ ಮಾಡಿದ್ದರು. ಇದರಿಂದ ಕೆರಳಿದ ಯುವಕರು ಸಿಬ್ಬಂದಿ ಜೊತೆ ಜಗಳವಾಡಿ ಅಲ್ಲಿಂದ ಹೋಗಿದ್ದರು. ಎಲ್ಲರೂ ಮಲಗಿದ ಮೇಲೆ ಮತ್ತೆ ಡಾಬಾ ಬಳಿ ಬಂದು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

‘ಡಾಬಾದಲ್ಲಿ ಕೆಲಸ ಮಾಡುತ್ತಿದ್ದ ಮನೋಜ್‌ಗೆ ಗಂಭೀರ ಗಾಯಗಳಾಗಿದ್ದು ಅವರನ್ನು ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ತಿಳಿಸಿದರು.

ಉದ್ಯೋಗಕ್ಕಾಗಿ ವಿದ್ಯಾರ್ಥಿಗಳಿಂದ ನಕಲಿ ದಾಖಲೆ ಸಲ್ಲಿಕೆ: ದೂರು

ಬೆಂಗಳೂರು: ರಾಜ್ಯದ ವಿವಿಧ ಐಟಿಐಗಳಲ್ಲಿ ವ್ಯಾಸಂಗ ಮಾಡಿದ್ದ 91 ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ನಕಲಿ ದಾಖಲೆಗಳನ್ನು ಸಲ್ಲಿಸಿರುವುದು ದಾಖಲೆಗಳ ಪರಿಶೀಲನೆ ವೇಳೆ ದೃಢಪಟ್ಟಿದೆ.

ಈ ಸಂಬಂಧ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯದ ಜಂಟಿ ನಿರ್ದೇಶಕ ಬಿ.ಎಲ್. ಚಂದ್ರಶೇಖರ್ ಅವರು ಇದೇ 23ರಂದು ನಗರದ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

‘ರಾಜ್ಯದ ವಿವಿಧೆಡೆಯಲ್ಲಿರುವ ಸರ್ಕಾರಿ ಏಜೆನ್ಸಿಗಳ ಮೂಲಕ 2017–18ನೇ ಸಾಲಿನಲ್ಲಿ ಸಾವಿರಾರು ಮಂದಿ ಉದ್ಯೋಗ ಬಯಸಿ ಅರ್ಜಿಗಳನ್ನು ಸಲ್ಲಿಸಿದ್ದರು. ಇವುಗಳ ಪರಿಶೀಲನೆಗಾಗಿ 2017ರ ಸೆಪ್ಟೆಂಬರ್ 12, 2018ರ ಜನವರಿ 31 ಹಾಗೂ ಜೂನ್ 23 ರಂದು ಸಮಿತಿಗಳನ್ನು ರಚಿಸಲಾಗಿತ್ತು. ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದ್ದು, ಒಟ್ಟು 91 ಮಂದಿ ನಕಲಿ ದಾಖಲೆಗಳನ್ನು ನೀಡಿರುವುದನ್ನು ಪತ್ತೆಹಚ್ಚಿದೆ ಎಂದು ಅವರು ದೂರಿನಲ್ಲಿ ವಿವರಿಸಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ತಾಳಿಕೋಟೆ, ಹುನಗುಂದ, ಹಿರಿಯೂರು, ಹೊಸಪೇಟೆ, ಚನ್ನಪಟ್ಟಣ, ದೇವಲಾಪುರ, ಬೆಂಗಳೂರು, ತಂಗಡಗಿ, ಮುದ್ದೇಬಿಹಾಳ ಹಾಗೂ ಉತ್ತರ ಕರ್ನಾಟಕದ ಇತರ ನಗರಗಳ ವಿದ್ಯಾರ್ಥಿಗಳು ನಕಲಿ ದಾಖಲೆಗಳನ್ನು ಸಲ್ಲಿಸಿದ್ದಾರೆ. ಈ ಕಾರ್ಯಕ್ಕೆ ಬಹುತೇಕ ವಿದ್ಯಾರ್ಥಿಗಳಿಗೆ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಅಧಿಕಾರಿಗಳೇ ನೆರವಾಗಿರುವುದು ಗೊತ್ತಾಗಿದೆ ಎಂದೂ ದೂರಿನಲ್ಲಿ ವಿವರಿಸಿದ್ದಾರೆ’ ಎಂದು ತಿಳಿಸಿದರು.

‘ಎಲ್ಲಾ ವಿದ್ಯಾರ್ಥಿಗಳಿಗೂ ಸಮನ್ಸ್ ನೀಡಲಾಗಿದೆ. ನಕಲಿ ದಾಖಲೆಗಳನ್ನು ಪಡೆದಿದ್ದು ಹೇಗೆ ಎಂಬುದರ ಕುರಿತು ವಿಚಾರಣೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ. ಕೆಲ ಶಿಕ್ಷಣ ಸಂಸ್ಥೆಗಳು ಹಾಗೂ ಅಧಿಕಾರಿಗಳು ಈ ಜಾಲದಲ್ಲಿ ಭಾಗಿಯಾಗಿರುವ ಅನುಮಾನವಿದೆ. ಆ ದಿಸೆಯಲ್ಲೂ ತನಿಖೆ ನಡೆಸಲಾಗುತ್ತಿದೆ’ ಎಂದರು.

ಕಚೇರಿಗೆ ನುಗ್ಗಿ ಕಳ್ಳತನ : ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ಸಲ್ಟೆನ್ಸಿ ಏಜೆನ್ಸಿಯೊಂದರ ಕಚೇರಿಗೆ ನುಗ್ಗಿ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ನಗದು ಹಾಗೂ ಮೊಬೈಲ್‌ಗಳನ್ನು ಕಸಿದು ಪರಾರಿಯಾಗಿದ್ದ 8 ಮಂದಿಯನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹80 ಸಾವಿರ ನಗದು, ಮೂರು ಮೊಬೈಲ್ ಹಾಗೂ ಕೃತ್ಯಕ್ಕೆ ಬಳಸಿದ್ದ ನಾಲ್ಕು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ.

‘ಶ್ರೀಕಾಂತ ಯಾನೆ ಚಡ್ಡಿ (30), ಗೌತಮ್ ಯಾನೆ ಲಂಬೂ (25), ಅಚ್ಚಯ್ಯ ಯಾನೆ ಬೋಂಡಾ (34), ಜಯನೇಶಾ ಯಾನೆ ಉದಯ (22), ಎಸ್.ಹೇಮಂತ(22), ಕೆ.ಪ್ರತಾಪ್ (27), ನವೀನ್ (21) ಹಾಗೂ ಗಿರೀಶ ಯಾನೆ ಬಾಗಲ್ (22) ಬಂಧಿತರು.

ಆರೋಪಿಗಳಿಂದ ಜಪ್ತಿ ಮಾಡಿರುವ ದ್ವಿಚಕ್ರ ವಾಹನ, ನಗದು, ಮಾರಕಾಸ್ತ್ರ, ಮೊಬೈಲ್ ಹಾಗೂ ಚಿನ್ನದ ಸರ

ಇವರು ಇದೇ 20ರ ರಾತ್ರಿ ಠಾಣೆ ವ್ಯಾಪ್ತಿಯ ಕಚೇರಿಗೆ ನುಗ್ಗಿ ಅಲ್ಲಿದ್ದವರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಬೀರುವಿನಲ್ಲಿದ್ದ ಹಣ ಕದ್ದಿದ್ದಲ್ಲದೇ ಮೊಬೈಲ್‌ಗಳನ್ನೂ ಕಸಿದುಕೊಂಡು ಪರಾರಿಯಾಗಿದ್ದರು’ ಎಂದು ಪೊಲೀಸರು ಹೇಳಿದ್ದಾರೆ.

‘ಇದೇ 22ರಂದು ಆರೋಪಿಯೊಬ್ಬನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಆತ ಕೃತ್ಯದಲ್ಲಿ ಭಾಗಿಯಾಗಿದ್ದ ಇತರ ಏಳು ಮಂದಿಯ ಹೆಸರು ಬಾಯ್ಬಿಟ್ಟಿದ್ದ. ಆತ ನೀಡಿದ ಮಾಹಿತಿಯ ಆಧಾರದಲ್ಲಿ ಉಳಿದವರನ್ನು ಬಂಧಿಸಲಾಯಿತು’ ಎಂದು ತಿಳಿಸಿದರು.

ಪ್ರತಿಭಟನೆ

ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿಯ ವಯೋಮಿತಿಯನ್ನು ಹೆಚ್ಚಳ ಮಾಡುವಂತೆ ಆಗ್ರಹಿಸಿ ಬೆಂಗಳೂರು ವಿಶ್ವವಿದ್ಯಾಲಯ ಒಕ್ಕೂಟದ ಸದಸ್ಯರು ಸೋಮವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಕಾರ್ಮಿಕ ಸಾವು: ಮಾಲೀಕನಿಗೂ ಹೃದಯಾಘಾತ

ತೀರ್ಥಹಳ್ಳಿ: ತೋಟದಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರೊಬ್ಬರು ಹೃದಯಾಘಾತದಿಂದ ಕುಸಿದು ಬಿದ್ದು ಮೃತಪಟ್ಟರು. ಈ ವಿಚಾರ ತಿಳಿಯುತ್ತಿದ್ದಂತೆ ಮಾಲೀಕ ಹೃದಯಾಘಾತದಿಂದ ಅಸುನೀಗಿದರು. ಈ ಮನಕಲಕುವ ಪ್ರಕರಣ ತಾಲ್ಲೂಕಿನ ಆರಗ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಕಾರ್ಮಿಕ ಬರ್ಮಪ್ಪ (45), ಮಾಲೀಕ ದುಗ್ಗಪ್ಪ ಗೌಡ (75) ಮೃತಪಟ್ಟವರು. ದುಗ್ಗಪ್ಪ ಅವರ ತೋಟದ ಕೆಲಸಕ್ಕೆ ಬರ್ಮಪ್ಪ ಬಂದಿದ್ದರು. ಮಧ್ಯಾಹ್ನ 3 ಗಂಟೆಯ ಹೊತ್ತಿಗೆ ಅವರು ಕೆಲಸ ಮಾಡುತ್ತಿದ್ದ ಸ್ಥಳದಲ್ಲಿಯೇ ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಈ ವಿಚಾರವನ್ನು ಬರ್ಮಪ್ಪನ ಮನೆಯವರಿಗೆ ತಿಳಿಸಲು ಹೊರಟಿದ್ದ ದುಗ್ಗಪ್ಪ ಗೌಡ ಅವರೂ ದಾರಿ ಮಧ್ಯೆಯೇ ಕುಸಿದು ಮೃತಪಟ್ಟರು.

ಸಾಲದ ಹೊರೆ: ರೈತ ಆತ್ಮಹತ್ಯೆ

ಹರಪನಹಳ್ಳಿ: ತಾಲ್ಲೂಕಿನ ಮೈದೂರು ಗ್ರಾಮದಲ್ಲಿ ಸಾಲದ ಹೊರೆಯಿಂದ ರೈತರೊಬ್ಬರು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕೆ. ಗೌಡಜ್ಜ (40) ಆತ್ಮಹತ್ಯೆ ಮಾಡಿಕೊಂಡವರು. ಸ್ಥಳೀಯ ಬ್ಯಾಂಕಿನಲ್ಲಿ ₹ 1.50 ಲಕ್ಷ ಹಾಗೂ ಖಾಸಗಿಯಾಗಿ ₹ 3 ಲಕ್ಷ ಸಾಲ ಮಾಡಿದ್ದರು.

ಕಾರಿನಲ್ಲಿ ಹಿಂಬಾಲಿಸಿಕೊಂಡು ಬಂದು ₹1.30 ಲಕ್ಷ ಕದ್ದ ದುಷ್ಕರ್ಮಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರಿನಲ್ಲಿ ಟೆಂಪೊವನ್ನು ಹಿಂಬಾಲಿಸಿಕೊಂಡು ಬಂದ ನಾಲ್ವರು ದುಷ್ಕರ್ಮಿಗಳು ನಿರ್ಜನ ಪ್ರದೇಶದಲ್ಲಿ ಟೆಂಪೊ ಅಡ್ಡಗಟ್ಟಿ ಚಾಲಕನ ಬಳಿ ಇದ್ದ ₹1.30 ಲಕ್ಷ ನಗದು ದೋಚಿ ಪರಾರಿಯಾಗಿದ್ದಾರೆ. ಕಾಮಾಕ್ಷಿಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಕೋಟಪ್ಪ ಹಾಗೂ ಇತರ ಇಬ್ಬರು ನಾಮಕಲ್‌ನಿಂದ ಕೋಳಿಗಳನ್ನು ಟೆಂಪೊದಲ್ಲಿ ತುಂಬಿಕೊಂಡು ಪ್ರತಿಬಾರಿಯೂ ನಗರಕ್ಕೆ ಬರುತ್ತಿದ್ದರು. ಅವುಗಳನ್ನು ಲಗ್ಗೆರೆ, ಹೆಗ್ಗನಹಳ್ಳಿ, ಸುಂಕದಕಟ್ಟೆ ಸೇರಿದಂತೆ ವಿವಿಧೆಡೆ ಅಂಗಡಿಗಳಿಗೆ ಸರಬರಾಜು ಮಾಡಿ ಅವರಿಂದ ಹಣ ಪಡೆದು ಹೋಗುತ್ತಿದ್ದರು. ಭಾನುವಾರ ರಾತ್ರಿ 12.30ರ ಸುಮಾರಿಗೆ ಕೋಳಿಗಳು ತುಂಬಿದ್ದ ಟೆಂಪೊದೊಂದಿಗೆ ನಗರಕ್ಕೆ ಬಂದಿದ್ದ ಅವರು ಕೋಳಿಗಳನ್ನೆಲ್ಲಾ ಅಂಗಡಿಯವರಿಗೆ ಪೂರೈಕೆ ಮಾಡಿ ಅದರಿಂದ ಸಂಗ್ರಹವಾಗಿದ್ದ ₹1.30 ಲಕ್ಷ ಹಣ ತೆಗೆದುಕೊಂಡು ಹೊರಟಿದ್ದರು. ಈ ವೇಳೆ ದುಷ್ಕರ್ಮಿಗಳು ಅವರನ್ನು ಹಿಂಬಾಲಿಸಿ ಕೃತ್ಯ ಎಸಗಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಸುಮನಹಳ್ಳಿ ಹತ್ತಿರದ ಮಾಳಗಾಲ ಸೇತುವೆ ಬಳಿ ದುಷ್ಕರ್ಮಿಗಳು ಟೆಂಪೊವನ್ನು ಅಡ್ಡಗಟ್ಟಿದ್ದರು. ಮಾರಕಾಸ್ತ್ರಗಳಿಂದ ಬೆದರಿಸಿ ಹಣ ಕಿತ್ತುಕೊಂಡು ಪರಾರಿಯಾಗಿದ್ದರು. ಟೆಂಪೊ ಚಾಲಕ ಕೋಟಪ್ಪ ಮೇಲೆ ಹಲ್ಲೆ ನಡೆಸಿದ್ದರು. ಗಾಯಗೊಂಡಿದ್ದ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ’ ಎಂದು ತಿಳಿಸಿದರು.

ವಾಹನ ಡಿಕ್ಕಿ: ಪಾದಚಾರಿ ಸಾವು

ಬೆಂಗಳೂರು: ವಾಹನವೊಂದು ಡಿಕ್ಕಿಯಾಗಿದ್ದರಿಂದ ಪಾದಚಾರಿಯೊಬ್ಬರು ಮೃತಪಟ್ಟಿದ್ದು, ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಪಶ್ಚಿಮ ಬಂಗಾಳದ ಬರ್ಮನ್ (42) ಮೃತ ವ್ಯಕ್ತಿ. ನಾಯಂಡಹಳ್ಳಿಯ ಪ್ಲಾಸ್ಟಿಕ್ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅವರು ಕಾಮಾಕ್ಷಿಪಾಳ್ಯದಲ್ಲಿ ನೆಲೆಸಿದ್ದ ಮಗನ ಮನೆಗೆ ಹೋಗಿ ಭಾನುವಾರ ರಾತ್ರಿ ಮನೆಗೆ ಹಿಂದಿರುಗುತ್ತಿದ್ದರು. ನಾಗರಬಾವಿಯ ಕೆಳ ಸೇತುವೆ ಬಳಿ ರಸ್ತೆ ದಾಟುವ ವೇಳೆ ವೇಗವಾಗಿ ಬಂದ ವಾಹನ ಡಿಕ್ಕಿ ಹೊಡೆದಿದೆ’ ಎಂದು ಪೊಲೀಸರು ಹೇಳಿದರು.

‘ತೀವ್ರ ರಕ್ತಸ್ರಾವದಿಂದ ಬಳಲಿದ್ದ ಅವರು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯದಲ್ಲಿ ಅಸುನೀಗಿದ್ದಾರೆ. ವಾಹನದೊಂದಿಗೆ ಚಾಲಕ ಪರಾರಿಯಾಗಿದ್ದಾನೆ’ ಎಂದರು.

ಮಾದಕ ವಸ್ತು ಮಾರಾಟ: ಸುಡಾನ್ ಪ್ರಜೆ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರದೇಶಗಳಿಂದ ಮಾದಕ ವಸ್ತುಗಳನ್ನು ತಂದು ನಗರದ ವಿವಿಧೆಡೆ ಮಾರಾಟ ಮಾಡುತ್ತಿದ್ದ ಸುಡಾನ್ ದೇಶದ ನಫಿ ಇಬ್ರಾಹಿಂ ಯಾನೆ ಮೊಹಮ್ಮದ್ ದಾವೂದ್ ಮೊಹಮ್ಮದ್ ಗಡಾಂ (22) ಎಂಬಾತನನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ 28 ಎಕ್ಸ್‌ಟೆಸಿ ಮಾತ್ರೆಗಳು, ₹2,500 ನಗದು ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ.

ಆರೋಪಿಯಿಂದ ಜಪ್ತಿ ಮಾಡಿರುವ ಎಕ್ಸ್‌ಟೆಸಿ ಮಾತ್ರೆ

‘ನಗರದ ಅರ್ಕಾವತಿ ಬಡಾವಣೆಯಲ್ಲಿ ನೆಲೆಸಿದ್ದ ಆರೋಪಿಯು ಠಾಣೆ ವ್ಯಾಪ್ತಿಯ ದತ್ತಾತ್ರೇಯ ನಗರದ 1ನೇ ಮುಖ್ಯರಸ್ತೆಯಲ್ಲಿರುವ ಕಾಲೇಜೊಂದರ ಬಳಿ ಬಂದಿದ್ದ. ವಿದ್ಯಾರ್ಥಿಗಳಿಗೆ ಮಾದಕ ವಸ್ತು ಮಾರಾಟ ಮಾಡಲು ಮುಂದಾಗಿರುವ ಬಗ್ಗೆ ಮಾಹಿತಿ ಲಭಿಸಿತ್ತು. ಇದರ ಆಧಾರದಲ್ಲಿ ದಾಳಿ ನಡೆಸಿ ಆತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಮಳೆ ಕಾರಣ, ಸ್ಥಗಿತಗೊಂಡಿದ್ದ ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತೆ ಆರಂಭ

₹2.5 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಕೆಂಪಾಪುರ, ದಾಸರಹಳ್ಳಿಯ ಮಾರುತಿ ಬಡಾವಣೆ ಹಾಗೂ ತಿರುಮೇನಹಳ್ಳಿಯ ಎಂ.ಎಸ್.ನಗರದಲ್ಲಿ ₹2.50 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಕಳೆದ ನಾಲ್ಕೈದು ತಿಂಗಳಿಂದ ಮಳೆ ಸುರಿದ ಕಾರಣ, ಸ್ಥಗಿತಗೊಂಡಿದ್ದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಮತ್ತೆ ಆರಂಭಿಸಲಾಗಿದೆ. ವಿಶೇಷವಾಗಿ ಕಾವೇರಿ ನೀರುಪೂರೈಕೆ ಮತ್ತು ಒಳಚರಂಡಿ ಸೌಲಭ್ಯ ಕಲ್ಪಿಸುವ ಕಾರಣದಿಂದ ಕೈಗೊಂಡಿದ್ದ ಕಾಮಗಾರಿಯಿಂದ ಹಾಳಾಗಿದ್ದ ರಸ್ತೆಗಳನ್ನು ಅಭಿವೃದ್ಧಿಪಡಿಲಾಗುತ್ತಿದೆ’ ಎಂದು ತಿಳಿಸಿದರು.


ಬ್ಯಾಟರಾಯನಪುರ ಕ್ಷೇತ್ರದ ದಾಸರಹಳ್ಳಿಯ ಮಾರುತಿ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡ ಡಿ.ಬಿ.ಸುರೇಶ್ ಗೌಡ ಮತ್ತಿತರರು ಇದ್ದರು.

‘ಸರ್ಕಾರ ಅಭಿವೃದ್ಧಿ ಕಾಮಗಾರಿಗಳಿಗಾಗಿ ಅಗತ್ಯ ಅನುದಾನ ಬಿಡುಗಡೆ ಮಾಡದೆ, ಬಿಜೆಪಿ ಶಾಸಕರಿರುವ ಕ್ಷೇತ್ರಗಳಿಗೆ ₹200 ಕೋಟಿ-₹300 ಕೋಟಿ ಅನುದಾನ ನೀಡುತ್ತಿದೆ. ಆದರೆ, ಬ್ಯಾಟರಾಯನಪುರ ಕ್ಷೇತ್ರಕ್ಕೆ ಕೇವಲ ₹25 ಕೋಟಿ ಅನುದಾನ ನೀಡುವ ಮೂಲಕ ತಾರತಮ್ಯ ಎಸಗಿರುವುದು ಜನರಿಗೆ ಮಾಡುತ್ತಿರುವ ಅನ್ಯಾಯವಾಗಿದೆ’ ಎಂದು ದೂರಿದ ಅವರು, ‘ಕ್ಷೇತ್ರದ ಅಭಿವೃದ್ಧಿಗೆ ಅನುದಾನದ ಕೊರತೆಯಿಂದ ತೀರಾ ಹಾಳಾಗಿರುವ ರಸ್ತೆಗಳ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಲಾಗುತ್ತಿದೆ’ ಎಂದರು.

ಪರಿಹಾರ ಚೆಕ್ ವಿತರಣೆ: ಕೊಡಿಗೇಹಳ್ಳಿ ಮುಖ್ಯರಸ್ತೆಯ ಗುಂಡಾಂಜನೇಯ ಕಲ್ಯಾಣ ಮಂಟಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೊರೊನಾದಿಂದ ಮೃತಪಟ್ಟಿದ್ದ 126 ಜನರ ಕುಟುಂಬ ಸದಸ್ಯರಿಗೆ ಬಿಬಿಎಂಪಿ ವತಿಯಿಂದ ತಲಾ ₹1 ಲಕ್ಷ ಪರಿಹಾರದ ಚೆಕ್ ಅನ್ನು ಶಾಸಕ ಕೃಷ್ಣಬೈರೇಗೌಡ ವಿತರಿಸಿದರು. ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತರಾದ ಪೂರ್ಣಿಮಾ ಮತ್ತಿತರರು ಇದ್ದರು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ವಿತರಣೆ

ಆಮೂಲಾಗ್ರ ಬದಲಾವಣೆಗೆ ಶೀಘ್ರವೇ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಚಿತ್ರಣವನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಲು ಯೋಜನೆ ರೂಪಿಸಲಾಗುತ್ತಿದ್ದು, ಕೆಲವೇ ದಿನಗಳಲ್ಲಿ ಪ್ರಕಟಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೋವಿಡ್‌ನಿಂದ ಮೃತಪಟ್ಟ ವಾರಸುದಾರರ ಕುಟುಂಬದವರಿಗೆ ಬಿಬಿಎಂಪಿ ಮತ್ತು ಬೆಂಗಳೂರು ನಗರ ಜಿಲ್ಲಾಡಳಿತ ವತಿಯಿಂದ ಪರಿಹಾರ ಧನ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ನಗರವನ್ನು ಯೋಜನಾಬದ್ಧವಾಗಿ ಬೆಳೆಸಬೇಕಿದೆ. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದ್ದು, ಬಿಬಿಎಂಪಿ, ಜಲಮಂಡಳಿ ಸೇರಿ ಎಲ್ಲ ಸಾರ್ವಜನಿಕ ಸಂಸ್ಥೆಗಳು ಪರಸ್ಪರ ಸಮನ್ವಯದಿಂದ ಕೆಲಸ ನಿರ್ವಹಿಸುವ ವ್ಯವಸ್ಥೆ ರೂಪಿಸಲಾಗುತ್ತಿದೆ. ಬೆಂಗಳೂರಿನ ಅಭಿವೃದ್ಧಿಗೆ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಸಹಕರಿಸಬೇಕು' ಎಂದರು.

'ಮಳೆ ಬಂದು ಪ್ರವಾಹ ಉಂಟಾದ ಸ್ಥಳಗಳಿಗೆ ನಾನೇ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಅಗತ್ಯ ಇರುವೆಡೆ ರಾಜಕಾಲುವೆ ನಿರ್ಮಾಣಕ್ಕೆ ಸಮಗ್ರ ಯೋಜನೆ ರೂಪಿಸಲು ಸೂಚನೆ ನೀಡಿದ್ದೇನೆ. ರಾಜಕಾಲುವೆ ಒತ್ತುವರಿ ಮಾಡಿ ಕಟ್ಟಡ ನಿರ್ಮಿಸಿದ್ದರೆ ಗುರುತಿಸಲು ತಿಳಿಸಿದ್ದೇನೆ. ಅವುಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದರು.

'ಕೋವಿಡ್‌ನಿಂದ ಮನೆಯ ಸದಸ್ಯರನ್ನು ಕಳೆದುಕೊಂಡ ಬಿಪಿಎಲ್ ಕುಟುಂಬಗಳಿಗೆ ತಲಾ ₹1 ಲಕ್ಷ ಪರಿಹಾರ ನೀಡಲು ₹300 ಕೋಟಿ ಬಿಡುಗಡೆ ಮಾಡಿದ್ದೇನೆ. ಸಾಂಕೇತಿಕವಾಗಿ ಕೆಲವರಿಗೆ ಇಲ್ಲಿ ವಿತರಿಸಲಾಗಿದ್ದು, ಉಳಿದ ಕುಟುಂಬಗಳಿಗೆ 8ರಿಂದ 10 ದಿನಗಳಲ್ಲಿ ವಿತರಣೆ ಮಾಡಲಾಗುವುದು' ಎಂದರು.

'ಬಿಪಿಎಲ್ ಮಾತ್ರವಲ್ಲದೇ ಎಪಿಎಲ್ ಕುಟುಂಬಕ್ಕೂ ಕೇಂದ್ರ ಸರ್ಕಾರದಿಂದ ತಲಾ ₹50 ಸಾವಿರ ಪರಿಹಾರ ನೀಡಲಾಗುತ್ತಿದೆ. ರಾಜ್ಯ ಸರ್ಕಾರ ಬಿಪಿಎಲ್ ಕುಟುಂಬಕ್ಕೆ ಮಾತ್ರ ₹1 ಲಕ್ಷ ಸೇರಿಸಿ ಒಟ್ಟು ₹1.50 ಲಕ್ಷ ಕೊಡುತ್ತಿದೆ. ಈ ಒಂದು ಲಕ್ಷವನ್ನು ಎಪಿಎಲ್ ಕುಟುಂಬಕ್ಕೂ ನೀಡಬೇಕು' ಎಂದು ಶಾಸಕ ಬಿ.ಝಡ್. ಜಮೀರ್ ಅಹಮ್ಮದ್ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಹಣಕಾಸಿನ ಸ್ಥಿತಿಗತಿ ನೋಡಿಕೊಂಡು ಸಕಾರಾತ್ಮಕ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

'ಕೋವಿಡ್ ಲಸಿಕೆ ಪ್ರಮಾಣ ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದೇವೆ. ಶೇ 97ರಷ್ಟು ಜನರಿಗೆ ಮೊದಲ ಡೋಸ್ ಮತ್ತು ಶೇ 76ರಷ್ಟು ಜನರಿಗೆ ಎರಡನೇ ಡೋಸ್ ಲಸಿಕೆ ನೀಡಲಾಗಿದೆ. ಗ್ರಾಮೀಣ ಪ್ರದೇಶ ಮತ್ತು ಕೆಲ ಸಮುದಾಯದಲ್ಲಿ ಲಸಿಕೆ ಬಗ್ಗೆ ತಿಳಿವಳಿಕೆ ಕಡಿಮೆ ಇದೆ. ಅವರಿಗೆ ಜಾಗೃತಿ ಮೂಡಿಸಲಾಗುತ್ತಿದೆ. ಈ ಕಾರ್ಯಕ್ಕೆ ಸ್ಥಳೀಯ ಜನಪ್ರತಿನಿಧಿಗಳು ಸಹಕಾರ ಬೇಕು' ಎಂದು ಹೇಳಿದರು.

'ವೈದ್ಯಕೀಯ ಮೂಲಸೌಕರ್ಯ ಹೆಚ್ಚಿಸುವ ಕೆಲಸ ನಿರಂತರವಾಗಿ ನಡೆದಿದೆ. ಬೆಂಗಳೂರು ನಗರ ಮತ್ತು ಪ್ರತಿ ಜಿಲ್ಲಾ ಕೇಂದ್ರಗಳು ಸೇರಿ 100ಕ್ಕೂ ಹೆಚ್ಚು ಆರ್‌ಟಿಪಿಸಿಆರ್ ಪರೀಕ್ಷೆ ನಡೆಸುವ ಘಟಕಗಳನ್ನು ನಿರ್ಮಿಸಲಾಗಿದೆ. ಮೂರನೇ ಅಲೆ ಬಂದರೆ ಎದುರಿಸಲು ಎಲ್ಲ ರೀತಿಯ ವ್ಯವಸ್ಥೆ ಮಾಡಿಕೊಂಡಿದ್ದೇವೆ' ಎಂದು ವಿವರಿಸಿದರು.



ಕೋವಿಡ್‌ನಿಂದ ಮೃತಪಟ್ಟವರ ಕುಟುಂಬದವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪರಿಹಾರಧನದ ಚೆಕ್ ವಿತರಣೆ ಮಾಡಿದರು. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಸಚಿವರಾದ ಕೆ.ಗೋಪಾಲಯ್ಯ, ಎಸ್‌.ಟಿ ಸೋಮಶೇಖರ್, ಶಾಸಕ ಎಲ್‌.ಎ. ರವಿಸುಬ್ರಹ್ಮಣ್ಯ, ಕಂದಾಯ ಸಚಿವ ಆರ್. ಅಶೋಕ, ವಿಧಾನ ಪರಿಷತ್ ಸದಸ್ಯ ಯು.ಬಿ ವೆಂಕಟೇಶ್, ಶಾಸಕರಾದ ಆರ್. ಮಂಜುನಾಥ್, ಸತೀಶ್ ರೆಡ್ಡಿ ಇದ್ದರು ಪ್ರಜಾವಾಣಿ ಚಿತ್ರ

ಮನೆ ಬಾಗಿಲಿಗೆ ಕಂದಾಯ ದಾಖಲೆ: ಆರ್.ಅಶೋಕ

'ರೈತರು ತಮ್ಮ ಜಮೀನಿನ ಪಹಣಿ ಮತ್ತು ನಕ್ಷೆಗಾಗಿ ಕಚೇರಿಗೆ ಅಲೆದಾಡುವುದನ್ನು ತಪ್ಪಿಸಿ ಈ ಎಲ್ಲ ದಾಖಲೆಗಳನ್ನು ಮನೆ ಬಾಗಿಲಿಗೆ ತಲುಪಿಸಲಾಗುತ್ತಿದೆ' ಎಂದು ಕಂದಾಯ ಸಚಿವ ಆರ್.ಅಶೋಕ ತಿಳಿಸಿದರು.

'ರಾಜ್ಯದಲ್ಲಿ 45 ಲಕ್ಷ ರೈತರಿದ್ದು, ಅವರಲ್ಲಿ ಕೆಲವರು ತಮ್ಮ ಜಮೀನಿನ ಪಹಣಿ ಮತ್ತು ನಕ್ಷೆಯನ್ನೇ ನೋಡಿಲ್ಲ. ಯಾವುದೇ ಖರ್ಚಿಲ್ಲದೇ, ಅರ್ಜಿ ಪಡೆಯದೇ ಈ ದಾಖಲೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. 60 ವರ್ಷ ದಾಟಿದ ರಾಜ್ಯದ ಎಲ್ಲರ ಮಾಹಿತಿ ಸರ್ಕಾರದ ಬಳಿ ಇದೆ. ಅವರಿಂದ ಕೂಡ ಅರ್ಜಿ ಪಡೆಯದೆ ಮಾಸಾಶನ ಮಂಜೂರು ಮಾಡಲಾಗುವುದು' ಎಂದರು.

'ಕೋವಿಡ್ ಪರಿಹಾರ ವಿತರಣೆಗೆ ₹400 ಕೋಟಿ ಮೀಸಲಿರಿಸಲಾಗಿದೆ. 11,982 ಬಿಪಿಎಲ್ ಕುಟುಂಬಗಳಿಗೆ ಚೆಕ್ ವಿತರಿಸುವ ಕಾರ್ಯ ನಡೆಯುತ್ತಿದೆ. ಕೇಂದ್ರ ಸರ್ಕಾರದ ಪರಿಹಾರ ಯೋಜನೆಯಡಿ 22,879 ಕುಟುಂಬಗಳಿಗೆ ನೇರವಾಗಿ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಲಾಗಿದೆ. ಬೆಂಗಳೂರಿನಲ್ಲಿ 2,601 ಕುಟುಂಬಗಳಿಗೆ ಈವರೆಗೆ ₹1 ಲಕ್ಷ ವಿತರಣೆಯಾಗಿದೆ. ಕೇಂದ್ರದ ಪರಿಹಾರ ಯೋಜನೆಯಡಿ 7,262 ಕುಟುಂಬಕ್ಕೆ ₹50 ಸಾವಿರ ನೇರ ವರ್ಗಾವಣೆ ಮಾಡಲಾಗಿದೆ' ಎಂದು ವಿವರಿಸಿದರು.

ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಎಚ್ಚರಿಕೆ

'ಕರ್ಫ್ಯೂ ಉಲ್ಲಂಘಿಸಿದರೆ ಪ್ರಕರಣ ದಾಖಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಸ್ಥಳಗಳಲ್ಲಿ ಹೊಸ ವರ್ಷಾಚರಣೆಗೆ ನಿರ್ಬಂಧ ಹೇರಲಾಗಿದ್ದು, ಇದೇ 28ರಿಂದ 2022ರ ಜನವರಿ 7ರವರೆಗೆ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ನಿಷೇಧಾಜ್ಞೆ ಉಲ್ಲಂಘಿಸುವವರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತದೆ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಎಚ್ಚರಿಸಿದ್ದಾರೆ.

ಕಮಲ್ ಪಂತ್

'ಸರ್ಕಾರದ ಆದೇಶದಂತೆಯೇ ಪ್ರತಿದಿನ ರಾತ್ರಿ 10 ರಿಂದ ಬೆಳಿಗ್ಗೆ 5 ಗಂಟೆವರೆಗೆ ನಿಷೇದಾಜ್ಞೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಆಸ್ಪತ್ರೆ ಸೇರಿದಂತೆ ಇತರೆ ತುರ್ತು ಕಾರ್ಯಗಳಿಗಾಗಿ ಮನೆಯಿಂದ ಹೊರ ಬರುವವರು ಗಸ್ತಿನಲ್ಲಿರುವ ಪೊಲೀಸರಿಗೆ ಸೂಕ್ತ ದಾಖಲೆಗಳನ್ನು ಒದಗಿಸಬೇಕು. ಕಚೇರಿ ಕೆಲಸ ಮುಗಿಸಿಕೊಂಡು ಮನೆಗೆ ಮರಳುವವರೂ ಗುರುತಿನ ಚೀಟಿ ಹೊಂದಿರಬೇಕು. ಬಸ್, ರೈಲು ಹಾಗೂ ವಿಮಾನಗಳ ಮೂಲಕ ನಗರದಿಂದ ಬೇರೆ ಊರುಗಳಿಗೆ ಹೋಗುವವರು ಕೂಡ ಅಗತ್ಯ ದಾಖಲೆಗಳನ್ನು ಒದಗಿಸಬೇಕು. ಸೂಕ್ತ ದಾಖಲೆಗಳನ್ನು ನೀಡದಿದ್ದರೆ ಸೆಕ್ಷನ್ 188ರ ಅಡಿಯಲ್ಲಿ ಪ್ರಕರಣ ದಾಖಲಿಸುವುದು ಅನಿವಾರ್ಯ' ಎಂದು ಸೋಮವಾರ ಇಲ್ಲಿ ಹೇಳಿದರು.

'ಪಬ್, ಹೋಟೆಲ್ ಹಾಗೂ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳಲ್ಲಿ ಒಟ್ಟು ಆಸನ ಸಾಮರ್ಥ್ಯದ ಶೇ 50ರಷ್ಟು ಮಂದಿಗೆ ಅವಕಾಶವಿದೆ. ಅಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸುವಂತಿಲ್ಲ. ನಿಯಮ ಉಲ್ಲಂಘಿಸುವ ಪಬ್, ರೆಸ್ಟೋರೆಂಟ್ ಹಾಗೂ ಹೋಟೆಲ್‌ಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುತ್ತದೆ' ಎಂದರು.

'ಎಂ.ಜಿ.ರಸ್ತೆ, ಕೋರಮಂಗಲ, ಇಂದಿರಾನಗರದಲ್ಲಿ ಹೊಸವರ್ಷ ಸಂಭ್ರಮಾಚರಣೆಗೆ ಅವಕಾಶ ಇರುವುದಿಲ್ಲ. ಈ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳನ್ನೂ ಬಂದ್ ಮಾಡಲಾಗುತ್ತದೆ. ಜೊತೆಗೆ ಎಲ್ಲೆಡೆ ಈಗಾಗಲೇ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಬಿಗಿ ಪೊಲೀಸ್ ಬಂದೋಬಸ್ತ್ ಕೂಡ ಮಾಡಲಾಗುತ್ತದೆ. ಈ ರಸ್ತೆಗಳಲ್ಲಿ ಸಂಚರಿಸುವವರನ್ನೆಲ್ಲಾ ಪೊಲೀಸರು ತಪಾಸಣೆ ನಡೆಸಲಿದ್ದಾರೆ' ಎಂದು ಹೇಳಿದರು.

ಸ್ಥಳೀಯ ಸಂಸ್ಥೆ ಚುನಾವಣೆ: ಶಾಂತಿಯುತ ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 58 ನಗರ ಸ್ಥಳೀಯ ಸಂಸ್ಥೆಗಳು ಮತ್ತು 57 ಗ್ರಾಮ ಪಂಚಾಯಿತಿಗಳ ಸದಸ್ಯರ ಆಯ್ಕೆಗೆ ಸೋಮವಾರ ಚುನಾವಣೆ ನಡೆದಿದ್ದು, ಸಣ್ಣ ಪುಟ್ಟ ಅಹಿತಕರ ಘಟನೆಗಳನ್ನು ಹೊರತುಪಡಿಸಿ ಬಹುತೇಕ ಶಾಂತಿಯುತ ಮತದಾನ ನಡೆದಿದೆ.

ಪ್ರಾಥಮಿಕ ಮಾಹಿತಿ ಪ್ರಕಾರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಶೇ 75.09 ರಷ್ಟು ಹಾಗೂ ಗ್ರಾಮ ಪಂಚಾಯತಿಗಳಲ್ಲಿ ಶೇ 73.75 ರಷ್ಟು ಮತದಾನವಾಗಿದೆ. ಸೋಮವಾರ ತಡರಾತ್ರಿಯೂ ವಿವಿಧ ಜಿಲ್ಲೆಗಳಿಂದ ಮಾಹಿತಿ ಸಂಗ್ರಹಿಸುವ ಕೆಲಸವನ್ನು ಆಯೋಗದ ಅಧಿಕಾರಿಗಳು ಮುಂದುವರಿಸಿದ್ದರು.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ಪುರಸಭೆಯ ವ್ಯಾಪ್ತಿಯಲ್ಲಿ ಶಾಸಕ ಎಸ್. ಭೀಮಾ ನಾಯ್ಕ ಮತ್ತು ಮಾಜಿ ಶಾಸಕ ಕೆ. ನೇಮಿರಾಜ ನಾಯ್ಕ ನಡುವೆ ಮಾತಿನ ಚಕಮಕಿ ನಡೆಯಿತು. ಇಬ್ಬರ ಬೆಂಬಲಿಗರೂ ಕೈ ಮಿಲಾಯಿಸುವ ಹಂತ ತಲುಪಿದ್ದರು. ಪೊಲೀಸರು ಲಾಠಿ ಪ್ರಹಾರ ನಡೆಸಿ ಗುಂಪು ಚದುರಿಸಿದರು.

ತುಮಕೂರು ಜಿಲ್ಲೆ ಶಿರಾ ನಗರಸಭೆ ಚುನಾವಣೆಯಲ್ಲಿ ನಕಲಿ ಮತದಾನಕ್ಕೆ ಯತ್ನಿಸಿದ ಒಬ್ಬನನ್ನು ಹಾಗೂ ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಚಂದಾಪುರ ಪುರಸಭೆ ಚುನಾವಣೆಯಲ್ಲಿ ನಕಲಿ ಮತದಾನಕ್ಕೆ ಯತ್ನಿಸಿದ ಮೂವರನ್ನು ವಶಕ್ಕೆ ಪಡೆಯಲಾಗಿದೆ.

ರಾಮನಗರ ಜಿಲ್ಲೆಯ ಬಿಡದಿ ಪುರಸಭೆಯ ಕಲ್ಲುಗೋಪಹಳ್ಳಿ ಮತಗಟ್ಟೆ ಬಳಿ ಕಾಂಗ್ರೆಸ್ ಮತ್ತು ಜೆಡಿಎಸ್ ಕಾರ್ಯಕರ್ತರು ಕೈ ಮಿಲಾಯಿಸಿಕೊಂಡರಲ್ಲದೇ ಪರಸ್ಪರ ಕಲ್ಲು ತೂರಾಡಿಕೊಂಡರು.

ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಜಿಗಳೂರ ಗ್ರಾಮಸ್ಥರು ಹಾಗೂ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಕುಟುಕನಕೇರಿ ಗ್ರಾಮಸ್ಥರು ಮತದಾನ ಬಹಿಷ್ಕರಿಸಿದರು.

ಚಂದಾಪುರ ಪುರಸಭೆಯಲ್ಲಿ ಅವಾಂತರ: ಕಾರ್ಯಕರ್ತರ ಆಕ್ರೋಶ

ಅಭ್ಯರ್ಥಿ, ನೋಟಾಕ್ಕೆ ಒಂದೇ ಕ್ರಮ ಸಂಖ್ಯೆ!

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿ ನಗರಸಭೆ ಸೇರಿದಂತೆ ಮೂರು ನಗರ ಸ್ಥಳೀಯ ಸಂಸ್ಥೆಗಳಿಗೆ ಸೋಮವಾರ ನಡೆದ ಚುನಾವಣೆಯು ಸಣ್ಣಪುಟ್ಟ ಘಟನೆ ಹೊರತುಪಡಿಸಿದರೆ ಬಹುತೇಕ ಶಾಂತಿಯುತವಾಗಿತ್ತು.

ಬೆಳಿಗ್ಗೆ ಬಿರುಸಿನಿಂದ ಪ್ರಾರಂಭವಾದ ಮತದಾನ ಮಧ್ಯಾಹ್ನದ ವೇಳೆಗೆ ಮಂದಗತಿಯಲ್ಲಿ ಸಾಗಿತ್ತು. ಸಂಜೆ ವೇಳೆಗೆ ಮತ್ತೆ ಬಿರುಸಿನಿಂದ ಕೂಡಿತ್ತು. ಕಾರ್ಮಿಕರೇ ಹೆಚ್ಚಾಗಿರುವ ಹೆಬ್ಬಗೋಡಿ ನಗರಸಭೆಯಲ್ಲಿ 59,205 ಮತದಾರರಿದ್ದರು. ಈ ಪೈಕಿ ಮಧ್ಯಾಹ್ನ 3ರ ವೇಳೆಗೆ ಶೇ 36.84ರಷ್ಟು ಮತದಾನವಾಗಿತ್ತು.

ಹೆಬ್ಬಗೋಡಿಯಲ್ಲಿ ಮತದಾರರ ಮನವೊಲಿಸಲು ಅಭ್ಯರ್ಥಿಗಳ ಬೆಂಬಲಿಗರು, ಪಕ್ಷದ ಮುಖಂಡರು ಕೊನೆಯ ಹಂತದ ಕಸರತ್ತು ಮಾಡುತ್ತಿದ್ದುದು ಕಂಡುಬಂದಿತು. ಹೆಬ್ಬಗೋಡಿಯ ಬಿಇಎಸ್ ಶಾಲೆಯಲ್ಲಿ 13 ಮತಗಟ್ಟೆಗಳನ್ನು ಒಂದೆಡೆ ಸ್ಥಾಪಿಸಿದ್ದರಿಂದ ಎಲ್ಲಾ ಮತಗಟ್ಟೆಗಳ ಮತದಾರರು ಕಿರಿದಾದ ರಸ್ತೆಯಲ್ಲಿ ಜಮಾಯಿಸಿದ್ದರು.

ಚಂದಾಪುರ ಪುರಸಭೆಯ 23 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಶೇ 57.44ರಷ್ಟು ಮತದಾನವಾಗಿದೆ. ರಾಮಸಾಗರ ಕ್ಷೇತ್ರದ 3 ಮತ್ತು 3ಎ ಮತಗಟ್ಟೆಯ ಮತ ಪತ್ರದಲ್ಲಿ ಐವರು ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಕ್ರಮಸಂಖ್ಯೆ ನೀಡುವಾಗ ಕ್ರಮ ಸಂಖ್ಯೆ 5ರ ಪಕ್ಷೇತರ ಅಭ್ಯರ್ಥಿ ಮತ್ತು ನೋಟಾಕ್ಕೆ ಕ್ರಮಸಂಖ್ಯೆ 5 ಅನ್ನೇ ನೀಡಿದ್ದರಿಂದ ಗೊಂದಲ ಉಂಟಾಗಿತ್ತು.

ಅಭ್ಯರ್ಥಿಗಳು ತಕರಾರು ತೆಗೆಯುವ ವೇಳೆಗೆ ಎರಡೂ ಮತಗಟ್ಟೆಗಳಲ್ಲಿ 154 ಮತಗಳು ಚಲಾವಣೆಯಾಗಿದ್ದವು. ಬಿಗುವಿನ ವಾತಾವರಣ ಉಂಟಾದ ಹಿನ್ನೆಲೆಯಲ್ಲಿ ಡಿವೈಎಸ್‌ಪಿ ಎಂ. ಮಲ್ಲೇಶ್, ಸರ್ಕಲ್ ಇನ್‌ಸ್ಪೆಕ್ಟರ್ ಮಹಾನಂದ್ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ನಿಯಂತ್ರಿಸಿದರು.

ಚಂದಾಪುರ ಪುರಸಭೆಯ 3ನೇ ವಾರ್ಡ್‌ನ ಅಭ್ಯರ್ಥಿ ಸೌಮ್ಯಾ ಸುಧಾಕರ್ ಮಾತನಾಡಿ, 'ಕ್ರಮಸಂಖ್ಯೆ 5 ಎಂದು ಪ್ರಚಾರ ಮಾಡಲಾಗಿದೆ. ನನ್ನ ಹೆಸರು ಮತ್ತು ನೋಟಾಗೆ ಕ್ರಮ ಸಂಖ್ಯೆ 5 ಅನ್ನೇ ನೀಡಲಾಗಿದೆ. ಇದರಿಂದ ನಮಗೆ ಅನ್ಯಾಯವಾಗಿದೆ' ಎಂದು ಆರೋಪಿಸಿದರು.

ಎಲ್ಲಾ ಅಭ್ಯರ್ಥಿಗಳು ವಿರೋಧ ವ್ಯಕ್ತಪಡಿಸಿದ್ದರಿಂದ ಒಂದು ತಾಸು ಮತದಾನ ಸ್ಥಗಿತವಾಗಿ ಬಿಗುವಿನ ವಾತಾವರಣ ಉಂಟಾಗಿತ್ತು. ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಪಿ. ದಿನೇಶ್, ಎಲ್ಲಾ ಅಭ್ಯರ್ಥಿಗಳ ಒಪ್ಪಿಗೆ ಪಡೆದು ಕ್ರಮ ಸಂಖ್ಯೆ ಬದಲಾಯಿಸಿದ ನಂತರ ಮತದಾನ ಸುಗಮವಾಗಿ ನಡೆಯಿತು. ಒಂದು ತಾಸು ಹೆಚ್ಚುವರಿಯಾಗಿ ಸಮಯ ನೀಡಲಾಯಿತು.

ಜಿಗಣಿ ಪುರಸಭೆ ವ್ಯಾಪ್ತಿಯ 23 ಸ್ಥಾನಗಳಿಗೆ ಬೆಳಿಗ್ಗೆ ಬಿರುಸಿನಿಂದ ಪ್ರಾರಂಭವಾದ ಮತದಾನ ಸಂಜೆಯವರೆಗೂ ವೇಗದಲ್ಲಿ ನಡೆಯಿತು. ಶೇ 67.7ರಷ್ಟು ಮತದಾನವಾಗಿದೆ.

ಗ್ರಾ.ಪಂ. ಚುನಾವಣೆ ಶೇ 81 ರಷ್ಟು ಮತದಾನ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಬೆಟ್ಟಹಲಸೂರು, ಬಾಗಲೂರು ಹಾಗೂ ಸಾತನೂರು ಗ್ರಾಮಪಂಚಾಯಿತಿಗಳಿಗೆ ಸೋಮವಾರ ನಡೆದ ಮತದಾನದಲ್ಲಿ ಒಟ್ಟು 21,593 ಮತದಾರರ ಪೈಕಿ 17,472 ಮತದಾರರು ತಮ್ಮ ಹಕ್ಕುಚಲಾಯಿಸಿದ್ದು, ಶೇ 80.92ರಷ್ಟು ಶಾಂತಿಯುತ ಮತದಾನವಾಗಿದೆ.

ಬೆಟ್ಟಹಲಸೂರು ಗ್ರಾಮಪಂಚಾಯಿತಿ ವ್ಯಾಪ್ತಿಯ 10 ಕ್ಷೇತ್ರಗಳಲ್ಲಿ 8,088 ಮತದಾರರ ಪೈಕಿ 6,845 ಜನರು ಮತಚಲಾಯಿಸಿದ್ದು, ಶೇ 84.63, ಬಾಗಲೂರು ಪಂಚಾಯಿತಿ ವ್ಯಾಪ್ತಿಯ 7 ಕ್ಷೇತ್ರಗಳಲ್ಲಿ 8,496 ಮತದಾರರ ಪೈಕಿ 6,554 ಮತದಾರರು ಮತಚಲಾಯಿಸಿದ್ದು, ಶೇ 77.14 ಹಾಗೂ ಸಾತನೂರು ಪಂಚಾಯಿತಿ ವ್ಯಾಪ್ತಿಯ 5 ಕ್ಷೇತ್ರಗಳಲ್ಲಿ 4,139 ಮತದಾರರ ಪೈಕಿ 3,339 ಮತದಾರರು ಮತದಾನ ಮಾಡಿದ್ದು, ಶೇ 80.67ರಷ್ಟು ಮತದಾನವಾಗಿದೆ ಎಂದು ಯಲಹಂಕ ತಹಶೀಲ್ದಾರ್ ಕೆ.ನರಸಿಂಹಮೂರ್ತಿ ಮಾಹಿತಿ ನೀಡಿದರು.

ಬೆಟ್ಟಹಲಸೂರು ಗ್ರಾಮಪಂಚಾಯಿತಿಯ ಒಟ್ಟು 26 ಸ್ಥಾನಗಳಲ್ಲಿ ಮೂವರು ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದು, ಉಳಿದ 23 ಸ್ಥಾನಗಳಿಗಾಗಿ ಚುನಾವಣೆ ನಡೆಯಿತು. ಬಾಗಲೂರು ಪಂಚಾಯಿತಿಯ 26 ಮತ್ತು ಸಾತನೂರು ಪಂಚಾಯಿತಿಯ 11 ಸ್ಥಾನಗಳಿಗೆ ಅಭ್ಯರ್ಥಿಗಳ ಆಯ್ಕೆಗಾಗಿ ಜನರು ಮತಚಲಾಯಿಸಿದರು.

ಉಪಚುನಾವಣೆ: ಮಾರೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಮಾರಸಂದ್ರ ಕ್ಷೇತ್ರದ ಒಂದು ಸ್ಥಾನಕ್ಕಾಗಿ ಉಪಚುನಾವಣೆ ನಡೆಯಿತು. ಒಟ್ಟು 870 ಮತದಾರರ ಪೈಕಿ 734 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದು, ಶೇ 84.37ರಷ್ಟು ಮತದಾನವಾಗಿದೆ.

ಚಂದಾಪುರದ ಮತಗಟ್ಟೆಯೊಂದರಲ್ಲಿ ನಕಲಿ ಮತದಾನ ನಡೆದಿದೆ ಎಂದು ಆರೋಪಿಸಿ ಬಿಜೆಪಿ, ಕಾಂಗ್ರೆಸ್ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು

ನಕಲಿ ಮತದಾನ: ಆರೋಪ

ಚಂದಾಪುರ ಪುರಸಭೆ ವ್ಯಾಪ್ತಿಯ ವಾರ್ಡ್ ನಂ. 17 ಮತ್ತು 20ರಲ್ಲಿ ಕೆಲವರು ಬೇರೆಯವರ ಹೆಸರಿನಲ್ಲಿ ಮತ ಚಲಾಯಿಸಲು ಬಂದಾಗ ಸ್ಥಳೀಯರು ಆಕ್ಷೇಪ ವ್ಯಕ್ತಪಡಿಸಿದರು.

ಅವರ ದಾಖಲೆ ಪರಿಶೀಲಿಸಲು ಮುಂದಾದ ವೇಳೆ ಬಂದಿದ್ದವರು ನಕಲಿ ಮತದಾರರೆಂಬ ಶಂಕೆ ವ್ಯಕ್ತವಾಯಿತು.

ಪೊಲೀಸರು ಮೂವರನ್ನು ವಶಕ್ಕೆ ಪಡೆದರು. ಇದರಿಂದ ಕೆಲಕಾಲ ಸ್ಥಳದಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ವಾಗ್ವಾದ, ತಳ್ಳಾಟ ನಡೆಯಿತು. ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದರು.

ಜಿಗಣಿಯ ವಾರ್ಡ್ ನಂ. 10ರಲ್ಲಿ ನಕಲಿ ಮತದಾನ ಮಾಡುತ್ತಿದ್ದಾರೆ ಎಂದು ಆರೋಪಿಸಿ ಗದ್ದಲ ಉಂಟಾಗಿತ್ತು.

ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದರು.

ರಾಮಲಿಂಗಾ ರೆಡ್ಡಿ ಹಾಗೂ ಸೌಮ್ಯಾ ರೆಡ್ಡಿ ನೇತೃತ್ವದಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

'ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬ: ಸ್ಥಳೀಯರ ಆಕ್ರೋಶ'

ಬೆಂಗಳೂರು: ಈಜಿಪುರ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ವಿಳಂಬವಾಗುತ್ತಿರುವ ಬಗ್ಗೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಬಿಟಿಎಂ ಬಡಾವಣೆ ಕ್ಷೇಮಾಭಿವೃದ್ಧಿ ಸಂಘಗಳ ಒಕ್ಕೂಟದ ನೇತೃತ್ವದಲ್ಲಿ ಸೋಮವಾರ ಕೋರಮಂಗಲದ ಸೋನಿ ವರ್ಲ್ಡ್ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಹಾಗೂ ಜಯ ನಗರದ ಶಾಸಕಿ ಸೌಮ್ಯಾ ರೆಡ್ಡಿ ಭಾಗವಹಿಸಿದ್ದರು.

'2.5 ಕಿ.ಮೀ.ಉದ್ದದ ಈ ಮೇಲ್ಸೇತುವೆಯು ಕೇಂದ್ರೀಯ ಸದನದಿಂದ ಸೋನಿ ವರ್ಲ್ಡ್ ವೃತ್ತ ಮಾರ್ಗವಾಗಿ ಈಜಿಪುರಕ್ಕೆ ಸಂಪರ್ಕ ಕಲ್ಪಿಸಲಿದೆ. ₹203 ಕೋಟಿ ವೆಚ್ಚದ ಈ ಕಾಮಗಾರಿ 2018ರಲ್ಲಿ ಶುರುವಾಗಿತ್ತು. ಇದಕ್ಕೆ 30 ತಿಂಗಳ ಕಾಲಮಿತಿ ನಿಗದಿಪಡಿಸಲಾಗಿತ್ತು. ಹೀಗಿದ್ದರೂ ಇದು ಪೂರ್ಣಗೊಂಡಿಲ್ಲ.

ಗುತ್ತಿಗೆ ಪಡೆದಿರುವ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆ ಹಾಗೂ ಬಿಬಿಎಂಪಿಯ ನಿರ್ಲಕ್ಷ್ಯಕ್ಕೆ ಇದು ಸಾಕ್ಷಿ' ಎಂದು ಪ್ರತಿಭಟನಕಾರರು ದೂರಿದರು.

'ಗುತ್ತಿಗೆ ಪಡೆದಿರುವ ಕಂಪನಿಯು 15 ತಿಂಗಳು ವೇಗವಾಗಿ ಕೆಲಸ ಮಾಡಿತ್ತು. ಹೀಗಾಗಿ ಕಂಪನಿಗೆ ₹32 ಕೋಟಿ ಹಣ ಬಿಡುಗಡೆ ಮಾಡಲಾಗಿತ್ತು. ಪಾದಚಾರಿ ಮಾರ್ಗ ಹಾಗೂ ಒಳಚರಂಡಿ ಕಾಮಗಾರಿ ಮುಗಿಸಿರುವ ಕಂಪನಿ ಮೇಲ್ಸೇತುವೆ ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಿಲ್ಲ. ಹೀಗಾಗಿ ಈ ಮಾರ್ಗದಲ್ಲಿ ಸಂಚರಿಸುವ ವಾಹನ ಸವಾರರು ಪರದಾಡುವಂತಾಗಿದೆ' ಎಂದು ರಾಮಲಿಂಗಾ ರೆಡ್ಡಿ ಆರೋಪಿಸಿದರು.

'ಕಿರಿದಾದ ರಸ್ತೆಯಲ್ಲಿ ಸಾಗುವ ವೇಳೆ ಅಪಘಾತಗಳು ಉಂಟಾಗಿ ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಹೀಗಾಗಿ ಗುತ್ತಿಗೆದಾರರನ್ನು ಬದಲಾವಣೆ ಮಾಡಿಯಾದರೂ ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಮುಗಿಸಬೇಕು' ಎಂದು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಬಂದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತಾ, ಪ್ರತಿಭಟನಕಾರರಿಂದ ಮನವಿ ಪತ್ರ ಸ್ವೀಕರಿಸಿದರು.

ನಿಗದಿತ ಅವಧಿಯೊಳಗೆ ಕಾಮಗಾರಿ ಮುಗಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿಯೂ ಹೇಳಿದರು.



'ಕೋವೊವ್ಯಾಕ್ಸ್' ತುರ್ತು ಬಳಕೆಗೆ ಶಿಫಾರಸು

ನವದೆಹಲಿ (ಪಿಟಿಐ): ಸೀರಂ ಸಂಸ್ಥೆಯ ಕೋವಿಡ್ –19 ಲಸಿಕೆ 'ಕೋವೊವ್ಯಾಕ್ಸ್'ನ ತುರ್ತು ಬಳಕೆಗೆ ಕೆಲವು ಷರತ್ತುಗಳೊಂದಿಗೆ ಕೇಂದ್ರ ಔಷಧ ಪ್ರಾಧಿಕಾರದ ತಜ್ಞರ ಸಮಿತಿ ಸೋಮವಾರ ಶಿಫಾರಸು ಮಾಡಿದೆ.

'ಕೋವೊವ್ಯಾಕ್ಸ್'ನ ತುರ್ತು ಬಳಕೆಗೆ ಅವಕಾಶ ಕೋರಿ ಸೀರಂನ ನಿರ್ದೇಶಕ ಪ್ರಕಾಶ್ ಕುಮಾರ್ ಸಿಂಗ್ ಅವರು ಭಾರತೀಯ ಔಷಧ ನಿಯಂತ್ರಕರಿಗೆ (ಡಿಸಿಜಿಐ) ಅಕ್ಟೋಬರ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.



ನಗರದಲ್ಲಿ ಇಂದು

ಗೌರವ ಪ್ರಶಸ್ತಿ ಪ್ರದಾನ, ಪುಸ್ತಕ ಬಹುಮಾನ ಮತ್ತು ಪುಸ್ತಕಗಳ ಬಿಡುಗಡೆ: ಪ್ರಶಸ್ತಿ ಪ್ರದಾನ ಮತ್ತು ಬಹುಮಾನ ವಿತರಣೆ–ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಪುಸ್ತಕ ಬಿಡುಗಡೆ–ಸಾಹಿತಿ ದೊಡ್ಡರಂಗೇಗೌಡ, ಅತಿಥಿಗಳು–ಎನ್. ಮಂಜುಳಾ, ಎಸ್.ರಂಗಪ್ಪ, ಅಧ್ಯಕ್ಷತೆ–ಅಜಕ್ಕಳ ಗಿರೀಶ್ ಭಟ್, ಆಯೋಜನೆ–ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸ್ಥಳ–ನಯನ ಸಭಾಂಗಣ, ಕನ್ನಡ ಭವನ, ಬೆಳಿಗ್ಗೆ 11

ಆರಕ್ಷಕ ಸೇವಾರತ್ನ ರಾಜ್ಯ ಪ್ರಶಸ್ತಿ ಪ್ರದಾನ ಹಾಗೂ 'ನಾವು ಭಾರತೀಯರು' ಪುಸ್ತಕ ಬಿಡುಗಡೆ: ಪ್ರಶಸ್ತಿ ಪ್ರದಾನ–ವಿ.ನಾಗೇಂದ್ರ ಪ್ರಸಾದ್, ಉದ್ಘಾಟನೆ–ಚಂದ್ರಶೇಖರ ಕಂಬಾರ, ಅಧ್ಯಕ್ಷತೆ–ಚನ್ನಬಸಪ್ಪ ಹೊಸಮನಿ, ಅತಿಥಿಗಳು–ಆರ್.ಎನ್. ನಿಖಿಲ್ ಕುಮಾರ್, ರಾಘವ ಸೂರ್ಯ, ಆಯೋಜನೆ–ನವಿರೋಷನ್ ಪ್ರಕಾಶನ, ಸ್ಥಳ–ಮಂಗಳ ಕಲ್ಯಾಣ ಮಂಟಪ, ಕೋರಮಂಗಲ, ಬೆಳಿಗ್ಗೆ 11

ಆಮ್ಲಜನಕ ಸ್ಥಾವರಗಳ ನಿರ್ವಹಣೆಯ ಅಣಕು ಪ್ರದರ್ಶನ: ಸ್ಥಳ–ಸರ್ ಸಿ.ವಿ. ರಾಮನ್ ಆಸ್ಪತ್ರೆ, ಇಂದಿರಾನಗರ, ಬೆಳಿಗ್ಗೆ 11

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಬಿಡಿಎ ಅಕ್ರಮ: ತನಿಖೆಗೆ ಅಡ್ಡಗಾಲು

ಒಂದನೇ ಪುಟದಿಂದ

ಈ ಸಂಬಂಧ 25 ಪ್ರಕರಣಗಳನ್ನು ದಾಖಲಿಸಲು ಅನುಮತಿ ಕೋರಿ ಎಸಿಬಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ನಗರಾಭಿವೃದ್ಧಿ ಇಲಾಖೆಗೆ ನವೆಂಬರ್ ಕೊನೆಯ ವಾರ ಮತ್ತು ಡಿಸೆಂಬರ್ ಮೊದಲ ವಾರ ಸರಣಿ ಪತ್ರಗಳನ್ನು ಬರೆದಿದ್ದಾರೆ. ಆದರೆ, ಯಾವುದೇ ಪ್ರಕರಣದಲ್ಲೂ ಈವರೆಗೆ ತನಿಖೆಗೆ ಅನುಮತಿ ನಿಡಿಲ್ಲ ಎಂದು ತನಿಖಾ ಸಂಸ್ಥೆಯ ಮೂಲಗಳು ತಿಳಿಸಿವೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದಿರುವ ಎಲ್ಲ ಅಕ್ರಮಗಳ ಕುರಿತು ತನಿಖೆ ನಡೆಸುವುದಾಗಿ ಎಸಿಬಿ ದಾಳಿ ನಡೆದ ಮರುದಿನವೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ ನೀಡಿದ್ದರು. ಪ್ರಾಧಿಕಾರದಲ್ಲಿ ನಡೆದಿರುವ ಅಕ್ರಮಗಳ ಕುರಿತು ತಾವೇ ದೂರು ನೀಡಿದ್ದಾಗಿ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಹೇಳಿದ್ದರು. ಆದರೆ, ಒಂದೂವರೆ ತಿಂಗಳಿನಿಂದ ಎಸಿಬಿ ಅಧಿಕಾರಿಗಳು ಸರಣಿಯೋಪಾದಿಯಲ್ಲಿ ಪತ್ರಗಳನ್ನು ಬರೆಯುತ್ತಿದ್ದರೂ ಸರ್ಕಾರದ ಕಡೆಯಿಂದ ಉತ್ತರವೇ ಬಂದಿಲ್ಲ.

20 ಕೆಎಎಸ್ ಅಧಿಕಾರಿಗಳು: ಬಿಡಿಎನಲ್ಲಿ ಭೂಸ್ವಾಧೀನ, ಪರಿಹಾರ ಪಾವತಿ, ನಿವೇಶನಗಳ ಹಂಚಿಕೆ, ಸಗಟು ನಿವೇಶನಗಳ ಮಂಜೂರಾತಿ, ಭೂಸ್ವಾಧೀನಪಡಿಸಿಕೊಂಡಿದ್ದ ಜಮೀನುಗಳ ಡಿನೋಟಿಫಿಕೇಷನ್ ಸೇರಿದಂತೆ ಹಲವು ಬಗೆಯ ಅಕ್ರಮಗಳು ನಡೆದಿರುವುದನ್ನು ಎಸಿಬಿ ತನಿಖಾ ತಂಡ ಪತ್ತೆಮಾಡಿದೆ. ಒಟ್ಟು 20 ಕೆಎಎಸ್ ಅಧಿಕಾರಿಗಳು ಸೇರಿದಂತೆ 70ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ನೌಕರರು ತನಿಖೆಯ ವ್ಯಾಪ್ತಿಗೆ ಬರಲಿದ್ದಾರೆ ಎಂಬ ಮಾಹಿತಿ ಲಭಿಸಿದೆ.

ಕಡತಗಳ ವಿಲೇವಾರಿಯ ನೇರ ಅಧಿಕಾರ ಹೊಂದಿದ್ದ ಕೆಎಎಸ್ ಅಧಿಕಾರಿಗಳ ವಿರುದ್ಧ ಪ್ರಬಲವಾದ ಸಾಕ್ಷ್ಯಾಧಾರಗಳಿವೆ. ಅವುಗಳ ಆಧಾರದಲ್ಲೇ ಎಫ್‌ಐಆರ್ ದಾಖಲು ಮಾಡಲು ಅನುಮತಿ ಕೋರಲಾಗಿದೆ. ಬಿಡಿಎ ಆಯುಕ್ತರು ಮತ್ತು ಅಧ್ಯಕ್ಷರ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದ ಕೆಲವು ಐಎಎಸ್ ಅಧಿಕಾರಿಗಳೂ ತನಿಖೆಯ ವ್ಯಾಪ್ತಿಗೆ ಬರುವ ಸಾಧ್ಯತೆ ಇದೆ ಎಂಬುದು ತನಿಖಾ ಸಂಸ್ಥೆಯ ಮೂಲಗಳಿಂದ ಗೊತ್ತಾಗಿದೆ.

ನೆನಪೋಲೆಗೂ ಉತ್ತರವಿಲ್ಲ: ಅನುಮತಿ ವಿಳಂಬವಾಗುತ್ತಿರುವುದರಿಂದ ತನಿಖೆಗೆ ಹಿನ್ನಡೆಯಾಗುತ್ತಿರುವ ಕುರಿತು ಎಸಿಬಿಯ ಹಿರಿಯ ಅಧಿಕಾರಿಗಳು ನಗರಾಭಿವೃದ್ಧಿ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಕೆಲವು ದಿನಗಳ ಹಿಂದೆ ನೆನಪೋಲೆ ರವಾನಿಸಿದ್ದಾರೆ.

ಹಳೆಯ 24 ಪ್ರಕರಣಗಳು ಬಾಕಿ ಇರುವುದನ್ನು ಪತ್ರದಲ್ಲಿ ಉಲ್ಲೇಖಿಸಿರುವ ತನಿಖಾ ಸಂಸ್ಥೆಯ ಅಧಿಕಾರಿಗಳು, ಹೊಸ 25 ಪ್ರಕರಣಗಳನ್ನೂ ಪ್ರಸ್ತಾಪಿಸಿದ್ದಾರೆ. ಒಟ್ಟು 49 ಪ್ರಕರಣಗಳಲ್ಲೂ ತನಿಖೆ ಮುಂದುವರಿಸಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ನೀಡಿ ಆದೇಶ ಹೊರಡಿಸುವಂತೆ ಕೋರಿದ್ದಾರೆ ಎಂದು ಗೊತ್ತಾಗಿದೆ.

ಎಸಿಬಿ ವಶದಲ್ಲಿ ಕಡತಗಳ ರಾಶಿ

ನವೆಂಬರ್ 19ರಿಂದ 23ರವರೆಗೆ ಬಿಡಿಎ ಕೇಂದ್ರ ಕಚೇರಿ ಮತ್ತು ವಿಭಾಗ ಕಚೇರಿಗಳಲ್ಲಿ ಶೋಧ ನಡೆಸಿದ್ದ ಎಸಿಬಿ ಅಧಿಕಾರಿಗಳು, ಸಾವಿರಾರು ಕಡತಗಳನ್ನು ವಶಪಡಿಸಿಕೊಂಡಿದ್ದರು. ಭ್ರಷ್ಟಾಚಾರ, ಅಕ್ರಮ ನಡೆದಿರುವುದಕ್ಕೆ ಮೇಲ್ನೋಟಕ್ಕೆ ಸಾಕ್ಷ್ಯವಿರುವ ಪ್ರಕರಣಗಳಿಗೆ ಸಂಬಂಧಿಸಿದ ನೂರಾರು ಕಡತಗಳನ್ನು ತನಿಖಾ ತಂಡ ತನ್ನ ಬಳಿ ಇರಿಸಿಕೊಂಡಿದೆ.

'ಕಡತಗಳ ಪರಿಶೀಲನೆ ಮುಕ್ತಾಯಗೊಂಡು ಹಲವು ದಿನಗಳಾಗಿವೆ. ಇನ್ನು ಎಫ್‌ಐಆರ್ ದಾಖಲಿಸಿ ತನಿಖೆ ಮುಂದುವರಿಸಬೇಕಿದೆ. ಕಡತಗಳನ್ನು ಎಸಿಬಿ ಕಚೇರಿಯಲ್ಲೇ ಇರಿಸಿಕೊಂಡು ಸಕ್ಷಮ ಪ್ರಾಧಿಕಾರದ ಅನುಮತಿಗಾಗಿ ಕಾಯಲಾಗುತ್ತಿದೆ' ಎನ್ನುತ್ತವೆ ತನಿಖಾ ಸಂಸ್ಥೆಯ ಮೂಲಗಳು.

ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ವೀರಣ್ಣಾ ಮಾ.ಅರ್ಕಸಾಲಿ

ಶಿಲ್ಪಿಗಳಿಗೆ ಜೀವವಿಮೆ, ಗುರುತಿನ ಚೀಟಿ ನೀಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿರುವ ಶಿಲ್ಪಿಗಳಿಗೆ ಸರ್ಕಾರ ಜೀವವಿಮೆ ನೀಡಬೇಕು. ಅವರಿಗೆ ಮಾಸಾಶನ ಹೆಚ್ಚಿಸಿ, ಕಾನೂನುಬದ್ಧ ವ್ಯವಹಾರಗಳಿಗೆ ಅನುಕೂಲವಾಗುವಂತಹ ಗುರುತಿನ ಚೀಟಿ ವಿತರಿಸಬೇಕು' ಎಂದು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಅಧ್ಯಕ್ಷ ವೀರಣ್ಣಾ ಮಾ.ಅರ್ಕಸಾಲಿ ಮನವಿ ಮಾಡಿದರು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ಸೋಮವಾರ ಹಮ್ಮಿಕೊಂಡಿದ್ದ 16ನೇ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಹಾಗೂ ಗೌರವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಅಕಾಡೆಮಿಯು ರಾಷ್ಟ್ರದ ಉದ್ದಗಲಕ್ಕೂ ಶಿಲ್ಪಕಲೆ ಕುರಿತಾದ ಶಿಬಿರಗಳನ್ನು ಏರ್ಪಡಿಸುವ ಮೂಲಕ ಶಿಲ್ಪಕಲೆಯ ಗತವೈಭವ ಉಳಿಸಲು ಪ್ರಯತ್ನಿಸುತ್ತಿದೆ' ಎಂದರು.

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ನಿರಂಜನ ವಾನಳ್ಳಿ, 'ರಾಜರ ಕಾಲದಲ್ಲಿ ಸಿಕ್ಕಿದಂತಹ ಪ್ರೋತ್ಸಾಹ ಇಂದಿನ ಯುವ ಶಿಲ್ಪ ಕಲಾವಿದರಿಗೆ ಸಿಕ್ಕಲ್ಲಿ, ಜಕಣಾಚಾರಿಯಂತಹ ಶ್ರೇಷ್ಠ ಶಿಲ್ಪಿಗಳು ಹುಟ್ಟುತ್ತಾರೆ. ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಅದ್ಭುತವಾದ ಶಿಲ್ಪಕಲಾಕೃತಿ ರಚಿಸುವ ಕಲಾವಿದರು ರಾಜ್ಯದಲ್ಲಿದ್ದು, ಶಿಲ್ಪಕಲೆ ಕ್ಷೇತ್ರಕ್ಕೆ ಉಜ್ವಲ ಭವಿಷ್ಯವಿದೆ' ಎಂದು ಹೇಳಿದರು.

ಅಕಾಡೆಮಿಯ ರಿಜಿಸ್ಟ್ರಾರ್ ಆರ್.ಚಂದ್ರಶೇಖರ, ರಾಮ್‌ಸನ್ಸ್ ಕಲಾ ಪ್ರತಿಷ್ಠಾನದ ಕಾರ್ಯದರ್ಶಿ ಆರ್.ಜಿ.ಸಿಂಗ್, ಶಿಲ್ಪ ಕಲಾವಿದ ಎಂ.ರಾಮಮೂರ್ತಿ ಮತ್ತು ಶಿಲ್ಪಿ ನಾಗಭೂಷಣ್ ಕಾಳಾಚಾರ್ ಭಾಗವಹಿಸಿದ್ದರು. ಮೈಸೂರಿನ ಕಲಾಶ್ರೀ ಗಣೇಶ್ ಭಟ್ ಮತ್ತು ವೃಂದದವರು ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಜೆ.ಸಿ.ಗಂಗಾಧರ , ನಾಗರಾಜ ಎಸ್‌.ಬೆಟಗೇರಿ, ಮುರುಗೇಶ ಪಿ., ರುದ್ರಪ್ಪ ಮಾನಪ್ಪ ಬಡಿಗೇರ, ಉಲ್ಲಾಸ್ಕರ್ ಡೇ ಅವರಿಗೆ 'ಗೌರವ ಪ್ರಶಸ್ತಿ' ಪ್ರದಾನ ಮಾಡಲಾಯಿತು. (ನಿಂತವರು ಎಡದಿಂದ) ಆರ್‌.ಚಂದ್ರಶೇಖರ, ಆರ್‌.ಜಿ.ಸಿಂಗ್, ನಾಗಭೂಷಣ್ ಕಾಳಾಚಾರ್, ಪ್ರೊ.ನಿರಂಜನ ವಾನಳ್ಳಿ, ವೀರಣ್ಣಾ ಮಾ.ಅರ್ಕಸಾಲಿ, ಎಂ.ರಾಮಮೂರ್ತಿ, ಕೃಷ್ಣಪ್ಪ ರಾಮಪ್ಪ ಬಡಿಗೇರ, ಸುರೇಶ ಕಮ್ಮಾರ್ ಮತ್ತು ಎಂ.ಕೆ ಪತ್ತಾರ್ ಇದ್ದಾರೆ ಪ್ರಜಾವಾಣಿ ಚಿತ್ರ

ವಾರ್ಷಿಕ ಶಿಲ್ಪಕಲಾ ಪ್ರದರ್ಶನ: ಬಹುಮಾನ ವಿತರಣೆ

ಪ್ರಶಾಂತ ಕುಮಾರ್.ಜಿ (ಯಾದಗಿರಿ), ವೆಂಕಟೇಶ್ ಪಿ.ಎಸ್. (ಚಿಕ್ಕಬಳ್ಳಾಪುರ), ಚೇತನ್ ಕುಮಾರ್ ವೈ.ಎಸ್ (ಮೈಸೂರು), ಬಸವರಾಜ ಎಲ್. (ಮೈಸೂರು), ವಿಶ್ವಕರ್ಮ ಆಚಾರ್ಯ (ಚಿಕ್ಕಮಗಳೂರು), ಅರುಣ ಕಮ್ಮಾರ (ಗದಗ), ಅರುಣ್ ಕುಮಾರ್ ಬಿ.ಎಂ. (ಗದಗ), ನಾಗಲಿಗಪ್ಪ ಕಾಳಪ್ಪ ಬಡಿಗೇರ (ಬೆಳಗಾವಿ) ಮತ್ತು ರವಿಶಂಕರ್ (ಮೈಸೂರು) ಅವರಿಗೆ ವಾರ್ಷಿಕ ಶಿಲ್ಪಕಲಾ ಪ್ರದರ್ಶನ ಬಹುಮಾನ ವಿತರಿಸಲಾಯಿತು.

ಗೌರವ ಪ್ರಶಸ್ತಿ ಪ್ರದಾನ: ಜೆ.ಸಿ.ಗಂಗಾಧರ (ಶಿವಮೊಗ್ಗ), ನಾಗರಾಜ ಎಸ್.ಬೆಟಗೇರಿ (ಗದಗ), ರುದ್ರಪ್ಪ ಮಾನಪ್ಪ ಬಡಿಗೇರ (ಧಾರವಾಡ), ಉಲ್ಲಾಸ್ಕರ್ ಡೇ (ಬೆಂಗಳೂರು) ಹಾಗೂ ಮುರುಗೇಶ್ ಪಿ. (ಉಡುಪಿ) ಅವರಿಗೆ 2020ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ನಡೆಯಿತು.

ದ್ವೇಷ ಭಾಷಣ: 'ಸುಪ್ರೀಂ'ಗೆ ಮೊರೆ

ಒಂದನೇ ಪುಟದಿಂದ

ಇಂತಹ ಭಾಷಣಗಳು ದೇಶದ ಏಕತೆ ಮತ್ತು ಸಮಗ್ರತೆಗೆ ಬಹುದೊಡ್ಡ ಬೆದರಿಕೆ. ಅದಲ್ಲದೆ, ಈ ದೇಶದಲ್ಲಿರುವ ಲಕ್ಷಾಂತರ ಮುಸ್ಲಿಂ ಪೌರರ ಜೀವಕ್ಕೂ ಅಪಾಯ ಎದುರಾಗಬಹುದು. ಇಂತಹ ಭಾಷಣಗಳ ಸರಣಿಯೇ ನಡೆದಿದೆ. ಆ ಸರಣಿಗೆ ದೆಹಲಿ ಮತ್ತು ಹರಿದ್ವಾರದ ಭಾಷಣಗಳು ಇತ್ತೀಚಿನ ಸೇರ್ಪಡೆ ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಈ ಹಿಂದೆ ಇಂತಹ ಭಾಷಣ ಮಾಡಿದ್ದ ಸಂದರ್ಭದಲ್ಲಿಯೂ ಭಾಷಣ ಮಾಡಿದವರ ವಿರುದ್ಧ ಭಾರತೀಯ ದಂಡ ಸಂಹಿತೆಯ ಸೆಕ್ಷನ್‌ಗಳ ಅಡಿಯಲ್ಲಿ ಯಾವ ಕ್ರಮವನ್ನೂ ಕೈಗೊಳ್ಳಲಾಗಿಲ್ಲ ಎಂಬುದನ್ನು ಪತ್ರದಲ್ಲಿ ನೆನಪಿಸಲಾಗಿದೆ.

ದೇಶದ ನ್ಯಾಯಾಂಗದ ಮುಖ್ಯಸ್ಥ ಎಂಬ ಅಧಿಕಾರ ಉಪಯೋಗಿಸಿ ಮುಖ್ಯ ನ್ಯಾಯಮೂರ್ತಿ ಅವರು ಅಗತ್ಯ ಕ್ರಮ ಕೈಗೊಳ್ಳಬಹುದು ಎಂಬ ನಿರೀಕ್ಷೆಯಿಂದ ಪತ್ರ ಬರೆಯಲಾಗಿದೆ ಎಂದು ವಕೀಲ ಇಜಾಸ್ ಮಕ್ಬೂಲ್ ಹೇಳಿದ್ದಾರೆ.

ಅದಲ್ಲದೆ, ಬಹುಸಂಸ್ಕೃತಿಯ ದೇಶದ ಕಾರ್ಯನಿರ್ವಹಣೆಗೆ ನ್ಯಾಯಾಂಗದ ಸ್ವಾತಂತ್ರ್ಯ, ಸಾಂಸ್ಥಿಕ ಮೌಲ್ಯಗಳ ರಕ್ಷಣೆ ಮೂಲಭೂತವಾದುದು ಎಂದು ಅವರು ನಂಬಿದ್ದಾರೆ ಎಂದು ಮಕ್ಬೂಲ್ ಹೇಳಿದ್ದಾರೆ.

ಹರಿದ್ವಾರದಲ್ಲಿ ನಡೆದ 'ಧರ್ಮ ಸಂಸತ್'ನಲ್ಲಿ ದ್ವೇಷ ಭಾಷಣ ಮಾಡಿದ ಆರೋಪದಲ್ಲಿ ಜಿತೇಂದ್ರ ನಾರಾಯಣ ತ್ಯಾಗಿ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಆದರೆ, ಅವರ ಬಂಧನ ಆಗಿಲ್ಲ.

ಸಂತರು ಹೇಳಿದ್ದೇನು?

ಒಂದನೇ ಪುಟದಿಂದ

'ನೀವು ಈಗ ಕೇವಲ ಕತ್ತಿಯಿಂದ ಹೋರಾಡಲು ಸಾಧ್ಯವಿಲ್ಲ. ಶತ್ರುವಿನ ಬಳಿ ಇರುವ ಶಸ್ತ್ರಕ್ಕಿಂತಲೂ ಬಲಾಢ್ಯವಾದ ಆಯುಧ ನಿಮ್ಮ ಬಳಿ ಇರಬೇಕು. ನೀವು ಹೊರಗೆ ಹೋಗುವಾಗ ಆಯುಧ ತೆಗೆದುಕೊಂಡು ಹೋಗಿ. ಮನೆಯಲ್ಲೂ ಸದಾ ಒಂದು ಆಯುಧ ಇರಬೇಕು. ಮನೆಗೆ ಯಾರಾದರೂ ನುಗ್ಗಿದರೆ, ಅವರು ಜೀವಂತವಾಗಿ ಹೊರಗೆ ಹೋಗಬಾರದು. ನಿಮ್ಮ ಮೊಬೈಲ್ ಕೇವಲ ₹5,000 ಮೊತ್ತದ್ದಾಗಿರಲಿ, ಆದರೆ ಆಯುಧದ ಬೆಲೆ ಕನಿಷ್ಠ ₹1 ಲಕ್ಷವಾಗಿರಲಿ' ಎಂದು ಸ್ವಾಮಿ ಸಾಗರ ಸಿಂಧು ಮಹಾರಾಜ್ ಕರೆ ನೀಡಿದ್ದಾರೆ.

'ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ, ದೇಶದ ಸಂಪನ್ಮೂಲದ ಮೇಲೆ ಅಲ್ಪಸಂಖ್ಯಾತರಿಗೇ ಪ್ರಾಥಮಿಕ ಹಕ್ಕು ಇರುವುದು ಎಂದು ಹೇಳಿದ್ದರು. ಅದನ್ನು ನಾನು ಓದಿದ್ದೆ. ಆಗ ಸಂಸದನಾಗಿದ್ದು, ಸಂಸತ್ ಭವನದಲ್ಲಿ ಇದ್ದಿದ್ದರೆ ನಾನು ನಾಥೂರಾಮ್ ಗೋಡ್ಸೆಯಾಗುತ್ತಿದ್ದೆ. ಮನಮೋಹನ್ ಸಿಂಗ್ ಎದೆಗೆ ಆರು ಗುಂಡುಗಳನ್ನು ಹಾರಿಸಿ ಕೊಲ್ಲುತ್ತಿದ್ದೆ' ಎಂದು ಧರಂದಾಸ್ ಮಹಾರಾಜ್ ಹೇಳಿದ್ದಾರೆ.

ಇಂದಿನಿಂದ ಎರಡು ದಿನ ಹುಬ್ಬಳ್ಳಿಯಲ್ಲಿ ಬಿಜೆಪಿ ಕಾರ್ಯಕಾರಿಣಿ ಸಭೆ

ಚುನಾವಣೆಯಲ್ಲಿ ಹಿನ್ನಡೆ: ಆತ್ಮಾವಲೋಕನ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಬ್ಬಳ್ಳಿಯಲ್ಲಿ ನಾಳೆಯಿಂದ (ಮಂಗಳವಾರ) ಎರಡು ದಿನಗಳ ಕಾಲ ರಾಜ್ಯ ಘಟಕದ ಪದಾಧಿಕಾರಿಗಳ ಸಭೆ ಮತ್ತು ಕಾರ್ಯಕಾರಿಣಿ ಸಭೆ ನಡೆಯಲಿದೆ. ಇತ್ತೀಚಿನ ಚುನಾವಣೆಗಳಲ್ಲಿ ಹಿನ್ನಡೆ, ಮತಾಂತರ ನಿಷೇಧ ಮಸೂದೆ, ಪಕ್ಷದ ಬಲವರ್ಧನೆ ಮತ್ತು ಮುಂಬರುವ ಚುನಾವಣೆಗಳಲ್ಲಿ ಅನುಸರಿಸಬೇಕಾದ ಕಾರ್ಯತಂತ್ರಗಳ ಕುರಿತು ವಿಸ್ತೃತ ಚರ್ಚೆ ನಡೆಯಲಿದೆ.

ಎರಡು ದಿನ ಸಭೆಯಲ್ಲಿ ಭಾಗವಹಿಸಲು ಪಕ್ಷದ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಅವರು ಸೋಮವಾರ ಸಂಜೆಯೇ ಹುಬ್ಬಳ್ಳಿಗೆ ಆಗಮಿಸಿದರು. ಕಾರ್ಯಕಾರಿಣಿಯಲ್ಲಿ ಭಾಗವಹಿಸಬೇಕಾಗಿದ್ದ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಕೊನೆ ಕ್ಷಣದಲ್ಲಿ ತಮ್ಮ ಕಾರ್ಯಕ್ರಮ ರದ್ದುಪಡಿಸಿದ್ದಾರೆ. ಕೋವಿಡ್‌ಗೆ ಸಂಬಂಧಿಸಿದ ಸಭೆಯಲ್ಲಿ ಭಾಗವಹಿಸಬೇಕಾಗಿರುವುದರಿಂದ ಅವರು ರಾಜ್ಯ ಪ್ರವಾಸ ರದ್ದು ಮಾಡಿದ್ದಾರೆ ಎಂದು ಮೂಲಗಳು ಹೇಳಿವೆ.

ಹಾನಗಲ್ ವಿಧಾನಸಭಾ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯ ಸೋಲಿನ ಕುರಿತು ಆತ್ಮಾವಲೋಕನ ನಡೆಯಲಿದೆ. ಆಡಳಿತದಲ್ಲಿದ್ದೂ ವಿಧಾನಪರಿಷತ್ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗದೇ ಇರುವುದು. ಬಿಜೆಪಿಯ ಭದ್ರಕೋಟೆಗಳೆನಿಸಿದ ಕ್ಷೇತ್ರಗಳಲ್ಲೂ ಕಡಿಮೆ ಅಂತರದಲ್ಲಿ ಗೆಲುವು ಸಾಧಿಸಿರುವುದು ಹಿನ್ನಡೆ ಎಂದೇ ಭಾವಿಸಿದ್ದು, ಈ ಬಗ್ಗೆ ಪರಾಮರ್ಶೆ ನಡೆಯಲಿದೆ.

ಬೆಳಗಾವಿಯಲ್ಲಿ ಶಾಸಕರಾದ ರಮೇಶ ಜಾರಕಿಹೊಳಿ ಮತ್ತು ಬಾಲಚಂದ್ರ ಜಾರಕಿಹೊಳಿ ತಮ್ಮ ಸಹೋದರ ಲಖನ್ ಜಾರಕಿಹೊಳಿಯವರನ್ನು ವಿಧಾನಪರಿಷತ್ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯನ್ನಾಗಿ ಕಣಕ್ಕೆ ಇಳಿಸಿ, ಗೆಲ್ಲಿಸಿಕೊಂಡು ಬಂದಿರುವ ವಿಷಯವೂ ಚರ್ಚೆಗೆ ಬರಲಿದೆ. ಜಾರಕಿಹೊಳಿ ಸಹೋದರರು ಮಾತ್ರವಲ್ಲದೆ,

ಪಕ್ಷದ ಇತರರೂ ಕೈಜೋಡಿಸಿದ್ದರಿಂದ ಪಕ್ಷದ ಅಧಿಕೃತ ಅಭ್ಯರ್ಥಿ ಮಹಾಂತೇಶ ಕವಟಗಿಮಠ ಅವರಿಗೆ ಸೋಲಾಯಿತು ಎಂಬ ಚರ್ಚೆ ಪಕ್ಷದ ವಲಯದಲ್ಲಿದೆ.

ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಹಾಗೂ ಬಿಬಿಎಂಪಿ ಚುನಾವಣೆಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಬಗ್ಗೆಯೂ ಕಾರ್ಯಕಾರಿಣಿ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಮೂಲಗಳು ಹೇಳಿವೆ.

ಅಲ್ಲದೆ, ಬೆಳಗಾವಿ ಅಧಿವೇಶನದ ವಿಧಾನಸಭೆಯಲ್ಲಿ ಮತಾಂತರ ನಿಷೇಧ ಮಸೂದೆಯನ್ನು ಅಂಗೀಕರಿಸಿದ ಬಗ್ಗೆ ಮುಂಬರುವ ಜಂಟಿ ಅಧಿವೇಶನದಲ್ಲಿ ವಿಧಾನಪರಿಷತ್ತಿನಲ್ಲಿ ಮಸೂದೆಗೆ ಅಂಗೀಕಾರ ಪಡೆಯುವ ಬಗ್ಗೆ ಚರ್ಚೆ ನಡೆಯಲಿದೆ.

ಬಾಕಿ ಇರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಹಾಗೂ ಬಿಬಿಎಂಪಿ ಚುನಾವಣೆಗಳನ್ನು ಎದುರಿಸುವ ಬಗ್ಗೆಯೂ ಚರ್ಚೆ ನಡೆಯಲಿದೆ. 2023 ರ ವಿಧಾನಸಭಾ ಚುನಾವಣೆಗೆ ಸಿದ್ಧತೆ ನಡೆಸಲು ಪ್ರಾಥಮಿಕ ಹಂತದ ಸಮಾಲೋಚನೆ ನಡೆಯಲಿದೆ.

ಬಿ.ಎಸ್.ಯಡಿಯೂರಪ್ಪ ಮತ್ತು ಬಿ.ವೈ.ವಿಜಯೇಂದ್ರ ಕುಟುಂಬ ಸಮೇತ ದುಬೈಗೆ ಪ್ರವಾಸ ತೆರಳಿರುವುದರಿಂದ ಸಭೆಯಲ್ಲಿ ಭಾಗವಹಿಸುವುದಿಲ್ಲ ಎಂದೂ ಮೂಲಗಳು ತಿಳಿಸಿವೆ

ಹಿಂದಿ ಹೇರಿಕೆ ವಿರುದ್ಧ ಧ್ವನಿ ಎತ್ತಿ: ಎಚ್‌ಡಿಕೆ

ರಾಮನಗರ: 'ಕೇಂದ್ರ ಸರ್ಕಾರ ಪದೇ ಪದೇ ಕನ್ನಡ ವಿರೋಧಿ ನಿಲುವು ಪ್ರದರ್ಶಿಸುತ್ತಿದ್ದು, ಕನ್ನಡವನ್ನು ಕಡೆಗಣಿಸುವ ಹುನ್ನಾರ ನಡೆದಿದೆ. ಈ ಬಗ್ಗೆ ರಾಜ್ಯದ ಜನರು ಧ್ವನಿ ಎತ್ತಬೇಕು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಬಿಡದಿಯ ಕೇತಗಾನಹಳ್ಳಿಯಲ್ಲಿ ಸೋಮವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, 'ಭಾನುವಾರ ನಡೆದ ಯುಜಿಸಿ-ನೆಟ್ ಪರೀಕ್ಷೆಯ ಕನ್ನಡ ಐಚ್ಛಿಕ ವಿಷಯದ ಪ್ರಶ್ನೆಪತ್ರಿಕೆಯಲ್ಲಿ ಹಿಂದಿ ಪ್ರಶ್ನೆಗಳು ಗೋಚರಿಸಿರುವುದು ಕನ್ನಡದ ಬಗ್ಗೆ ಕೇಂದ್ರದ ನಿರ್ಲಕ್ಷ್ಯ ಮತ್ತು

ಕುಮಾರಸ್ವಾಮಿ

ಹಿಂದಿ ಹೇರಿಕೆಯ ತಂತ್ರವಾಗಿದೆ. ಉದ್ದೇಶಪೂರ್ವಕವಾಗಿಯೇ ಈ ಕೃತ್ಯಗಳನ್ನು ಎಸಗಲಾಗುತ್ತಿದೆ. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದ ಬಳಿಕ ಈ ಕೆಲಸ ಹೆಚ್ಚುತ್ತಿದೆ' ಎಂದು ಒತ್ತಾಯಿಸಿದರು.

ಸೋಮವಾರ ನಡೆದ 58 ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳು ಹೆಚ್ಚಿನ ಸ್ಥಾನದಲ್ಲಿ ಗೆಲ್ಲಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಿ.ಎಂ ಬದಲಾವಣೆ ಇಲ್ಲ: ಅರುಣ್ ಸಿಂಗ್

ಪ್ರಜಾವಾಣಿ ವಾರ್ತೆ

ಅರುಣ್ ಸಿಂಗ್

ಹುಬ್ಬಳ್ಳಿ: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಿರೀಕ್ಷೆ ಮೀರಿ ಕೆಲಸ ಮಾಡುತ್ತಿದ್ದಾರೆ. ಅವರೊಬ್ಬ ಪ್ರಾಮಾಣಿಕ ಹಾಗೂ ಬದ್ಧತೆ ಇರುವ ಮುಖ್ಯಮಂತ್ರಿ. ಯಾವುದೇ ಕಾರಣಕ್ಕೂ ಅವರನ್ನು ಬದಲಾವಣೆ ಮಾಡುವುದಿಲ್ಲ. ಮುಂದಿನ ವಿಧಾನಸಭಾ ಚುನಾವಣೆ ಅವರ ನೇತೃತ್ವದಲ್ಲಿಯೇ ನಡೆಯಲಿದೆ' ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಸ್ಪಷ್ಟಪಡಿಸಿದರು.

ನಗರದಲ್ಲಿ ಡಿ. 28 ಮತ್ತು 29ರಂದು ನಡೆಯಲಿರುವ ಬಿಜೆಪಿ ರಾಜ್ಯ ಕಾರ್ಯಕಾರಿಣಿಯಲ್ಲಿ ಪಾಲ್ಗೊಳ್ಳಲು ಸೋಮವಾರ ಸಂಜೆ ನಗರಕ್ಕೆ ಬಂದ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು. 'ಯಡಿಯೂರಪ್ಪ ಅವರು ಸ್ವಇಚ್ಛೆಯಿಂದ ಸಿ.ಎಂ ಸ್ಥಾನಕ್ಕೆ ರಾಜೀನಾಮೆ ನೀಡಿದರು' ಎಂದು ಪ್ರಶ್ನೆಯೊಂದಕ್ಕೆ ಅವರು ಪ್ರತಿಕ್ರಿಯಿಸಿದರು.

'ಗುತ್ತಿಗೆದಾರರು ಮಾಡಿರುವ ಶೇ 40ರಷ್ಟು ಕಮಿಷನ್ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಸರ್ಕಾರ ಪ್ರಾಮಾಣಿಕವಾಗಿದ್ದು, ಕೆಲ ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ಪಾಲ್ಗೊಂಡಿರಬಹುದು. ಅವರ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿದೆ' ಎಂದು ಹೇಳಿದರು.

ಸಮಿತಿ ರಚನೆ:

'ವಿಧಾನಪರಿಷತ್ ಚುನಾವಣೆಯಲ್ಲಿ ಪಕ್ಷವು ಬೆಳಗಾವಿಯಲ್ಲಿ ಸೋಲಲು ಕಾರಣವಾದ ಅಂಶಗಳೇನು ಎಂದು ತಿಳಿಯಲು ಸಮಿತಿ ರಚನೆ ಮಾಡುತ್ತೇವೆ. ಅದಕ್ಕೆ ಪೂರಕವಾಗಿ ಸ್ಥಳೀಯರ ಅಭಿಪ್ರಾಯ ಸಹ ಸಂಗ್ರಹಿಸಲಾಗುವುದು' ಎಂದು ಹೇಳಿದರು.

'ಒಗ್ಗಟ್ಟಿಲ್ಲದೆ ಕಾಂಗ್ರೆಸ್ ಇಬ್ಭಾಗ'

'ರಾಜ್ಯ ಕಾಂಗ್ರೆಸ್‌ನಲ್ಲಿ ಒಗ್ಗಟ್ಟು ಇಲ್ಲದಿರುವುದರಿಂದ ಇಬ್ಭಾಗವಾಗಿದೆ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವೆ ಮುಂದಿನ ಮುಖ್ಯಮಂತ್ರಿ ಸ್ಥಾನಕ್ಕೆ ಈಗಲೇ ಕಿತ್ತಾಟ ನಡೆದಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ತುಷ್ಟೀಕರಣದೊಂದಿಗೆ, ಜಾತಿಗಳನ್ನು ಒಡೆದಾಳುವ ರಾಜಕಾರಣ ಮಾಡಿದ್ದರು. ಇದರಿಂದಾಗಿ ಅವರಿಗೆ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋಲಾಗಿದೆ. ಕೇಂದ್ರದ ಕಾಂಗ್ರೆಸ್ ನಾಯಕರು ಸಹ ವಿಫಲರಾಗಿದ್ದಾರೆ. ಅವರಿಂದ ರಾಜ್ಯದ ನಾಯಕರಿಗೆ ಯಾವುದೇ ಸ್ಫೂರ್ತಿ ಸಿಗುತ್ತಿಲ್ಲ. ರಾಹುಲ್ ಗಾಂಧಿ ಮಾತನಾಡಿದರೆ, ಕಾಂಗ್ರೆಸ್‌ಗೆ ಸಿಗುವ ಮತವೂ ಕಳೆದು ಹೋಗುತ್ತದೆ' ಎಂದು ಅರುಣ್ ಸಿಂಗ್ ವ್ಯಂಗ್ಯವಾಡಿದರು.

'ಬಸವರಾಜ ಬೊಮ್ಮಾಯಿಗೆ ಕೇಂದ್ರ ಸಚಿವರಾಗುವ ಯೋಗವಿದೆ' ಎನ್ನುವ ಸಚಿವ ಮುರುಗೇಶ ನಿರಾಣಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅರುಣ್ ಸಿಂಗ್, 'ಈ ಕುರಿತು ನಿರಾಣಿ ಜೊತೆ ಮಾತನಾಡಿದ್ದೇನೆ. ತಮ್ಮ ಹೇಳಿಕೆ ತಿರುಚಲಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ' ಎಂದರು.

ಸಾಮೂಹಿಕ ಅತ್ಯಾಚಾರ: ಮತ್ತೆ ಇಬ್ಬರು ವಶಕ್ಕೆ

ಪ್ರಜಾವಾಣಿ ವಾರ್ತೆ

ಧಾರವಾಡ: ಬಾಲಕಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರು ಸೋಮವಾರ ಮತ್ತೆ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

'ಪ್ರಕರಣಕ್ಕೆ ಸಂಬಂಧಪಟ್ಟಂತೆ ಭಾನುವಾರ 17 ವರ್ಷದ ಆರು ಬಾಲಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು. ಈಗ ಮತ್ತಿಬ್ಬರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆವಿಕಂ ವಿಚಾರಣೆ ಸಂಖ್ಯೆ: ಬೆವಿಕಂ/ಬಿಸಿಪಿ-1338/2021-22ರ ಮೂಲಕ ಬೆವಿಕಂನ ಅಧಿಕಾರಿಗಳ ದಿನನಿತ್ಯಕ್ಕೆ ಅಗತ್ಯವಿರುವ ಬಾಡಿಗೆ ವಾಹನಗಳನ್ನು 2 ವರ್ಷಗಳ ಅವಧಿಗೆ **ಪಡೆಯಲು** ಮತ್ತು ವಿಚಾರಣೆ ಸಂಖ್ಯೆ: ಬೆವಿಕಂ/ಬಿಸಿಪಿ-1339/2021-22ರ ಮೂಲಕ **ಕಾರ್ಯ ಮತ್ತು ಪಾಲನಾ ಸೇವಾ ಕೇಂದ್ರಗಳಿಗೆ (24X7) ಅಗತ್ಯವಿರುವ ಬಾಡಿಗೆ ವಾಹನಗಳನ್ನು 2 ವರ್ಷಗಳ ಅವಧಿಗೆ ಪಡೆಯಲು** ಟೆಂಡರ್‌ಗಳನ್ನು ಆಹ್ವಾನಿಸಿದೆ. ಬಿಡ್ ದಾಖಲೆಗಳ ಲಭ್ಯತೆ: ದಿನಾಂಕ: **29.12.2021, 15:00 ಗಂಟೆಗಳ ನಂತರ 13.01.2022, 15:00 ಗಂಟೆಗಳವರೆಗೆ.** ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **13.01.2022, 15:00 ಗಂಟೆಗಳವರೆಗೆ.** ಬಿಡ್ ದಾಖಲೆಗಳನ್ನು ತೆರೆಯುವುದು: ದಿನಾಂಕ: **14.01.2022, 16:00 ಗಂಟೆಗೆ.**

ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **http://eproc.karnataka.gov.in**ನಿಂದ ಪಡೆಯಬಹುದು. ಆಸಕ್ತ ಬಿಡ್ದುದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಬಿಡ್ದುದಾರರು ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ **+91-8046010000, +91-8068948777,** ಅನ್ನು ಅಥವಾ ಇ-ಮೇಲ್ **support@eprochelpdesk.com** ಮೂಲಕ ಸಂಪರ್ಕಿಸಿ ಸಹಾಯ ಪಡೆಯಬಹುದು.

ಸಹಿ/- ಪ್ರಧಾನ ವ್ಯವಸ್ಥಾಪಕರು(ವಿದ್ಯುತ್),
ಖರೀದಿ, ಬೆವಿಕಂ., 4ನೇ ಮಹಡಿ,
ಕೆ.ಆರ್.ವೃತ್ತ, ಬೆಂಗಳೂರು-560 001.
ದೂ.: 080-22354939, ಫ್ಯಾಕ್ಸ್: 080-22352485.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಕರ್ನಾಟಕ ಸರ್ಕಾರ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ

(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
ನಿರ್ದೇಶಕರು ಹಾಗೂ ಡೀನ್‌ರವರ ಕಚೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು - 560 002.
ದೂ: 080-26700810, ಟೆಲಿಫ್ಯಾಕ್ಸ್: 080-26704342
ಇ-ಮೇಲ್: director_bmcri@yahoo.co.in ವೆಬ್‌ಸೈಟ್: www.bmcribengaluru.karnataka.gov.in.

ಸಂಖ್ಯೆ: ಬೆಂವೈವಿಸಂಸಂ/ಆಶಾ/187/2021-22 ದಿನಾಂಕ: 27-12-2021

ಅಧಿಸೂಚನೆ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇಲ್ಲಿನ ನಿರ್ದೇಶಕರು ಹಾಗೂ ಡೀನ್ ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಸದರಿ ಹುದ್ದೆಗೆ ಈ ಸಂಸ್ಥೆಯಲ್ಲಿನ ಅರ್ಹ ಅಭ್ಯರ್ಥಿಗಳು ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ. ಅರ್ಜಿ & ಇತರೆ ವಿವರಗಳನ್ನು ಈ ಸಂಸ್ಥೆಯ ಅಂತರ್ಜಾಲ **www.bmcribengaluru.karnataka.gov.in** ದಿಂದ ಪಡೆದುಕೊಳ್ಳಬಹುದಾಗಿರುತ್ತದೆ. ಅರ್ಜಿದಾರರು ಅರ್ಜಿಯ ಜೊತೆಗೆ ನಿರ್ದೇಶಕರು ಹಾಗೂ ಡೀನ್, ಬಿಎಂಸಿಆರ್‌ಐ, ಬೆಂಗಳೂರು ಇವರ ಹೆಸರಿನಲ್ಲಿ ರೂ. 5,000/- ಗಳ ಡಿಮ್ಯಾಂಡ್ ಡ್ರಾಫ್ಟ್ (ಮರುಪಾವತಿಸಲಾಗುವುದಿಲ್ಲ) ಅನ್ನು ಪಡೆದು ಪೂರ್ಣವಾದ ಅರ್ಜಿಯ ಜೊತೆಗೆ ಎಲ್ಲಾ ದಾಖಲೆಗಳೊಂದಿಗೆ ಮುಖ್ಯ ಆಡಳಿತಾಧಿಕಾರಿಯವರ ಕಛೇರಿ, ಬಿಎಂಸಿಆರ್‌ಐ, ಬೆಂಗಳೂರು ಇಲ್ಲಿಗೆ **ದಿನಾಂಕ: 03.01.2022 ರಂದು ಸಂಜೆ 5.30 ಗಂಟೆಯೊಳಗೆ** ಸಲ್ಲಿಸತಕ್ಕದ್ದು. ಸಂದರ್ಶನ ಸ್ಥಳ, ದಿನಾಂಕ ಮತ್ತು ಸಮಯವನ್ನು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು.

ಸಹಿ/- ಸದಸ್ಯ ಕಾರ್ಯದರ್ಶಿ, ಆಯ್ಕೆ ಸಮಿತಿ
ಮತ್ತು ಮುಖ್ಯ ಆಡಳಿತಾಧಿಕಾರಿ, ಬಿಎಂಸಿಆರ್‌ಐ

DIPR/DDU/Avanti/2558/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ನಮ್ಮ ಮೆಟ್ರೋ namma metro — Azadi Ka Amrit Mahotsav

(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ಇ-ಮೇಲ್: contactus@bmrc.co.in ವೆಬ್‌ಸೈಟ್: www.bmrc.co.in
ನಂ: ಬಿಎಂಆರ್‌ಸಿಎಲ್/ವೈಟ್‌ಫೀಲ್ಡ್, ಹೆಬ್ಬಗೋಡಿ & ಕೊತ್ತನೂರು ಡಿಪೋ/ ಎಂ&ಪಿ-ಎಲ್-18(ಆರ್) ದಿನಾಂಕ: 27.12.2021

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ ಇವರು, **ಬಿಎಂಆರ್‌ಸಿಎಲ್ ಹಂತ-2 ಯೋಜನೆಯ ವೈಟ್‌ಫೀಲ್ಡ್, ಹೆಬ್ಬಗೋಡಿ ಮತ್ತು ಕೊತ್ತನೂರು ಡಿಪೋಗಳಿಗೆ ಪ್ರತಿಯೊಂದು ಸೆಟ್ ಪೂರ್ಣ ಸ್ವಯಂಚಾಲಿತ ರೈಲು ಸ್ವಚ್ಛಗೊಳಿಸುವ ಘಟಕದ ವಿನ್ಯಾಸ, ತಯಾರಿಕೆ, ಸರಬರಾಜು, ಅಳವಡಿಕೆ, ಪರೀಕ್ಷೆ ಮತ್ತು ಚಾಲನೆ ಗಾಗಿ** ಸ್ಥಳೀಯ ಸ್ಪರ್ಧಾತ್ಮಕ ಬಿಡ್ಡಿಂಗ್(ಎಲ್‌ಸಿಬಿ)ಮೂಲಕ ಅರ್ಹ ತಯಾರಕರು ಅಥವಾ ತಯಾರಕರ ಭಾರತೀಯ ಅಂಗಸಂಸ್ಥೆ ಅಥವಾ ಓಇಎಂನ ಅಧಿಕೃತ ಭಾರತೀಯ ತಯಾರಕರ ಏಕೈಕ ಟೆಂಡರ್‌ದಾರರು ಅಥವಾ ಉದ್ಯಮ/ ಒಕ್ಕೂಟವಾಗಿ (ಸಮೂಹ) ರವರಿಂದ ಏಕಹಂತ, ದ್ವಿ ಲಕೋಟೆ ಪದ್ಧತಿಯಲ್ಲಿ ಮೊಹರಾದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ದಸ್ತಾವೇಜುಗಳ ಬೆಲೆ(ಹಿಂತಿರುಗಿಸಲಾಗದ) **ರೂ.11,800/-** [10,000+1,800 (ಜಿಎಸ್‌ಟಿ@18%)]. ದಸ್ತಾವೇಜುಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡುವ ಅವಧಿ: **29.12.2021** ರಿಂದ **19.01.2022 ರ ಮಧ್ಯರಾತ್ರಿವರೆಗೆ.** ಸ್ಪಷ್ಟೀಕರಣ ಕೋರಲು ಕೊನೆಯ ದಿನಾಂಕ: **23.01.2022.** ಬಿಡ್‌ಪೂರ್ವ ಸಭೆ: **27.01.2022.** ಟೆಂಡರ್ ಸಲ್ಲಿಸಲು ದಿನಾಂಕ: **17.02.2022, ಬೆಳಿಗ್ಗೆ 11.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆವರೆಗೆ.** ಟೆಂಡರ್ ತೆರೆಯುವ ದಿನಾಂಕ: **17.02.2022 ಮಧ್ಯಾಹ್ನ 3.30 ಗಂಟೆಗೆ.** ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್ **www.bmrc.co.in** ಗೆ ಭೇಟಿನೀಡಿ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001
ದೂರವಾಣಿ: 080-22215601, 22215801 ಫ್ಯಾಕ್ಸ್: 22215602

ಸಂಖ್ಯೆ:ಡಿವೈಇಎಸ್/ತಾಂ.ಶಾಖೆ/ಕ್ರಿ.ನಿ./96/2021-22 ದಿನಾಂಕ:27.12.2021

ಅಲ್ಪಾವಧಿ ಟೆಂಡರ್ ಪ್ರಕಟಣೆ - (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಉಪ ನಿರ್ದೇಶಕರು (ಆಡಳಿತ) ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು-560001 ಕರ್ನಾಟಕ ಇವರು **"ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಕ್ರೀಡಾಂಗಣಗಳಲ್ಲಿ ದೈನಂದಿನ ಕ್ರೀಡಾ ತರಬೇತಿಗೆ ಅಗತ್ಯವಾದ ಕ್ರೀಡಾ ತರಬೇತಿ ಸಾಮಗ್ರಿಗಳನ್ನು ಖರೀದಿಸಲು"** ಇ-ಟೆಂಡರ್ ಮೂಲಕ ಗುತಿಗೆದಾರರನ್ನು ನೇಮಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದೆ. **ಅಂದಾಜು ಮೊತ್ತ : ರೂ. 98,61,000/- ಇಎಂಡಿ ಮೊತ್ತ : ರೂ. 1,97,220/-** ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು. ಟೆಂಡರ್ ದಾಖಲೆಗಳನ್ನು ಉಚಿತವಾಗಿ ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದು. 1) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **08.01.2022ರ ಸಂಜೆ 4.00 ಗಂಟೆಯವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10.01.2022ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಾಣಿಸಿದ ವಿಳಾಸ ಸಂಪರ್ಕಿಸಬಹುದು.

ಸಹಿ/- ಉಪ ನಿರ್ದೇಶಕರು (ಆಡಳಿತ),
ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.

ವಾಸಾಸಂಇ/ಬೆಂನ/ಜಿಎ/2545/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಬೊಮ್ಮನಹಳ್ಳಿ
ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು-560068.

ಸಂ: ಕಾಪಾಅ/ಬೊಯೋವಿ/ಟೆಂಡರ್-09/2020-21 ದಿನಾಂಕ: 27.12.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿ-ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ - ಯೋಜನೆ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಬಿಬಿಎಂಪಿ ವಾರ್ಡ್ ಸಂಖ್ಯೆ 175ರಲ್ಲಿ ಸಮುದಾಯ ಭವನದ ನಿರ್ಮಾಣ ಕಾಮಗಾರಿ (2ನೇ ಕರೆ)	900.00

ಇಎಂಡಿ ಘೋಷಣೆ: ಹಣಕಾಸು ಇಲಾಖೆಯ ಆದೇಶ ಸಂಖ್ಯೆ : FD 675 EXP-12/2020. ದಿ:22.12.2020 ರಂತೆ 1) ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳು ದೊರೆಯುವ ದಿನಾಂಕ: **30.12.2021ರಿಂದ** 2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **27.01.2022ರ ಸಂಜೆ 4.00 ಗಂಟೆಯವರೆಗೆ** 3) ಪೂರ್ವಭಾವಿ ಸಭೆ ದಿನಾಂಕ : **07.01.2022, ಬೆಳಗ್ಗೆ 11.00 ಗಂಟೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **28.01.2022, ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಇ-ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ: 080-22441076ನ್ನು ಸಂಪರ್ಕಿಸಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ - ಯೋಜನೆ ವಿಭಾಗ.

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ಟೆ.ಪ್ರ.ಸಂ: ಕಾಇಂ/ಗ್ರಾಕುನೀ&ನೈವಿಉ/ಟೆಂಡರ್ ನಂ.15/2021-22/ಎಇಂ-2/1844 ದಿನಾಂಕ: 23.12.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ "ಜಲ್ ಜೀವನ್ ಮಿಷನ್" ಯೋಜನೆಯಡಿಯಲ್ಲಿ ಮನೆ ಮನೆಗೆ ನಳ್ಳಿ ಸಂಪರ್ಕದ ಮೂಲಕ ನೀರು ಸರಬರಾಜು ಮಾಡುವ ಅಂದಾಜು ಮೊತ್ತ ರೂ. 37.00 ರಿಂದ 86.00 ಲಕ್ಷಗಳ 4 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರನ್ನು **(Standard Tender Documents for Procurement of Works)** ನ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು **Government of Karnataka e-procurement portal website https://www.eproc.karnataka.gov.in** ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು. (1) ಇ-ಟೆಂಡರ್ ಡಾಕ್ಯುಮೆಂಟ್‌ಗಳನ್ನು ಪಡೆದುಕೊಳ್ಳುವ **ದಿನಾಂಕ: 23.12.2021 ರಿಂದ.** (2) ಭರ್ತಿ ಮಾಡಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 03.01.2022 ರ 4.00 (PM) ಗಂಟೆಯವರೆಗೆ.** (3) ಸ್ವೀಕರಿಸಿದ ಟೆಂಡರುಗಳನ್ನು ತೆರೆಯುವ **ದಿನಾಂಕ: 04.01.2022 ರ 4.30 (PM) ಗಂಟೆಯ ನಂತರ.**

ಇನ್ನಿತರೆ ನಿಬಂಧನೆಗಳು, ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ಅಂತರ್ಜಾಲದ ವೆಬ್‌ಸೈಟ್: **https://www.eproc.karnataka.gov.in** ನಲ್ಲಿ ಪಡೆಯಬಹುದಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ನವರಿಂದ ಪಡೆಯಬಹುದಾಗಿದೆ.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ

ವಾಸಾಇ/ಸನಿಉ/ಎಂಸಿಎ/496/21-22 ದಿ: 27.12.2021

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಚೇರಿ, ಪೂನಾ ಬೆಂಗಳೂರು ರಸ್ತೆ, ನವನಗರ, ಹುಬ್ಬಳ್ಳಿ
E-mail : seepmc.hescom@gmail.com
eep3.hescom@gmail.com Website : www.hescom.karnataka.gov.in

Corporate Identity Number (CIN) : 31401KA2002SGC030437

No: HESCOM/SEE(PMC)/EE-P3/AEE-1&2/2021-22/CYS-4547 Date:24 DEC 2021

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಅಧೀಕ್ಷಕ ಇಂಜನೀಯರ್ (ವಿ), ಪಿಎಮ್‌ಸಿ, ನಿಗಮ ಕಛೇರಿ, ಹು.ವಿ.ಸ.ಕಂ.ನಿ., ಹುಬ್ಬಳ್ಳಿರವರಿಂದ ಪೂರ್ಣ ಗುತ್ತಿಗೆ ಆಧಾರದಡಿಯಲ್ಲಿ ಕೆಳಕಂಡ ಕಾಮಗಾರಿಗೆ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಅ. ಕ್ರಮ	ಯೋಜನೆಗಳು	ಬಿಡ್ ಇಂಡೆಂಟ್ ಸಂಖ್ಯೆ
1	ಎಸ್.ಡಿ.ಪಿ. ಕಾಮಗಾರಿ	HESCOM/2021-22/EL/WORK_INDENT 5506 to 5518, 5246 to 5260, 5448& 5497 to 5501(34 Packages)
2	ಗಂಗಾ ಕಲ್ಯಾಣ ಯೋಜನೆಯಡಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು.	HESCOM/2021-22/EL/WORK_INDENT5350, 5357 to 5362, 5364 to 5383 & 5496. (27 Packages)
3	ಪಂಪ್‌ಸೆಟ್ ಮಾರ್ಗಗಳ ಮೇಲೆ ಬರುವತೋಟದ ಮನೆಗಳಿಗೆ ಸಿಂಗಲ್ ಫೇಸ್ ಪರಿವರ್ತಕಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸುವುದು.	HESCOM/2021-22/EL/WORK_INDENT5502

ಸದರಿ ಟೆಂಡರಗಳ ಪೂರ್ಣ ವಿವರಗಳನ್ನು ವೆಬ್‌ಸೈಟ್, www.eproc.karnataka.gov.in ರಲ್ಲಿ ದಿನಾಂಕ: **28.12.2021** ರಂದು ಅಥವಾ ನಂತರ ಪಡೆಯಬಹುದು.

ಸಹಿ/- ಅಧೀಕ್ಷಕ ಇಂಜನೀಯರರು(ವಿ)
(ಪಿಎಮ್‌ಸಿ), ಹೆಸ್ಕಾಂ, ಹುಬ್ಬಳ್ಳಿ.

ವಾ.ಸಾ.ಇ/ಧಾ/798/2021-22/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,

ಬಾಗಲಕೋಟೆ ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ: 08354- 235042 ಇ-ಮೇಲ್: bgkeezpe@yahoo.com ಫ್ಯಾಕ್ಸ್: 08354-235043

ಸಂ: ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ-2/ಟೆಂಡರ್/2021-22/4520
ದಿನಾಂಕ: 24.12.2021

-: ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ದ್ವಿ-ಲಕೋಟೆ ಟೆಂಡರ್ ಪ್ರಕಟಣೆ:-

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2021-22ನೇ ಸಾಲಿನ ಮಾನ್ಯ 5054-ರಡಿ ಮುಖ್ಯಮಂತ್ರಿಗಳ ವಿಶೇಷ ಮಂಜೂರಾತಿ ಕಾರ್ಯಕ್ರಮದಡಿ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲಿನ ರಸ್ತೆ ಮತ್ತು ಸೇತುವೆ ಕಾಮಗಾರಿಗಳು ಯೋಜನೆ ಅಡಿಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಪ್ಯಾಕೇಜ್ ಕಾಮಗಾರಿಗೆ Standard Tender Document KW-3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ದ್ವಿ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತಿಗೆಯನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಗಳ ಇಂಡೆಂಟ್ ನಂ:: 87512, 87513 & 87514 ಕಾಮಗಾರಿ ವಿವರ, ಕಾಮಗಾರಿ ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಕಾಮಗಾರಿ ಟೆಂಡರ್ ಮೊತ್ತ (ರೂ.75.00 ರಿಂದ 100.00 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತದ ವಿವರಗಳು ಇ-ಪೋರ್ಟಲ್‌ನಲ್ಲಿ ಇದ್ದಂತೆ.

ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್-ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ:10.01.2022 ರ ಸಾಯಂಕಾಲ 17.30 ಗಂಟೆವರೆಗೆ.

ಪ್ರೀ-ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ: 07.01.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 12.01.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ http://www.eprocurment.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ

DIPR/BGK/RO-NO-434/MCA/2021-22

ಕರ್ನಾಟಕ ಸರ್ಕಾರ

ಆಯುಕ್ತರವರ ಕಛೇರಿ, ಬಳ್ಳಾರಿ ಮಹಾನಗರಪಾಲಿಕೆ,

ಬಳ್ಳಾರಿ ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ-583101.
ದೂರವಾಣಿ ಸಂಖ್ಯೆ : 08392-273479/278168 ಫ್ಯಾಕ್ಸ್: 08392-273477
ವೆಬ್‌ಸೈಟ್: www.bellarycity.mrc.gov.in ಇ-ಮೇಲ್: bellarycommissioner@yahoo.co.in

ಸಂಖ್ಯೆ: ಮನಪಾಬ/ತಾಂ/ಎಂ.ಜಿ.ಎನ್.ವಿ.ವೈ/ಪ್ಯಾ-1,5,7/2021-22
ದಿನಾಂಕ:23.12.2021

ಟೆಂಡರ್‌ಗಾಗಿ ಆಹ್ವಾನ (ಎಂ.ಜಿ.ಎನ್.ವಿ.ವೈ)
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ 2020-21ನೇ ಸಾಲಿನ ಬಳ್ಳಾರಿ ಮಹಾನಗರಪಾಲಿಕೆವತಿಯಿಂದ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಗಾಗಿ (ಎಂ.ಜಿ.ಎನ್.ವಿ.ವೈ) ಅನುದಾನದಲ್ಲಿ 03 ಪ್ಯಾಕೇಜ್‌ಗಳಲ್ಲಿನ ಒಟ್ಟು 11 ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಕೆ.ಡಬ್ಲ್ಯೂ-4 ರಂತೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಅಹ್ವಾನಿಸಲಾಗಿರುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ https:eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಂಯು www.ballaricity.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

01. ಇ-ಟೆಂಡರ್ ಅರ್ಜಿ ಡೌನ್‌ಲೋಡ್ ಮಾಡುವ ಪ್ರಾರಂಭ ದಿನಾಂಕ : **27.12.2021 - 10.00 AM.** 02. ಪೂರ್ವಭಾವಿ ಸಭೆ ದಿನಾಂಕ : **11.01.2022 – 12.30 PM.** 03. ಇ-ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : **27.01.2022 – 17.30 PM.** 04. ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ : **29.01.2022 – 11.00 AM.** 05. ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: **07.02.2022 – 11.00 AM**

1. **ಕಾಮಗಾರಿಗಳ ಸಂಖ್ಯೆ:** 4. **ಇಂಡೆಂಟ್ ಸಂಖ್ಯೆ:** DMA/2021-22/RD/ Work_Indent 123041. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 464.50. **ಕಾಮಗಾರಿ ಪೂರ್ಣಗೊಳಿಸುವ ಅವಧಿ:** 10 ತಿಂಗಳು (ಮಳೆಗಾಲ ಸೇರಿ)
2. **ಕಾಮಗಾರಿಗಳ ಸಂಖ್ಯೆ:** 1. **ಇಂಡೆಂಟ್ ಸಂಖ್ಯೆ:** DMA/2021-22/ RD/ Work_ Indent 122957. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 900.00. **ಕಾಮಗಾರಿ ಪೂರ್ಣಗೊಳಿಸುವ ಅವಧಿ:** 10 ತಿಂಗಳು (ಮಳೆಗಾಲ ಸೇರಿ)
3. **ಕಾಮಗಾರಿಗಳ ಸಂಖ್ಯೆ:** 6. **ಇಂಡೆಂಟ್ ಸಂಖ್ಯೆ:** DMA/2020-21/ OW/ Work _ Indent 115241/Call-2. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 700.28. **ಕಾಮಗಾರಿ ಪೂರ್ಣಗೊಳಿಸುವ ಅವಧಿ:** 10 ತಿಂಗಳು (ಮಳೆಗಾಲ ಸೇರಿ)

ಲೊಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ವೆಬ್‌ಸೈಟ್ https:eproc.karnataka.gov.in ನಲ್ಲಿ ಇ-ಡೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಕಛೇರಿಯ ದೂರವಾಣಿ ಸಂಖ್ಯೆ: 08392-273479 ರಿಂದ ಮಾಹಿತಿ ಪಡೆಯಬಹುದು.

ಸಹಿ/-ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/548/ಎಂಸಿಎ/2021-22

ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
5ನೇ ಮಹಡಿ, ಪ್ಲಾಟ್ ನಂ. 1234, ಕೆ ಎಸ್ ಐ ಐ ಡಿ ಸಿ ಕಟ್ಟಡ, ಐಟಿ ಪಾರ್ಕ್ ಸೌತ್ ಬ್ಲಾಕ್ ರಾಜಾಜಿನಗರ, ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು - 560010
ದೂರವಾಣಿ ಸಂಖ್ಯೆ : 080-22342162, ಇ-ಮೇಲ್ : karnrega@gmail.com

ಸಂ. ಗ್ರಾಅಪ-ಉಖಾಯೋ/162/2020 ಭಾಗ-1 ದಿನಾಂಕ :27-12-2021

ಟೆಂಡರ್ ಪ್ರಕಟಣೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇಲ್ಲಿನ ಹೊರಗುತ್ತಿಗೆ ಸೇವೆಗಳಿಗೆ ಮಾನವ ಸಂಪನ್ಮೂಲ ಸಂಸ್ಥೆಗಳನ್ನು ಆಯ್ಕೆ ಮಾಡಲು ಟೆಂಡರ್ ಪ್ರಕಟಣೆ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇಲ್ಲಿನ ಹೊರಗುತ್ತಿಗೆ ಸೇವೆಗಳಿಗೆ ಮಾನವ ಸಂಪನ್ಮೂಲ ಸಂಸ್ಥೆಗಳನ್ನು ಆಯ್ಕೆ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಂತರ್ಜಾಲ ಅರ್ಜಿಗೆ 2 (ಎರಡು) ಲಕೋಟೆಯ ಬಿಡ್ ವ್ಯವಸ್ಥೆ ಇರುವಂತೆ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್) ಪಡೆಯುವುದಕ್ಕೆ ಅರ್ಹತೆ ಇರುವ ಬಿಡ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ವಿವರಗಳ ವೆಬ್‌ಸೈಟ್ **www.eproc.karnataka.gov.in** ನಲ್ಲಿ ದಿನಾಂಕ : **28-12-2021** ರ ನಂತರ ಲಭ್ಯವಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದ ವೇಳಾಪಟ್ಟಿಯ ದಿನಾಂಕಗಳನ್ನು ಈ ಮುಂದಿನಂತೆ ನಿಗದಿಪಡಿಸಲಾಗಿದೆ.

1	ಇ-ಬಿಡ್‌ಗಳನ್ನು ಸ್ವೀಕರಿಸುವ ಪ್ರಾರಂಭದ ದಿನಾಂಕ ಮತ್ತು ಸಮಯ	**28-12-2021 ಬೆಳಿಗ್ಗೆ 12.00 ಗಂಟೆಯ** ನಂತರ.
2	ಪ್ರೀ-ಬಿಡ್ ಸಭೆ	ದಿನಾಂಕ : **05-01-2022 ಮಧ್ಯಾಹ್ನ 3.30 ಗಂಟೆಗೆ,** WEB-Ex Video Conference Call ಮುಖಾಂತರ (ಲಿಂಕ್‌ಅನ್ನು ವೆಬ್‌ಸೈಟ್ ನಲ್ಲಿ ಪ್ರಕಟಿಸಲಾಗುವುದು).
3	ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ	**27-01-2022 ಸಂಜೆ 4.00 ಗಂಟೆಯ** ತನಕ
4	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಹಾಗೂ ಪರಿಶೀಲನಾ ದಿನಾಂಕ ಮತ್ತು ವೇಳೆ	**29-01-2022 ಬೆಳಿಗ್ಗೆ 11.00 ಗಂಟೆ** ನಂತರ
5	ತಾಂತ್ರಿಕವಾಗಿ ಅರ್ಹತೆ ಪಡೆದ ಬಿಡ್ಡರ್‌ಗಳ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ	ನಂತರ ತಿಳಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಜಂಟಿ ನಿರ್ದೇಶಕರು (ತಾಂತ್ರಿಕ), ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ (ದೂರವಾಣಿ ಸಂಖ್ಯೆ 080-22342162) ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಜಂಟಿ ನಿರ್ದೇಶಕರು (ತಾಂತ್ರಿಕ) ಹಾಗೂ
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ವಾ.ಸಂ.ಇ/ಬೆಂ.ನ/ಶ್ರೇಷ್ಠ/2548/2021-22

ಕೋವಿಡ್-19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತುಮಕೂರು ಮಹಾನಗರ ಪಾಲಿಕೆ, ತುಮಕೂರು

ದೂ-2278480, ಫ್ಯಾಕ್ಸ್: 2275106,
ಇ-ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in

ಸಂಖ್ಯೆ:ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್/13/2021-22 ದಿನಾಂಕ: 24.12.2021

ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ತುಮಕೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಮಹಾನಗರಪಾಲಿಕೆ ನಿಧಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ www.tumkurcity.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.

ಇ-ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ. **1.** ಇ-ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: **27.12.2021** ರಿಂದ ದಿನಾಂಕ: **13.01.2022** ರವರೆಗೆ. **2.** ಪ್ರಿ-ಬಿಡ್ ಮಿಟಿಂಗ್ ದಿನಾಂಕ: **03.01.2022** ಬೆಳಗ್ಗೆ 11.00 ಗಂಟೆಗೆ. **3.** ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **13.01.2022** ರಂದು ಸಾಯಂಕಾಲ 4.30 ಗಂಟೆವರೆಗೆ. **4.** ತಾಂತ್ರಿಕ ಬಿಡ್‌ನ್ನು ತೆರೆಯುವ **15.01.2022** ಸಾಯಂಕಾಲ 4.35 ಗಂಟೆಗೆ. **5.** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **17.01.2022**ರ ಬೆಳಗ್ಗೆ 11.00 ಗಂಟೆಗೆ. **6.** ಟೆಂಡರ್‌ನ ಯಶಸ್ವಿ ಬಿಡ್‌ದಾರರು ಕಾರ್ಯಾದೇಶ ಪಡೆಯುವ ಸಮಯದಲ್ಲಿ ಅಂದಾಜು ದರಕ್ಕಿಂತ ಕಡಿಮೆ ದರ ನಮೂದಿಸಿದ ಸಂದರ್ಭದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾವತಿಸುವುದು.

ಪ್ಯಾಕೇಜ್ ಸಂಖ್ಯೆ : (1) ಇಂಡೆಂಟ್ ಸಂಖ್ಯೆ: 124585, ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ): 88.69, ಇಎಂಡಿ ಮೊತ್ತ (ರೂ.ಗಳಲ್ಲಿ): 177380.00 (2) ಇಂಡೆಂಟ್ ಸಂಖ್ಯೆ: 124595, ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ): 88.69, ಇಎಂಡಿ ಮೊತ್ತ (ರೂ.ಗಳಲ್ಲಿ): 177380.00. (3) ಇಂಡೆಂಟ್ ಸಂಖ್ಯೆ: 124598, ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ): 88.69, ಇಎಂಡಿ ಮೊತ್ತ (ರೂ.ಗಳಲ್ಲಿ): 177380.00. (4) ಇಂಡೆಂಟ್ ಸಂಖ್ಯೆ: 124601, ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ): 88.69, ಇಎಂಡಿ ಮೊತ್ತ (ರೂ.ಗಳಲ್ಲಿ): 177380.00. (5) ಇಂಡೆಂಟ್ ಸಂಖ್ಯೆ: 124603, ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ): 88.69, ಇಎಂಡಿ ಮೊತ್ತ (ರೂ.ಗಳಲ್ಲಿ): 177380.00.

DIPR/TUM/487/ MCA/2021-22

ಸಹಿ/- ಕಾರ್ಯಪಾಲಕ ಅಭಿಯಂತರರು
ತುಮಕೂರು ಮಹಾನಗರ ಪಾಲಿಕೆ, ತುಮಕೂರು

ಹೊಸ ವರ್ಷಕ್ಕೆ ಹೊಸ ಮನಸ್ಸು

ಅಕ್ಷರ ದಾಮ್ಲೆ

ಹೊಸ ವರ್ಷ ಬಂತೆಂದರೆ ಅನೇಕರು ಹೊಸ ಹೊಸ ನಿರ್ಣಯಗಳ ಪಟ್ಟಿಯನ್ನೇ ಮಾಡುತ್ತಾರೆ. ಅವುಗಳಲ್ಲಿ 'ಫಿಟ್ನೆಸ್ ಗೋಲ್', ಆರ್ಥಿಕ ವಿಚಾರದ ಗುರಿಗಳು - ಹೀಗೆ ಅನೇಕ ಗುರಿಗಳನ್ನು ಇಟ್ಟುಕೊಳ್ಳಲಾಗುತ್ತದೆ. ಕೆಲವರು ತಮ್ಮ ಗುರಿಗಳನ್ನು ಸಾಧಿಸುವಲ್ಲಿ ಸಫಲರಾದರೂ, ಇನ್ನೊಂದಷ್ಟು ಜನರು ಹೊಸ ವರ್ಷ ಆರಂಭವಾಗಿ ಹತ್ತು-ಹದಿನೈದು ದಿನಗಳೊಳಗೇ ಅವನ್ನು ಮರೆತುಬಿಡುತ್ತಾರೆ. ಆಮೇಲೆ ಆ ಕುರಿತು ಹಾಸ್ಯರೂಪದ ಕಮೆಂಟ್‌ಗಳೂ ಬರುತ್ತವೆ! ಒಂದಷ್ಟು ತಿಂಗಳುಗಳ ಬಳಿಕ ತಮ್ಮ ನಿರ್ಣಯಗಳು ಏನಿದ್ದುವು ಎಂಬುದೂ ಮರೆತು ಹೋಗಿರುತ್ತದೆ. ಆದರೆ ಇಷ್ಟೆಲ್ಲದರ ನಡುವೆ ಇನ್ನೊಂದು ಸಣ್ಣ ಅಂದರೆ, ಇತರೆ ಇಷ್ಟೆಲ್ಲಾ ವಿಚಾರಗಳ ಕುರಿತು ನಾವು ಯೋಚನೆ, ಯೋಜನೆಗಳನ್ನು ಮಾಡಿದರೂ ಮೂಲಭೂತವಾದ ಒಂದು ವಿಚಾರವನ್ನು ಎಲ್ಲೋ ಬದಿಗೊತ್ತಿರುತ್ತೇವೆ.

> ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚು ಆದ್ಯತೆಯನ್ನು ನೀಡಬೇಕು; ಮನಃಸಂತೋಷವಿಲ್ಲ ಎಂದಾದರೆ, ಜೀವನದಲ್ಲಿ ಉತ್ಸಾಹವೇ ಕುಂದಿಹೋಗುತ್ತದೆ.

ಸಾಧಾರಣವಾಗಿ 'ಯಾಕೆ' ಎನ್ನುವ ಪ್ರಶ್ನೆಗಳ ಸರಮಾಲೆಯನ್ನು ಕೇಳಿದಾಗ ವ್ಯಕ್ತಿಗಳು ತಲುಪುವಂತಹ ಉತ್ತರ ಅದು! ಉದಾಹರಣೆಗೆ, 'ವಿದ್ಯಾರ್ಜನೆ ಯಾಕೆ ಮಾಡುವುದು?' ಎಂದು ಕೇಳಿದರೆ, ಆಗ ಸಿಗುವ ಉತ್ತರ 'ಉತ್ತಮ ಕೆಲಸವನ್ನು ಗಿಟ್ಟಿಸಿಕೊಳ್ಳಲು' ಎಂದು. 'ಉತ್ತಮ ಕೆಲಸ ಯಾಕೆ ಬೇಕು?' ಎಂದು ಕೇಳಿದರೆ, 'ಹೆಚ್ಚಿನ ಹಣ ಸಂಪಾದಿಸಲು' ಎಂದು ಪ್ರತಿಕ್ರಿಯೆ ಬರುತ್ತದೆ. 'ಯಾಕೆ ಹೆಚ್ಚಿನ ಹಣ ಸಂಪಾದಿಸಬೇಕು?' ಎಂದರೆ, 'ಮನೆ, ವಾಹನ, ಸಂಪತ್ತು ಮುಂತಾದುವುಗಳನ್ನು ನಮ್ಮದಾಗಿಸಿಕೊಳ್ಳಲು' ಎಂದಾಗುತ್ತದೆ! 'ಅದರ ಅಗತ್ಯ ಯಾಕೆ ಇದೆ?' ಎಂದು ಕೇಳಿದರೆ, 'ಸಂತೋಷವಾಗಿರಲು' ಎಂಬ ಉತ್ತರ ಸಿಗುತ್ತದೆ.

ಈ ಪ್ರಶ್ನಾಸರಣಿಯಲ್ಲಿ ಅರ್ಥವಾಗುವುದೇನೆಂದರೆ, ಅನೇಕರು 'ಸಂತೋಷ'ಕ್ಕಾಗಿ ಇಷ್ಟೆಲ್ಲಾ ವಿಷಯಗಳ ಅಗತ್ಯವಿದೆ ಎಂಬ ಮನೋಧರ್ಮದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಖುಷಿಯಾಗಿರಲು ಅಥವಾ ಜೀವನದಲ್ಲಿ ಆನಂದವನ್ನು ಕಂಡುಕೊಳ್ಳಲು ಇಷ್ಟೆಲ್ಲಾ ನಿಯಮಗಳನ್ನು ಹಾಕಿಕೊಂಡವರು ಯಾರು? ಮತ್ತು ನಾವು ಯಾಕೆ ಸಂತೋಷವನ್ನು ಕೊನೆಯ ಭಾಗವಾಗಿ ಇಟ್ಟುಕೊಂಡಿದ್ದೇವೆ ಎಂಬುವುದು ಅನೇಕರು ಇವತ್ತು ಕೇಳಿಕೊಳ್ಳಬೇಕಾದ ಪ್ರಶ್ನೆ!



ಇಡೀ ಹಗಲು-ರಾತ್ರಿ ಕೆಲಸ ಮಾಡಿ, ಜೀವನದಲ್ಲಿ ನೆಮ್ಮದಿ ಹಾಗೂ ಸಂತೋಷವಿಲ್ಲದಿದ್ದರೆ, ಹತ್ತಿಯ ಹಾಸಿಗೆಯೂ ಮುಳ್ಳಿನ ಹಾಸಿಗೆಯಂತೆಯೇ ಭಾಸವಾಗುತ್ತದೆ.

ನಾವು ಎಡವಿದ್ದೆಲ್ಲಿ?

ನಾವಿನ್ನೂ ಕಣ್ಣಿಗೆ ಕಾಣುವ ವಿಚಾರಗಳ ಆಧಾರದ ಮೇಲೆಯೇ ನಮ್ಮ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ಯಾವುದು ಮೂರ್ತವೋ ಅಷ್ಟಕ್ಕೆ ನಮ್ಮ ಗಮನ ಕೇಂದ್ರೀಕೃತವಾಗಿರುತ್ತದೆಯೇ ಹೊರತು, ಅಮೂರ್ತವಾಗಿದ್ದೂ ಅನುಭಾವಿಕ ವಿಚಾರಗಳು ನಮ್ಮ ದೃಷ್ಟಿಗೆ ಗೋಚರವಾಗುವುದಿಲ್ಲ.

ಹಾಗಾಗಿಯೇ ಇಷ್ಟೊಂದು ವರ್ಷಗಳಿಂದ ನಾವು ಮಾನಸಿಕ ಆರೋಗ್ಯದಕುರಿತು ಇಷ್ಟೊಂದು ಅಲಕ್ಷ್ಯ ವಹಿಸುತ್ತಿರುವುದು. 'ನನ್ನ ಮನಸ್ಸನ್ನು ನಾನು ಸಂಪೂರ್ಣವಾಗಿ ಹಿಡಿತದಲ್ಲಿರಿಸಿಕೊಳ್ಳಬಲ್ಲೆ' ಎಂದು ನಾವು ಅಂದುಕೊಂಡಿರುತ್ತೇವೆ ಅಷ್ಟೇ! ಆದರೆ ಹಾಗೆ ಅಂದುಕೊಳ್ಳುವಷ್ಟರಲ್ಲೇ ಮನಸ್ಸು ಎಲ್ಲೆಲ್ಲೋ ಅಡ್ಡಾಡಿ ಬಂದಿರುತ್ತದೆ. ಅದು ನಮಗೆ ಗೊತ್ತೇ ಆಗಿರುವುದಿಲ್ಲ. ಅಂತೆಯೇ, ಮನಸ್ಸು ಯಾವಾಗ ಕ್ಲೇಶಕ್ಕೊಳಗಾಗುತ್ತದೋ, ಯಾವಾಗ ಕೋಪ ಬರುತ್ತದೋ ಅಥವಾ ಯಾವಾಗ ಕೆಲವು ಪ್ರಚೋದನೆಗಳಿಂದ ಕೆಲವೊಂದು ವರ್ತನೆಗಳನ್ನು ನಮ್ಮಲ್ಲಿ ತೋರ್ಪಡಿಸುತ್ತದೋ ಅಂತಹ ಮನಸ್ಸಿನ ಆರೋಗ್ಯದ ಕುರಿತು ಬಹಳ ಕಡಿಮೆ ಜನರು ಕಾಳಜಿಯನ್ನು ವಹಿಸುತ್ತಾರೆ. ಮನಸ್ಸಿನ ಆರೋಗ್ಯದ ಕುರಿತು ನಿರ್ಲಕ್ಷ್ಯ ವಹಿಸುವ ಬದಲು ಪ್ರಾಮುಖ್ಯ ಕೊಡುವ ಅಗತ್ಯವಿದೆ.

ಕೋವಿಡ್ ಸೋಂಕಿನ ನಂತರದ ದಿನಗಳಲ್ಲಿ ಅನೇಕರ ಮಾನಸಿಕ ಆರೋಗ್ಯದಲ್ಲಿ ಏರುಪೇರುಂಟಾಯಿತು. ಭಯ, ಆತಂಕ, ಉದ್ವೇಗ ಮುಂತಾಗಿ ಅನೇಕ ರೀತಿಯ ಸಮಸ್ಯೆಗಳು ಹಲವರ ಜೀವನದಲ್ಲಿ ಕಾಣಿಸಿಕೊಂಡವು. ತನ್ಮೂಲಕ ಒಂದಷ್ಟು ಮಾನಸಿಕ ಆರೋಗ್ಯದ ಕುರಿತು ಎಚ್ಚರ ಮೂಡಿದ್ದು ಸುಳ್ಳಲ್ಲ. ಆದರೆ ಮನಸ್ಸಿನ ಆರೋಗ್ಯದ ಕುರಿತು ಇನ್ನಷ್ಟು ಹೆಚ್ಚು ಆದ್ಯತೆ ನೀಡುವ ಅಗತ್ಯವಿದೆ. ಏನೇ ಇದ್ದರೂ, ಮನಃಸಂತೋಷವಿಲ್ಲ ಎಂದಾದರೆ, ಜೀವನದಲ್ಲಿ ಉತ್ಸಾಹವೇ ಕುಂದಿಹೋಗುತ್ತದೆ. ಚಿಂತೆಗಳು ನಮ್ಮನ್ನು ಆವರಿಸಿಬಿಡುತ್ತವೆ. ರಾತ್ರಿ ಚೆನ್ನಾಗಿ ನಿದ್ದೆ ಬರುವುದಿಲ್ಲ. ಯಾವತ್ತೂ ಚಂಚಲತೆ ಹಾಗು ಅವಿಶ್ರಾಂತತೆ ಕೂಡಿರುತ್ತದೆ. ಅತೃಪ್ತಿ, ಅಸಮಾಧಾನ ಮೊದಲಾದವುಗಳಿಂದ ಪರಿತಪಿಸಬೇಕಾಗುತ್ತದೆ.

ಏನು ಮಾಡಬೇಕು?

ವರ್ಷದ ಆರಂಭದಲ್ಲಿ ಇಟ್ಟುಕೊಳ್ಳುವ ಸಂಕಲ್ಪಗಳಲ್ಲಿ ಮಾನಸಿಕ ಆರೋಗ್ಯಕ್ಕೆ ಪ್ರಾಶಸ್ತ್ಯವನ್ನು ಕೊಡಬೇಕು. ಉತ್ತಮ ಹವ್ಯಾಸಗಳಲ್ಲಿ ತೊಡಗಿಸಿಕೊಂಡು ಮಾನಸಿಕ ಆರೋಗ್ಯಕ್ಕೆ ಬೆಂಬಲವಾಗುವಂತಹ ಚಟುವಟಿಕೆಗಳಲ್ಲಿ ಮಗ್ನರಾಗಬೇಕು. ಜೀವನದ ಸವಾಲುಗಳನ್ನು ಎದುರಿಸುವಾಗ ಸಹಜವಾಗಿಯೇ ಉಂಟಾಗುವಂತಹ ಭಯ, ಆತಂಕ, ಅನುಮಾನ ಮುಂತಾದುವುಗಳನ್ನು ಒಪ್ಪಿಕೊಂಡು ತಜ್ಞರ ಸಲಹೆಗಳನ್ನು ಪಡೆಯಬೇಕು. ಮಾನಸಿಕ ಆರೋಗ್ಯವಿಲ್ಲದಿದ್ದರೆ, ದೈಹಿಕ ಆರೋಗ್ಯವೂ ಹದಗೆಡುತ್ತದೆ. ಹಾಗಾಗಿ ದೇಹ-ಮನಸ್ಸಿನ ಆರೋಗ್ಯದ ಕುರಿತು ಹೆಚ್ಚಿನ ಗಮನ ಹರಿಸಿ ಉತ್ತಮ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು.

ಕೊನೆಯದಾಗಿ, ವರ್ಷದ ಆರಂಭದಲ್ಲಿ ಮಾಡುವ ಗುರಿಗಳೇನಿದ್ದರೂ ಅವು ನಿಮ್ಮವೇ! ಅವುಗಳನ್ನು ಪಾಲಿಸದೆ ಇದ್ದಾಗ ಅದರ ಕುರಿತು ಹಾಸ್ಯವನ್ನು ಮಾಡುವುದರ ಬದಲು ಗಂಭೀರವಾಗಿ ಯೋಚಿಸುವ ಅಗತ್ಯವಿದೆ. ಯಾಕೆಂದರೆ, ಇವುಗಳು ಒಂದು ರೀತಿಯಲ್ಲಿ ನಿಮಗೆ ನೀವು ಕೊಟ್ಟುಕೊಳ್ಳುವ ಮಾತು. ನಿಮ್ಮ ಮಾತನ್ನು ನೀವೇ ನಿಮಗೋಸ್ಕರ ಅನುಸರಿಸಲಾಗದಿದ್ದರೆ, ಅದು ನಿಮ್ಮ ಸಮಗ್ರತೆಗೆ (integrity) ಪ್ರಶ್ನೆಯಾಗುತ್ತದೆ. ನಿಮಗೆ ನೀವೇ ಮೋಸ ಮಾಡಿದಂತೆ. ಹಾಗಾಗುವುದಕ್ಕೆ ನೀವ್ಯಾರು ಬಿಡುವುದಿಲ್ಲ ತಾನೇ?

(ಲೇಖಕ: ಮನಃಶಾಸ್ತ್ರಜ್ಞ)

ಹಾಲು ಎಂಬ ಅಮೃತ



ಮಾನವನ ಉಪಯೋಗಕ್ಕೆ ದೇಶಕಾಲಗಳಿಗೆ ತಕ್ಕಂತೆ ಹಸು, ಆಡು, ಒಂಟೆ, ಕುರಿ, ಎಮ್ಮೆ - ಇನ್ನೂ ಹಲವು ಪ್ರಾಣಿಗಳ ಹಾಲು ಬಳಕೆಯಲ್ಲಿದೆ. ಹಾಲನ್ನು ಆಹಾರವಾಗಿಯೂ ಔಷಧವಾಗಿಯೂ ಮನುಷ್ಯ ಬಳಸುತ್ತ ಬಂದಿದ್ದಾನೆ.

ಡಾ. ವಿಜಯಲಕ್ಷ್ಮಿ ಪಿ.

ಹಾಲಾದೆ ಕರೆದರೆ ಮೊಸರಾದೆ ಹೆತ್ತರೆ
ಮೇಲೆಕೆನೆಗೆಡೆದರೆ ಬೆಣ್ಣೆಯಾದೆ
ಮೇಲಾದ ತುಪ್ಪವೂ ನಾನದೆ ಕಾಸಿದರೆ
ನೀನಾರಿಗಾದೆಯೋ ಎಲೆ ಮಾನವಾ

ಇದು ನಾವು ಚಿಕ್ಕವರಿದ್ದಾಗ ಕಲಿತ ಪದ್ಯ. ಇದರ ವಿವರಣೆಯ ಆಳ-ಅರಿವು ಅರಿಯಲು ಬಲು ಕಠಿಣ. ಹಾಲು ಎಂದೊಡನೆ ನೆನಪಿಗೆ ಬರುವುದು ತಾಯಿಯ ಅಥವಾ ಹಸುವಿನ ಹಾಲು. ಆದರೆ ಎಲ್ಲಾ ಸಸ್ತನಿಗಳೂ ಹಾಲೂಡುವ ಪ್ರಾಣಿಗಳೇ. ಅದರಲ್ಲಿ ಮಾನವನ ಉಪಯೋಗಕ್ಕೆ ದೇಶಕಾಲಗಳಿಗೆ ತಕ್ಕಂತೆ ಹಸು, ಆಡು, ಒಂಟೆ, ಕುರಿ, ಎಮ್ಮೆ - ಇನ್ನೂ ಹಲವು ಪ್ರಾಣಿಗಳ ಹಾಲು ಕೂಡ ಬಳಕೆಯಲ್ಲಿದೆ. ಇವುಗಳನ್ನು ಆಹಾರವಾಗಿಯೂ ಔಷಧವಾಗಿಯೂ ಮನುಷ್ಯ ಬಳಸುತ್ತ ಬಂದಿದ್ದಾನೆ.

ಹಸುವಿನ ಹಾಲಿನಲ್ಲೂ ಈಗ ದೇಸಿ(ನಾಟಿ) ಹಸು ಮತ್ತು ಸೀಮೆ ಹಸುಗಳ ಹಾಲಿನಲ್ಲೂ ಗುಣಧರ್ಮಗಳು ವ್ಯತ್ಯಾಸವಿದ್ದು, ದೇಸಿ ಹಸುವಿನ ಹಾಲು ಆರೋಗ್ಯಕ್ಕೆ ಅತ್ಯುತ್ತಮ ಎಂದು ವೈಜ್ಞಾನಿಕವಾಗಿಯೂ ದೃಢಪಟ್ಟಿದೆ. ಇದು ಹುಟ್ಟಿದ ಮಗುವಿನಿಂದ ಶತಾಯುಷಿ ಮುದುಕರವರೆಗೂ ಸೇವಿಸಬಹುದಾದ ಆಹಾರ ಹಾಲು. ಹಾಲು ಪ್ರೊಟೀನು, ಕೊಬ್ಬು, ಅನೇಕ ಪೋಷಕಾಂಶಗಳು ಮತ್ತು ಎನ್‌ಜೈಮ್‌ಗಳನ್ನು ಒಳಗೊಂಡಿದೆ. ಇದು ದೇಹದ ಬೆಳವಣಿಗೆಗೆ ಸಹಾಯಕವಾಗುವ ಎಲ್ಲ ಪೋಷಕಾಂಶಗಳನ್ನೂ ಒಳಗೊಂಡಿದೆ.

ಆಗತಾನೇ ಕರೆದ ಹಾಲು, ಕರೆದ ಬಿಸಿ ಆರುವ ಮುನ್ನ ಹಸಿಯಾಗಿ ಸೇವಿಸಿದರೆ ಶರೀರದ ಎಲ್ಲ ಧಾತುಗಳನ್ನೂ ವರ್ಧಿಸುತ್ತದೆ. ಇದರ ನೊರೆ ಕೂಡ ತೀವ್ರವಾದ ಜ್ವರ, ಕ್ಷಯದಂತಹ ರೋಗಗಳಲ್ಲಿ ಔಷಧವೂ ಹೌದು. ಆದರೆ ಬಿಸಿ ಆರಿದ ನಂತರ ಹಸಿ ಹಾಲುಸೇವನೆ ಅನಾರೋಗ್ಯಕರ. ಇದು ಜಡತೆ, ಮಲಬದ್ಧತೆಗಳನ್ನು ಉತ್ಪತ್ತಿ ಮಾಡುತ್ತದೆ. ಆದರೆ ಕಾಯಿಸಿದ ಹಾಲು ಪುನಃ ದೇಹಕ್ಕೆ ಬಲ ಪುಷ್ಟಿಯನ್ನು ನೀಡುತ್ತದೆ. ಆದರೆ ಕುದಿಸಿ ಶೈತ್ಯೀಕರಿಸಿದ ಹಾಲು ರಸಗ್ರಂಥಿಗಳ ಸ್ರಾವವನ್ನು ವಿಕೃತಗೊಳಿಸುತ್ತದೆ ಮತ್ತು ಮಧುಮೇಹ ಮುಂತಾದ ರೋಗಗಳಿಗೆ ನಾಂದಿ ಹಾಡುತ್ತದೆ. ಕರು ಹಾಕಿದ ಕೂಡಲೆ ಸಿಗುವ ಗಿಣ್ಣುಹಾಲು ಜೀರ್ಣಕ್ಕೆ ಕಷ್ಟ. ಶ್ರಮಜೀವಿಗಳಿಗೆ, ಅತ್ಯಗ್ನಿ ಇರುವವರಿಗೆ ಇದರ ಸೇವನೆಯಿಂದ ಸುಖವಾಗಿ ನಿದ್ರೆ ಬರುತ್ತದೆ.

ಹಾಲು ಹಾಲಾಗಿದ್ದರೆ ಇಷ್ಟು ಉಪಯುಕ್ತವಾದರೆ ಹಾಲು ಒಡೆದರೆ! ತಾನಾಗೆ ಕಾಲವಶಾತ್ ಒಡೆದ ಹಾಲು ಆರೋಗ್ಯಕ್ಕೆ ಒಳ್ಳೆಯದಲ್ಲ. ಆದರೆ ನಾವಾಗೇ ನಿಂಬೆಹುಳಿ ಹಾಕಿ ಒಡೆಸಿದ ಹಾಲು, ಪನ್ನೀರು ಮಾಡಲು ಅತ್ಯುತ್ತಮ. ಪನ್ನೀರು ಅತ್ಯಂತ ಹೆಚ್ಚು ಪ್ರೊಟೀನನ್ನು ಹೊಂದಿರುವಂತಹದ್ದು. ಜೀರ್ಣಶಕ್ತಿ ಕಡಿಮೆ ಇರುವವರಿಗೆ ಮೊಟ್ಟೆಗಿಂತಲೂ ಸುಲಭವಾಗಿ ಜೀರ್ಣವಾಗಿ ಪ್ರೊಟೀನ್‌ನ ಕೊರತೆಯನ್ನು ನೀಗಿಸುತ್ತದೆ. ಆದರೆ ಇದರ ತಿಳಿಭಾಗ ಇನ್ನೂ ಹೆಚ್ಚು ಉಪಯುಕ್ತ. ಇದು ಅಜೀರ್ಣ, ಜ್ವರ, ವಾಂತಿ, ಭೇದಿ ಮುಂತಾದ ರೋಗಗಳಲ್ಲಿ ಚಿಕಿತ್ಸೆಯಾಗಿಯೂ ಉಪಯೋಗಿಸಬಹುದಾದ ಆಹಾರ. ಹಾಲು ಜೀರ್ಣವಾಗದ ಮಕ್ಕಳು ಅಥವಾ ಮುದುಕರಿಗೆ ಹಾಲಿನ ಪೋಷಕಾಂಶಗಳನ್ನು ಒದಗಿಸುವ ಉತ್ತಮ ಪಾನೀಯ ಹಾಲು ಒಡೆದ ನೀರು.

ಹಾಲು ಕಾಯಿಸಿದಾಗ ಬರುವ ಹಾಲಿನ ಕೆನೆ ಅತಿ ಹೆಚ್ಚು ಪೋಷಕಾಂಶಗಳನ್ನು ಹೊಂದಿರುತ್ತದೆ. ಅದನ್ನು ಹಚ್ಚುವುದರಿಂದ ಚಳಿಗಾಲದಲ್ಲಿ ಚರ್ಮ ಒಡೆಯುವುದನ್ನು ತಡೆಗಟ್ಟುವುದರ ಜೊತೆಗೆ ಕಾಂತಿಯನ್ನೂ ಹೆಚ್ಚಿಸುತ್ತದೆ. ಅತಿ ಕೃಶರು ಹಾಲಿನ ಕೆನೆಯನ್ನು ಅಥವಾ ಅದರಿಂದ ತಯಾರಿಸಿದ ಬಾಸುಂದಿ ಮೊದಲಾದ ಆಹಾರ ಪದಾರ್ಥಗಳನ್ನು ಸೇವಿಸುವುದರಿಂದ ದೇಹದ ತೂಕವನ್ನು ಹೆಚ್ಚಿಸಿಕೊಳ್ಳಬಹುದು. ಯಾವುದಾದರೂ ರೋಗದಿಂದ ಕೃಶರಾಗಿದ್ದವರಿಗೂ ಬಲ, ಓಜಸ್ಸು, ರೋಗನಿರೋಧಕ ಶಕ್ತಿಯನ್ನೂ ವರ್ಧಿಸುತ್ತದೆ. ಆದರೆ ಹಾಲಿನೊಡನೆ, ಉಪ್ಪು, ಮಜ್ಜಿಗೆ, ಹುಳಿಪದಾರ್ಥ, ಹಣ್ಣು, ಮಾಂಸ, ಮೊಟ್ಟೆಗಳನ್ನು ಸೇವಿಸುವುದು ವಿರುದ್ಧಾಹಾರವಾಗಿ ಪರಿಣಮಿಸಿ ಉಗ್ರ ಸ್ವರೂಪದ ರೋಗಗಳಿಗೆ ನಾಂದಿ ಹಾಡುತ್ತದೆ.

ಇನ್ನು ಹೆಪ್ಪಿಟ್ಟು ತಯಾರಾದ ಮಜ್ಜಿಗೆ, ಮೊಸರುಗಳ ಬಗ್ಗೆ ಹೇಳಬೇಕಾದ್ದೆ ಇಲ್ಲ. ಜೀರ್ಣಶಕ್ತಿ ಚೆನ್ನಾಗಿದ್ದವರಿಗೆ ಮೊಸರು ಬಲವನ್ನು ಕೊಡುತ್ತದೆ. ಅದರೆ ಜೀರ್ಣಶಕ್ತಿ ಕಡಿಮೆ ಇರುವವರಿಗೆ, ಅಜೀರ್ಣ ಆದವರಿಗೆ ಮೊಸರು ಸರ್ವಥಾ ನಿಷಿದ್ಧ. ಇದು ನೆಗಡಿ, ತಲೆನೋವು, ಮಧುಮೇಹ, ರಕ್ತದೊತ್ತಡ, ಹೃದ್ರೋಗವೇ ಮೊದಲಾದ ರೋಗಗಳಿಗೆ ನಾಂದಿ ಹಾಡುತ್ತದೆ. ಇನ್ನು ಇದನ್ನು ಶೈತ್ಯೀಕರಿಸಿ, ಸೇವಿಸಿದರೆ ಸಿರೆಗಳ ಉಬ್ಬುವಿಕೆಯಿಂದಾಗಿ ಕೈಕಾಲುನೋವು, ರಕ್ತದಲ್ಲಿ ಕೊಬ್ಬಿನ ಅಂಶ ಹೆಚ್ಚಾಗುತ್ತದೆ. ಹುಳಿಮೊಸರು, ಹಾಲಿನ ಜೊತೆ ಮೊಸರನ್ನು ಬೆರೆಸಿ ಸೇವಿಸುವುದು, ಸರಿಯಾಗಿ ಹೆಪ್ಪಾಗದ ಸಿಹಿಮೊಸರಿನ ಸೇವನೆ ಯಾರಿಗೂ ಒಳ್ಳೆಯದಲ್ಲ. ರಾತ್ರಿ ಮೊಸರಿನ ಸೇವನೆ ಅತ್ಯಂತ ಕೆಟ್ಟದ್ದು. ಮೊಸರನ್ನು ಸೇವಿಸಲೇ ಬೇಕೆಂದಾಗ ಸಕ್ಕರೆ, ಜೇನು, ನೆಲ್ಲಿಕಾಯಿಪುಡಿ, ಹೆಸರುಕಾಳು ಅಥವಾ ಬೇಳೆಯಿಂದ ತಯಾರಿಸಿದ ಪದಾರ್ಥದೊಡನೆ ಸೇವಿಸಬೇಕು.

ಕಡೆದರೆ ಬರುವ ಮಜ್ಜಿಗೆ ಅಮೃತಸಮಾನವಾದ ಗುಣ ಉಳ್ಳದ್ದು. ಬೆಣ್ಣೆ ತೆಗೆದ ಮಜ್ಜಿಗೆ ಆಹಾರವಾಗಿಯೂ ಔಷಧವಾಗಿಯೂ ಅತ್ಯಂತ ಉಪಯುಕ್ತ ಪದಾರ್ಥ. ಇದು ಅಜೀರ್ಣನಾಶಕ; ಹೀಗಾಗಿ ಊಟದ ಕೊನೆಯಲ್ಲಿ ಮಜ್ಜಿಗೆ ಸೇವಿಸುವ ಪದ್ಧತಿ ಇರುವುದು. ಇದು ಮೊಳೆರೋಗ ಅಥವಾ ಅರ್ಶಸ್ಸುರೋಗದಲ್ಲಿ ಔಷಧವಾಗಿಯೂ ಬಳಕೆಯಲ್ಲಿದೆ. ಭೇದಿ, ಅಜೀರ್ಣ, ಹೊಟ್ಟೆಯುರಿ, ಹೊಟ್ಟೆಯುಬ್ಬರಗಳಲ್ಲಿ, ದಪ್ಪಗಿರುವವರು ತೂಕ ಕಡಿಮೆ ಮಾಡಲು ಹಿಂಗು, ಶುಂಠಿ, ಉಪ್ಪು - ಇವುಗಳನ್ನು ಸೇರಿಸಿ ಸೇವಿಸುವುದು ಒಳ್ಳೆಯದು. ಅತಿಯಾದ ಬಾಯಾರಿಕೆ ಇದ್ದರೆ ನೀರನ್ನು ಸೇರಿಸಿ ಸೇವಿಸುವ ಮಜ್ಜಿಗೆ ಔಷಧವೂ ಹೌದು.

ಮಜ್ಜಿಗೆಯಿಂದ ಬರುವ ಬೆಣ್ಣೆ ಮತ್ತು ಕಾಯಿಸಿದಾಗ ಬರುವ ತುಪ್ಪದ ಬಗ್ಗೆ ಬರೆದಷ್ಟೂ ವಿಷಯವಿದೆ. ಕ್ರಮವರಿತು ಸೇವಿಸಿದ ಬೆಣ್ಣೆ-ತುಪ್ಪಗಳು ಅಗ್ನಿಯನ್ನೂ, ರೋಗನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತದೆ. ಇವುಗಳು ಬಾಹ್ಯ ಮತ್ತು ಆಂತರಿಕವಾಗಿಯೂ ಉಪಯುಕ್ತ ದ್ರವ್ಯಗಳು.

(ಲೇಖಕಿ: ಆಯುರ್ವೇದವೈದ್ಯೆ)

ನಿದ್ರೆಯ ಬಗ್ಗೆ ಎಚ್ಚರವಾಗಿರಿ!

> ಸಂಶೋಧನೆಗಳ ಪ್ರಕಾರ ಆರೋಗ್ಯಪೂರ್ಣ ವ್ಯಕ್ತಿಗೆ ದಿನಕ್ಕೆ ಸರಾಸರಿ ಆರರಿಂದ ಎಂಟು ಗಂಟೆಗಳಷ್ಟು ನಿದ್ರೆಯ ಅಗತ್ಯವಿದೆ. ಮಕ್ಕಳು ಹೆಚ್ಚು ನಿದ್ರೆ ಮಾಡಿದಷ್ಟೂ ಒಳ್ಳೆಯದು...

ಡಿ. ಎಂ. ಹೆಗಡೆ

ಇತ್ತೀಚಿನ ದಿನಗಳಲ್ಲಿ, ಅದೂ ವಿಶೇಷವಾಗಿ ನಗರ ಜೀವನದಲ್ಲಿ ಸರಿಯಾದ, ಶಿಸ್ತಿನ ನಿದ್ರೆ ಇಲ್ಲದಿರುವುದು ಬಹಳಷ್ಟು ಜನರ ಆರೋಗ್ಯದ ಮೇಲೆ ದುಷ್ಪರಿಣಾಮಗಳನ್ನು ಉಂಟುಮಾಡಿದೆ. ನಿದ್ರಾಹೀನತೆಯ ಸಮಸ್ಯೆಯಿಂದ ಬಳಲುವವರ ಸಂಖ್ಯೆ ಹೆಚ್ಚಾಗುತ್ತಿದೆ. ನಿದ್ರೆ ಜಾಸ್ತಿಯಾದರೂ ಅಪಾಯ. ನಿದ್ರೆ ಕಡಿಮೆಯಾದರೂ ಅಪಾಯ. ಒಳ್ಳೆಯ ನಿದ್ರೆ ಒಳ್ಳೆಯ ಆರೋಗ್ಯಕ್ಕೆ ಅನಿವಾರ್ಯ. ಹಣ ಕೊಟ್ಟು ಹಾಸಿಗೆಯನ್ನು ಖರೀದಿಸಬಹುದು. ಆದರೆ ಅದೇ ಹಣವನ್ನು ಕೊಟ್ಟು ನಿದ್ರೆಯನ್ನು ಖರೀದಿಸಲಿಕ್ಕಾಗುವುದಿಲ್ಲ. ಹಣದಿಂದ ನಿದ್ರೆ ಮಾತ್ರೆಗಳನ್ನು ಕೊಂಡು, ತಿಂದು ನಿದ್ರಿಸಬಹುದು. ಆದರೆ ಅದರಿಂದ ಮುಂದೆ ಆರೋಗ್ಯಕ್ಕೆ ಹಾನಿಯಾಗುತ್ತದೆ. ಹಾಗಾಗಿ ಸಹಜ ನಿದ್ರೆಯೇ ಸಹಜ ಆರೋಗ್ಯದ ಸೋಪಾನ. ಅದೂ ಪ್ರತಿ ರಾತ್ರಿ ಸಹಜ ನಿದ್ರೆ ಬಹಳ ಮುಖ್ಯ.

ನಗರದಲ್ಲಿ, ಅದೂ ಸಾಫ್ಟ್‌ವೇರ್ ಸಂಸ್ಕೃತಿ ಹೆಚ್ಚಾಗುತ್ತಿದ್ದಂತೆ ಜನರಲ್ಲಿ ರಾತ್ರಿನಿದ್ರೆ ಕಡಿಮೆಯಾಗುತ್ತಿದೆ. ಕೆಲಸ ಮಾಡುವವರದ್ದು ಅನಿವಾರ್ಯ ಆದರೆ, ಮೊಬೈಲು ಗೀಳಿಗೆ ಬಿದ್ದವರದ್ದು ಮತ್ತೊಂದು ರೀತಿಯ ಗೋಳು. ಅಂಥ ಯುವಕರು ಪಾಲಕರ ಮಾತನ್ನು ಕೇಳುವುದಿಲ್ಲ. ರಾತ್ರಿ ಮೊಬೈಲ್ ಜೊತೆಗೆ ಜಾಗರಣೆ ಮಾಡುತ್ತಾರೆ. ಸ್ಲೀಪ್‌ಲೆಸ್ ನೈಟ್‌ಗಳಲ್ಲಿ ಸ್ಕ್ರೀನ್‌ಟೈಮ್ ಜಾಸ್ತಿ ಮಾಡಿಕೊಳ್ಳುತ್ತಾರೆ. ಹಗಲು ನಿದ್ರೆಗೆ ಜಾರುತ್ತಾರೆ. ಇದರಿಂದ ಆರೋಗ್ಯವನ್ನು ಹಾಳುಮಾಡಿಕೊಳ್ಳುತ್ತಾರೆ.

ರಾತ್ರಿ ನಿದ್ರೆ ಮಾಡುವಾಗ ನಮ್ಮ ದೇಹಕ್ಕೆ ಮತ್ತು ಮನಸ್ಸಿಗೆ ವಿಶ್ರಾಂತಿ ಸಿಗುತ್ತದೆ. ಮೊಬೈಲಿಗೆ ಬ್ಯಾಟರಿ ಚಾರ್ಜ್ ಮಾಡಿದಂತೆ ನಮ್ಮ ದೇಹವನ್ನು ಸರಿಯಾದ ನಿದ್ರೆಯಿಂದ ಚಾರ್ಜ್ ಮಾಡಿಕೊಳ್ಳಲಾಗುತ್ತದೆ. ಸರಿಯಾದ ನಿದ್ರೆ ಬರದಿದ್ದರೆ ಮರುದಿನ ಮೂಡ್ ಹಾಳಾಗಿರುತ್ತದೆ. ದೇಹದಲ್ಲಿ ಉತ್ಸಾಹ ಇರುವುದಿಲ್ಲ. ತಲೆ ನೋಯುತ್ತದೆ. ಇಡೀ ದಿವಸ ಅಸುಖ ಮತ್ತು ಅಶಾಂತಿಯಿಂದ ಕಿರಿಕಿರಿಯಾಗುತ್ತ ಇರುತ್ತದೆ. ಅದೇ ಸರಿಯಾಗಿ ನಿದ್ರೆ ಮಾಡಿ ಎದ್ದರೆ ದಿನವಿಡೀ ಉತ್ಸಾಹದಿಂದ ಇರಲಿಕ್ಕಾಗುತ್ತದೆ. ಮನಸ್ಸು ಮುದವಾಗಿರುತ್ತದೆ. ಖುಷಿ ಖುಷಿಯಾಗಿ ಕೆಲಸ-ಕಾರ್ಯಗಳನ್ನು ಮಾಡಿಕೊಂಡಿರಲಿಕ್ಕೆ ಸಾಧ್ಯ ಆಗುತ್ತದೆ.

ರಾತ್ರಿ ನಿದ್ರೆ ಮಾಡಿದಾಗ ಹೃದಯಬಡಿತ ಮತ್ತು ಉಸಿರಾಟದ ವೇಗ ಏರುಪೇರಾಗುತ್ತಿರುತ್ತದೆ. ನಿಧಾನಗತಿಯದಾಗಿರುತ್ತದೆ. ರಕ್ತದಲ್ಲಿ ದೇಹವನ್ನು ಆರೋಗ್ಯದಿಂದ ಇಡಲು ಬೇಕಾದ ಹಾರ್ಮೋನುಗಳು ಉತ್ಪತ್ತಿಯಾಗುತ್ತವೆ. ಶಕ್ತಿ ಉತ್ಪಾದನೆಯಾಗುತ್ತದೆ. ದೇಹಕ್ಕೇನಾದರೂ ತೊಂದರೆ ಆಗಿದ್ದಿದ್ದರೆ ಅದು ಗುಣವಾಗುತ್ತದೆ.

ಸರಿಯಾದ ನಿದ್ರೆಯಿಂದ ಸಾಕಷ್ಟು ರೋಗನಿರೋಧಕ ಶಕ್ತಿಯು ಇರುತ್ತದೆ. ಸರಿಯಾದ ನಿದ್ರೆ ಮಾಡುವವರು ಪದೆ ಪದೇ ಅನಾರೋಗ್ಯಕ್ಕೀಡಾಗುವುದಿಲ್ಲ. ಸಮತೋಲನದ ನಿದ್ರೆ ಮಾಡುವವರಿಗೆ ಆರೋಗ್ಯಪೂರ್ಣವಾದ ದೇಹತೂಕವಿರುತ್ತದೆ. ಕೊಬ್ಬು, ಬೊಜ್ಜು ಹೆಚ್ಚಾಗುವುದಿಲ್ಲ. ಹೃದಯದ ಕಾಯಿಲೆ, ಕ್ಯಾನ್ಸರ್, ಮಧುಮೇಹದಂತಹ ರೋಗಗಳು ಬರುವ ಸಾಧ್ಯತೆ ಕಡಿಮೆ ಎಂದು ಸಂಶೋಧನೆಗಳಿಂದ ತಿಳಿದಿದೆ.

ಸರಿಯಾದ ನಿದ್ರೆಯಿಂದ ಗ್ರಹಣಶಕ್ತಿಯು ಹೆಚ್ಚುತ್ತದೆ. ನೆನಪಿನ ಶಕ್ತಿಯು ಹೆಚ್ಚುತ್ತದೆ. ಮರೆಗುಳಿತನ ಬರುವುದಿಲ್ಲ. ಮನಸ್ಸು ನೆಮ್ಮದಿಯಿಂದ ಇರುತ್ತದೆ. ಉದ್ವೇಗ, ಒತ್ತಡ ಆಗುವುದಿಲ್ಲ. ಕೂದಲು ಮತ್ತು ಚರ್ಮವು ಕಾಂತಿಯುತವಾಗಿರುತ್ತದೆ. ಎಲ್ಲರೊಟ್ಟಿಗೆ ಉತ್ಸಾಹದಿಂದ ಬೆರೆತು ಬದುಕುವುದು ಸಹಜವಾಗಿರುತ್ತದೆ. ಹೊಸ ಹೊಸ ಆಲೋಚನೆಗಳು ಬರುತ್ತವೆ. ವ್ಯಕ್ತಿಯು ಕ್ರಿಯಾಶೀಲನಾಗುತ್ತಾನೆ. ನಿದ್ರಾಹೀನತೆಯಿಂದ ಕೊಬ್ಬು, ಬೊಜ್ಜು ಬರುತ್ತದೆ. ಮನಃಸ್ಥಿತಿಯು ಅಸ್ತವ್ಯಸ್ತವಾಗಿರುತ್ತದೆ. ಅಜೀರ್ಣರೋಗವು ಶುರುವಾಗುತ್ತದೆ. ಅಮೂಲಕ ಇನ್ನಿತರೆ ರೋಗಗಳು ಬರುತ್ತವೆ. ಹಾರ್ಮೋನುಗಳಲ್ಲಿ ವ್ಯತ್ಯಾಸವಾಗುತ್ತದೆ. ರೋಗನಿರೋಧಕ ಶಕ್ತಿಯು ಕಡಿಮೆಯಾಗುತ್ತದೆ.

ಕೆಲವರ ಪ್ರಕಾರ ದಿನಕ್ಕೆ ಐದು ಗಂಟೆಗಳಷ್ಟು ನಿದ್ರೆ ಸಾಕು. ಆದರೆ ಸಂಶೋಧನೆಗಳ ಪ್ರಕಾರ ಆರೋಗ್ಯಪೂರ್ಣ ವ್ಯಕ್ತಿಗೆ ದಿನಕ್ಕೆ ಸರಾಸರಿ ಆರರಿಂದ ಎಂಟು ಗಂಟೆಗಳಷ್ಟು ನಿದ್ರೆಯ ಅಗತ್ಯವಿದೆ. ಮಕ್ಕಳು ಹೆಚ್ಚು ನಿದ್ರೆ ಮಾಡಿದಷ್ಟೂ ಒಳ್ಳೆಯದು ಎನ್ನುವುದು ನಮ್ಮ ಹಳ್ಳಿಗರ ಹಳೆಯ ನಂಬಿಕೆ. ಅದೂ ರಾತ್ರಿ ಕಡುಗತ್ತಲೆಯಲ್ಲಿ ನಿದ್ರೆ ಮಾಡುವುದು ಬಹಳ ಒಳ್ಳೆಯದು. ಟಿವಿ ಬಂದ ಮೇಲೆ ಅರ್ಧ ನಿದ್ರೆ ಹೋಯಿತು. ಮೊಬೈಲು ಬಂದ ಮೇಲಂತೂ ಜೀವನದಲ್ಲಿ ನೆಮ್ಮದಿಯೇ ಹೋಯ್ತು ಎನ್ನುವ ಹಂತವನ್ನು ಈಗ ತಲುಪುತ್ತಿದ್ದೇವೆ.

ಸೂರ್ಯಾಸ್ತದ ನಂತರ ಬೇಗ ಊಟವನ್ನು ಮುಗಿಸಬೇಕು. ಊಟವಾದ ನಂತರ ಒಂದು ಗಂಟೆಯಷ್ಟು ಕಾಲ ನಿಂತು, ಕುಳಿತು, ಓಡಾಡಬೇಕು. ಹತ್ತು ಗಂಟೆಯೊಳಗೆ ಮಲಗಬೇಕು. ಬೇಗ ಮಲಗಬೇಕು. ಬೇಗ ಏಳಬೇಕು. ಅದು ನಿಸರ್ಗದ ನಿಯಮ. ಮನುಷ್ಯನನ್ನು ಹೊರತಾಗಿ ಉಳಿದೆಲ್ಲ ಜೀವ ಜಂತುಗಳು ಇಂದಿಗೂ ನಿಸರ್ಗದ ನಿಯಮವನ್ನು ಪಾಲಿಸುತ್ತವೆ. ಜೀವನಶೈಲಿಯಲ್ಲಾದ ವೈಪರೀತ್ಯದಿಂದ ಹಲವು ವಿಧದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದೇವೆ ಎನ್ನುವುದನ್ನು ಮನಗಾಣುವಲ್ಲಿ ನಾವು ಸೋಲುತ್ತಿದ್ದೇವೆ.

ಮಾದಕವಸ್ತುಗಳ ಅತಿಯಾದ ಸೇವನೆಯಿಂದಲೂ ನಿದ್ರೆಯಲ್ಲಿ ವ್ಯತ್ಯಾಸವಾಗುತ್ತದೆ. ನಿದ್ರಾಹೀನತೆಯಿಂದಾಗಲೀ, ಅತಿಯಾದ ನಿದ್ರೆಯ ಸಮಸ್ಯೆಯಿಂದಾಗಲೀ ಬಳಲುತ್ತಿರುವವರು ಆರೋಗ್ಯತಜ್ಞರ ಸಲಹೆಯನ್ನು ಪಡೆದು, ಗುಣಮುಖರಾಗಲಿಕ್ಕೆ ಸಾಧ್ಯವಿದೆ. ದೈನಂದಿನ ಕೆಲಸ-ಕಾರ್ಯಗಳ ಜೊತೆಗೆ, ವ್ಯಾಯಾಮ, ಪ್ರಾಣಾಯಾಮ, ತಾಜಾ ಆಹಾರಸೇವನೆ, ಪ್ರತಿದಿನ ಸ್ನಾನ, ಶುಭ್ರವಾದ ಬಟ್ಟೆಯನ್ನು ತೊಡುವುದು ಮುಂತಾದವುಗಳಿಂದ ಆರೋಗ್ಯಕರ ಜೀವನವನ್ನು ಬದುಕುವುದು ಸಾಧ್ಯವಿದೆ.

ಮನುಷ್ಯರ ಆರೋಗ್ಯಕ್ಕೆ ಸಮತೋಲನದ ಆಹಾರದಷ್ಟೆ ಸಮತೋಲನದ ನಿದ್ರೆಯೂ ಮುಖ್ಯ. ಜೀವನದಲ್ಲಿ ಆರೋಗ್ಯವನ್ನು ಬಯಸುವವರು ನಿದ್ರಾಹಾರಗಳ ವಿಷಯದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುವುದು ಅತಿ ಅಗತ್ಯವಾಗಿದೆ.

(ಲೇಖಕ: ಆಪ್ತಸಮಾಲೋಚಕ)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಮನಸ್ಸೇ ಎಲ್ಲಕ್ಕೂ ಮೂಲ. ಅದನ್ನು ಸರಿಪಡಿಸದ ವಿನಾ ಇನ್ನಾವುದೂ ಸರಿಯಾಗಲಾರದು.

–ಡಿ.ವಿ.ಜಿ.

‘ಅಮೃತ ಮಹೋತ್ಸವ’ ಸಂದರ್ಭದಲ್ಲಿ ರಾಜಕಾರಣ- ಗೊಂದಲ ಸೃಷ್ಟಿ ಸಲ್ಲದು

ರಾಜ್ಯದ ಎಲ್ಲ ಪದವಿಪೂರ್ವ ಕಾಲೇಜುಗಳಲ್ಲಿ ಜನವರಿ 1ರಿಂದ ಫೆಬ್ರುವರಿ 7ರವರೆಗೆ ಸೂರ್ಯ ನಮಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂಬ ಪದವಿಪೂರ್ವ ಶಿಕ್ಷಣ ಇಲಾಖೆಯ ಸೂಚನೆಯು ಅನಗತ್ಯ ಗೊಂದಲಕ್ಕೆ ಎಡೆ ಮಾಡಿಕೊಡುವಂತಹದ್ದು. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಸೂರ್ಯ ನಮಸ್ಕಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಎಲ್ಲ ರಾಜ್ಯಗಳ ಶಿಕ್ಷಣ ಇಲಾಖೆಗಳಿಗೆ ಕೇಂದ್ರ ಶಿಕ್ಷಣ ಸಚಿವಾಲಯ ಪತ್ರ ಬರೆದಿದೆ. ಆ ಪತ್ರದ ಹಿನ್ನೆಲೆಯಲ್ಲಿ, ಪಿಯು ಮಕ್ಕಳಿಂದ ಸೂರ್ಯ ನಮಸ್ಕಾರ ಮಾಡಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಸೂರ್ಯ ನಮಸ್ಕಾರ ಆರೋಗ್ಯಕ್ಕೆ ಪೂರಕ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ, ಸೂರ್ಯ ನಮಸ್ಕಾರ ಚಟುವಟಿಕೆಗೆ ಸರ್ಕಾರ ನೀಡಿರುವ ಕಾರಣ ಬಾಲಿಶವಾದುದು. ಸ್ವಾತಂತ್ರ್ಯ ದಿನಾಚರಣೆಯ ಅಮೃತ ಮಹೋತ್ಸವಕ್ಕೂ ದೈಹಿಕ ಚಟುವಟಿಕೆಗೂ ಯಾವ ರೀತಿಯ ಸಂಬಂಧ ಎನ್ನುವುದನ್ನು ಸರ್ಕಾರವೇ ಸ್ಪಷ್ಟಪಡಿಸಬೇಕು. ವಿದ್ಯಾರ್ಥಿಗಳಲ್ಲಿ ಸ್ವಾತಂತ್ರ್ಯ ಚಳವಳಿಯ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಅಮೃತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬಹುದಾಗಿದೆ. ಕಳೆದ ಏಳುವರೆ ದಶಕಗಳಲ್ಲಿ ಸ್ವತಂತ್ರ ಭಾರತ ಎದುರಿಸಿದ ಸವಾಲುಗಳು ಹಾಗೂ ವಿವಿಧ ಕ್ಷೇತ್ರಗಳಲ್ಲಿ ದೇಶ ಮಾಡಿದ ಸಾಧನೆಗಳ ಬಗ್ಗೆ ಯುವ ಸಮೂಹಕ್ಕೆ ತಿಳಿವಳಿಕೆ ನೀಡುವ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಇಂಥ ಸೃಜನಶೀಲ ಕಾರ್ಯಕ್ರಮಗಳ ಬದಲು, ಅಮೃತ ಮಹೋತ್ಸವ ಆಚರಣೆಯನ್ನೇ ಕಸರತ್ತಿನ ಮಟ್ಟಕ್ಕೆ ಇಳಿಸಲು ಸರ್ಕಾರ ಹೊರಟಂತಿದೆ. ವಿದ್ಯಾರ್ಥಿಗಳ ಸೃಜನಶೀಲತೆಗೆ ಅಭಿವ್ಯಕ್ತಿ ದೊರಕಿಸಿಕೊಡುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲು ಅವಕಾಶ ಇದೆ. ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಗಳಲ್ಲಿ ಈಗಾಗಲೇ ಭಾಗವಹಿಸುತ್ತಿದ್ದಾರೆ. ಅದರ ಜೊತೆಗೆ ಹೆಚ್ಚುವರಿಯಾಗಿ ದೈಹಿಕ ಚಟುವಟಿಕೆಯನ್ನು ದಿಢೀರ್ ಹೇರಲು ಹೊರಟಿರುವುದನ್ನು ನೋಡಿದರೆ, ಶಿಕ್ಷಣ ಕ್ಷೇತ್ರದಲ್ಲಿ ರಚನಾತ್ಮಕ ಚಿಂತನೆಗಳಿಗೂ ಬರ ಬಂದಿದೆಯೇ ಎನ್ನುವ ಅನುಮಾನ ಮೂಡುವಂತಿದೆ. ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಶೈಕ್ಷಣಿಕ ಚಟುವಟಿಕೆಗಳು ಏರುಪೇರಾಗಿವೆ. ಕೊರೊನಾ ರೂಪಾಂತರ ತಳಿ ಒಮೈಕ್ರಾನ್ ಆತಂಕ ಮೂಡಿಸಿದೆ. ಶಾಲಾ- ಕಾಲೇಜುಗಳಲ್ಲಿ ಪಠ್ಯಕ್ರಮ ಪೂರ್ಣಗೊಳಿಸುವುದಕ್ಕೆ ಹರಸಾಹಸಪಡುವ ಸ್ಥಿತಿ ಉಂಟಾಗಿದೆ. ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲಿ ನಿಗದಿತ ಪಠ್ಯವನ್ನು ಪೂರೈಸಿ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆ. ಆದರೆ ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್ ಫೆಡರೇಷನ್‌ನ ಅಪೇಕ್ಷೆಗೆ ಅನುಗುಣವಾಗಿ ಸೂರ್ಯ ನಮಸ್ಕಾರ ಕಾರ್ಯಕ್ರಮವನ್ನು ವಿದ್ಯಾರ್ಥಿಗಳ ಮೇಲೆ ಹೇರಲು ಹೊರಟಿರುವುದು ಸರಿಯಲ್ಲ. ಎಲ್ಲ ಹಂತದ ವಿದ್ಯಾರ್ಥಿಗಳ ಜೀವನದಲ್ಲಿ ಅತ್ಯಂತ ಮಹತ್ವದ ಘಟ್ಟವೂ ಆಗಿರುವುದರಿಂದ, ಚರ್ಚೆ-ಸಂವಾದಗಳಂಥ ಶೈಕ್ಷಣಿಕ ಚಟುವಟಿಕೆಗಳಲ್ಲಿ ಮಗ್ನರಾಗಬೇಕಾದ ವಿದ್ಯಾರ್ಥಿಗಳ ಗಮನವನ್ನು ಕಾಲೇಜಿನ ಅವಧಿಯಲ್ಲಿ ಬೇರೆಡೆಗೆ ತಿರುಗಿಸುವ ಪ್ರಯತ್ನವು ಶೈಕ್ಷಣಿಕ ಹಿತಾಸಕ್ತಿಗೆ ಪೂರಕವಾದ ಚಿಂತನೆಯಲ್ಲ. ಆಸಕ್ತ ವಿದ್ಯಾರ್ಥಿಗಳು ತಂತಮ್ಮ ಮನೆಗಳಲ್ಲಿ ವ್ಯಾಯಾಮ ಮಾಡುವುದಕ್ಕೆ ಯಾರ ಅಭ್ಯಂತರವೂ ಇಲ್ಲ. ಕೋವಿಡ್ ಸೋಂಕಿನ ಮೂರನೇ ಅಲೆಯ ಆತಂಕ ಬೂದಿ ಮುಚ್ಚಿದ ಕೆಂಡದಂತಿರುವ ಸಂದರ್ಭದಲ್ಲಿ ಸರ್ಕಾರ ತೆಗೆದುಕೊಂಡಿರುವ ಈ ನಿರ್ಧಾರ ಅಚ್ಚರಿ ಹುಟ್ಟಿಸುವಂತಿದೆ. ಕೊರೊನಾ ಸೋಂಕು ತೀವ್ರವಾಗಿದ್ದ ಸಮಯದಲ್ಲಿ ಉದ್ಯಾನ ಹಾಗೂ ಜಿಮ್‌ಗಳ ಬಾಗಿಲು ಮುಚ್ಚಿಸಿದ್ದ ಸರ್ಕಾರವೇ ಈಗ ವಿದ್ಯಾರ್ಥಿಗಳ ಆರೋಗ್ಯದೊಂದಿಗೆ ಕಣ್ಣಾಮುಚ್ಚಾಲೆ ಆಡಲು ಹೊರಟಿದೆ. ಸೋಂಕಿನ ಆತಂಕದ ಸಮಯದಲ್ಲಿ ಸಾಕಷ್ಟು ಮುನ್ನೆಚ್ಚರಿಕೆಗಳೊಂದಿಗೆ ಶಾಲಾ- ಕಾಲೇಜುಗಳನ್ನು ನಡೆಸುವುದೇ ಕಷ್ಟವಾಗಿರುವಾಗ, ಹೆಚ್ಚುವರಿಯಾಗಿ ಮತ್ತೊಂದು ಪಠ್ಯೇತರ ಚಟುವಟಿಕೆ ಬಗ್ಗೆ ಯೋಚಿಸುತ್ತಿರುವ ಸರ್ಕಾರದ ನಡೆಯು ವಿದ್ಯಾರ್ಥಿಗಳ ಬೆಳವಣಿಗೆಗೆ ಪೂರಕವಾದುದಲ್ಲ ಎಂದೇ ಹೇಳಬೇಕಾಗುತ್ತದೆ.

ಪಿಯು ಮಕ್ಕಳಿಂದ ಕಡ್ಡಾಯವಾಗಿ ಸೂರ್ಯ ನಮಸ್ಕಾರ ಮಾಡಿಸುವ ಸರ್ಕಾರದ ನಿರ್ಣಯದ ಹಿಂದೆ ಮಕ್ಕಳ ಕಾಳಜಿಗಿಂತಲೂ ಹೆಚ್ಚಾಗಿ ರಾಜಕಾರಣವೇ ಎದ್ದುಕಾಣುತ್ತದೆ

ಸಂಸ್ಕೃತಿ, ಧರ್ಮದ ಹೆಸರಿನಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಸರ್ಕಾರದ ಹಸ್ತಕ್ಷೇಪ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದೆ. ಶಿಕ್ಷಣವನ್ನು ಕೇಸರೀಕರಣಗೊಳಿಸಲಾಗುತ್ತಿದೆ ಎನ್ನುವ ಆರೋಪಗಳು ಸಾರ್ವಜನಿಕ ವಲಯದಲ್ಲಿವೆ. ಇಂಥ ಆರೋಪಗಳಿಗೆ ಪುಷ್ಟಿ ನೀಡುವಂತೆ ಬಿಜೆಪಿ ನೇತೃತ್ವದ ಸರ್ಕಾರಗಳಿಂದ ‘ಸೂರ್ಯ ನಮಸ್ಕಾರ’ದ ಬಳಕೆಯಾಗುತ್ತಿದೆ. 2012ರಲ್ಲಿ ರಾಜ್ಯದ ಎಲ್ಲ ಶಾಲಾ ಮಕ್ಕಳಿಗೆ ಸೂರ್ಯ ನಮಸ್ಕಾರವನ್ನು ಕಡ್ಡಾಯಗೊಳಿಸಿದ ಮಧ್ಯಪ್ರದೇಶ ಸರ್ಕಾರದ ಕ್ರಮ ತೀವ್ರ ಚರ್ಚೆಗೆ ಒಳಗಾಗಿತ್ತು. ಸೂರ್ಯ ನಮಸ್ಕಾರ ಕಾರ್ಯಕ್ರಮವನ್ನು ಶಿಕ್ಷಣ ಕೇಸರೀಕರಣದ ಪ್ರಯತ್ನ ಎಂದು ಮುಸ್ಲಿಂ ಸಮುದಾಯದ ಕೆಲವರು ಆಪಾದಿಸಿದ್ದರು. ಯೋಗ ಮತ್ತು ಸೂರ್ಯ ನಮಸ್ಕಾರ ವಿರೋಧಿಸುವವರನ್ನು ಸಮುದ್ರಕ್ಕೆ ಎಸೆಯುವಂತೆ ಇಲ್ಲವೇ ಭಾರತದಿಂದ ಹೊರಹಾಕುವಂತೆ 2015ರಲ್ಲಿ ಬಿಜೆಪಿ ಸಂಸದರಾಗಿದ್ದ, ಉತ್ತರಪ್ರದೇಶದ ಇಂದಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿಕೆ ನೀಡಿದ್ದರು. 2015ರಲ್ಲಿ ರಾಜಸ್ಥಾನ ಸರ್ಕಾರ ಕೂಡ ಶಾಲೆಗಳಲ್ಲಿ ಸೂರ್ಯ ನಮಸ್ಕಾರ ಕಡ್ಡಾಯಗೊಳಿಸಿತ್ತು. ಇಂಥ ನಿರ್ಣಯ ಹಾಗೂ ಹೇಳಿಕೆಗಳ ಹಿಂದೆ ಮಕ್ಕಳ ಕಾಳಜಿಗಿಂತಲೂ ಹೆಚ್ಚಾಗಿ ಧಾರ್ಮಿಕ ರಾಜಕಾರಣವೇ ಎದ್ದುಕಾಣುತ್ತದೆ. ವಿದ್ಯಾರ್ಥಿಗಳು ಬಯಸಿದಲ್ಲಿ ಶಾಲೆಗಳಲ್ಲಿ ಭಗವದ್ಗೀತೆಯ ಬೋಧನೆಗೆ ರಾಜ್ಯ ಸರ್ಕಾರಗಳು ಅವಕಾಶ ಮಾಡಿಕೊಡಬಹುದು ಎಂದು ಕೇಂದ್ರ ಶಿಕ್ಷಣ ಖಾತೆಯ ರಾಜ್ಯ ಸಚಿವೆ ಅನ್ನಪೂರ್ಣಾ ದೇವಿ ಅವರು ಲೋಕಸಭೆಯಲ್ಲಿ ನೀಡಿರುವ ಹೇಳಿಕೆ ಕೂಡ ಇದೇ ರಾಜಕಾರಣದ ಭಾಗವಾಗಿದೆ. ಸಮುದಾಯಗಳ ನಡುವೆ ವಿರಸ ಹೆಚ್ಚುತ್ತಿರುವ ಸಂದರ್ಭದಲ್ಲಿ, ಸಾಮಾಜಿಕ ಸಾಮರಸ್ಯ ಮೂಡಿಸುವ ದಿಸೆಯಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿದೆ. ಶಿಕ್ಷಣ ಕ್ಷೇತ್ರವನ್ನೂ ಬಿಗ್ಗಡಗೊಳಿಸುವ ಕೆಲಸವು ಬಹುತ್ವದ ಕಟ್ಟಡವನ್ನು ತಳಪಾಯ ಮಟ್ಟದಲ್ಲೇ ಶಿಥಿಲಗೊಳಿಸುವ ಪ್ರಯತ್ನವಾಗಿದೆ.

ದಿನದ ಟ್ವೀಟ್

ಈ ವ್ಯವಸ್ಥೆ ಬದಲಾಗಲಿ

ನಮ್ಮ ದೇಶದಲ್ಲಿ ವ್ಯಾಪಾರ ಮಾಡುವುದು ಕಷ್ಟಕರ. ಏಕೆಂದರೆ, ಸಾಂಕ್ರಾಮಿಕ + ಹಣದುಬ್ಬರ + ತೆರಿಗೆ ನೀತಿಯು ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆ ಕ್ಷೇತ್ರದ ಬೆನ್ನುಮೂಳೆ ಮುರಿಯುತ್ತವೆ.

ಅಮಿತ್, ವಕೀಲ

ಕಿಡಿನುಡಿ



₹1,000ಕ್ಕಿಂತ ಕಡಿಮೆ ಬೆಲೆಯ ಬಟ್ಟೆ ಮತ್ತು ಪಾದರಕ್ಷೆಗಳ ಮೇಲಿನ ಜಿಎಸ್‌ಟಿ ದರವನ್ನು ಶೇ 5ರಿಂದ 12ಕ್ಕೆ ಏರಿಸಲಾಗಿದೆ. ದೇಶದ ಶೇ 85ರಷ್ಟು ಜನರು ₹1,000 ಕ್ಕಿಂತಲೂ ಕಡಿಮೆ ಬೆಲೆಯ ಬಟ್ಟೆ, ಪಾದರಕ್ಷೆಗಳನ್ನು ಕೊಳ್ಳುತ್ತಾರೆ ಮತ್ತು ಇವುಗಳನ್ನು ಸಾಮಾನ್ಯವಾಗಿ ಸಣ್ಣ ಪ್ರಮಾಣದ ತಯಾರಕರು ಹಾಗೂ ಕುಶಲ ಕರ್ಮಿಗಳು ಸಿದ್ಧಪಡಿಸುತ್ತಾರೆ. ಮೋದಿ ಸರ್ಕಾರದ ಮಂತ್ರ: ಬಡವರಿಗೆ ತೆರಿಗೆ, ಶ್ರೀಮಂತರಿಗೆ ತೆರಿಗೆ ಕಡಿತ.

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 28-12-1996

• **ಪೊಲೀಸರನ್ನು ಕೂಡಿ ಹಾಕಿ ಗಂಧ ಲೂಟಿ**

ಕೆಜಿಎಫ್, ಡಿ. 27– ಶ್ರೀಗಂಧ ಕಳ್ಳ ಸಾಗಣೆದಾರರ ಗುಂಪೊಂದು ಇಂದು ಮುಂಜಾನೆ ಕಾಮಸಮುದ್ರ ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿ ಗಂಧದ ಮರ ಅಪಹರಿಸಿದ ಘಟನೆ ವರದಿಯಾಗಿದೆ.

ಇಂದು ಬೆಳಗಿನ ಜಾವ 2.05 ಗಂಟೆ ಸುಮಾರಿಗೆ 5–6 ಜನರ ಗುಂಪೊಂದು ಠಾಣೆಗೆ ಬಂದು, ದೂರು ನೀಡಬೇಕಾಗಿದೆಯೆಂದು ಅಲ್ಲಿನ ಸೆಂಟ್ರಿ ಶಿವಣ್ಣ ಅವರನ್ನು ಕೇಳಿತು. ದೂರಿನ ಬಗ್ಗೆ ವಿಚಾರಿಸುವುದರಲ್ಲಿ ಆತನನ್ನು ಗುಂಪು ರೈಫಲ್ ಸಮೇತ ಠಾಣೆಯ ಹಾಲಿಗೆ ತಳ್ಳಿ ಬಾಗಿಲು ಹಾಕಿತು. ಆಗ ಠಾಣೆಯೊಳಗೆ ಅಧಿಕಾರಿ ರಂಗನಾಥ್, ಒಬ್ಬ ಹೆಡ್ ಕಾನ್‌ಸ್ಟೆಬಲ್ ಹಾಗೂ ಮೂವರು ಕಾನ್‌ಸ್ಟೆಬಲ್‌ಗಳು ನಿದ್ರಿಸುತ್ತಿದ್ದರು.

ಬಾಗಿಲು ಹಾಕಿದ ತಕ್ಷಣ ಸ್ವಲ್ಪದೂರ ಕತ್ತಲಲ್ಲಿ ನಿಂತಿದ್ದ ಟೆಂಪೊ, ಠಾಣೆ ಮುಂದೆ ಬಂದು, ಅದರಲ್ಲಿದ್ದ 10 ಜನ ಬ್ಯಾಟರಿ ಚಾಲಿತ ಗರಗಸದಿಂದ, ಠಾಣೆ ಆವರಣದಲ್ಲಿ ಬೆಳೆದಿದ್ದ ಸುಮಾರು 30 ವರ್ಷದ ಗಂಧದ ಮರವನ್ನು ಐದೇ ನಿಮಿಷದಲ್ಲಿ ಕತ್ತರಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 28-12-1971

• **ಭಾರತದ ಕದನವಿರಾಮ: ಅಮೆರಿಕದ ವಿಚಿತ್ರ ಅರ್ಥಕಲ್ಪನೆ- ಇಂದಿರಾ**

ನ್ಯೂಯಾರ್ಕ್, ಡಿ. 27– ಇತ್ತೀಚಿನ ಭಾರತ-ಪಾಕಿಸ್ತಾನ ಸಮರದಲ್ಲಿ ಭಾರತವು ರಷ್ಯಾದ ಒತ್ತಡಕ್ಕೆ ಮಣಿದು ಕದನವಿರಾಮ ಜಾರಿಗೆ ತಂದಿತೆಂಬ ಅಮೆರಿಕದ ಸಲಹೆಯನ್ನು ಪ್ರಧಾನ ಮಂತ್ರಿ ಇಂದಿರಾ ಗಾಂಧಿಯವರು ವಿಚಿತ್ರ ಹಾಗೂ ಅರ್ಥಹೀನ ಎಂದು ತಳ್ಳಿಹಾಕಿದರು.

‘ನಾನು ಯಾರೊಬ್ಬರ ಅಥವಾ ಯಾವುದೇ ರಾಷ್ಟ್ರದ ಒತ್ತಡಕ್ಕೆ ಮಣಿಯುವವಳಲ್ಲ’ ಎಂದು ಅವರು ಟೈಂ ಮತ್ತು ನ್ಯೂಸ್ ಪತ್ರಿಕೆಗಳಿಗೆ ನೀಡಿರುವ ಸಂದರ್ಶನದಲ್ಲಿ ಘೋಷಿಸಿದ್ದಾರೆ.

• **ಬಾಂಗ್ಲಾ ಸಂಪುಟ ವಿಸ್ತರಣೆ: ಐವರು ಹೊಸ ಸಚಿವರ ನೇಮಕ**

ಢಾಕಾ, ಡಿ. 27– ಬಾಂಗ್ಲಾದೇಶದಲ್ಲಿ ತಾಜುದ್ದೀನ್ ನೇತೃತ್ವದ ನಾಲ್ವರು ಸದಸ್ಯರ ಸಂಪುಟವನ್ನು ಐವರು ಹೊಸ ಸಚಿವರನ್ನು ಸೇರಿಸಿಕೊಂಡು ವಿಸ್ತರಿಸಲಾಯಿತು.

ಗಡಿಗುರುತು ಬೋಧಿಸುವವರೇ ಗಡಿಗುರುತು ದಾಟುತ್ತಲೇ ಇರುವುದು ಸುಮ್ಮನೆಯೇ?

ಮನಸು ಪಳಗಿಸುವಾಟದ ಮಾಟ

ವಿಶ್ಲೇಷಣೆ

ಸಬಿತಾ ಬನ್ನಾಡಿ

ಸಾಂಟಾಕ್ಲಾಸ್‌ನ ಹಣ್ಣಾದ ಗಡ್ಡದಂತೆ ಬೆಳ್ಳಗಾದ ಹಿಮವು ನಿಧಾನಕ್ಕೆ ಆವರಿಸಿಕೊಳ್ಳುತ್ತಾ, ಕೊಳೆ, ಕೊರೆಗಳೆಲ್ಲಾ ಅದರೊಳಗೆ ಮರೆಯಾಗಿ, ಕಲ್ಲಿನ ಕಠಿಣ ಬೆನ್ನಿನ ಮೇಲೆಲ್ಲ ಮಿದು ತುಪ್ಪಳದಂತೆ ಅಪ್ಪಿಕೊಂಡ ಮಂಜುಗಡ್ಡೆಯು ಅಪೂರ್ವ ಚೆಲುವನ್ನು ಸೃಷ್ಟಿಸಿ, ಮೇಲೇರುವ ನೇಸರನಿಗೆ ಸವಾಲು ಹಾಕಿಯೂ ಚಿನ್ನದಂತೆ ಹೊಳೆದು ನಕ್ಕು ಸ್ನೇಹಹಸ್ತ ಚಾಚಿ, ಸದ್ಯ ಏನಿದ್ದರೂ ನನ್ನದೇ ಕಾರುಬಾರು, ನಿನ್ನ ಧಗೆಗೆ ಕಡಿವಾಣ ಹಾಕಿಕೋ ಎಂಬ ಅದರ ಅಪ್ಪಣೆಯನ್ನು ಒಪ್ಪಿ ಸಾಮ್ರಾಜ್ಯವನ್ನು ಅದರ ಸುಪರ್ದಿಗೆ ಒಪ್ಪಿಸಿ ನಿರುಮ್ಮಳವಾಗುತ್ತದೆ ಪ್ರಕೃತಿ. ನಿನ್ನೆ ನನ್ನದು, ಇಂದು ನಿನ್ನದು, ನಾಳೆ ಮತ್ತೊಬ್ಬರದು– ಮತ್ತೆ ನಾ ಬರುವೆ ಎಂಬ ಈ ಪ್ರಕೃತಿಯ ಪಾಠ ಸರ್ವಋತುಗಳಲ್ಲೂ ನಡೆಯುತ್ತಿರುತ್ತದೆ. ಆದರೆ ಮನುಷ್ಯರಿಗೆ ಮಾತ್ರ ಸರ್ವಋತುಗಳನ್ನೂ ತಾನೇ ಆಳಬೇಕೆಂಬ ಕೇಡಿನ ಬಯಕೆಯ ಉದರ ರೋಗ.

ಇದಕ್ಕಾಗಿ ಎಂತೆಂಥಾ ಆಟ, ಎಂತೆಂಥಾ ಮಾಟಗಳು ನಡೆಯುತ್ತಿರುತ್ತವೆಯೆಂದರೆ, ತಮ್ಮದಲ್ಲದ ವಿಷಯಗಳಿಗೆಲ್ಲಾ ಯಾರ್‍ಯಾರೋ ಮೂಗು ತೂರಿಸಿ ‘ಟೆಸ್ಟ್ ಡೋಸ್’ ನೀಡುತ್ತಾ ಇರುತ್ತಾರೆ. ಇನ್ನು ಕೆಲವರು ಫರ್ಮಾನು ಹೊರಡಿಸುತ್ತಿರುತ್ತಾರೆ. ತಿನ್ನುವ ಆಹಾರವನ್ನೂ ಆಳುವ ಅಸ್ತ್ರಗಳಾಗಿಸುವ ಸನ್ನಿವೇಶಗಳನ್ನು ‘ಹುಟ್ಟಿಸ’ಲಾಗುತ್ತದೆ. ಮಕ್ಕಳಿಗೆ ಅವಶ್ಯ ಇರುವ ಪೌಷ್ಟಿಕ ಆಹಾರ ಯಾವುದು ಎನ್ನುವುದನ್ನು ನೋಡಿಕೊಳ್ಳಲು ಆರೋಗ್ಯ ಇಲಾಖೆ ಇರುತ್ತದೆ. ತಾನು ಏನನ್ನು ತಿನ್ನುವೆ, ಏನು ತಿನ್ನಲಾರೆ ಎನ್ನುವುದನ್ನು ತಿನ್ನುವ ಮಕ್ಕಳನ್ನು ಕೇಳಬೇಕು. ಏನನ್ನು ಒದಗಿಸಲು ಸಾಧ್ಯ ಎನ್ನುವುದನ್ನು ಅಲ್ಲಿನ ಶಿಕ್ಷಕರನ್ನು ಕೇಳಿ ತಿಳಿದುಕೊಳ್ಳಬೇಕು. ಈ ಇಷ್ಟು ಜನರಿಗೆ ಸಂಬಂಧಿಸಿದ ಈ ವಿಷಯವನ್ನು ಕುರಿತು, ಈ ಸರ್ಕಾರಿ ಶಾಲೆಯಲ್ಲಿ ತಮ್ಮ ಮಕ್ಕಳನ್ನೇನೂ ಓದಿಸದ, ಸ್ವತಃ ತಾವೇ ತಿನ್ನದ ಆಹಾರದ ಬಗೆಗೆ ಅಧಿಕಾರ ವಾಣಿಯಿಂದ ‘ಅದನ್ನು ಕೊಡುವಂತಿಲ್ಲ’ ಎಂದು ಯಾರೇ ಆದರೂ ಹೇಳಿದರೆ, ಅದರ ಹಿಂದೆ ‘ಇನ್ನೇನೋ’ ಉದ್ದೇಶ ಇದೆ ಎಂದೇ ಅರ್ಥ. ಅಷ್ಟಕ್ಕೂ ಇಂದು ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಸಂಖ್ಯೆಯೇ ಬೆರಳೆಣಿಕೆಯದು. ಅದರಲ್ಲೂ ಮೇಲ್ವರ್ಗದ ಜೊತೆಗೆ ತಳುಕು ಹಾಕಿಕೊಂಡಿರುವ ಜಾತಿಗಳ ವಿದ್ಯಾರ್ಥಿಗಳಂತೂ ಒಬ್ಬರೂ ಇಲ್ಲದಿರುವ ಸಾಧ್ಯತೆಯೇ ಹೆಚ್ಚು.

ನಿಮಗೆ ಆಶ್ಚರ್ಯ ಆಗಬಹುದು, ಸರ್ಕಾರಿ ಕಾಲೇಜುಗಳಲ್ಲಿ ಕೆಲವೊಮ್ಮೆ ಇಡೀ ತರಗತಿಗೆ ತರಗತಿಯೇ ಜನರಲ್ ಮೆರಿಟ್ ಹಿನ್ನೆಲೆಯವರನ್ನು ಹೊಂದಿರುವುದಿಲ್ಲ (ಖಂಡಿತಾ ಮೆರಿಟ್ ಇರುವವರು ಇರುತ್ತಾರೆ). ಯಾವುದೋ ಕಾರಣಕ್ಕೆ ಹೋದವರ್ಷ, ಐದು ಜಾತಿಗಳಿಗೆ ಸೇರಿದ ವಿದ್ಯಾರ್ಥಿಗಳ ಮಾಹಿತಿ ಕೇಳಿದ್ದರು. ನಮ್ಮ ಕಾಲೇಜಿನ ಒಟ್ಟು ಐನೂರ ನಲವತ್ನಾಲ್ಕು ವಿದ್ಯಾರ್ಥಿಗಳಲ್ಲಿ ಬ್ರಾಹ್ಮಣ ಮತ್ತು ಜೈನ ಸಮುದಾಯದ ಒಬ್ಬರೂ ವಿದ್ಯಾರ್ಥಿ ಇರಲೇ ಇಲ್ಲ. ಸಾಮಾಜಿಕ ಸ್ಥಾನಮಾನ ಮತ್ತು ಶಾಲಾ ಕಾಲೇಜುಗಳ ಆಯ್ಕೆಗೂ ಹತ್ತಿರದ ಸಂಬಂಧ ಇರುತ್ತದೆ. ಕಾಲೇಜಿನಲ್ಲೇ ಹೀಗೆ ಎನ್ನುವುದಾದರೆ, ಶಾಲೆಗಳಲ್ಲಿ ಇದು ಇನ್ನಷ್ಟು ಸ್ಪಷ್ಟ. ಅಂದಮೇಲೆ ಅಲ್ಲಿರುವ ಮಕ್ಕಳಿಂದ, ಪೋಷಕರಿಂದ ಬರದ ‘ಹುಯಿಲು’ ಪೋಷಕರ ಹೆಸರಿನಲ್ಲಿ ಬೇರೆಲ್ಲಿಂದಲೋ ಬರುತ್ತಿದೆ ಎನ್ನುವುದು, ಒಟ್ಟು ಸಮಾಜದಲ್ಲಿ ಬದುಕುತ್ತಿರುವ ಜನ ಸಮೂಹದ ಆಹಾರ ಪದ್ಧತಿಯ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವೇ ಎಂದು ಪರೀಕ್ಷಿಸುತ್ತಿರುವ, ಹಾಗೆ ಸಾಧ್ಯ ಆದರೆ ಕ್ರಮೇಣ ಅವರ ಇತರೆಲ್ಲಾ ಆಚಾರ ವಿಚಾರಗಳನ್ನು ತಮ್ಮ ಇಷಾರೆಯಿಂದ ನಡೆಯಿಸಲು ಅಧಿಕಾರ ದಕ್ಕಿಸಿಕೊಳ್ಳುವ ಮೆಟ್ಟಿಲಾಗಿ ಬಳಸಲು ಸಿಗುವ ಸಮ್ಮತಿಯನ್ನಾಗಿ ಪರಿವರ್ತಿಸುವ ಸಣ್ಣಸಂಖ್ಯೆಯವರ ಹುನ್ನಾರ ಎನ್ನುವುದು ನಿಸ್ಸಂಶಯ.

ಸರ್ಕಾರಿ ಶಾಲೆಯ ಹುಡುಗಿಯೊಬ್ಬಳು ಸಿಟ್ಟಿನಿಂದ ‘ನಮಗೆ ತತ್ತಿ ಬೇಕೇ ಬೇಕ್ರೀ’ ಎಂದು ಕೇಳಿದ್ದರಲ್ಲಿ ಅವಳ ಹಕ್ಕು ಇದೆ, ರೋದನೆ ಇದೆ. ಆ ತತ್ತಿಯ ಬದಲಿಗೆ ದುಡ್ಡು ಕೊಟ್ಟರೆ ಅದು ತಮ್ಮಪ್ಪನಿಂದ ಹೆಂಡದಂಗಡಿಗೆ ಹೋಗಿ ಬೀಳುತ್ತದೆ ಎಂಬ ಅನುಭವದ ವಾಸ್ತವದ ಸ್ಪರ್ಶ ಇದೆ.

ಅನುಭವದ ಸ್ಪರ್ಶವಿಲ್ಲದ ಯಾರೋ ಹುಟ್ಟುಹಾಕಿದ ಪಡೆನುಡಿಯನ್ನು, ಅನುಭವದ ಗಂಧವಿಲ್ಲದವರು ಆಡಿ, ನಕ್ಕು, ನಾಡಿನ ಹೆಣ್ಣುಮನಗಳ ಆಕ್ರೋಶಕ್ಕೆ ಒಳಗಾದ ಸಂಗತಿಯೂ ನಡೆದುಹೋಯಿತು. ಹೆಣ್ಣನ್ನು ಖಾಸಗಿ ಆಸ್ತಿಯೆಂಬಂತೆ ಪರಿಗಣಿಸಿ ಆಳುವ ಮನಸ್ಸುಗಳು ಅವಳಿಗೆ ಸದಾ ಪಾವಿತ್ರ್ಯದ ಬೇಲಿಯಲ್ಲೇ ಇರುವಂತೆ ಪ್ರತ್ಯಕ್ಷ, ಪರೋಕ್ಷ ಬೋಧನೆ ಮಾಡುತ್ತಲೇ ಇರುತ್ತವೆ. ಆ ಮೂಲಕ ಅವಳ ಮನಸ್ಸನ್ನು ‘ಹದ’ಗೊಳಿಸುತ್ತವೆ. ಎಷ್ಟು ಹದವಾಗಿರುತ್ತದೆ ಮನ ಎಂದರೆ, ಆ ದೇಹದ ಮೇಲೆ ಆಕ್ರಮಣ ಆದರೆ, ಆಕ್ರಮಿಸಿದವನು ಮಾಡಿದ ತಪ್ಪಿಗೆ ತಾನು ಕುದಿ ಕುದಿದು ನಲುಗುತ್ತದೆ. ತಪ್ಪು ಮಾಡಿದ ಅವನಿಗೆ ಶಿಕ್ಷೆಯ ಭಯವಾಗಲೀ ನಲುಗುವ ತಾಪವಾಗಲೀ ಇಲ್ಲವೇ ಇಲ್ಲ. ಯಾಕೆಂದರೆ, ಅವನ ದೇಹ ‘ಪವಿತ್ರ’ ಅಂತ ಯಾರೂ ಆತನಿಗೆ ಪದೇ ಪದೇ ಬೋಧಿಸಿಲ್ಲ!

ಪಾವಿತ್ರ್ಯದ ಕತೆ ಅತ್ತಿರಲಿ, ಆದ ದಾಳಿಯ ಅವಮಾನ, ದೈಹಿಕ ಹಲ್ಲೆಯ ನೋವಿನಿಂದ ನರಳುತ್ತಿರುವವಳು ತಪ್ಪಿಸಿ ಕೊಳ್ಳಲಾಗದಿದ್ದರೆ ‘ಆನಂದಿಸ’ಬೇಕಂತೆ! ಅಲ್ಲಿಗೆ ಅವನಿಗೆ ಪೂರ್ತಿ ಮಾಫಿ! ಎಷ್ಟೊಂದು ಅಸೂಕ್ಷ್ಮವಾಗಿದ್ದೇವಲ್ಲಾ ನಾವು? ಇದು ಕೇವಲ ಅಸೂಕ್ಷ್ಮವೇ? ಅಥವಾ ಇದು ತಮ್ಮದಲ್ಲದ ಹೆಣ್ಣಿನ ಕ್ಷೇತ್ರದ ಮೇಲೆ ಸ್ಥಾಪಿಸಿದ್ದ ಹಕ್ಕಿನ ಮರುಕಳಿಕೆಯೇ? ಎರಡನೆಯದೇ ನಿಜವಾದ್ದು. ಹೆಣ್ಣಿನ ದೇಹದ ಮೇಲಿನ ಹಕ್ಕು ಹೆಣ್ಣಿನದಷ್ಟೇ ಎಂಬುದನ್ನು ಇಂದಿಗೂ ಎಷ್ಟೋ ಜನ ಹೆಣ್ಣುಮಕ್ಕಳೂ ಒಪ್ಪುವುದಿಲ್ಲ. ಅಷ್ಟರಮಟ್ಟಿಗೆ ಅವರಿಂದ ಅದನ್ನು ಅಪಹರಿಸಿ ಅವರನ್ನು ಆಳಲು ಅವರದೇ ಸಮ್ಮತಿ ಪಡೆದಾಗಿದೆ.

ಸಮ್ಮತಿ ಹುಟ್ಟುಹಾಕಿಕೊಳ್ಳುವ ಈ ನಿರಂತರ ನಡೆಗಳ ನಡುವೆಯೇ, ಸ್ವಾಭಿಮಾನದ ಬಿಸುಪು ಕಾಪಿಟ್ಟುಕೊಳ್ಳಬೇಕಾದ ಜನಸಮುದಾಯಗಳು ಮತ್ತೆ ಮತ್ತೆ ಮರವೆಯೆಡೆಗೆ ಚಲಿಸುವುದೂ ನಡೆಯುತ್ತಲೇ ಇರುವುದನ್ನೂ ಗಮನಿಸಿಕೊಳ್ಳಬೇಕಿದೆ. ಎಷ್ಟೆಲ್ಲ ಹೋರಾಟಗಳಿಂದ ಪಡೆದುಕೊಂಡಿದ್ದನ್ನು ಕೆಲವು ತಲೆಮಾರುಗಳ ನಂತರದವರು ಮರೆಯುವಲ್ಲಿ, ಒಳ ವಿಮರ್ಶೆಯ ಕೊರತೆಯು ಕೆಲಸ ಮಾಡುತ್ತಿರುತ್ತದೆ. ಹಿಂದಿನವರ ಹೋರಾಟದ ಫಲವಾಗಿ ಇಂದು ಒಂದು ಹಂತದ ಸವಲತ್ತು ಪಡೆದ ತಲೆಮಾರು, ಶೋಷಕರ ಪರ ಚಿಂತನೆಯೆಡೆಗೆ ವಾಲುತ್ತದೆಯೇ ವಿನಾ ತನ್ನದೇ ಸಮುದಾಯದವರ ಶೋಷಣೆಯೆಡೆಗೆ ಚಿಂತಿತವಾಗುವುದಿಲ್ಲ.

ಆಳುವವರಾಗುವುದಕ್ಕಾಗಿ ಅವರೊಂದಿಗೆ ಗುರುತಿಸಿಕೊಳ್ಳಲು ಹೊಸ ಅಖಾಡ ಬೇಕಿರುತ್ತದೆ. ತನ್ನ ಸಮುದಾಯ ಕೇವಲ ಐಡೆಂಟಿಟಿ ಆಗಿಬಿಡುವ ಸಂಭಾವ್ಯತೆಯೂ ಇರುತ್ತದೆ. ಇಂತಹ ಹೊತ್ತಿನಲ್ಲಿ ಬೇಕಿರುವುದು ಒಳವಿಮರ್ಶೆಯ ಎಚ್ಚರ.

ಈ ತಿಂಗಳು ನಮ್ಮನ್ನಗಲಿದ ಅಮೆರಿಕನ್ ಆಫ್ರಿಕನ್ ಸ್ತ್ರೀವಾದಿ ಬೆಲ್ ಹುಕ್ಸ್, ಸ್ತ್ರೀವಾದಕ್ಕೆ ಒಳವಿಮರ್ಶೆಯ ವಿಸ್ತಾರವನ್ನು ನೀಡಿದವರು. ಲೈಂಗಿಕತಾವಾದ, ಶೋಷಣೆ, ದಮನಗಳನ್ನು ಕೊನೆಗಾಣಿಸುವ ಚಳವಳಿಯೇ ಸ್ತ್ರೀವಾದವಾಗಿದ್ದು, ಸ್ತ್ರೀ, ಪುರುಷರೆಲ್ಲರೂ ಇದರಲ್ಲಿ ಭಾಗಿಗಳಾದಾಗ ಇಬ್ಬರೂ ಪಡೆವ ಬಿಡುಗಡೆಯನ್ನು ಪ್ರೀತಿಯಿಂದ ಪ್ರತಿಪಾದಿಸಿದವರು. ಆದರೆ, ಪುರುಷನಿರುವ ಜಾಗದಲ್ಲೆಲ್ಲಾ ಸ್ತ್ರೀ ಹೋಗಿ ಕುಳಿತುಕೊಂಡ ತಕ್ಷಣ ಆಕೆಯ ಬಿಡುಗಡೆ ಆಗಿಬಿಡುತ್ತದೆ ಎಂಬ ತಪ್ಪು ಅರ್ಥೈಸುವಿಕೆಯನ್ನು ಸ್ತ್ರೀವಾದದ ಕುರಿತಾಗಿ ಪ್ರಚುರಪಡಿಸುವುದು ನಡೆಯುತ್ತಿರುತ್ತದೆ. ಹೋರಾಟವು ಒಂದು ಹಂತ ತಲುಪಿದಾಗ ಅದು ನೀಡುವ ಸವಲತ್ತಿನಿಂದ ತೃಪ್ತರಾದ ಮೇಲ್ವರ್ಗದ ಮಹಿಳೆಯರು ಇದನ್ನು ಅವಕಾಶವಾಗಿ ಮಾತ್ರ ನೋಡುತ್ತಾ, ಲಿಂಗ ತರತಮವಾದೀ ಧೋರಣೆಯುಳ್ಳವರನ್ನೇ ಬೆಂಬಲಿಸ ತೊಡಗುವ ಅಪಾಯ ಹುಟ್ಟಿಕೊಳ್ಳುತ್ತದೆ. ಇದೆಲ್ಲವನ್ನೂ ಗಮನಕ್ಕೆ ತಂದು, ಬಿಳಿಯ ಸ್ತ್ರೀವಾದಿಗಳು ಕರಿಯ ಸ್ತ್ರೀವಾದಿಗಳನ್ನು ಒಳಗೊಳ್ಳದಿರುವ ವಿದ್ಯಮಾನವನ್ನು ಗುರುತಿಸಿ ಪರಸ್ಪರ ಕೈಹಿಡಿದು ನಡೆಯುವುದಕ್ಕೆ ಕಾರಣರಾದವರು ಈಕೆ. ಶೋಷಕರನ್ನು ದ್ವೇಷಿಸದೆಯೇ, ಅವರೊಳಗಣ ಸಮಸ್ಯೆಯನ್ನು ತಿದ್ದಿ ಕೈನೀಡುವ ಈ ದೃಷ್ಟಿಗೆ ಹಂಚಿ ಉಣ್ಣುವ ಜನಪದ ವಿವೇಕವಿದೆ. ಇದು ಮನಸ್ಸನ್ನು ಬೆಳಗಿಸುವ ನಡೆ.

ಪಳಗಿಸುವವರ ನಡುವೆ ಬೆಳಗಿಸುವವರೂ ಇರುವುದೇ ಬದುಕಿನೆಡೆಗೊಂದು ಆಶಾವಾದಿತನವನ್ನು ಹುಟ್ಟಿಸುತ್ತದೆ.

ಲೇಖಕಿ: ಪ್ರಾಧ್ಯಾಪಕಿ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ತರೀಕೆರೆ

ಚುರುಮುರಿ



ಕಾಣ್ತೆತೆ, ಆದ್ರೆ ಕಾಣಕ್ಕಿಲ್ಲ!

• ಲಿಂಗರಾಜು ಡಿ.ಎಸ್.

‘ಅಲ್ಲ, ಶೇರುಪೇಟೆ ಐಲು ಬಂದಂಗೆ ಮ್ಯಾಕ್ಕೋಯ್ತದೆ ಕೆಳಿಕ್ಕೋಯ್ತದೆ. ಮೊನ್ನೆ 9 ಲಕ್ಷ ಕೋಟಿ ಕೈಬುಡ್ತಂತೆ ಕನ್ರೋ! ಆ ದುಡ್ಡೆಲ್ಲಾ ಯಾರಿಗೆ ಸೇರಿಕ್ಯತ್ತು ಅಂತ್ಲೇ ಗೊತ್ತಾಯ್ತಿಲ್ಲ’ ಯಂಟಪ್ಪಣ್ಣ ಕಳವಳ ವ್ಯಕ್ತಪಡಿಸಿತು.

‘ಯಂಟಪ್ಪಣ್ಣ ಶೇರುಪೇಟೇಲಿ ಎಪ್ಪೆಸ್ ಆದ ದುಡ್ಡು ಲೆಕ್ಕಕ್ಕೂ- ಜಮಕ್ಕೂ ಸಿಕ್ಕಕುಲ್ಲ! ಆದ್ರೂ ಸುಮ್ನೆ ಕೇಳ್ತೀನಿ, ಈ ಕೆತ್ತೆಬಜೆ ನಿಮಿಗ್ಯಾಕೆ?’ ಅಂದರು ತುರೇಮಣೆ.

‘ಸಾ, ಹಂಗಂದ್ರೆಂಗೆ? ಅದೇನು ಕಾರುಬಾರು ಬುಡಸೇಳಿ ಸಾ!’ ನಾನು ಕೇಳಿದೆ.

‘ಲೋ ಬಡ್ಡೆತ್ತವಾ, ಮೋದಿ ದೊಡ್ಡಪ್ಪಾರು ಎಲೆಕ್ಷನ್ನಿಗೆ ನಿಂತಾಗ ‘ಸ್ವಿಸ್ ಬ್ಯಾಂಕಿಂದ ಬ್ಲಾಕ್‌ಮನಿ ತಂದು ಎಲ್ಲಾರಿಗೂ ತಲಾ 15 ಲಕ್ಷ ಕೊಡ್ತೀನಿ ಅಂದುರಲಿಲ್ಲವೇ? ಅದು ಬಂತಾ? ಮನ್ನೆ ಬಸಣ್ಣ ಬೆಂಗಳೂರಲ್ಲಿ 834 ಕಿಲೊಮೀಟರ್ ಗುಂಡಿ ರಿಪೇರಿ ಆಗ್ಯವೆ ಅಂತಲ್ಲಾ, ಎಲ್ಲಿ? ಹತ್ವೊರ್ಸ ಗ್ಯಾರೆಂಟಿ ಅಂತ ವೈಟ್‌ಟಾಪಿಂಗ್ ಮಾಡಿದ್ದ ರೋಡು ವರ್ಸದೊಳಗೇ ಕಿತ್ತು ಲಾಚಾರಾಗದಲ್ಲಾ ಆ ಸಿಮೆಂಟೆಲ್ಲಾ ಎತ್ತಗೋಯ್ತು? ‘ವಿಧಾನಸಭೆ ಕಲಾಪ ಧರಣಿ ಮಾಡಿಕ್ಯಂಡೇ ನಾಚಾರ್ಲಾಗದೆ. ನಾನು ಅಸಹಾಯಕ’ ಅಂದವ್ರೆ ಅಧ್ಯಕ್ಷರು’.

‘ಸದನದಲ್ಲಿದ್ದ ಮೂರೂಮುಕ್ಕಾಲು ಸದಸ್ಯರಿಗೆ ಅಮರಿಕ್ಯಂಡಿದ್ದ ಬಾಲಗ್ರಹ ಎಲ್ಲೀದು? ಜನಕ್ಕೆ ಎಲ್ಲರೂ ಸೇರಿ ಎರಚ್ತಿರೋ ಮಂಕುಬೂದಿ ಕಾಣಿಸ್ತಾ ಅದಾ? ಇಲ್ಲ ತಾನೆ? ಈ ಪ್ರಶ್ನೆಗಳಿಗೆ ನಿಮ್ಮಯ್ಯನಾಣೆಗೂ ಉತ್ತರ ಗೊತ್ತಿಲ್ಲ ಅಲ್ಲುವೇ! ನೋಡ್ಲಾ, ಶೇರುಪೇಟೆ ದುಡ್ಡೂ ಹಿಂಗೀಯೇ! ಪೂರ್ಣಚಂದ್ರತೇಜಸ್ವಿ ಕಥೇಲಿ ಪ್ಯಾರ ‘ಕಾಣ್ತೆತೆ ಸಾಮಿ, ಆದ್ರೆ ಕಾಣಕ್ಕಿಲ್ಲ’ ಅಂದ್ನಲ್ಲಾ ಹಂಗೇ ಶೇರುಪೇಟೆ ಕಾಸೂ ಕಾಮಗಾರಿ ಪರ್ಸೆಂಟೇಜ್ ಥರಾ ಕಾಣ್ತದೆ, ಆದ್ರೆ ಯಾರಿಗೆ, ಎಷ್ಟೋಗ್ಯದೆ ಅಂತ ಬಿಲ್ಕುಲ್ ಗೊತ್ತಾಗಕುಲ್ಲ’ ಅಂದು ನಿಟ್ಟುಸಿರುಬುಟ್ಟರು.

‘ಅಂದ್ರೆ, ಈ 2021ನೇ ವರ್ಸ ಜನಕ್ಕೆ ಮಾಯಾಬಜಾರ್ ತೋರಿಸ್ಯದೆ! 2022ಕ್ಕೆ ಒಮ್ಮೆಕ್ರಾನ್ ಇನ್ನೇನು ತೋರಿಸ್ತದೋ! ಓ ಮೈ ಗಾಡ್!’ ಅಂದು ನನ್ನ ನಿಟ್ಟುಸಿರು ಸೇರಿಸಿದೆ.

ಸಂಗತ

ಮಹಿಳಾ ವಿ.ವಿ: ಬೇಕಿದೆ ಕಾಯಕಲ್ಪ

ಶಿಕ್ಷಣದ ಮೂಲಕ ಮಹಿಳೆಯರ ಸರ್ವಾಂಗೀಣ ಸಬಲೀಕರಣದ ಗುರಿಯನ್ನು ಹೊಂದಿರುವ ಈ ವಿಶ್ವವಿದ್ಯಾಲಯವು ಮೂರು ನೆಲೆಯ ಸವಾಲುಗಳನ್ನು ಎದುರಿಸುತ್ತಿದೆ

• ಪ್ರೊ. ಸಬಿಹಾ ಭೂಮಿಗೌಡ

ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವನ್ನು ವಿಜಯಪುರದಲ್ಲಿ ಆರಂಭಿಸುವಾಗ ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕದ ಹದಿಮೂರು ಜಿಲ್ಲೆಗಳ ವ್ಯಾಪ್ತಿ ನಿಗದಿಯಾಗಿತ್ತು. ಕರ್ನಾಟಕ ಸರ್ಕಾರವು 2017ರಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸಿ ರಾಜ್ಯಪತ್ರವನ್ನು ಹೊರಡಿಸಿತು. ಅದರ ಪ್ರಕಾರ, ಎಲ್ಲಾ ಸರ್ಕಾರಿ ಮಹಿಳಾ ಪದವಿ ಮಹಾವಿದ್ಯಾಲಯಗಳು ಮತ್ತು ಇನ್ನು ಮುಂದೆ ಆರಂಭವಾಗುವ ಮಹಿಳಾ ಪದವಿ ಮಹಾವಿದ್ಯಾಲಯಗಳು ಈ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರಬೇಕಿತ್ತು. ಆದರೆ ಈ ಆದೇಶ ಕಾಗದದಲ್ಲಿ ಮಾತ್ರ ಉಳಿದಿದ್ದು, ಇನ್ನೂ ಆಡಳಿತಾತ್ಮಕವಾಗಿ ಜಾರಿ ಆಗಿಲ್ಲ.

ದೂರದೂರದ ಕಾಲೇಜುಗಳ ಜೊತೆ ಆಡಳಿತಾತ್ಮಕ ದೂರವನ್ನು ಪ್ರಾದೇಶಿಕ ಕೇಂದ್ರಗಳ ಸ್ಥಾಪನೆಯ ಮೂಲಕ ನಿವಾರಿಸುವ ಸಿದ್ಧತೆಯೂ ಆಗಿತ್ತು. ಈಗಾಗಲೇ ಮಹಿಳಾ ವಿಶ್ವವಿದ್ಯಾಲಯವು ಮಂಡ್ಯ, ಸಿಂಧನೂರು (ರಾಯಚೂರು ಜಿಲ್ಲೆ) ಮತ್ತು ಉಡುತಡಿಗಳಲ್ಲಿ (ಶಿವಮೊಗ್ಗ ಜಿಲ್ಲೆ) ಪ್ರಾದೇಶಿಕ ಮತ್ತು ಹೊರಾವರಣ ಕೇಂದ್ರಗಳನ್ನು ಹೊಂದಿದೆ. ಈ ಭೌಗೋಳಿಕ ವ್ಯಾಪ್ತಿ ಮತ್ತು ವಿಶ್ವವಿದ್ಯಾಲಯ ಸ್ಥಾಪನೆಯ ಧ್ಯೇಯೋದ್ದೇಶದ ಮೂಲಕವೇ ನಾವು ಅದರ ಕಾಯಕಲ್ಪದ ಕುರಿತು ಮಾತನಾಡಬೇಕಾಗಿದೆ.

ಶಿಕ್ಷಣದ ಮೂಲಕ ಮಹಿಳೆಯರ ಸರ್ವಾಂಗೀಣ ಸಬಲೀಕರಣದ ಗುರಿಯನ್ನು ಹೊಂದಿರುವ ಈ ವಿಶ್ವವಿದ್ಯಾಲಯವು ಮೂರು ನೆಲೆಯ ಸವಾಲುಗಳನ್ನು ಎದುರಿಸುತ್ತಿದೆ. ಮೊದಲನೆಯದು, ಶೈಕ್ಷಣಿಕವಾಗಿ ಇತರ ವಿಶ್ವವಿದ್ಯಾಲಯಗಳಂತೆ ಪದವಿ, ಸ್ನಾತಕ ಪದವಿ ಮತ್ತು ಸಂಶೋಧನೆ ಕೋರ್ಸ್‌ಗಳನ್ನು ನಡೆಸುವುದು. ಇದರಲ್ಲಿ ಪಾಠಪಠ್ಯ (ಸಿಲೆಬಸ್) ತಯಾರಿಯಲ್ಲಿ ಲಿಂಗಸೂಕ್ಷ್ಮತೆ, ಮಹಿಳಾ ಸಬಲೀಕರಣದ ಮಾದರಿ ನೀಡಿಕೆ ಮತ್ತು ಎಲ್ಲಾ ಜ್ಞಾನ ಶಿಸ್ತುಗಳಲ್ಲಿ ಮಹಿಳಾ ಲೋಕದೃಷ್ಟಿಯ ವಿನ್ಯಾಸ ತಿಳಿಸುವ, ಬೆಳೆಸುವ ಕ್ರಮವನ್ನು ವಿಶ್ವವಿದ್ಯಾಲಯ ಜಾರಿಯಲ್ಲಿಟ್ಟಿದೆ.

ಎರಡನೆಯದು, ತನ್ನ ಸ್ಥಾಪನೆಯ ಧ್ಯೇಯೋದ್ದೇಶದ ಈಡೇರಿಕೆಗೆ ಶಿಕ್ಷಣದ ಸಿದ್ಧಚೌಕಟ್ಟಿನ ಮಾದರಿಗಳನ್ನು ಮುರಿದು ಕಟ್ಟುವ ಬಗೆಯನ್ನು ಶೋಧಿಸುವುದಾಗಿದೆ. ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಇರುವ ಮಹಿಳಾ ಸಂಶೋಧನಾ ವಿದ್ಯಾರ್ಥಿಗಳ ಸಂಖ್ಯೆಯಷ್ಟು ವಿದ್ಯಾರ್ಥಿನಿಯರನ್ನು ಮಹಿಳಾ ವಿಶ್ವವಿದ್ಯಾಲಯ ಒಂದರಲ್ಲೇ ಕಾಣಬಹುದು. ಇಲ್ಲಿನ ಎಲ್ಲ ಸಂಶೋಧನಾ ಮಹಾಪ್ರಬಂಧಗಳು ಹಾಗೂ ಸಂಶೋಧನಾ ಯೋಜನೆಗಳು, ಆದಿವಾಸಿ, ಅಲೆಮಾರಿ, ಗ್ರಾಮೀಣ, ಅಸಂಘಟಿತ ವಲಯದ ಮಹಿಳೆಯರ ಸಮಸ್ಯೆಗಳು, ಅವರ ಆರೋಗ್ಯ, ಪೌಷ್ಟಿಕತೆ, ಸಾಮಾಜಿಕ- ರಾಜಕೀಯ ಪಾಲ್ಗೊಳ್ಳುವಿಕೆ, ಆರ್ಥಿಕ ಸ್ಥಿತಿಗತಿಗಳ ಕುರಿತು ಬೆಳಕು ಚೆಲ್ಲುತ್ತವೆ.

ಯೋಜನೆಗಳು ಮತ್ತು ಮಹಾಪ್ರಬಂಧಗಳು ರಾಜಕೀಯ ರಂಗದಲ್ಲಿ ನೀತಿ ನಿರೂಪಣೆ ಮಾಡುವಲ್ಲಿ ಗಣನೀಯ ಕೊಡುಗೆಯನ್ನು ನೀಡಿವೆ. ಇಂತಹ ಕಾರ್ಯಕ್ರಮ ಮತ್ತು ಯೋಜನೆಗಳು ಅನುದಾನದ ಕೊರತೆಯನ್ನು ಎದುರಿಸುತ್ತಿವೆ. ಈ ಕೊರತೆಯನ್ನು ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅನುದಾನ ಬಿಡುಗಡೆ ಮಾಡುವ ಮೂಲಕ ಪರಿಹರಿಸಬಹುದು. ಇದಕ್ಕೆ ಬೇಕಿರುವುದು ರಾಜಕೀಯ ಇಚ್ಛಾಶಕ್ತಿ ಮಾತ್ರ.

ಮೂರನೆಯದು, ಈ ವಿಶ್ವವಿದ್ಯಾಲಯವು ಹತ್ತರಲ್ಲಿ ಒಂದು ಅಷ್ಟೇ ಎಂಬ ಸರ್ಕಾರದ ಧೋರಣೆಯನ್ನು ಪರಾಮರ್ಶಿಸಿಕೊಳ್ಳುವಂತೆ ಒತ್ತಾಯಿಸಿ, ವಿಶೇಷ ಸ್ಥಾನಮಾನಕ್ಕಾಗಿ ಪ್ರಯತ್ನಿಸುವುದು.

ಮಹಿಳಾ ವಿಶ್ವವಿದ್ಯಾಲಯದ ಸರ್ವಾಂಗೀಣ ಅಭಿವೃದ್ಧಿಗಾಗಿ ವಿಧಾನಸಭೆಯ ‘ಭರವಸೆ ಸಮಿತಿ’ಯ ಸಹಕಾರವನ್ನು ನೆನಪಿಸಿಕೊಳ್ಳಬೇಕು. ಅರುಣ್ ಶಹಾಪುರ, ಬಸವರಾಜ ಹೊರಟ್ಟಿ ಮುಂತಾದವರ ಆಸ್ಥೆಯಿಂದ ಸಮಿತಿಯ ಸಭೆಯು ವಿಶ್ವವಿದ್ಯಾಲಯದಲ್ಲಿ 2019ರಲ್ಲಿ ನಡೆದಿತ್ತು. ಆಗ ಭರವಸೆ ಸಮಿತಿಯು ನೀಡಿದ ಶಿಫಾರಸುಗಳು ಅನುಷ್ಠಾನಕ್ಕೆ ಬಂದಲ್ಲಿ ಕಾಯಕಲ್ಪ ಖಂಡಿತ ಸಾಧ್ಯವಿದೆ. ಮುಖ್ಯವಾಗಿ ಇದಕ್ಕೂ ಸರ್ಕಾರದ ಇಚ್ಛಾಶಕ್ತಿ ಬೇಕಾಗಿದೆ.

ಕೋವಿಡ್ ಹಿನ್ನೆಲೆಯಲ್ಲಿ ಸರ್ಕಾರವು ವಿಶ್ವವಿದ್ಯಾಲಯಕ್ಕೆ ನೀಡುತ್ತಿದ್ದ ಅಭಿವೃದ್ಧಿ ಅನುದಾನ ಕುಸಿತ ಕಂಡಿದೆ. ಎಲ್ಲವನ್ನೂ ಆಂತರಿಕ ಸಂಪನ್ಮೂಲದಿಂದ ಕೈಗೊಳ್ಳುವಂತೆ ಹೇಳಲಾಗುತ್ತಿದೆ. ಇತರ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ, ಮಹಿಳಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ಸಂಖ್ಯೆ ನಾಲ್ಕೈದು ಪಟ್ಟು ಕಡಿಮೆ. ವ್ಯಾಪ್ತಿ ನಾಲ್ಕೈದು ಪಟ್ಟು ಹೆಚ್ಚು. ಇದರಿಂದ ಆಡಳಿತಾತ್ಮಕ ಹೊರೆ ಅಧಿಕ. ಕಾಯಂ ಶಿಕ್ಷಕೇತರ ಸಿಬ್ಬಂದಿಯಿಲ್ಲದ ಕೊರತೆಯಿಂದ ಆರ್ಥಿಕ ಹೊರೆ ಇನ್ನಷ್ಟು ಹೆಚ್ಚಿದೆ. ಇಂಥ ವಿಶಿಷ್ಟ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲು ಮಾಡಿದ ಪ್ರಯತ್ನಗಳು ಯಶಸ್ಸು ಕಂಡಿಲ್ಲ.

ಮೇಲಿನ ವಿಚಾರಗಳ ಜೊತೆ ಮಹಿಳಾ ಮಹಾವಿದ್ಯಾಲಯಗಳಲ್ಲಿ ಯುಜಿಸಿ ಮಾರ್ಗಸೂಚಿಯಂತೆ ಮಹಿಳಾ ಅಧ್ಯಯನ ಕೇಂದ್ರದ ಸ್ಥಾಪನೆ, ಐಚ್ಛಿಕ ಮಹಿಳಾ ಅಧ್ಯಯನ ಪತ್ರಿಕೆಯ ಆರಂಭ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ‘ಮಹಿಳಾ ಅಧ್ಯಯನ’ ಓದಿದವರಿಗೆ ಉದ್ಯೋಗಾವಕಾಶ ವಿಸ್ತರಿಸುವುದು ಹಾಗೂ ಬಹುಮುಖ್ಯವಾಗಿ ಕರ್ನಾಟಕ ಸರ್ಕಾರವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅನುದಾನದಲ್ಲಿ ನಿರ್ದಿಷ್ಟ ಮೊತ್ತವನ್ನು ಮಹಿಳೆ ಮತ್ತು ಮಕ್ಕಳ ವಿವಿಧ ಕಾರ್ಯಕ್ರಮ ಹಾಗೂ ಸಂಶೋಧನಾ ಯೋಜನೆಗಳಿಗೆ ನಿರಂತರವಾಗಿ ನೀಡುವುದರಿಂದ ಕಾಯಕಲ್ಪ ನೀಡಿದಂತೆ ಆಗುತ್ತದೆ.

ಲೇಖಕಿ: ವಿಶ್ರಾಂತ ಕುಲಪತಿ, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ

ವಾಚಕರ ವಾಣಿ

ಮತ್ತೆ ಯಾವಾಗ ಬರೆ ಎಳೆಯುವುದೋ?

ಪಾದರಕ್ಷೆ ಮತ್ತು ಬಟ್ಟೆಗಳ ಮೇಲಿನ ಜಿಎಸ್‌ಟಿ ದರವು ಜನವರಿ 1ರಿಂದ ಶೇ 5ರಿಂದ ಶೇ 12ಕ್ಕೆ ಏರಿಕೆಯಾಗಲಿರುವ ವಿಷಯ ಕೇಳಿ ಆಘಾತವಾಯಿತು. ಜಿಎಸ್‌ಟಿ ದರವನ್ನು ಏಕಾಏಕಿ ಶೇ 140ರಷ್ಟು ಹೆಚ್ಚಿಸುವುದರ ಅವಶ್ಯಕತೆ ಏನು? ಈಗಾಗಲೇ ಆರ್ಥಿಕ ಸಂಕಷ್ಟದಿಂದ ತತ್ತರಿಸುತ್ತಿರುವವರ ಗಾಯದ ಮೇಲೆ ಬರೆ ಎಳೆದಂತೆ ಆಗಿದೆ.

ಪಾದರಕ್ಷೆ ಮತ್ತು ಬಟ್ಟೆ ಪ್ರತಿಯೊಬ್ಬರೂ ಉಪಯೋಗಿಸುವ ವಸ್ತುಗಳಾಗಿವೆ. ದೇಶದ ಶೇಕಡ 100ರಷ್ಟು ಜನ ಉಪಯೋಗಿಸುವ ವಸ್ತುಗಳ ಮೇಲೆ ಜಿಎಸ್‌ಟಿ ದರ ಏರಿಸಿ ವಸೂಲಿ ಮಾಡುವ ಯೋಜನೆಗೆ ಸರ್ಕಾರ ಮುಂದಾಗಿದೆ. ಗ್ಯಾಸ್, ಪೆಟ್ರೋಲ್, ಡೀಸೆಲ್ ದರ ಈಗಾಗಲೇ ವಿಪರೀತಕ್ಕೆ ಹೋಗಿದೆ. ಮುಂದಿನ ದಿನಗಳಲ್ಲಿ ಸರ್ಕಾರ ಇನ್ನು ಯಾವುದರ ರೂಪದಲ್ಲಿ ಜನರಿಗೆ ಮತ್ತೆ ಬರೆ ಎಳೆಯುವ ಯೋಜನೆ ರೂಪಿಸಿದೆಯೋ ಬಲ್ಲವರಾರು?

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ರಾತ್ರಿ ಕರ್ಫ್ಯೂ: ಸ್ವಾಗತಾರ್ಹ ನಡೆ

ಹೊಸ ವರ್ಷ ಆಚರಣೆಯ ನೆಪದಲ್ಲಿ ಕೆಲವರು ‘ನಾನು ದುಡಿಯುತ್ತೇನೆ, ನಾನು ಖರ್ಚು ಮಾಡುತ್ತೇನೆ, ಯಾರ ಹಂಗೇನು?’ ಎಂಬಂತೆ ದುಪ್ಪಟ್ಟು ಹಣ ಕೊಟ್ಟು ಮೋಜು ಮಸ್ತಿಗಾಗಿ ಬೆಂಗಳೂರಿನ ಬಾರ್, ಕ್ಲಬ್ ಮತ್ತು ಹೋಟೆಲ್‌ಗಳಿಗೆ ಹೋಗುತ್ತಾರೆ. ಇಂತಹ ಪಡ್ಡೆ ಹೈಕಳುಗಳ ಹಣದ ಪರ್ಸ್ ಕಂಡ ಬಾರ್ ಮಾಲೀಕರು ತರತರಹದ ರಂಗಿನಾಟ ಆಯೋಜಿಸಿ, ಒಂದು ತಿಂಗಳಲ್ಲಿ ಅವರಿಗೆ ಆಗುವ ವ್ಯಾಪಾರದ ಹಣವನ್ನು ಒಂದೇ ದಿನದಲ್ಲಿ ಬಾಚಿಕೊಳ್ಳುತ್ತಾರೆ. ಇದನ್ನು ಅರಿಯದ ಜನ ಕೆರೆಯ ನೀರನು ಕೆರೆಗೆ ಚೆಲ್ಲಿದಂತೆ ಬೆಂಗಳೂರಲ್ಲಿ ದುಡಿದ ಹಣವನ್ನು ಬೆಂಗಳೂರಲ್ಲಿಯೇ ವ್ಯಯ ಮಾಡುತ್ತಾರೆ. ಇತ್ತೀಚೆಗೆ ಈ ಕೆಟ್ಟ ಸಂಪ್ರದಾಯ ಎಲ್ಲ ಕಡೆಗೂ ವ್ಯಾಪಿಸುತ್ತಿದೆ.

ಹದಿಹರೆಯದ ಜೀವಗಳು ಕುಡಿಯದಿದ್ದರೆ, ಕುಣಿಯದಿದ್ದರೆ, ಕೂಗಾಡದಿದ್ದರೆ ಹೊಸ ವರ್ಷ ಬರುವುದಿಲ್ಲವೇ? ಹೊಸ ವರ್ಷವನ್ನು ಸ್ವಾಗತಿಸಲು ಹೋಟೆಲ್‌ಗಳಿಗೇ ಹೋಗಬೇಕೆ? ಅಷ್ಟಕ್ಕೂ ನಮ್ಮ ಭಾರತೀಯ ಪರಂಪರೆಯಂತೆ ಹೊಸ ವರ್ಷ ಬರುವುದು ಯುಗಾದಿಗೆ. ನಾವು ಜಾಗತೀಕರಣದ ವ್ಯಾಮೋಹದಲ್ಲಿ ನಮ್ಮ ನೆಲದ ಪದ್ಧತಿಗಳನ್ನು ಬದಿಗೊತ್ತುತ್ತಿದ್ದೇವೆ. ಈ ದಿಸೆಯಲ್ಲಿ ಎಚ್ಚೆತ್ತ ಸರ್ಕಾರ ರಾತ್ರಿ ಕರ್ಫ್ಯೂ ವಿಧಿಸಿದ್ದು ಸ್ವಾಗತಾರ್ಹ ನಡೆ.

ಗಣಪತಿ ನಾಯ್ಕ್, ಕಾನಗೋಡ

ಮರೆಯಾಗುತ್ತಿದೆ ಕೋವಿಡ್ ಮಾರ್ಗಸೂಚಿ

ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿರುವುದು ಸರಿಯಷ್ಟೆ. ಆದರೆ ಕೊರೊನಾ ಒಂದನೇ ಮತ್ತು ಎರಡನೇ ಅಲೆ ಕಾಲಘಟ್ಟದಲ್ಲಿ ಅನುಭವಿಸಿದ ಸಾವು-ನೋವು, ಭಂಗ, ಬಡತನ, ವಲಸೆ ಅಲೆದಾಟದ ಅನುಭವ ಎಲ್ಲವನ್ನೂ ಮರೆತು ಜನ ಈಗ ಬಿಡುಬೀಸಾಗಿ ಭಕ್ತಿಯ ಅಮಲೇರಿಸಿ ಕೊಂಡು ಗುಡಿ, ಚರ್ಚು, ಮಸೀದಿಗಳಲ್ಲಿ ಗುಂಪು ಸೇರುವುದು ಇತ್ತೀಚೆಗೆ ಅತಿಯಾಗುತ್ತಿದೆ. ಧಾರ್ಮಿಕ ಸ್ಥಳವೊಂದರಲ್ಲಿ ಇತ್ತೀಚೆಗೆ ಸಾವಿರಾರು ಗಂಡಸರು, ಮಕ್ಕಳು, ಮಹಿಳೆಯರು ದರ್ಶನಕ್ಕೆಂದು ಅಂತರ ಕಾಯ್ದುಕೊಳ್ಳದೆ, ಮಾಸ್ಕ್‌ಗಳಿಲ್ಲದೆ ಒತ್ತೊತ್ತಾಗಿ 6-7 ಗಂಟೆ ಸರದಿಯಲ್ಲಿ ಕಾದು ನಿಂತಿದ್ದರಂತೆ. ಅದನ್ನು ಕಂಡ ನಮ್ಮ ಸ್ನೇಹಿತರೊಬ್ಬರು ಬೇಸರ ವ್ಯಕ್ತಪಡಿಸಿದರು. ಹೀಗೆ ಅನೇಕ ಕಡೆ ಭಕ್ತಜನ ಕೊರೊನಾ ಮಾರಿಯನ್ನು ಮರೆತು ವರ್ತಿಸುವುದುಂಟು. ಅಣುರೇಣು ತೃಣಕಾಷ್ಠದಲ್ಲಿಯೂ ಭಗವಂತನಿದ್ದಾನೆ. ಅವನ ಇಚ್ಛೆ ಇಲ್ಲದೆ ಒಂದು ಗರಿಕೆಯೂ ಅಲ್ಲಾಡದು ಎನ್ನುತ್ತದೆ ನಮ್ಮ ಆರ್ಷೇಯವಾಣಿ. ಹೀಗಿರುವಾಗ ದೇವರ ದರ್ಶನ, ಹಬ್ಬ, ಮದುವೆ, ಪ್ರವಾಸ, ರಾಜಕೀಯ ಪ್ರಚಾರಸಭೆ, ಹೊಸ ವರ್ಷಾಚರಣೆಯಂತಹ ಸಂದರ್ಭಗಳಲ್ಲಿ ಜನರು ಕೊರೊನಾ ಮಾರ್ಗಸೂಚಿಯನ್ನು ಮರೆತು ಗುಂಪು ಸೇರುವುದು ‘ದಾರಿಯಲ್ಲಿ ಹೋಗುವ ಮಾರಿಯನ್ನು ಮನೆಹೊಕ್ಕು ಹೋಗು’ ಎಂಬಂತೆ ಆಗುತ್ತದೆಯಲ್ಲವೇ?

ಪ್ರೊ. ಶಿವರಾಮಯ್ಯ, ಬೆಂಗಳೂರು

ಸ್ವಾತಂತ್ರ್ಯ ಹೋರಾಟದ ಆಶಯ ಅಣಕಿಸುವ ನಡೆ

ರಾಷ್ಟ್ರೀಯ ಯೋಗಾಸನ ಸ್ಪೋರ್ಟ್ಸ್ ಫೆಡರೇಷನ್‌ನ ಅಪೇಕ್ಷೆಗೆ ಅನುಗುಣವಾಗಿ ಕೇಂದ್ರ ಶಿಕ್ಷಣ ಸಚಿವಾಲಯವು ಎಲ್ಲಾ ರಾಜ್ಯಗಳ ಶಿಕ್ಷಣ ಇಲಾಖೆಗಳ ಮುಖ್ಯಸ್ಥರಿಗೆ ಪತ್ರ ಬರೆದು, 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಸೂರ್ಯ ನಮಸ್ಕಾರ ಕಾರ್ಯಕ್ರಮ ಆಯೋಜಿಸಲು ತಿಳಿಸಿರುವುದು, ಈ ಪತ್ರಕ್ಕನುಗುಣವಾಗಿ ರಾಜ್ಯದ ಪಿಯು ಕಾಲೇಜುಗಳಲ್ಲಿ ಕಡ್ಡಾಯ ಕಾರ್ಯಕ್ರಮಕ್ಕೆ ಸೂಚಿಸಿರುವುದು ಸ್ವಾತಂತ್ರ್ಯ ಹೋರಾಟದ ಆಶಯವನ್ನು ಅಣಕಿಸುವಂತಿದೆ.

ಸ್ವಾತಂತ್ರ್ಯ ಹೋರಾಟವು ಭಾರತವನ್ನು ಬ್ರಿಟಿಷ್ ಆಡಳಿತದಿಂದ ಬಿಡುಗಡೆಗೊಳಿಸುವ ಆಶಯದ ಜೊತೆಗೆ ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವ ಆಶಯಗಳನ್ನು ಒಳಗೊಂಡಿತ್ತು. ಈ ನೆಲೆಯಲ್ಲಿ ಗಾಂಧಿ, ಅಂಬೇಡ್ಕರ್, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್ ಮುಂತಾದವರು ಪ್ರತಿಪಾದಿಸಿದ ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆಗಳಿಗೂ ಸೂರ್ಯ ನಮಸ್ಕಾರಕ್ಕೂ ಸಂಬಂಧವೇ ಇಲ್ಲ. ಯೋಗಾಸನ ಸ್ಪೋರ್ಟ್ಸ್ ಫೆಡರೇಷನ್ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ 75 ಕೋಟಿ ಸೂರ್ಯ ನಮಸ್ಕಾರ ಕಾರ್ಯಕ್ರಮವನ್ನು ಸ್ವತಂತ್ರವಾಗಿ ಏರ್ಪಡಿಸುವ ಸ್ವಾತಂತ್ರ್ಯವನ್ನು ಪಡೆದಿದೆ. ಆದರೆ ಸರ್ಕಾರವೇ ಅದರ ಪ್ರಮುಖ ಭಾಗವಾಗಿರುವುದು ಸೂಕ್ತವಲ್ಲ. ಒಂದುವೇಳೆ ಬೇರೆಬೇರೆ ಸಂಸ್ಥೆಗಳು ತಮ್ಮ ನಂಬಿಕೆ ಮತ್ತು ಆಚರಣೆಗಳನ್ನು ಆಧರಿಸಿ ಕೋಟ್ಯಂತರ ಜನರನ್ನು ಸೇರಿಸಲು ಅಪೇಕ್ಷೆಪಟ್ಟರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಧಿಕೃತವಾಗಿ ಭಾಗೀದಾರ ಆಗಬೇಕಾಗುತ್ತದೆ. ಭಾಗೀದಾರ ಆಗದಿದ್ದರೆ ಪಕ್ಷಪಾತವಾಗುತ್ತದೆ. ಇಷ್ಟಕ್ಕೂ ಸರ್ಕಾರಗಳು ಮಾಡಬೇಕಾದ ಕಾರ್ಯಕ್ರಮಗಳು ಬೇರೆಯೇ ಇವೆ.

ಬಹುಮುಖ್ಯವಾಗಿ ಸ್ವಾತಂತ್ರ್ಯ ಹೋರಾಟದ ಧಾರೆಗಳನ್ನು ಪರಿಚಯಿಸುವ ಮತ್ತು ದ್ವೇಷ ಬಿಟ್ಟು ದೇಶ ಕಟ್ಟುವ ದೇಶಭಕ್ತಿಯ ಕಾರ್ಯಕ್ರಮಗಳ ಮೂಲಕ ವಿದ್ಯಾರ್ಥಿ ಯುವಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸುವ ಬದಲು ಸಂಸ್ಥೆಯೊಂದರ ಇಂತಹ ಕಾರ್ಯಕ್ರಮಕ್ಕೆ ಸರ್ಕಾರಗಳು ಅಧಿಕೃತವಾಗಿ ಆದ್ಯತೆ ನೀಡುವುದು ಹೋರಾಟ ಮತ್ತು ಸಂವಿಧಾನಾತ್ಮಕ ಆಶಯಗಳಿಗೆ ವಿರುದ್ಧವಾದ ನಡೆಯಾಗಿದೆ. ಇದರಿಂದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಉದಾತ್ತ ಕಲ್ಪನೆಯನ್ನೇ ಕುಬ್ಜಗೊಳಿಸಿದಂತಾಗಿದೆ. ಆದ್ದರಿಂದ ಇಂತಹ ಕಾರ್ಯಕ್ರಮಗಳನ್ನು ಆಯಾ ಸಂಸ್ಥೆಗಳ ಸ್ವತಂತ್ರ ವ್ಯವಸ್ಥೆಗೆ ಬಿಟ್ಟು ಸರ್ಕಾರವು ಡಾ. ಅಂಬೇಡ್ಕರ್ ಅವರ ಆಶಯಗಳಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತೆಗಳ ಕಾರ್ಯಕ್ರಮಗಳನ್ನು ಏರ್ಪಡಿಸಿ ಸ್ವಾತಂತ್ರ್ಯ ಅಮೃತ ಮಹೋತ್ಸವವನ್ನು ಅರ್ಥಪೂರ್ಣಗೊಳಿಸಬೇಕು. ಈಗ ನೀಡಿರುವ ಸೂಚನೆಗಳನ್ನು ವಾಪಸ್ ಪಡೆಯಬೇಕು. ವಾಪಸ್ ಪಡೆಯುವಂತೆ ನೈಜ ದೇಶಪ್ರೇಮಿಗಳು ಒತ್ತಾಯಿಸಬೇಕು.

ಬರಗೂರು ರಾಮಚಂದ್ರಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೇರಳಕ್ಕೆ ಅತ್ಯುತ್ತಮ ಆರೋಗ್ಯ ಉತ್ತರ ಪ್ರದೇಶಕ್ಕೆ ಅನಾರೋಗ್ಯ



ಆರೋಗ್ಯ ಸೂಚ್ಯಂಕ: ಕರ್ನಾಟಕ ಹಿಂದಕ್ಕೆ

ನೀತಿ ಆಯೋಗದ 2019-20ನೇ ಸಾಲಿನ 'ಆರೋಗ್ಯ ಸೂಚ್ಯಂಕ ವರದಿ'ಯಲ್ಲಿ ರಾಜ್ಯಗಳ ನಡುವೆ ಸಾಕಷ್ಟು ಏರಿಳಿತ ಕಂಡುಬಂದಿದೆ. ದೊಡ್ಡ ರಾಜ್ಯಗಳ ಸಾಲಿನಲ್ಲಿ ಕೇರಳ, ತಮಿಳುನಾಡು ಮತ್ತು ತೆಲಂಗಾಣ ರಾಜ್ಯಗಳು ಮೊದಲ ಮೂರು ಸ್ಥಾನದಲ್ಲಿವೆ. ಪಟ್ಟಿಯಲ್ಲಿ ಕೊನೆಯ ರ್‍ಯಾಂಕ್ ಪಡೆದಿದ್ದರೂ, ಉತ್ತರ ಪ್ರದೇಶವು 2018-19ನೇ ಸಾಲಿಗೆ ಹೋಲಿಸಿದರೆ ಗಮನಾರ್ಹ ಪ್ರಗತಿ (5.52 ಶೇಕಡವಾರು ಅಂಶಗಳಷ್ಟು ಏರಿಕೆ) ದಾಖಲಿಸಿದೆ.

ದಕ್ಷಿಣ ಭಾರತದ ರಾಜ್ಯಗಳು ಆರೋಗ್ಯ ಕ್ಷೇತ್ರದ ವಿವಿಧ ಸೂಚಿಗಳಲ್ಲಿ ಪ್ರಗತಿಯತ್ತ ಮುಖ ಮಾಡಿದ್ದರೆ, ಕರ್ನಾಟಕ ಹಿಂದೆ ಬಿದ್ದಿದೆ. 2018-19ನೇ ಸಾಲಿಗೆ ಹೋಲಿಸಿದರೆ, 2019-20ನೇ ಸಾಲಿನಲ್ಲಿ ರಾಜ್ಯವು ಒಂದು ಶ್ರೇಯಾಂಕ ಕುಸಿತ ದಾಖಲಿಸಿದೆ. ರ್‍ಯಾಂಕಿಂಗ್ 8ರಿಂದ 9ಕ್ಕೆ ಇಳಿಕೆಯಾಗಿದೆ. ಅಷ್ಟೇ ಅಲ್ಲದೆ, ಒಟ್ಟಾರೆ ರಾಜ್ಯಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಆಗಿರುವ ಪ್ರಗತಿ ವಿಚಾರದಲ್ಲಿ ಕರ್ನಾಟಕ ಕೊನೆಯ ಸ್ಥಾನದಲ್ಲಿದೆ. ರಾಜ್ಯದ ಪ್ರಗತಿ ಪ್ರಮಾಣವು ಮೈನಸ್ 1.37 ಶೇಕಡವಾರು ಅಂಶಗಳಷ್ಟು ಇಳಿಕೆ ದಾಖಲಿಸಿದೆ.

ಆರೋಗ್ಯ ಕ್ಷೇತ್ರದಲ್ಲಿ ರಾಜ್ಯ ಹಿಂದೆ ಬೀಳಲು ಹಲವು ಅಂಶಗಳು ಕಾರಣವಾಗಿವೆ. ನವಜಾತ ಶಿಶುಗಳ ಮರಣ ಪ್ರಮಾಣ, ಹೆರಿಗೆ ಸಮಯದಲ್ಲಿ ತಾಯಂದಿರ ಮರಣ ಪ್ರಮಾಣ, ಲಿಂಗಾನುಪಾತ, ಆಸ್ಪತ್ರೆಯಲ್ಲಿ ಆಗುವ ಹೆರಿಗೆಗಳ ಪ್ರಮಾಣ ಹಾಗೂ ರಾಜ್ಯದ ಒಟ್ಟು ವೆಚ್ಚದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಮಾಡಲಾಗುವ ವೆಚ್ಚದ ಪ್ರಮಾಣದಲ್ಲಿ ಕುಸಿತ ಕಂಡುಬಂದಿರುವುದೇ ಇದಕ್ಕೆ ಕಾರಣ ಎಂದು ಆರೋಗ್ಯ ಸೂಚ್ಯಂಕ ವರದಿಯ ದತ್ತಾಂಶಗಳು ಸ್ಪಷ್ಟಪಡಿಸಿವೆ.

ರಾಜ್ಯದಲ್ಲಿ ಲಿಂಗಾನುಪಾತ: ಹೆಚ್ಚಿದ ಅಂತರ

2018-19	2019-20
1000:929	1000:924

ಪ್ರಗತಿಯಲ್ಲಿ ರಾಜ್ಯ ಹಿಂದೆ

2018-19ರ ಹೋಲಿಕೆಯಲ್ಲಿ 2019-20ರಲ್ಲಿ ರಾಜ್ಯಗಳ ಅಂಕಗಳಲ್ಲಿ ಆದ ಏರಿಳಿತ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕವು ಗರಿಷ್ಠ ಅಂಕಗಳನ್ನು ಕಳೆದುಕೊಂಡಿದೆ



ಹಿಂದೆ ಬೀಳಲು ಕಾರಣವಾದ ಅಂಶಗಳು ಯಾವ ವಿಭಾಗದಲ್ಲಿ ಹಿನ್ನಡೆ? (ಶೇಕಡವಾರು)



ದೊಡ್ಡ ರಾಜ್ಯಗಳ ರ್‍ಯಾಂಕಿಂಗ್ ಮತ್ತು ಅಂಕ

ರ್‍ಯಾಂಕಿಂಗ್ ಬದಲಾವಣೆ ಇಲ್ಲ | ರ್‍ಯಾಂಕಿಂಗ್ ಇಳಿಕೆ | ರ್‍ಯಾಂಕಿಂಗ್ ಏರಿಕೆ

2018-19 ರ್‍ಯಾಂಕ್	ರಾಜ್ಯ	ಅಂಕ	2019-20 ಅಂಕ	ರಾಜ್ಯ	ರ್‍ಯಾಂಕ್
1	ಕೇರಳ	81.60	82.20	ಕೇರಳ	1
2	ತಮಿಳುನಾಡು	70.79	72.42	ತಮಿಳುನಾಡು	2
3	ಆಂಧ್ರಪ್ರದೇಶ	68.88	69.96	ತೆಲಂಗಾಣ	3
4	ತೆಲಂಗಾಣ	65.74	69.95	ಆಂಧ್ರಪ್ರದೇಶ	4
5	ಮಹಾರಾಷ್ಟ್ರ	65.54	69.14	ಮಹಾರಾಷ್ಟ್ರ	5
6	ಹಿಮಾಚಲ ಪ್ರದೇಶ	63.23	63.53	ಗುಜರಾತ್	6
7	ಗುಜರಾತ್	62.46	63.17	ಹಿಮಾಚಲ ಪ್ರದೇಶ	7
8	ಕರ್ನಾಟಕ	59.29	58.08	ಪಂಜಾಬ್	8
9	ಪಂಜಾಬ್	56.34	57.93	ಕರ್ನಾಟಕ	9
10	ಛತ್ತೀಸಗಢ	50.79	50.70	ಛತ್ತೀಸಗಢ	10
11	ಹರಿಯಾಣ	49.81	49.26	ಹರಿಯಾಣ	11
12	ಒಡಿಶಾ	44.18	47.74	ಅಸ್ಸಾಂ	12
13	ಜಾರ್ಖಂಡ್	44.17	47.55	ಜಾರ್ಖಂಡ್	13
14	ಉತ್ತರಾಖಂಡ	43.63	44.31	ಒಡಿಶಾ	14
15	ಅಸ್ಸಾಂ	43.39	44.21	ಉತ್ತರಾಖಂಡ	15
16	ರಾಜಸ್ಥಾನ	41.57	41.33	ರಾಜಸ್ಥಾನ	16
17	ಮಧ್ಯಪ್ರದೇಶ	33.37	36.72	ಮಧ್ಯಪ್ರದೇಶ	17
18	ಬಿಹಾರ	30.24	31.00	ಬಿಹಾರ	18
19	ಉತ್ತರ ಪ್ರದೇಶ	25.06	30.57	ಉತ್ತರ ಪ್ರದೇಶ	19

ಸಣ್ಣ ರಾಜ್ಯಗಳ ರ್‍ಯಾಂಕಿಂಗ್ ಮತ್ತು ಅಂಕ

2018-19	ರಾಜ್ಯ	ಅಂಕ	2019-20 ಅಂಕ	ರಾಜ್ಯ	
1	ತ್ರಿಪುರಾ	69.97	75.77	ಮಿಜೋರಾಂ	1
2	ಗೋವಾ	66.36	70.16	ತ್ರಿಪುರಾ	2
3	ಮಿಜೋರಾಂ	57.32	55.53	ಸಿಕ್ಕಿಂ	3
4	ಸಿಕ್ಕಿಂ	56.26	53.68	ಗೋವಾ	4
5	ಮಣಿಪುರ	39.99	43.05	ಮೇಘಾಲಯ	5
6	ಅರುಣಾಚಲ ಪ್ರದೇಶ	35.45	34.26	ಮಣಿಪುರ	6
7	ಮೇಘಾಲಯ	25.35	33.91	ಅರುಣಾಚಲ ಪ್ರದೇಶ	7
8	ನಾಗಾಲ್ಯಾಂಡ್	23.57	27.00	ನಾಗಾಲ್ಯಾಂಡ್	8

ಸಣ್ಣ ರಾಜ್ಯಗಳ ರ್‍ಯಾಂಕಿಂಗ್ ಮತ್ತು ಅಂಕ

2018-19	ರಾಜ್ಯ	ಅಂಕ	2019-20 ಅಂಕ	ರಾಜ್ಯ	
1	ಚಂಡೀಗಢ	73.38	66.19	ದಿಯು,ದಮನ್	1
2	ದಿಯು,ದಮನ್	69.72	62.53	ಚಂಡೀಗಢ	2
3	ಪುದುಚೇರಿ	49.26	51.88	ಲಕ್ಷದ್ವೀಪ	3
4	ಅಂಡಮಾನ್ ನಿಕೋಬಾರ್	44.59	50.83	ಪುದುಚೇರಿ	4
5	ಲಕ್ಷದ್ವೀಪ	44.16	49.85	ದೆಹಲಿ	5
6	ದೆಹಲಿ	40.17	47.00	ಜಮ್ಮು,ಕಾಶ್ಮೀರ	6
7	ಜಮ್ಮು ಕಾಶ್ಮೀರ	37.44	44.74	ಅಂಡಮಾನ್ ನಿಕೋಬಾರ್	7

ವರದಿ: ಜಯಸಿಂಹ ಆರ್., ಅಮೃತಕಿರಣ್ ಬಿ.ಎಂ.

ಹೃದ್ರೋಗ ಆರೈಕೆ ಘಟಕಗಳ ಕಡೆಗಣನೆ

ಒಂಬತ್ತು ರಾಜ್ಯಗಳ ಯಾವುದೇ ಜಿಲ್ಲಾಸ್ಪತ್ರೆಯಲ್ಲಿ ಸಕ್ರಿಯವಾಗಿರುವ ಹೃದ್ರೋಗ ಆರೈಕೆ ಘಟಕ (ಸಿಸಿಯು) ಇಲ್ಲವೇ ಇಲ್ಲ. ದೇಶದ ದೊಡ್ಡ ರಾಜ್ಯಗಳ ಪೈಕಿ ಶೇ 50ಕ್ಕಿಂತ ಹೆಚ್ಚು ರಾಜ್ಯಗಳ ಜಿಲ್ಲಾಸ್ಪತ್ರೆಗಳಲ್ಲಿ ಸಿಸಿಯು ಇಲ್ಲ; ಇದ್ದರೂ, ಅಂತಹ ಘಟಕಗಳು ಇರುವ ಜಿಲ್ಲಾಸ್ಪತ್ರೆಗಳ ಪ್ರಮಾಣ ಶೇ 10ಕ್ಕಿಂತಲೂ ಕಡಿಮೆ ಇವೆ.

ಆಮ್ಲಜನಕ ಪೂರೈಕೆ, ವೆಂಟಿಲೇಟರ್, ಮಾನಿಟರ್, ಡೆಫಿಬ್ರಿಲಾಟರ್, ಪೋರ್ಟಬಲ್ ಇಸಿಜಿ ಯಂತ್ರ, ಪಲ್ಸ್ ಆಕ್ಸಿಮೀಟರ್, ಔಷಧ ತಜ್ಞರು ಮತ್ತು ಅಗತ್ಯ ಸಿಬ್ಬಂದಿ ಹೊಂದಿರುವ ಘಟಕಗಳನ್ನು ಮಾತ್ರವೇ ಸಕ್ರಿಯ ಸಿಸಿಯು ಎಂದು ಈ ವರದಿಯಲ್ಲಿ ವ್ಯಾಖ್ಯಾನಿಸಲಾಗಿದೆ.

ದೇಶದ ಆಸ್ಪತ್ರೆಗಳಲ್ಲಿ ಸಂಭವಿಸುವ ಸಾವುಗಳಲ್ಲಿ ಹೃದಯ ಸಂಬಂಧಿ ಕಾಯಿಲೆಗಳಿಂದ ಮೃತಪಡುವವರ ಪ್ರಮಾಣವು ಶೇ 23ರಷ್ಟಿದೆ. 2030ರ ವೇಳೆಗೆ ಈ ಪ್ರಮಾಣವು ಶೇ 31ಕ್ಕೆ ಏರಿಕೆಯಾಗಲಿದೆ ಎಂದು ನೀತಿ ಆಯೋಗವು 'ದೇಶದ ಆಸ್ಪತ್ರೆಗಳಲ್ಲಿ ತುರ್ತು ಮತ್ತು ಗಾಯಾಳು ಆರೈಕೆ ಮಟ್ಟ' ಎಂಬ ವರದಿಯಲ್ಲಿ ಹೇಳಿದೆ. ಆದರೆ ಹೃದಯ ಸಂಬಂಧಿ ಕಾಯಿಲೆಗಳಿಗೆ ಸಂಪೂರ್ಣ ಚಿಕಿತ್ಸೆ ನೀಡಲು ಸಾಧ್ಯವಿರುವ ಸಿಸಿಯು ಇರುವ ಜಿಲ್ಲಾಸ್ಪತ್ರೆಗಳ ಕೊರತೆ ತೀವ್ರವಾಗಿದೆ ಎಂಬುದನ್ನು ನೀತಿ ಆಯೋಗದ ಆರೋಗ್ಯ ಸೂಚ್ಯಂಕ ವರದಿಯ ದತ್ತಾಂಶಗಳು ಹೇಳುತ್ತವೆ.

ಸಿಸಿಯು ಹೊಂದಿರುವ ಜಿಲ್ಲಾಸ್ಪತ್ರೆಗಳ ಪ್ರಮಾಣ



- 2018-19ನೇ ಸಾಲಿನಲ್ಲಿ ಸಕ್ರಿಯ ಸಿಸಿಯುಗಳನ್ನು ಹೊಂದಿದ್ದ ಹಲವು ರಾಜ್ಯಗಳ ಜಿಲ್ಲಾಸ್ಪತ್ರೆಗಳ ಪ್ರಮಾಣವು, 2019-20ರಲ್ಲಿ ಕುಸಿದಿದೆ. ಸಕ್ರಿಯವಾಗಿದ್ದ ಸಿಸಿಯುಗಳು, ನಂತರದ ದಿನಗಳಲ್ಲಿ ನಿಷ್ಕ್ರಿಯವಾಗಿವೆ ಎಂಬುದನ್ನು ಇದು ಸೂಚಿಸುತ್ತದೆ. ಒಟ್ಟು ಆರು ರಾಜ್ಯಗಳ ಜಿಲ್ಲಾಸ್ಪತ್ರೆಗಳಲ್ಲಿ ಸಿಸಿಯುಗಳು ನಿಷ್ಕ್ರಿಯವಾಗಿವೆ
- ಒಂದು ಜಿಲ್ಲಾಸ್ಪತ್ರೆಯಲ್ಲೂ ಸಕ್ರಿಯ ಸಿಸಿಯು ಇಲ್ಲದೇ ಇದ್ದ ರಾಜ್ಯಗಳ ಸಂಖ್ಯೆ 2018-19ರಲ್ಲಿ ಒಂಬತ್ತು ಇತ್ತು. 2019-20ರಲ್ಲೂ ಇಂತಹ ರಾಜ್ಯಗಳ ಸಂಖ್ಯೆ ಒಂಬತ್ತೇ ಆಗಿದೆ. ಒಂದೂ ಸಕ್ರಿಯ ಸಿಸಿಯು ಇಲ್ಲದೇ ಇದ್ದ ಉತ್ತರಪ್ರದೇಶವು ಈ ವಿಚಾರದಲ್ಲಿ ಸ್ವಲ್ಪ ಪ್ರಗತಿ ಸಾಧಿಸಿದೆ. ಆದರೆ 2018-19ರಲ್ಲಿ ಶೇ 13ರಷ್ಟು ಜಿಲ್ಲಾಸ್ಪತ್ರೆಗಳಲ್ಲಿ ಸಕ್ರಿಯ ಸಿಸಿಯು ಹೊಂದಿದ್ದ ಪಂಜಾಬ್‌ನಲ್ಲಿ, 2019-20ರ ವೇಳೆಗೆ ಸಕ್ರಿಯ ಸಿಸಿಯು ಹೊಂದಿರುವ ಜಿಲ್ಲಾಸ್ಪತ್ರೆಗಳ ಪ್ರಮಾಣ ಶೂನ್ಯಕ್ಕೆ ಕುಸಿದಿದೆ
- ಸಕ್ರಿಯ ಸಿಸಿಯುಗಳನ್ನು ಹೊಂದಿರುವ ಜಿಲ್ಲಾಸ್ಪತ್ರೆಗಳ ಪ್ರಮಾಣದಲ್ಲಿ ಐದು ರಾಜ್ಯಗಳು ಯಾವುದೇ ರೀತಿಯ ಪ್ರಗತಿಯನ್ನು ಸಾಧಿಸಿಲ್ಲ
- 7 ರಾಜ್ಯಗಳು ಸಕ್ರಿಯ ಸಿಸಿಯು ಹೊಂದಿರುವ ಜಿಲ್ಲಾಸ್ಪತ್ರೆಗಳ ಪ್ರಮಾಣವನ್ನು ಹೆಚ್ಚಿಸಿಕೊಂಡಿವೆ. ಇದರಲ್ಲಿ ಹಿಮಾಚಲ ಪ್ರದೇಶವು ಗಮನಾರ್ಹ ಪ್ರಗತಿ ಸಾಧಿಸಿದೆ. 2018-19ರಲ್ಲಿ ಹಿಮಾಚಲ ಪ್ರದೇಶದ ಶೇ 66.66ರಷ್ಟು ಜಿಲ್ಲಾಸ್ಪತ್ರೆಗಳು ಸಕ್ರಿಯ ಸಿಸಿಯು ಹೊಂದಿದ್ದವು. 2019-20ರಲ್ಲಿ ಸಿಸಿಯು ಹೊಂದಿರುವ ಜಿಲ್ಲಾಸ್ಪತ್ರೆಗಳ ಪ್ರಮಾಣವು ಶೇ 100ಕ್ಕೆ ಏರಿಕೆಯಾಗಿದೆ

1 ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಸಕ್ರಿಯ ಸಿಸಿಯು ಹೊಂದಿರುವ ರಾಜ್ಯದ ಸಂಖ್ಯೆ

9 ಸಕ್ರಿಯ ಸಿಸಿಯು ಹೊಂದಿರುವ ಒಂದೂ ಜಿಲ್ಲಾಸ್ಪತ್ರೆ ಇಲ್ಲದ ರಾಜ್ಯಗಳ ಸಂಖ್ಯೆ

3 ಶೇ 50 ಮತ್ತು ಅದಕ್ಕಿಂತ ಹೆಚ್ಚು ಜಿಲ್ಲಾಸ್ಪತ್ರೆಗಳಲ್ಲಿ ಸಕ್ರಿಯ ಸಿಸಿಯು ಹೊಂದಿರುವ ರಾಜ್ಯಗಳು

14 ಶೇ 50ಕ್ಕಿಂತ ಕಡಿಮೆ ಜಿಲ್ಲಾಸ್ಪತ್ರೆಗಳಲ್ಲಿ ಸಕ್ರಿಯ ಸಿಸಿಯು ಹೊಂದಿರುವ ರಾಜ್ಯಗಳು

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 7

ಬಿಂದುಗ ಚಂಚುಲೆ ಕಥೆ

ದೇವರಾಜನೆಂಬ ದುಷ್ಟ ಶಿವಪುರಾಣ ಕೇಳಿ ಕೈಲಾಸ ಸೇರಿದ ಕಥೆಯನ್ನು ಕೇಳಿದ ಶೌನಕ ಮುನಿಗೆ ಸಂತೋಷವಾಗುತ್ತದೆ. ಮತ್ತೊಂದು ಶಿವನ ಕಥೆ ಹೇಳು ಅಂತ ಸೂತಮುನಿಯಲ್ಲಿ ಪ್ರಾರ್ಥಿಸು ತ್ತಾನೆ. ಸೂತಮುನಿಯು ಬಿಂದುಗ ಮತ್ತು ಚಂಚುಲೆ ಎಂಬ ದುಷ್ಟ ದಂಪತಿಯ ಕತೆಯನ್ನ ಹೇಳತೊಡಗುತ್ತಾನೆ.

> ಶಿವನ ಕಥೆ ಹೇಳು ಎಂದು ಸೂತಮುನಿಯಲ್ಲಿ ಶೌನಕ ಪ್ರಾರ್ಥಿಸುತ್ತಾನೆ. ಸೂತಮುನಿಯು ಬಿಂದುಗ ಮತ್ತು ಚಂಚುಲೆ ಎಂಬ ದಂಪತಿಯ ಕತೆಯನ್ನ ಹೇಳತೊಡಗುತ್ತಾನೆ.

ಸಮುದ್ರತೀರದ ದೇಶದಲ್ಲೊಂದು 'ಬಾಷ್ಕಲ' ಎಂಬ ಒಂದು ಗ್ರಾಮ ಇತ್ತು. ಅಲ್ಲಿ ಪಾಪಿಗಳು, ವೈದಿಕಧರ್ಮ ಬಿಟ್ಟವರು, ದುಷ್ಟರು, ದೇವತೆಗಳನ್ನ ನಂಬದೆ ನಾಸ್ತಿಕರಾದವರಿದ್ದರು. ಅವರೆಲ್ಲ ಶಸ್ತ್ರಗ ಳನ್ನು ಹಿಡಿದು ಬಡಿದಾಡುತ್ತಿದ್ದರು, ಪರಸ್ತ್ರೀಯರ ಸಹವಾಸ ಮಾಡುತ್ತಿದ್ದರು. ಅವರಿಗೆ ಜ್ಞಾನ, ವೈರಾಗ್ಯ, ಧರ್ಮ, ಆಚಾರ-ವಿಚಾರಗಳ ಬಗ್ಗೆ ಸ್ವಲ್ಪವೂ ತಿಳಿದಿರಲಿಲ್ಲ. ಒಳ್ಳೆಯದು ಏನೆಂಬುದೇ ಅವರಿಗೆ ಗೊತ್ತಿರಲಿಲ್ಲ. ಆದರೆ, ಕೆಟ್ಟ ವೃತ್ತಾಂತವನ್ನ ಕೇಳುವುದರಲ್ಲಿ ಮಾತ್ರ ಪರಮಾಸಕ್ತರಾಗಿದ್ದರು. ಒಟ್ಟಾರೆ, ಅವರಾರೂ ಮನುಷ್ಯರಂತೆ ವರ್ತಿಸುತ್ತಿರಲಿಲ್ಲ; ಪಶುಗಳಂತೆ ವ್ಯವಹರಿಸುತ್ತಾ ಇದ್ದರು. ಅಲ್ಲಿ ಪುರುಷರಲ್ಲದೆ, ಸ್ತ್ರೀಯರೂ ಸಹ ಹಾದಿ ತಪ್ಪಿದ್ದರು. ಸದಾ ಪಾಪ ಕೆಲಸದಲ್ಲಿ ತೊಡಗುತ್ತಾ, ಕೆಟ್ಟಬುದ್ಧಿ ಕಲಿತಿದ್ದರು. ಒಟ್ಟಾರೆ, ಅವರಿಗೂ ಸಹ ಪುರುಷರಂತೆ ಕೆಟ್ಟ ಕೆಲಸ ಬಿಟ್ಟು, ಒಳ್ಳೆಯ ಕೆಲಸವೇ ಗೊತ್ತಿರಲಿಲ್ಲ.

ಇಂಥ ಕೆಟ್ಟ ಜನಗಳಿಂದ ತುಂಬಿರುವ ಊರಿನಲ್ಲಿ ಬಿಂದುಗನೆಂಬ ಒಬ್ಬ ಬ್ರಾಹ್ಮಣನಿದ್ದ. ದುರಾತ್ಮನೂ ಮಹಾಪಾಪಿಯೂ ಆದ ಬಿಂದುಗನಿಗೆ ಸುಂದರಿಯಾದ ಹೆಂಡತಿ ಇದ್ದರೂ ವೇಶ್ಯೆಯರ ಸಹವಾಸ ಮಾಡುತ್ತಿದ್ದ. ಅವನ ಹೆಂಡತಿ ಚಂಚುಲೆ ತನ್ನ ಸತೀಧರ್ಮವನ್ನು ಮೀರಲು ಭಯವಾಗಿ, ಪತಿವ್ರತೆಯಾಗೇ ಬಾಳುತ್ತಿದ್ದಳು. ಕಾಲಕ್ರಮೇಣ ಸುತ್ತಲಿನ ಸಹವಾಸ ದೋಷದಿಂದ, ಕೊನೆಗೊಂದು ದಿನ ಸಂಯಮ ಕಳೆದುಕೊಂಡ ಚಂಚುಲೆ ರಾತ್ರಿ ವೇಳೆಯಲ್ಲಿ ಪತಿಗೆ ಕಾಣದಂತೆ ವಿಟಪುರುಷನೊಡನೆ ಗುಪ್ತವಾಗಿ ಕಾಮಸುಖವನ್ನು ಅನುಭವಿಸುತ್ತಿದ್ದಳು.

ಹೀಗಿರಲು ಒಂದು ರಾತ್ರಿ ಬಿಂದುಗ ತನ್ನ ಹೆಂಡತಿ ಚಂಚುಲೆ ವಿಟಪುರುಷನೊಡನೆ ರಮಿಸುತ್ತಿರುವುದನ್ನು ನೋಡಿದ. ಕೆಟ್ಟ ಅವಸ್ಥೆಯಲ್ಲಿ ವಿಟಪುರುಷನೊಡನೆ ಇದ್ದ ದುಷ್ಟಳಾದ ಪತ್ನಿಯನ್ನು ನೋಡಿ, ಕೋಪದಿಂದ ಮನೆಯೊಳಗೆ ಬಂದ. ಅಷ್ಟರಲ್ಲಿ ವಿಟಪುರುಷ ಅವನ ಕೈಗೆ ಸಿಗದೆ ತಪ್ಪಿಸಿಕೊಂಡು ಓಡಿಹೋದ. ಕೈಗೆ ಸಿಕ್ಕ ಪತ್ನಿ ಚಂಚುಲೆಯನ್ನ ಹಿಗ್ಗಾಮುಗ್ಗಾ ಥಳಿಸಿದ. ಸ್ವೇಚ್ಛಾಚಾರಿಣಿಯಾಗಿದ್ದ ಚಂಚುಲೆ ಗಂಡ ತನ್ನನ್ನು ಹೊಡೆದಿದ್ದರಿಂದ ಸಿಟ್ಟಾದಳು. 'ನೀನು ವೇಶ್ಯೆಯರೊಂದಿಗೆ ಸುಖ ಪಟ್ಟಂತೆ, ನಾನು ಬೇರೆಯವರಿಂದ ಸುಖ ಪಡೆಯುವುದು ತಪ್ಪೇ? ಸುಂದರಿಯಾದ ನಾನು ಬಿರು ಯೌವನದಲ್ಲಿ ಪುರುಷರ ಸಂಗವಿಲ್ಲದೆ ವಿರಹ ದುಃಖವನ್ನು ಹೇಗೆ ತಾನೇ ಸಹಿಸಿಕೊಂಡಿರಲಿ?' ಅಂತ ಪ್ರಶ್ನಿಸುತ್ತಾಳೆ.

ಆಗ ಪರಮಪಾಪಿಯಾದ ಬಿಂದುಗ ಯಾವ ಗಂಡಸು ತನ್ನ ಪತ್ನಿಗೆ ಹೇಳಬಾರದಂಥ ಮಾತನ್ನ ಪತ್ನಿ ಚಂಚುಲೆಗೆ ಹೇಳುತ್ತಾನೆ. 'ಕಾಮಾತುರಳಾದ ನೀನು ಮಾಡಿದ ಕೆಲಸ ಸರಿಯಾಗಿದೆ. ಜಾರರೊಡನೆ ನಿನ್ನ ಮನಸ್ಸಿಗೆ ಬಂದಂತೆ ಇರು. ಅವರಿಂದ ಬರುವ ಹಣ ನನಗೆ ಕೊಡು' ಅಂತ ವ್ಯಭಿಚಾರದಿಂದ ಹಣ ಮಾಡುವ ನೀಚ ಉಪಾಯ ಹೇಳಿಕೊಡುತ್ತಾನೆ. ಬಿಂದುಗನ ಮಾತಿನಂತೆ ಚಂಚುಲೆ ವ್ಯಭಿಚಾರವನ್ನ ಸಂಕೋಚವಿಲ್ಲದೆ ಮುಂದುವರೆಸುತ್ತಾಳೆ. ಹೀಗೆ ಪತಿ-ಪತ್ನಿಯರು ದುರಾಚಾರದಲ್ಲಿರುವಾಗ ಒಂದು ದಿನ ನೀಚನಾದ ಬಿಂದುಗ ಕಾಯಿಲೆ ಬಂದು ಮರಣ ಹೊಂದಿದ. ಅವನ ಪಾಪದ ಫಲವಾಗಿ ನರಕಕ್ಕೆ ಹೋದ. ನರಕದಲ್ಲಿ ತನ್ನ ಪಾಪಗಳಿಗೆ ಯೋಗ್ಯವಾದ ಚಿತ್ರಹಿಂಸೆಗಳನ್ನ ಯಮದೂತರಿಂದ ಅನುಭವಿಸಿದ. ನರಕಲೋಕದಲ್ಲಿ ಶಿಕ್ಷೆ ಅನುಭವಿಸಿದ ನಂತರ ಬಿಂದುಗ, ತನ್ನ ಪಾಪದ ಫಲವಾಗಿ ವಿಂಧ್ಯಾರಣ್ಯದಲ್ಲಿ ಭಯಂಕರವಾದ ಪಿಶಾಚಜನ್ಮ ತಾಳಿದ.

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಡಿಸೆಂಬರ್ 28, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಹೇಮಂತ ಋತು ಮಾರ್ಗಶಿಕ (ಧನುರ್ಮಾಸ) ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಮೂಲ ನವಮಿ ಗಂ. 15-56 (ಹ. 1-09) ಮಂಗಳವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 43-20 (ರಾ. 12-07) ಅತಿಗಂಡ ನಾಮ ಯೋಗ ಗಂ. 45-34 ಗರಜ ಕರಣ ಗಂ. 15-56 ವಿಷ ಗಂ. 4-35 ಪುರ್ವಿಷ ಗಂ. 56-44 ಅಮೃತ ಗಂ. 27-34
ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-42 ಸೂರ್ಯಾಸ್ತ: 5-57 ಅದೃಷ್ಟ ಸಂಖ್ಯೆ 5

ಮೇಷ: ಕೆಲಸ-ಕಾರ್ಯಗಳಲ್ಲಿ ಏಕಾಗ್ರತೆಯಿಂದಾಗಿ ಯಶಸ್ಸನ್ನು ಸಾಧಿಸಬಹುದು. ಹಣಕಾಸಿನ ವಿಚಾರದಲ್ಲಿ ಜಾಗರೂಕರಾಗಿರುವುದು ಉತ್ತಮ. ಹಳೆಯ ಕಟ್ಟಡ, ಯಂತ್ರಗಳ ನವೀಕರಣಕ್ಕಾಗಿ ಖರ್ಚು.

ವೃಷಭ: ಹಣಕಾಸಿನ ಭದ್ರತೆಯೊಂದಿಗೆ ಉತ್ಸಾಹವೂ ಸೇರಿದ ಉತ್ತಮ ದಿನವಾಗಲಿದೆ. ತಾಳ್ಮೆಯಿಂದ ವ್ಯವಹರಿಸುವುದರ ಮೂಲಕ ಯಶಸ್ಸು. ರೈತಾಪಿ ವರ್ಗದವರಿಗೆ ಕೃಷಿ ಕಾಮಗಾರಿ ಕೈಗೊಳ್ಳಲು ಸಕಾಲವಾಗಿರುವುದು.

ಮಿಥುನ: ಹೈನು ಉದ್ಯಮದಲ್ಲಿ ತೊಡಗಿಕೊಂಡವರಿಗೆ ಉತ್ತಮ ಲಾಭ. ಜನರಿಂದ ಸಾಂದರ್ಭಿಕ ಸಹಾಯ ಸಹಕಾರಗಳು ದೊರೆತು ನಿಶ್ಚಯಿಸಿದ ಕೆಲಸ ಕಾರ್ಯಗಳು ಯಶಸ್ವಿಯಾಗಲಿವೆ.

ಕರ್ಕಾಟಕ: ಹೊಸ ಉದ್ಯೋಗಾವಕಾಶದಿಂದಾಗಿ ಜೀವನಶೈಲಿಯಲ್ಲಿ ಮಹತ್ವದ ಬದಲಾವಣೆ. ಉತ್ತಮ ವಿಷಯಗಳತ್ತ ನಿಮ್ಮ ಮನಸ್ಸು ದೃಢವಾಗಿರುವುದು. ಕಲಾವಿದರು, ಕುಶಲಕರ್ಮಿಗಳಿಗೆ ಉತ್ತಮ ಅವಕಾಶ.

ಸಿಂಹ: ಗೆಳೆಯರು, ಬಂಧುಗಳು ಹಲವಾರು ಕೆಲಸಗಳ ನಿಮಿತ್ತ ನಿಮ್ಮ ಸಲಹೆ ಸಹಕಾರ ಬೆಂಬಲವನ್ನು ಬಯಸಿ ಬರುವ ಸಾಧ್ಯತೆ. ಮೇಲಧಿಕಾರಿಗಳ ವಿಶ್ವಾಸಕ್ಕೆ ಪಾತ್ರರಾಗುವಿರಿ. ಉದ್ಯೋಗದಲ್ಲಿ ಹೆಚ್ಚಿನ ಜವಾಬ್ದಾರಿ.

ಕನ್ಯಾ: ಧೈರ್ಯ ಸ್ವಸಾಮರ್ಥ್ಯದೊಂದಿಗೆ ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ದೊರೆಯಲಿದೆ. ಗುತ್ತಿಗೆ ಕೆಲಸದಿಂದ ಬಾಕಿ ಇರುವ ಹಣ ಪಡೆದುಕೊಳ್ಳುವ ಸಾಧ್ಯತೆ. ಹಣಕಾಸಿನ ದೃಢತೆಯಿಂದಾಗಿ ಮಾನಸಿಕ ನೆಮ್ಮದಿ.

ತುಲಾ: ನಿಮ್ಮ ಕೆಲಸ-ಕಾರ್ಯಗಳಲ್ಲಿ ನಿರೀಕ್ಷಿತ ಯಶಸ್ಸು. ವ್ಯವಹಾರದ ಬೇರೆ ಬೇರೆ ಮಾರ್ಗಗಳನ್ನು ಕಂಡುಕೊಳ್ಳುವಿರಿ. ಹಣ್ಣು, ತರಕಾರಿ ಮುಂತಾದ ಹಸಿ ಪದಾರ್ಥಗಳ ವ್ಯವಹಾರದಿಂದ ಅಧಿಕ ಲಾಭವನ್ನು ಪಡೆಯುವಿರಿ.

ವೃಶ್ಚಿಕ: ದೂರದಲ್ಲಿರುವ ಸಹೋದರನ ಆಗಮನದಿಂದಾಗಿ ಮನೆಯಲ್ಲಿ ಸಂಭ್ರಮ. ಚಿತ್ರ, ಶಿಲ್ಪ ಮುಂತಾದ ಕಲಾತ್ಮಕ ವ್ಯವಹಾರದಲ್ಲಿರುವವರಿಗೆ ಮಾತುಕತೆಯಿಂದ ವ್ಯವಹಾರ ಕುದುರುವ ಸಾಧ್ಯತೆ. ನೌಕರಸ್ಥರಿಗೆ ನಿರಾಳ ದಿನ.

ಧನು: ಹೊಸ ವ್ಯಕ್ತಿಗಳ ಪರಿಚಯದಿಂದಾಗಿ ಉತ್ಸಾಹ. ಗೆಳೆಯರ ನೆರವಿನಿಂದಾಗಿ ವೃತ್ತಿ ಜೀವನದಲ್ಲಿ ಏಳಿಗೆಯನ್ನು ಕಾಣುವಿರಿ. ಸಾಂಸಾರಿಕ ನೆಮ್ಮದಿಯ ದಿನ. ಸಂಗಾತಿಯಿಂದ ಉತ್ತಮ ಸಹಕಾರ.

ಮಕರ: ಉದ್ಯಮಿಗಳು ಹಾಗೂ ಅಧಿಕಾರದಲ್ಲಿರುವವರಿಗೆ ತಮ್ಮ ತಮ್ಮ ಕ್ಷೇತ್ರದ ಮೇಲೆ ಹೆಚ್ಚಿನ ಹಿಡಿತವನ್ನು ಹೊಂದುವ ದಿನವಾಗಿದೆ. ಷೇರು ವ್ಯಾಪಾರ ಹಣಕಾಸು ವ್ಯವಹಾರಸ್ಥರಿಗೆ ವ್ಯವಹಾರ ಉತ್ತಮವಾಗಿರುವುದು.

ಕುಂಭ: ಕೆಲವು ಮುಖ್ಯವಾದ ನಿರ್ಧಾರಗಳನ್ನು ಕೈಗೊಳ್ಳುವುದಕ್ಕೆ ಪ್ರಶಸ್ಥವಾದ ದಿನ. ಹಿರಿಯರ ಸಲಹೆಗಳಿಗನುಸಾರವಾಗಿ ನಡೆಯುವುದರಿಂದ ಯಶಸ್ಸು. ಆರೋಗ್ಯದ ಬಗ್ಗೆ ಎಚ್ಚರಿಕೆ ಇರಲಿ.

ಮೀನ: ಬೇರೆಯವರಿಗಿಂತಲೂ ಭಿನ್ನವಾದ ಹಾಗೂ ಧನಾತ್ಮಕವಾದ ನಿರ್ಧಾರಗಳನ್ನು ಕೈಗೊಳ್ಳುವ ಸಾಧ್ಯತೆ. ವಿದ್ಯಾರ್ಥಿಗಳಿಗೆ ಉತ್ತಮ ಸಾಧನೆಗೆ ತಳಹದಿಯ ದಿನ. ತೈಲ ವ್ಯಾಪಾರಿಗಳಿಗೆ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಏರಿಳಿತ.

ನಿಮ್ಮ ಜನ್ಮದಿನ 28-ಡಿಸೆಂಬರ್ ಇಂದು ಅತ್ಯಂತ ಶುಭದಾಯಕ. ಮನೆ ನಿರ್ಮಾಣ ಕೆಲಸ ಸಂಪೂರ್ಣಗೊಳ್ಳಲಿದ್ದು ನೆಮ್ಮದಿ ತರಲಿದೆ. ಕಾನೂನು ಸಂಬಂಧಿ ತಗಾದೆಗಳಲ್ಲಿ ಉತ್ತಮ ಬೆಳವಣಿಗೆ. ಮನೆಯ ವ್ಯವಹಾರಗಳಲ್ಲಿ ಹೆಚ್ಚಿನ ಆಸಕ್ತಿ ಹೊಂದುವುದರ ಜೊತೆಗೆ ಹೆಚ್ಚಿನ ಜವಾಬ್ದಾರಿಯನ್ನೂ ಹೊರಬೇಕಾಗುವುದು. ಧಾರ್ಮಿಕ ಕೆಲಸಗಳಿಗಾಗಿ ಹೆಚ್ಚಿನ ಖರ್ಚು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಭಕ್ತಿ-ತಾಪಸಿ

ಭಕ್ತಿ ನಂಬುಗೆ ಸುಲಭ; ಭಜನೆ ವಂದನೆ ಸುಲಭ |
ತತ್ತ್ವ ಶೋಧನೆ ಕಷ್ಟ; ಮತಿಕಾರ್ಯ ಕಷ್ಟ ||
ಸುತ್ತುವುದು ಗಿರಿಸುತ್ತ ಸುಳುವೆಂದು ಲೋಕಜನ |
ಹತ್ತುವನು ತಾಪಸಿಯೊ – ಮಂಕುತಿಮ್ಮ || 528 ||

ಪದ-ಅರ್ಥ: ತತ್ವಶೋಧನೆ = ತತ್ವದ ಹುಡುಕಾಟ, ಮತಿಕಾರ್ಯ = ಬುದ್ಧಿಯ ಕೆಲಸ, ಸುಳುವು = ಸುಲಭ.

ವಾಚ್ಯಾರ್ಥ: ಭಕ್ತಿ, ನಂಬಿಕೆಗಳು ಸುಲಭ. ಭಜನೆ, ನಮಸ್ಕಾರಗಳೂ ಸುಲಭ. ಆದರೆ ತತ್ತ್ವದ ಹುಡುಕಾಟ ಕಷ್ಟ. ಅದರಂತೆ ಬುದ್ಧಿಯ ಕಾರ್ಯಗಳೂ ಕಷ್ಟ. ಗಿರಿಯನ್ನು ಅರಿಯಲು ಸುಲಭವೆಂದು ಲೋಕದ ಜನ ಅದನ್ನು ಸುತ್ತುತ್ತಾರೆ. ಸಾಧಕನಾದ ತಪಸ್ವಿ ಗಿರಿಯನ್ನು ಏರಿ ಅರಿಯುತ್ತಾನೆ.

ವಿವರಣೆ: ಭಗವಂತನ ಸಾಕ್ಷಾತ್ಕಾರಕ್ಕೆ ಮಾರ್ಗಗಳು ಹಲವು. ಜ್ಞಾನಮಾರ್ಗ, ಕರ್ಮಮಾರ್ಗಗಳು ಹೇಗೆ ಮುಖ್ಯವೋ ಹಾಗೆಯೇ ಭಕ್ತಿಮಾರ್ಗವೂ ಮುಕ್ತಿದಾಯಕವೇ. ಭಕ್ತಿ ಎಲ್ಲ ಭಕ್ತರಲ್ಲಿ, ಎಲ್ಲ ಸಮಯದಲ್ಲಿ ಒಂದೇ ತೆರನಾಗಿ ಹೊಮ್ಮುವುದಿಲ್ಲ. ಕೆಲವರು ಭಗವಂತನ ಹಾಡುಗಳನ್ನು ಹಾಡಿ ತೃಪ್ತಿ ಪಡೆದರೆ ಮತ್ತೊಬ್ಬರು ಪೂಜೆ, ಸೇವೆಗಳಲ್ಲಿ ಧನ್ಯತೆಯನ್ನು ಅನುಭವಿಸುತ್ತಾರೆ. ಭಕ್ತನಿಗೆ ಒಮ್ಮೆ ತಾನು ಭಗವಂತನ ದಾಸನೆಂದೆನಿಸಿದರೆ ಮತ್ತೊಮ್ಮೆ ಮಿತ್ರಭಾವ ಉಂಟಾಗಬಹುದು. ಹೀಗಾಗಿ ಭಕ್ತಿಯಲ್ಲಿ ನವವಿಧಗಳನ್ನು ದಾರ್ಶನಿಕರು ಗುರುತಿಸಿದ್ದಾರೆ. ಅವುಗಳು, ಶ್ರವಣ, ಕೀರ್ತನ, ಸ್ಮರಣ, ಚರಣ ಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ.

ಈ ನವವಿಧಭಕ್ತಿಯಲ್ಲಿ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ. ಅವರ ಮನಸ್ಥಿತಿಯಂತೆ, ಪರಿಸ್ಥಿತಿಯಂತೆ ಭಕ್ತಿಯ ವಿಧಾನವನ್ನು ಆರಿಸಿಕೊಳ್ಳುತ್ತಾರೆ. ಮೊದಲ ಹಂತಗಳು ಸುಲಭವಾದವುಗಳು. ನಮಗೆ ಇಂದು ಭಕ್ತಿಯೆಂದರೆ ಪೂಜೆ, ಪುನಸ್ಕಾರ, ಗಂಧ, ಮಾಲೆಗಳು, ಅಲಂಕಾರ, ಧೂಪಾರತಿ, ಭಜನೆ ಎಂದೋ, ಜಪಮಣಿ ಹಿಡಿದು ರಾಮನಾಮವನ್ನೋ, ಶಿವನಾಮವನ್ನೋ ಜಪಿಸುತ್ತಾ, ಬರೆಯುತ್ತಾ ಇರುವುದೆಂದೋ, ಧ್ಯಾನಮಾಡುತ್ತ, ವಾರಕ್ಕೆರಡು ದಿನ ಉಪವಾಸ ಮಾಡುವುದೆಂದೋ ಭಾವಿಸುವುದಾಗಿದೆ. ಕಗ್ಗ ಈ ಎಲ್ಲ ವಿಧಾನಗಳು ಸುಲಭವಾದವು ಎನ್ನುತ್ತದೆ. ಆದರೆ ಬದುಕಿನ ತತ್ವದ ಶೋಧನೆ ಮಾಡುವುದು ಬಲುಕಷ್ಟ. ಯಾಕೆಂದರೆ ಅದು ಬರೀ ಹೃದಯದ ಕಾರ್ಯವಲ್ಲ, ಬುದ್ಧಿಯ ಕೆಲಸ. ಅಲ್ಲಿ ಪೂಜೆ, ಪ್ರಸಾದಗಳಿಗಿಂತ ಎತ್ತರದ ಮಟ್ಟವನ್ನು ತಲುಪ ಬೇಕಾಗುತ್ತದೆ. ಬಸವಣ್ಣ ಹೇಳುತ್ತಾರೆ,

ಲಿಂಗವ ಪೂಜಿಸಿ ಫಲವೇನಯ್ಯ,
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ,
ಕೂಡಲಸಂಗಮ ದೇವರ ಪೂಜಿಸಿ,
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?

ವಚನದಲ್ಲಿಯ ಕೊನೆಯ ಸಾಲು ಮುಖ್ಯ. ಪೂಜಿಸಿದ ನಂತರ ನದಿಯೊಳಗೆ ನದಿ ಬೆರೆತಂತೆ ಭಕ್ತ, ಭಗವಂತನಲ್ಲಿ ಸೇರಬೇಕು. ಅಂಥವನು ನಿಜವಾದ ತಾಪಸಿ. ಉಳಿದವರು, ಬೆಟ್ಟ ಹತ್ತುವುದಕ್ಕಿಂತ ಅದನ್ನು ಸುತ್ತಿ ಪರಿಕ್ರಮಣ ಮಾಡುವುದು ಸುಲಭವೆಂದು ಸುತ್ತುತ್ತಾರೆ. ಕೆಲವೇ ಸಾಧಕರು ತತ್ವವನ್ನು ಅರಸಿ, ಅರಿತು ಧೈರ್ಯದಿಂದ ಬೆಟ್ಟವನ್ನು ಏರಿ ತಪಸ್ವಿಗಳಾಗುತ್ತಾರೆ.

ಪದಬಂಧ 4821

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ನೈಪುಣ್ಯವುಳ್ಳವನು (4)
3.ಸದ್ಯದ ಪರಿಸ್ಥಿತಿ (3)
5.ಗುಣವನ್ನು ಹೇಳುವುದು (5)
7.ಶಿಬಿರದಲ್ಲಿ ಇಣುಕಿದಾಗ ಕಾಣಿಸಿದ ತಲೆ! (2)
9. ಕೆಟ್ಟ ಸ್ವಭಾವವಿದು (3)
11.ಪರಂಪರೆಯಲ್ಲಿ ಗಲಾಟೆ ಬಂದಿದೆಯಲ್ಲಾ! (2)
13.ಈತ ವಿವೇಕಶಾಲಿ (5)
15.ಭವ್ಯವಾದ ಸೌಧ (3)
16.ಅದೇ ತಾನೆ ಅರಳಿದ ಹೂ (4)

ಮೇಲಿಂದ ಕೆಳಕ್ಕೆ
1.ಈತ ದಿಕ್ಕಿಲ್ಲದವನು (4)
2.ಒಣಗಿದ ವಸ್ತು (3)
4.ಮುಖ್ಯವಾದುದನ್ನು ಹೀಗೆನ್ನಿ (3)
6.ಕಣದಲ್ಲಿ ನಡೆದ ಮದುವೆ (3)
8.ಒಂದು ಪ್ರದೇಶದಿಂದ ಹೊರಗೆ ಕಳಿಸುವ ವಸ್ತು (2)
9.ಅಸಾಧ್ಯವಾದುದರ ಕೊನೆಗೆ ಸ್ವರವಿದೆ! (3)
10.ಬಣ್ಣವಿಲ್ಲಿ ಉಲ್ಟಾಪಲ್ಟಾ ಆಗಿಬಿಟ್ಟಿದೆ (2)
12.ಸ್ವರ್ಗ ಇಲ್ಲಿಯೇ ಇದೆ (4)
13.ಗ್ರಹದ ಮೂರ್ತಿ! (3)
14. ಒಂದೇ ವಿಷಯದಲ್ಲಿ ಆಸಕ್ತನಾಗಿರುವವನು (3)



4820ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಾಕ್ರಮಿ
3.ಸುಭಾಷಿತ 5.ನಿಜಾಮ
6.ನಕಾರ 8.ನಸರಿ 10.ಗಿಲಿಕಿ
11.ಪರಮ 13.ಉಗಮ
15.ಜಗದ್ಗುರು
16.ರಸಭಂಗ

ಮೇಲಿಂದ ಕೆಳಕ್ಕೆ:
1.ಪರ್ಯಟನ 2.ಮಿಸುನಿ
3.ಸುದಾಮ 4.ತರಕಾರಿ
7.ಕಾವಲಿ 9.ಸವಾರ 10.ಗಿರಿರಾಜ
12.ಮಲರೋಗ 13.ಉಗುರು
14.ಮಸೂರ

ಸುಡೊಕು 5207

4		6			8	5		1
	5		2	1			7	
1		2			5	3		8
6		9				8		
			5	4	6			
3		5				2		7
		4				1		2
			1	5				9
9		1			2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5206 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಷೇರುಪೇಟೆ ವಹಿವಾಟು 296



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,003
ಇಂದಿನ ಅಂತ್ಯ	17,086
▲	83
ದಿನದ ಗರಿಷ್ಠ	17,112

ವಿನಿಮಯ ದರ

$ ಡಾಲರ್	75
£ ಪೌಂಡ್	100.78
€ ಯುರೊ	85.08
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹515
12 ಮೊಟ್ಟೆಗೆ	₹68
ಮೈಸೂರು	
100 ಮೊಟ್ಟೆಗೆ	₹515

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1320 (1300)
ಸೋಯಾ (ರಿಫೈನ್ಡ್)	₹1190 (1180)
ಸೂರ್ಯಕಾಂತಿ (ರಿಫೈನ್ಡ್)	₹1250 (1250)
ಪಾಮೋಲಿನ್	₹1142 (1142)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹2000-3000
ಮಧ್ಯಮ	₹1500-2000
ಸಣ್ಣ	₹800-1500

ಸಿಸಿಐ ತನಿಖೆ: ಹೈಕೋರ್ಟ್ ಕದ ತಟ್ಟಿದ ಗೂಗಲ್

ನವದೆಹಲಿ (ಪಿಟಿಐ): ಪ್ಲೇಸ್ಟೋರ್‌ನ ನಿಯಮಗಳಿಗೆ ಸಂಬಂಧಿಸಿದಂತೆ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ಕೇಳಿರುವ ಪ್ರಶ್ನೆಗಳಿಗೆ ಉತ್ತರ ನೀಡಲು ಹೆಚ್ಚಿನ ಸಮಯ ಬೇಕು ಎಂದು ಕೋರಿ ಗೂಗಲ್ ಕಂಪನಿಯು ಕರ್ನಾಟಕ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ.

ಡೆವಲಪರ್‌ಗಳಿಗೆ ಪ್ಲೇ ಬಿಲ್ಲಿಂಗ್ ವ್ಯವಸ್ಥೆ ಜೊತೆ ಜೋಡಣೆ ಮಾಡಿಕೊಳ್ಳಲು ಗೂಗಲ್ ಕಂಪನಿಯು 2022ರ ಅಕ್ಟೋಬರ್‌ವರೆಗೆ ಕಾಲಾವಕಾಶ ನೀಡಿದೆ. ಈ ಮೊದಲು 2022ರ ಮಾರ್ಚ್‌ವರೆಗೆ ಅವಕಾಶ ನೀಡಲಾಗಿತ್ತು.

ಪದೇ ಪದೇ ಮಾಡಬೇಕಿರುವ ಪಾವತಿಗಳಿಗೆ ಸಂಬಂಧಿಸಿದ ನಿಯಮಗಳು ದೇಶದಲ್ಲಿ ಬದಲಾವಣೆ ಆಗಿರುವ ಕಾರಣ, ಪ್ಲೇ ಬಿಲ್ಲಿಂಗ್ ವ್ಯವಸ್ಥೆಯಲ್ಲಿಯೂ ಬದಲಾವಣೆ ತರಲಾಗಿದೆ ಎಂದು ಗೂಗಲ್ ಕಂಪನಿಯು ಹೇಳಿತ್ತು.

ಭಾರತದ ಡೆವಲಪರ್‌ಗಳು ಮತ್ತು ನವೋದ್ಯಮಗಳು ಗೂಗಲ್ ಪ್ಲೇ ಬಿಲ್ಲಿಂಗ್ ವ್ಯವಸ್ಥೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದವು.

ಗೂಗಲ್ ಕಂಪನಿಯು ಭಾರತದ ಆ್ಯಪ್ ಡೆವಲಪರ್‌ಗಳು ತಮ್ಮ ಡಿಜಿಟಲ್ ಸೇವೆಗಳನ್ನು ಪ್ಲೇ ಬಿಲ್ಲಿಂಗ್ ವ್ಯವಸ್ಥೆಯ ಮೂಲಕವೇ ಮಾರಾಟ ಮಾಡಬೇಕು ಎಂದು ಒತ್ತಾಯಿಸುವಂತೆ ಇಲ್ಲ ಎಂದು ಅವರು ಹೇಳಿದ್ದರು.

ಡಿಜಿಟಲ್ ಹೂರಣವನ್ನು ಪ್ಲೇಸ್ಟೋರ್ ಮೂಲಕ ಮಾರಾಟ ಮಾಡಲು ಬಯಸುವ ಆ್ಯಪ್‌ಗಳು ಪ್ಲೇ ಬಿಲ್ಲಿಂಗ್ ವ್ಯವಸ್ಥೆಯನ್ನು ಬಳಸಿಕೊಳ್ಳಬೇಕು ಮತ್ತು ಖರೀದಿ ಮೊತ್ತದ ನಿರ್ದಿಷ್ಟ ಪ್ರಮಾಣವನ್ನು ಶುಲ್ಕವಾಗಿ ಪಾವತಿಸಬೇಕು ಎಂದು ಗೂಗಲ್ ಹೇಳಿತ್ತು. ಗೂಗಲ್ ಪ್ಲೇ ಪಾವತಿ ವ್ಯವಸ್ಥೆ ಬಗ್ಗೆ ವಿಸ್ತೃತ ತನಿಖೆಗೆ ಸಿಸಿಐ ಆದೇಶ ನೀಡಿದ ಕುರಿತು ಪಿಟಿಐ ಸುದ್ದಿಸಂಸ್ಥೆ 2020ರ ನವೆಂಬರ್ 9ರಂದು ವರದಿ ಮಾಡಿತ್ತು.

ಬದನೆಕಾಯಿ ಕೆ.ಜಿ.ಗೆ ₹200

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳಲ್ಲಿ ಸೋಮವಾರದ ಸಂತೆಯಲ್ಲಿ ತರಕಾರಿ ಬೆಲೆ ಕಳೆದ ವಾರಕ್ಕಿಂತ ದುಪ್ಪಟ್ಟಾಗಿದೆ. ಬದನೆಕಾಯಿ ಕೆ.ಜಿ.ಗೆ ₹200, ಹಸಿ ಮೆಣಸಿನಕಾಯಿ ₹150 ಹಾಗೂ ಬೆಂಡೆಕಾಯಿ ಬೆಲೆ ಕೆ.ಜಿ.ಗೆ ₹100ಕ್ಕೆ ಏರಿಕೆಯಾಗಿದೆ.

ಕಳೆದ ವಾರ ಒಂದು ಕೆ.ಜಿ ಬದನೆಕಾಯಿ ಹಾಗೂ ಹಸಿ ಮೆಣಸಿನಕಾಯಿ ಬೆಲೆ ಕೆ.ಜಿ.ಗೆ ತಲಾ ₹80–₹100 ಇತ್ತು. ಬೆಂಡೆಕಾಯಿ ₹60–₹70 ಇತ್ತು. ಆದರೆ ಈ ವಾರ ಬಹುತೇಕ ಎಲ್ಲಾ ತರಕಾರಿಗಳ ಬೆಲೆ ದುಪ್ಪಟ್ಟಾಗಿದ್ದರಿಂದ ಗ್ರಾಹಕರು ಕಂಗಾಲಾಗಿದ್ದಾರೆ.

‘ಕಾಯಿಪಲ್ಯೆ ಬೆಲೆ ವಿಪರೀತ ಏರಿಕೆಯಿಂದಾಗಿ ಬದುಕು ಸಾಗಿಸುವುದೇ ಕಷ್ಟ ಆಗೈತಿ’ ಎಂದು ಸಂತೆಗೆ ಬಂದಿದ್ದ ಕಬ್ಬಲಗೇರಿ ಹನುಮವ್ವ ಬೇಸರ ವ್ಯಕ್ತಪಡಿಸಿದರು. ‘ರೊಕ್ಕಕ್ಕ ಈಗ ಕಿಮ್ಮತ್ತ ಇಲ್ಲದಂಗ ಆಗೈತಿ’ ಎಂದು ವೃದ್ಧೆ ನೀಲಮ್ಮ ಹೊಸಮನಿ ಅಳಲು ತೋಡಿಕೊಂಡರು.

ಮಾರುಕಟ್ಟೆಗೆ ತರಕಾರಿ ಆವಕದ ಪ್ರಮಾಣ ಕಡಿಮೆಯಾಗುತ್ತಿರುವುದೇ ಬೆಲೆ ಏರಿಕೆಗೆ ಕಾರಣ ಎನ್ನಲಾಗುತ್ತಿದೆ.

ಕಲಬುರಗಿಯಲ್ಲಿ ಕೆ.ಜಿ.ಗೆ ₹160 (ಕಲಬುರಗಿ ವರದಿ): ಜಿಲ್ಲೆಯಲ್ಲಿ ಬದನೆಕಾಯಿ ಬೆಲೆ ಏಕಾಏಕಿ ಏರಿಕೆಯಾಗಿದ್ದು, ಪ್ರತಿ ಕೆ.ಜಿಗೆ ₹140ರಿಂದ ₹ 160ಕ್ಕೆ ಮಾರಾಟವಾಗುತ್ತಿದೆ. ಕಳೆದ ವಾರ ಈ ದರ ₹100 ಇತ್ತು.

ಮದುವೆ ಹಾಗೂ ಸಮಾರಂಭಗಳು ಹೆಚ್ಚಾಗಿ ನಡೆಯುತ್ತಿರುವುದರಿಂದ ಬೇಡಿಕೆ ಹೆಚ್ಚಿದೆ. ಆದರೆ, ಬೆಳೆಹಾನಿ ಕಾರಣದಿಂದ ಪೂರೈಕೆ ಕಡಿಮೆಯಾಗಿದ್ದು, ಇದು ಬೆಲೆ ಏರಿಕೆಗೆ ಕಾರಣ ಎಂದು ವರ್ತಕರು ಹೇಳುತ್ತಿದ್ದಾರೆ. ಸಗಟು ಮಾರುಕಟ್ಟೆಯಲ್ಲಿ ರೈತರಿಗೆ ಪ್ರತಿ ಕೆ.ಜಿಗೆ ₹100 ವರೆಗೆ ದರ ಸಿಗುತ್ತಿದೆ.

ಯಾವ ಕಂಪನಿ ಐಪಿಒಗೆ ಸೂಕ್ತ ಎಂಬ ಪರಿಶೀಲನೆ: ಐ.ಎಸ್. ಪ್ರಸಾದ್

ಐಪಿಒ: ಸಣ್ಣ ಉದ್ದಿಮೆಗಳಿಗೆ ಎಫ್‌ಕೆಸಿಸಿಐ ನೆರವು

● ವಿಜಯ್ ಜೋಷಿ

ಬೆಂಗಳೂರು: ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ಬಂಡವಾಳ ಸಂಗ್ರಹಕ್ಕೆ ಹೊಸ ಮಾರ್ಗ ಕಂಡುಕೊಳ್ಳಲು ‘ಆರಂಭಿಕ ಸಾರ್ವಜನಿಕ ಕೊಡುಗೆ’ಯ (ಐಪಿಒ) ಮೊರೆ ಹೋಗಬಹುದೇ ಎಂಬ ಬಗ್ಗೆ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು ಪರಿಶೀಲನೆ ನಡೆಸಿದೆ.

ರಾಜ್ಯದಲ್ಲಿ ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಸ್‌ಎಂಇ ವಲಯ) ಉದ್ದಿಮೆಗಳು ಐಪಿಒ ಮೂಲಕ ತಮ್ಮ ಷೇರುಗಳನ್ನು ಸಾರ್ವಜನಿಕರಿಗೆ ಹಾಗೂ ಸಾಂಸ್ಥಿಕ ಹೂಡಿಕೆದಾರರಿಗೆ ಮಾರಾಟ ಮಾಡಿ, ಬಂಡವಾಳ ಸಂಗ್ರಹಿಸಿದ ಉದಾಹರಣೆಗಳು ಹೆಚ್ಚಿಗೆ ಇಲ್ಲ. ಹೀಗಿದ್ದರೂ, ಈಗಿನ ಸಂದರ್ಭದಲ್ಲಿ ಐಪಿಒ ಮಾರ್ಗದಲ್ಲಿ ಬಂಡವಾಳ ಸಂಗ್ರಹಿಸಿ, ಯಾವೆಲ್ಲ ಕಂಪನಿಗಳು ಷೇರು ಮಾರುಕಟ್ಟೆಯಲ್ಲಿ ನೋಂದಾಯಿತ ಆಗುವ ಅವಕಾಶ ಇದೆ ಎಂಬ ಬಗ್ಗೆ ಎಫ್‌ಕೆಸಿಸಿಐ ಪರಿಶೀಲನೆ ನಡೆಸುತ್ತಿದೆ.

‘ಯಾವ ವಲಯದ, ಯಾವ ಕಂಪನಿಗಳು ಬಂಡವಾಳದ ಅಗತ್ಯಕ್ಕಾಗಿ ಐಪಿಒ ನಡೆಸಬಹುದು ಎನ್ನುವುದನ್ನು ಅರಿಯಲು ನಮ್ಮ ತಂಡವೊಂದಕ್ಕೆ ಸೂಚನೆ ನೀಡಲಾಗಿದೆ. ಐಪಿಒಗೆ ಮುಂದಾಗಲು ಅರ್ಹತೆ ಇರುವ ಉದ್ದಿಮೆಗಳಿಗೆ ನಮ್ಮ ತಂಡವು ಕಾನೂನು ಸಲಹೆ ಸೇರಿದಂತೆ ಅಗತ್ಯ ನೆರವು ನೀಡಲಿದೆ’ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಐ.ಎಸ್. ಪ್ರಸಾದ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಐ.ಎಸ್. ಪ್ರಸಾದ್

ದೇಶದಲ್ಲಿ ಈ ವರ್ಷದಲ್ಲಿ ದಾಖಲೆಯ ಮಟ್ಟದ ಬಂಡವಾಳ ಐಪಿಒ ಮೂಲಕ ಸಂಗ್ರಹ ಆಗಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಈವರೆಗೆ 63 ಕಂಪನಿಗಳು ಐಪಿಒ ಮೂಲಕ ಒಟ್ಟಾರೆ ₹ 1.18 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿವೆ ಎಂದು ಪ್ರೈಮ್ ಡೇಟಾಬೇಸ್ ಸಮೂಹ ಹೇಳಿದೆ. ವಿವಿಧ ಕಂಪನಿಗಳ ಐಪಿಒ ಪ್ರಕ್ರಿಯೆಯಲ್ಲಿ ಸಣ್ಣ ಹೂಡಿಕೆದಾರರ ಪಾಲ್ಗೊಳ್ಳುವಿಕೆ ಕೂಡ ಹೆಚ್ಚಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಐಪಿಒ ಮಾತ್ರವೇ ಅಲ್ಲದೆ, ವೆಂಚರ್ ಕ್ಯಾಪಿಟಲಿಸ್ಟ್‌ಗಳಿಂದ ಹಾಗೂ ಏಂಜೆಲ್ ಇನ್ವೆಸ್ಟರ್‌ಗಳಿಂದ ಹೂಡಿಕೆ ಆಕರ್ಷಿಸುವ ಬಗ್ಗೆಯೂ ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಮಾಹಿತಿ ನೀಡುವ ಕೆಲಸ ನಡೆಯಲಿದೆ ಎಂದು ಪ್ರಸಾದ್ ತಿಳಿಸಿದರು.

ಮುಖ್ಯಾಂಶಗಳು

- ಸಣ್ಣ ಉದ್ದಿಮೆಗಳಲ್ಲಿ ಹೂಡಿಕೆಗೆ ಹೆಚ್ಚಿದ ಆಸಕ್ತಿ
- ಎಸ್‌ಎಂಇಗಳಿಗೆ ಬಂಡವಾಳ ಸಂಗ್ರಹಕ್ಕೆ ಹೊಸ ಮಾರ್ಗ
- ಏಂಜೆಲ್ ಇನ್ವೆಸ್ಟರ್‌ಗಳಿಂದ ಬಂಡವಾಳ ಆಕರ್ಷಿಸಲು ನೆರವು

ಕೋವಿಡ್‌ನ ಪ್ರಭಾವ ಇನ್ನೂ ತಗ್ಗಿಲ್ಲದ ಕಾರಣ ಐಪಿಒಗೆ ಮುಂದಾಗಲು ಎಲ್ಲ ಕಂಪನಿಗಳಿಗೆ ಇದು ಒಳ್ಳೆಯ ಸಂದರ್ಭ ಅಲ್ಲ. ಆದರೆ, ಕೋವಿಡ್ ಕಾರಣದಿಂದಾಗಿ ಉದ್ಯಮದ ಕೆಲವು ವಲಯಗಳಲ್ಲಿ ಹೆಚ್ಚಿನ ವಹಿವಾಟು ನಡೆದಿದೆ. ಅವು ಈಗ ಐಪಿಒಗೆ ಮುಂದಾಗಲು ತೊಂದರೆ ಆಗದು ಎಂದು ಅವರು ಹೇಳಿದರು.

ಒಂದು ವರ್ಷದ ಅವಧಿಯಲ್ಲಿ ಎಸ್‌ಎಂಇ ವಲಯದ ನಾಲ್ಕರಿಂದ ಐದು ಕಂಪನಿಗಳಿಗೆ ಐಪಿಒ ಮೂಲಕ ಬಂಡವಾಳ ಸಂಗ್ರಹಿಸಲು ಸಾಧ್ಯವಾಗುವಂತೆ ಮಾಡುವ ಗುರಿ ಹೊಂದಲಾಗಿದೆ ಎಂದು ಎಫ್‌ಕೆಸಿಸಿಐ ಮೂಲಗಳು ತಿಳಿಸಿವೆ.

ಎಸ್‌ಎಂಇ ವಲಯದ, ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳಲ್ಲಿ ಹೂಡಿಕೆ ಮಾಡಲು ಹೂಡಿಕೆದಾರರು ಆಸಕ್ತಿ ತೋರಿಸುತ್ತಿರುವುದು ಹೆಚ್ಚಾಗುತ್ತಿದೆ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಅಭಿಪ್ರಾಯಪಟ್ಟಿದೆ.

‘ಹೂಡಿಕೆದಾರರ ಸಮುದಾಯವು ಎಸ್‌ಎಂಇ ವಲಯದ ಉದ್ದಿಮೆಗಳಲ್ಲಿ ದೀರ್ಘ ಅವಧಿಗೆ ಹೂಡಿಕೆ ಮಾಡಲು ಆಸಕ್ತಿ ತೋರಿಸುತ್ತಿರುವ ಕಾರಣ, ಎಸ್‌ಎಂಇ ಉದ್ದಿಮೆಗಳು ಬಂಡವಾಳಕ್ಕಾಗಿ ಬ್ಯಾಂಕ್‌ಗಳನ್ನು ಮಾತ್ರ ನೆಚ್ಚಿಕೊಳ್ಳುವ ಬದಲು ಮಾರುಕಟ್ಟೆಯ ಕಡೆ ಮುಖ ಮಾಡುವ ಬಗ್ಗೆಯೂ ಆಲೋಚಿಸಬೇಕು’ ಎಂದು ಕಾಸಿಯಾ ಮಾಜಿ ಅಧ್ಯಕ್ಷ ಆರ್. ರಾಜು ಅಭಿಪ್ರಾಯ ವ್ಯಕ್ತಪಡಿಸಿದರು.

ಅಖಿಲ ಭಾರತ ಮಟ್ಟದಲ್ಲಿ ಇದುವರೆಗೆ ಅಂದಾಜು 357 ಎಸ್‌ಎಂಇ ಕಂಪನಿಗಳು ಬಂಡವಾಳ ಮಾರುಕಟ್ಟೆ ಮೂಲಕ ₹ 3,700 ಕೋಟಿ ಬಂಡವಾಳ ಸಂಗ್ರಹಿಸಿವೆ. ಕಂಪನಿಗಳ ಮಾರುಕಟ್ಟೆ ಮೌಲ್ಯವು ಅಂದಾಜು ₹ 17 ಸಾವಿರ ಕೋಟಿ ಆಗಿದೆ ಎಂದು ಪ್ರಸಾದ್ ಮಾಹಿತಿ ನೀಡಿದರು.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಸುದ್ದಿ 2 ನಿಮಿಷ

ಬ್ಯಾಂಕಿಂಗ್, ಐ.ಟಿ. ಷೇರು ಗಳಿಕೆ: ಷೇರುಪೇಟೆ ವಹಿವಾಟು ಏರಿಕೆ

ಮುಂಬೈ (ಪಿಟಿಐ): ಐ.ಟಿ., ಹಣಕಾಸು ಮತ್ತು ಔಷಧ ಕಂಪನಿಗಳ ಷೇರುಗಳ ಉತ್ತಮ ಗಳಿಕೆಯಿಂದಾಗಿ ದೇಶದ ಷೇರುಪೇಟೆಗಳಲ್ಲಿ ಸೋಮವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 296 ಅಂಶ ಏರಿಕೆ ಕಂಡು 57,420 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 83 ಅಂಶ ಹೆಚ್ಚಾಗಿ 17,086 ಅಂಶಗಳಿಗೆ ತಲುಪಿದೆ.

ಸೆನ್ಸೆಕ್ಸ್‌ನಲ್ಲಿ ಟೆಕ್ ಮಹೀಂದ್ರ ಕಂಪನಿಯ ಷೇರು ಮೌಲ್ಯ ಶೇಕಡ 3ರಷ್ಟು ಹೆಚ್ಚಾಯಿತು. ಡಾ. ರೆಡ್ಡೀಸ್ ಷೇರು ಮೌಲ್ಯ ಶೇ 1.95ರಷ್ಟು ಏರಿಕೆ ಕಂಡಿವೆ.



ಏಷ್ಯಾದ ಮಾರುಕಟ್ಟೆಗಳಲ್ಲಿನ ಮಿಶ್ರ ವಹಿವಾಟಿನ ಪರಿಣಾಮದಿಂದಾಗಿ ದೇಶಿ ಷೇರುಪೇಟೆಗಳ ವಹಿವಾಟು ನಕಾರಾತ್ಮಕವಾಗಿ ಆರಂಭ ಆಯಿತು. ಆರೋಗ್ಯ ಸೇವೆ, ಕೈಗಾರಿಕೆ ಮತ್ತು ಬಂಡವಾಳ ಸರಕುಗಳ ಷೇರುಗಳ ಗಳಿಕೆಯಿಂದಾಗಿ ಮಧ್ಯಾಹ್ನದ ಬಳಿಕ ವಹಿವಾಟು ಸಕಾರಾತ್ಮಕ ಹಾದಿಗೆ ಮರಳಿತು ಎಂದು ಆನಂದ ರಾಠಿ ಕಂಪನಿಯ ಈಕ್ವಿಟಿ ಸಂಶೋಧನೆಯ ಮುಖ್ಯಸ್ಥ ನರೇಂದ್ರ ಸೋಲಂಕಿ ಹೇಳಿದ್ದಾರೆ.

ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 0.44ರವರೆಗೂ ಏರಿಕೆ ಕಂಡಿವೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸೋಮವಾರ 3 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 75ರಂತೆ ವಿನಿಮಯಗೊಂಡಿತು.

ಚಿನ್ನಾಭರಣಕ್ಕೆ ಹಾಲ್‌ಮಾರ್ಕ್: ದೇಶದಾದ್ಯಂತ ವಿಸ್ತರಣೆಗೆ ಸಿದ್ಧತೆ

ನವದೆಹಲಿ (ಪಿಟಿಐ): ಚಿನ್ನಾಭರಣಗಳಿಗೆ ಹಾಲ್‌ಮಾರ್ಕ್ ಕಡ್ಡಾಯ ಎಂಬ ನಿಯಮವು ಮೊದಲ ಹಂತದಲ್ಲಿ 256 ಜಿಲ್ಲೆಗಳಲ್ಲಿ ಸುಗಮವಾಗಿ ಜಾರಿಗೊಂಡಿದ್ದು, ದೇಶದಲ್ಲಿ ಇತರ ಜಿಲ್ಲೆಗಳಿಗೂ ವಿಸ್ತರಿಸುವ ಕೆಲಸ ನಡೆದಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

2021ರ ಜೂನ್ 23ರಿಂದ 256 ಜಿಲ್ಲೆಗಳಲ್ಲಿ ಜಾರಿಗೆ ಬರುವಂತೆ 14, 18 ಮತ್ತು 22 ಕ್ಯಾರೆಟ್‌ನ ಚಿನ್ನಾಭರಣಗಳಿಗೆ ಹಾಲ್‌ಮಾರ್ಕ್ ಕಡ್ಡಾಯ ಮಾಡಲಾಗಿದೆ. ಈವರೆಗೆ 1.27 ಲಕ್ಷ ಚಿನ್ನಾಭರಣ ವ್ಯಾಪಾರಿಗಳು ಭಾರತೀಯ ಮಾನದಂಡ ಮಂಡಳಿಯಲ್ಲಿ (ಬಿಐಎಸ್) ನೋಂದಣಿ ಮಾಡಿಕೊಂಡಿದ್ದಾರೆ ಎಂದು ಸಚಿವಾಲಯದ ವರದಿಯಲ್ಲಿ ತಿಳಿಸಲಾಗಿದೆ

ಏರ್ ಇಂಡಿಯಾ ಹಸ್ತಾಂತರ ವಿಳಂಬ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯನ್ನು ಟಾಟಾ ಸಮೂಹಕ್ಕೆ ಹಸ್ತಾಂತರ ಮಾಡುವ ಪ್ರಕ್ರಿಯೆಯು ಒಂದು ತಿಂಗಳ ಮಟ್ಟಿಗೆ ಮುಂದಕ್ಕೆ ಹೋಗುವ ಸಾಧ್ಯತೆ ಹೆಚ್ಚಾಗಿದೆ.

ಕಂಪನಿಯನ್ನು ಟಾಟಾ ಸಮೂಹ ಖರೀದಿಸಿದೆ. ಹಸ್ತಾಂತರ ಪ್ರಕ್ರಿಯೆ ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸುವ ಉದ್ದೇಶ ತನ್ನದು ಎಂದು ಕೇಂದ್ರ ಸರ್ಕಾರ ಈ ಹಿಂದೆ ಹೇಳಿತ್ತು. ಆದರೆ, ಕೆಲವು ಒಪ್ಪಿಗೆಗಳು ಇನ್ನೂ ದೊರೆತಿಲ್ಲ. ಕೆಲವು ಪ್ರಕ್ರಿಯೆಗಳನ್ನು ಇನ್ನಷ್ಟೇ ಪೂರ್ಣಗೊಳಿಸಬೇಕಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು. ‘ಹಸ್ತಾಂತರವು ಜನವರಿಯಲ್ಲಿ ಪೂರ್ಣ ಆಗಬಹುದು’ ಎಂದು ಹೇಳಿದರು.

ಕೊಬ್ಬರಿ ಧಾರಣೆ

ಬೆಂಗಳೂರು	₹18500-21000
ಪುತ್ತೂರು	₹4500-11500
ತುರುವೇಕೆರೆ	₹17900-17950

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕುಮಟ	
ಚಿಪ್ಪು	24509-39999
ಕೋಕ	20169-299999
ಫ್ಯಾಕ್ಟರಿ	13019-18899
ಹಳೆಚಾಲಿ	48089-49801
ಹೊಸಚಾಲಿ	35509-50699
ಕಾರ್ಕಳ	
ಹೊಸತು	40000-45000
ಹಳತು	46000-53000
ಪುತ್ತೂರು	
ಹೊಸತು	27500-45000
ಹಳತು	11000-26000
ಸಿದ್ದಾಪುರ	
ಬಿಳಿಗೋಟು	27399-39699
ಚಾಲಿ	40289-48699
ಕೋಕ	26109-34399
ಹೊಸಚಾಲಿ	32699-40519
ಕೆಂಪುಗೋಟು	21899-34399
ರಾಶಿ	42369-48599
ತಟ್ಟಿಬೆಟ್ಟೆ	32889-46899
ಶಿರಸಿ	
ಬೆಟ್ಟೆ	38899-46808
ಬಿಳಿಗೋಟು	219999-42509
ಚಾಲಿ	35699-5261
ರಾಶಿ	3689-48869
ಯಲ್ಲಾಪುರ	
ಬಿಳಿಗೋಟು	27299-34619
ಚಾಲಿ	39261-49630
ಕೋಕ	22099-31089
ಕೆಂಪುಗೋಟು	31158-36199
ರಾಶಿ	46121-52499
ತಟ್ಟಿಬೆಟ್ಟೆ	37337-45895
ಶಿವಮೊಗ್ಗ	
ಬೆಟ್ಟೆ	48509-53840
ಗೊರಬಲು	17160-37650
ರಾಶಿ	46000-47801
ಸರಕು	50101-71396
ಸಾಗರ	
ಬಿಳಿಗೋಟು	19199-35266
ಚಾಲಿ	32099-47170
ಸಿಪ್ಪೆಗೋಟು	6890-22499
ಕೆಂಪುಗೋಟು	2889-48199
ರಾಶಿ	42000-48199
ಚನ್ನಗಿರಿ	
ರಾಶಿ	46499-47999
ಬೆಟ್ಟೆ	38599-41879
ರಾಮನಗರ ರೇಷ್ಮೆ	
ಮಿಶ್ರತಳಿ	400-688
ದ್ವಿತಳಿ	444-820

ಕಾಫಿ (50ಕೆ.ಜಿಗೆ

	ಮುದ್ರೆಮನೆ
ಎಪಿ	15500
ಎಸಿ	7000
ಆರ್‌ಪಿ	6300
ಆರ್‌ಸಿ	3900

ಐಪಿಒ: ಪ್ರಮುಖ ಐದು ಹಂತಗಳು

ಷೇರು ಮಾತು
ಶರತ್ ಎಂ.ಎಸ್.

ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ಹೂಡಿಕೆ ಮಾಡುವುದು ಹೇಗೆ ಎಂದು ಹಿಂದಿನ ಅಂಕಣದಲ್ಲಿ ತಿಳಿದುಕೊಂಡೆವು. ಈಗ ಕಂಪನಿಯೊಂದರ ಐಪಿಒದ ಪ್ರಮುಖ ಹಂತಗಳನ್ನು ತಿಳಿಯೋಣ. ಇಡೀ ಪ್ರಕ್ರಿಯೆಯನ್ನು ಸಮಗ್ರವಾಗಿ ತಿಳಿದುಕೊಂಡಾಗ ಐಪಿಒ ಹೂಡಿಕೆಯಲ್ಲಿ ಯಶಸ್ಸು ಸಾಧ್ಯ.

1 **ಮಾರ್ಕೆಟಿಂಗ್ ಮತ್ತು ಸಾರ್ವಜನಿಕ ಸಂಪರ್ಕ:** ‘ಐಪಿಒ’ ಬಗ್ಗೆ ಜನರಿಗೆ ತಿಳಿಸುವುದು ಬಹಳ ಮುಖ್ಯ. ಸುದ್ದಿ ವಾಹಿನಿಗಳು, ದಿನಪತ್ರಿಕೆಗಳು, ಜಾಹೀರಾತು, ಡಿಜಿಟಲ್ ಮಾರ್ಕೆಟಿಂಗ್ ಸೇರಿ ಹಲವು ಮಾಧ್ಯಮಗಳನ್ನು ಬಳಸಿಕೊಂಡು ಕಂಪನಿಗಳು ‘ಐಪಿಒ’ ಪ್ರಕ್ರಿಯೆಗೆ ಮುಂದಾಗುತ್ತವೆ. ಇದರಿಂದ ನಿರೀಕ್ಷಿತ ಬಂಡವಾಳ ಸಂಗ್ರಹ ಸಾಧ್ಯವಾಗುತ್ತದೆ.

2 **ಷೇರಿಗೆ ಬೆಲೆ ನಿಗದಿ:** ಕಂಪನಿಯು ಷೇರಿನ ಬೆಲೆ ನಿಗದಿ ಮಾಡುತ್ತದೆ. ಉದಾಹರಣೆಗೆ ₹ 100ರಿಂದ ₹ 120ರ ಬೆಲೆಯಲ್ಲಿ ಷೇರುಗಳ ಖರೀದಿಗೆ ಕಂಪನಿ ಅವಕಾಶ ಕಲ್ಪಿಸುತ್ತದೆ ಎಂದಿಟ್ಟುಕೊಳ್ಳಿ. ನೀವು ಆ ಕಂಪನಿಯ ಷೇರಿಗೆ ಎಷ್ಟು ಬೆಲೆ ನಿಗದಿಪಡಿಸಬಹುದು ಎನ್ನುವುದನ್ನು ತೀರ್ಮಾನಿಸಿ ಬಿಡ್ಡಿಂಗ್ ಮಾಡಬಹುದು. ಉದಾಹರಣೆಗೆ, ಎಸ್‌ಬಿಐ ಕಾರ್ಡ್ಸ್ ತನ್ನ ಐಪಿಒ ದರವನ್ನು ₹ 750ರಿಂದ ₹ 755ಕ್ಕೆ ನಿಗದಿ ಮಾಡಿತ್ತು. ಈ ಸಂದರ್ಭದಲ್ಲಿ ನಿಮಗೆ ₹ 750ರಿಂದ ₹ 755ರ ನಡುವೆ ಬಿಡ್ ಮಾಡಲು ಅವಕಾಶವಿರುತ್ತದೆ.

3 **ಬುಕ್ ಬಿಲ್ಡಿಂಗ್:** ‘ಐಪಿಒ’ದಲ್ಲಿ ಬುಕ್ ಬಿಲ್ಡಿಂಗ್ ಪ್ರಕ್ರಿಯೆ ಪ್ರಮುಖ ಹಂತ. ಈ ಅವಧಿಯಲ್ಲಿ ಕಂಪನಿಯ ಷೇರುಗಳಿಗಾಗಿ ಹೂಡಿಕೆದಾರರು ಬಿಡ್ ಮಾಡಬಹುದು. ಸಾಮಾನ್ಯವಾಗಿ ಬುಕ್ ಬಿಲ್ಡಿಂಗ್ ಹಂತದಲ್ಲಿ ಬಿಡ್ಡಿಂಗ್ ಮಾಡಲು ಮೂರು ದಿನಗಳ ಕಾಲಾವಕಾಶವಿರುತ್ತದೆ.

4 **ಕ್ಲೋಶರ್ (ಬಿಡ್ಡಿಂಗ್ ಪ್ರಕ್ರಿಯೆ ಕೊನೆಗೊಳಿಸುವುದು):** ‘ಐಪಿಒ’ ಬಿಡ್ಡಿಂಗ್ ಪ್ರಕ್ರಿಯೆ ಕೊನೆಗೊಂಡ ಬಳಿಕ ಯಾವ ಬೆಲೆಗೆ ಗರಿಷ್ಠ ಬಿಡ್ಡಿಂಗ್ ಆಗಿದೆ ಎನ್ನುವುದನ್ನು ಆಧರಿಸಿ ಷೇರಿನ ಬೆಲೆ ನಿಗದಿ ಮಾಡಲಾಗುತ್ತದೆ. ನಂತರದಲ್ಲಿ ಐಪಿಒಗೆ ಬಿಡ್ಡಿಂಗ್ ಮಾಡಿದ್ದವರಿಗೆ ಷೇರುಗಳ ಹಂಚಿಕೆ ಮಾಡಲಾಗುತ್ತದೆ. ಈ ಪ್ರಕ್ರಿಯೆಗೆ ಕ್ಲೋಶರ್ ಎನ್ನುತ್ತಾರೆ.

5 **ಷೇರು ಮಾರುಕಟ್ಟೆಗೆ ಸೇರ್ಪಡೆ (ಲಿಸ್ಟಿಂಗ್):** ‘ಐಪಿಒ’ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಂಪನಿಯು ಷೇರು ಮಾರುಕಟ್ಟೆಗೆ (ಸೆನ್ಸೆಕ್ಸ್, ನಿಫ್ಟಿ) ಸೇರ್ಪಡೆಗೊಳ್ಳುತ್ತದೆ. ಈ ಸೇರ್ಪಡೆ ಪ್ರಕ್ರಿಯೆಯ ನಂತರದಲ್ಲಿ ಆ ಷೇರು ವಹಿವಾಟಿಗೆ ಮುಕ್ತವಾಗುತ್ತದೆ. ನಿರ್ದಿಷ್ಟ ಕಂಪನಿಯೊಂದರ ಷೇರು, ಸೂಚ್ಯಂಕದಲ್ಲಿ ಸೇರ್ಪಡೆಯಾದ ಬಳಿಕ ಯಾರು ಬೇಕಾದರೂ ಆ ಷೇರನ್ನು ಖರೀದಿಸಬಹುದು ಅಥವಾ ಮಾರಾಟ ಮಾಡಬಹುದು.

ಸ್ಪೆಷಲ್ ಟಿಪ್ಸ್:

1 ಐಪಿಒ ಬಿಡ್ಡಿಂಗ್‌ನಲ್ಲಿ ನಿಮಗೆ ಷೇರುಗಳು ಸಿಗುವ ಸಾಧ್ಯತೆ ಹೆಚ್ಚಾಗಬೇಕಾದರೆ ಮೊದಲನೇ ದಿನವೇ ಬಿಡ್ ಮಾಡಿ.

2 ಡಿ-ಮ್ಯಾಟ್ ಖಾತೆ ಆರಂಭಿಸಲು 2-3 ದಿನಗಳು ಬೇಕಾಗುತ್ತದೆ. ಹಾಗಾಗಿ ಕೂಡಲೇ ಡಿ-ಮ್ಯಾಟ್ ಖಾತೆ ತೆರೆಯಿರಿ. ಇನ್ನೊಂದು ಐಪಿಒ ಬರುವವರೆಗೂ ಕಾಯಬೇಡಿ.

3 ಬಿಡ್ಡಿಂಗ್ ಮಾಡುವಾಗ ಎರಡೆರಡು ಕಡೆ ಬಿಡ್ಡಿಂಗ್ ಮಾಡಿ, ಒಂದು ಕಡೆ ಹೂಡಿಕೆದಾರ ಅಂತ ನಮೂದಿಸಿ ಮತ್ತೊಂದು ಕಡೆ ಷೇರುದಾರ ಎಂದು ನಮೂದಿಸಿದರೆ ನಿಮ್ಮ ಕೋರಿಕೆ ರದ್ದಾಗುವ ಸಾಧ್ಯತೆ ಇರುತ್ತದೆ.

4 ಪತ್ನಿ, ತಂದೆ, ಸೋದರರ ಖಾತೆಯಿಂದ ಬಿಡ್ ಮಾಡಿ. ಪ್ಯಾನ್ ಸಂಖ್ಯೆ ಆಧಾರದಲ್ಲಿ ಷೇರು ಹಂಚಿಕೆ ಆಗುವುದರಿಂದ ಷೇರುಗಳು ಸಿಗುವ ಸಾಧ್ಯತೆ ಹೆಚ್ಚಾಗುತ್ತದೆ.

ಇ.ವಿ. ಖರೀದಿಗೆ ಜೆಎಸ್‌ಡಬ್ಲ್ಯು ಪ್ರೋತ್ಸಾಹಧನ



ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನ ಖರೀದಿಸುವಂತೆ ತನ್ನ ನೌಕರರಿಗೆ ಉತ್ತೇಜಿಸಲು ₹ 3 ಲಕ್ಷದವರೆಗೆ ಪ್ರೋತ್ಸಾಹ ಧನ ನೀಡಲು ಜೆಎಸ್‌ಡಬ್ಲ್ಯು ಸಮೂಹ ಮುಂದಾಗಿದೆ. ಈ ಕ್ರಮವು ಜನವರಿ 1ರಿಂದ ಜಾರಿಗೆ ಬರಲಿದೆ.

ದೇಶದ ಪ್ರಮುಖ ಕಂಪನಿಯೊಂದು ಇಂತಹ ಕ್ರಮ ಕೈಗೊಂಡಿರುವುದು ಇದೇ ಮೊದಲು. ನೌಕರರು ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ಖರೀದಿಸಬಹುದು ಅಥವಾ ವಿದ್ಯುತ್ ಚಾಲಿತ ಕಾರು ಖರೀದಿಸಬಹುದು. ಅವರಿಗೆ ₹ 3 ಲಕ್ಷದವರೆಗೆ ಪ್ರೋತ್ಸಾಹ ಧನ ಸಿಗಲಿದೆ. ಇಷ್ಟು ಮಾತ್ರವೇ ಅಲ್ಲದೆ, ವಿದ್ಯುತ್ ಚಾಲಿತ ವಾಹನ ಖರೀದಿಸಿದವರಿಗೆ ಚಾರ್ಜಿಂಗ್ ಕೇಂದ್ರಗಳ ಸೌಲಭ್ಯವೂ ಸಿಗಲಿದೆ. ಅವರಿಗೆ ವಾಹನ ನಿಲುಗಡೆಗೆ ಕಂಪನಿಯ ಕೇಂದ್ರಗಳಲ್ಲಿ ನಿಗದಿತ ಸ್ಥಳವೂ ಸಿಗಲಿದೆ.

ಮುಂಬೈ ಧಾರಣೆ

ಶೇಂಗಾ
27-12-2021

ಜಾವಾ 70/80(ಹೊಸ)	10500-10550
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8950-9000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1330 (1310)
ಒಂದು ವಾರದ ಡೆಲಿವರಿ	1325 (1305)
ಸೋಯಾ ಕಚ್ಚಾ	1145 (1140)
ಪಾಮ್ ವಾರದ ಡೆಲಿವರಿ	1140 (1140)
ಸೂರ್ಯಕಾಂತಿ ಎಣ್ಣೆ ಕಚ್ಚಾ	1180 (1180)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,900 (48,400)
ಬೆಳ್ಳಿ ಕೆ.ಜಿ	61,400 (62,000)

ಆವರಣದಲ್ಲಿ ಶನಿವಾರದ ಧಾರಣೆ

ಆತಂಕಪಡುವ ಅಗತ್ಯ ಇಲ್ಲ ಎಂದ ಆರ್‌ಬಿಐ

‘ಆರ್‌ಬಿಎಲ್ ಬ್ಯಾಂಕ್‌ನ ಹಣಕಾಸು ಸ್ಥಿತಿ ಸ್ಥಿರ’

ಮುಂಬೈ (ಪಿಟಿಐ): ‘ಆರ್‌ಬಿಎಲ್ ಬ್ಯಾಂಕ್‌ನ ಹಣಕಾಸು ಸ್ಥಿತಿ ಸ್ಥಿರವಾಗಿದೆ. ಠೇವಣಿದಾರರು ಮತ್ತು ಷೇರುದಾರರು ವದಂತಿಗಳಿಗೆ ಕಿವಿಗೊಟ್ಟು ಆತಂಕಪಡುವ ಅಗತ್ಯ ಇಲ್ಲ’ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ಹೇಳಿದೆ.

ಬ್ಯಾಂಕ್‌ನ ಕೆಲವು ತ್ರೈಮಾಸಿಕಗಳ ಸಾಧನೆ ಮತ್ತು ಅದರ ಆಡಳಿತ ಮಂಡಳಿಯಲ್ಲಿ ಆಗುತ್ತಿರುವ ಬದಲಾವಣೆಗಳ ಕುರಿತು ವದಂತಿಗಳು ಹರಡುತ್ತಿರುವ ಬಗ್ಗೆ ಆರ್‌ಬಿಐ ಸ್ಪಷ್ಟನೆ ನೀಡಿದೆ.

ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ವಿಶ್ವವೀರ್ ಅಹುಜಾ ಅವರು ಹುದ್ದೆಯಿಂದ ಕೆಳಗಿಳಿದಿದ್ದಾರೆ ಮತ್ತು ತಕ್ಷಣದಿಂದಲೇ ಜಾರಿಗೆ ಬರುವಂತೆ ರಾಜೀವ್ ಅಹುಜಾ ಅವರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ. ಅಲ್ಲದೆ, ಆರ್‌ಬಿಐ ಸಹ ಬ್ಯಾಂಕ್‌ನ ಆಡಳಿತ ಮಂಡಳಿಗೆ ಯೋಗೇಶ್ ಕೆ. ದಯಾಳ್ ಅವರನ್ನು ಹೆಚ್ಚುವರಿ ನಿರ್ದೇಶಕರನ್ನಾಗಿ ನೇಮಿಸಿದೆ. ದಯಾಳ್ ಅವರು ಆರ್‌ಬಿಎಲ್ ಬ್ಯಾಂಕ್‌ನಲ್ಲಿ ಚೀಫ್ ಜನರಲ್ ಮ್ಯಾನೇಜರ್ ಆಗಿದ್ದರು. ಈ ಬೆಳವಣಿಗೆಗಳ ಕುರಿತು ಆರ್‌ಬಿಐ ಸ್ಪಷ್ಟನೆ ನೀಡಿದೆ.

ಮುಖ್ಯಾಂಶಗಳು

- ಬ್ಯಾಂಕ್‌ನ ಬಂಡವಾಳ ಲಭ್ಯತೆ ಹಿತಕರ ಮಟ್ಟದಲ್ಲಿದೆ
- ನಿಯಂತ್ರಣ ವಿಷಯದಲ್ಲಿ ಬೆಂಬಲಕ್ಕೆ ಹೆಚ್ಚುವರಿ ನಿರ್ದೇಶಕರ ನೇಮಕ
- ಷೇರು ಮೌಲ್ಯ ಶೇ 18ಕ್ಕೂ ಹೆಚ್ಚು ಇಳಿಕೆ

ಬ್ಯಾಂಕ್‌ನ ಆರ್ಥಿಕ ಸ್ಥಿತಿಯು ಸ್ಥಿರವಾಗಿದೆ. ಸೆಪ್ಟೆಂಬರ್ 30ರವರೆಗಿನ ಲೆಕ್ಕಪತ್ರ ಪರಿಶೋಧನೆಯ ಪ್ರಕಾರ, ಬ್ಯಾಂಕ್‌ನ ಬಂಡವಾಳ ಲಭ್ಯತೆ ಪ್ರಮಾಣವು ಶೇಕಡ 16.33ರಷ್ಟು, ಹಿತಕರ ಮಟ್ಟದಲ್ಲಿದೆ. ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವು ಶೇ 76.6ರಷ್ಟಿದೆ ಎಂದು ಆರ್‌ಬಿಐ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ನಿಯಂತ್ರಣ ಅಥವಾ ಮೇಲ್ವಿಚಾರಣೆ ವಿಷಯಗಳಲ್ಲಿ ಬ್ಯಾಂಕ್‌ಗೆ ಬೆಂಬಲದ ಅಗತ್ಯ ಇದೆ ಎಂದು ಭಾವಿಸಿದಾಗ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949ರ ಸೆಕ್ಷನ್ 36ಎಬಿ ಅಡಿಯಲ್ಲಿ ಖಾಸಗಿ ಬ್ಯಾಂಕ್‌ಗೆ ಹೆಚ್ಚುವರಿ ನಿರ್ದೇಶಕರನ್ನು ನೇಮಿಸಲಾಗುತ್ತದೆ ಎಂದು ಆರ್‌ಬಿಐ ಸ್ಪಷ್ಟನೆ ನೀಡಿದೆ.

ಷೇರು ಮೌಲ್ಯ ಇಳಿಕೆ: ಬ್ಯಾಂಕ್‌ನ ಸಿಇಒ ವಿಶ್ವವೀರ್ ಅಹುಜಾ ಅವರು ಹುದ್ದೆಯಿಂದ ಕೆಳಗಿಳಿದಿದ್ದಾರೆ. ಇದರಿಂದಾಗಿ ಬ್ಯಾಂಕ್‌ನ ಷೇರು ಮೌಲ್ಯವು ಸೋಮವಾರ ಶೇ 18ಕ್ಕೂ ಹೆಚ್ಚು ಇಳಿಕೆ ಕಂಡಿತು.

ಬಿಎಸ್‌ಇನಲ್ಲಿ ಬ್ಯಾಂಕ್‌ನ ಷೇರು ಮೌಲ್ಯವು ಶೇ 18.32ರಷ್ಟು ಇಳಿಕೆ ಆಗಿದ್ದು, ಪ್ರತಿಷೇರಿನ ಬೆಲೆ ₹ 140.90ಕ್ಕೆ ತಲುಪಿದೆ. ಎನ್‌ಎಸ್‌ಇನಲ್ಲಿ ಶೇ 18.10ರಷ್ಟು ಕಡಿಮೆ ಆಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಶಿಕ್ಷಣ

Coaching Classes

ನೇರ ಪರೀಕ್ಷೆಗಳು DIRECT EXAMS
ಮನೆಯಲ್ಲಿ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC,SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ /ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್(ರಿ)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
9740258276

ಭವಿಷ್ಯ

Astrology

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಕಲಹ, ಪ್ರೇಮವಿಚಾರ, ಸಂತಾನ, ಸ್ತ್ರೀಪುರುಷ ಅನೈತಿಕ ಸಂಬಂಧ ಇನ್ನಿತರ ಸಮಸ್ಯೆಗಳಿಗೆ ಫೋನಿನ ಮುಖಾಂತರ ಪರಿಹಾರ 9538276534

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಉದ್ಯೋಗಾವಕಾಶ

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

GLOBAL INTERNATIONAL Friendship Club Reqd M&F Daily Earn 10,000 To 15,000 PF& ESI Benefits with Food & Room. Whatsapp 9513045046/ 7022770604

Wanted

ತಕ್ಷಣ_ಬೇಕಾಗಿದ್ದಾರೆ 7TH, 10th, PUC, Diploma, any Degree, ITI, Pass/ Fail ಉಚಿತ ಊಟ+ವಸತಿ. ಸಂಬಳ 16,00060,000. ಫೋ 9886639846, 7624918246.

General

ಬೇಕಾಗಿದ್ದಾರೆ : ಟಾಟಾ ಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್ ಕಂಪನಿಗಳಿಗೆ SSLC, PUC,Degree ಡಿಪ್ಲೊಮಾದವರು 18,000-62,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ 8197650569, 7204396011

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿನ ಕಂಪನಿಗಳಿಗೆ ಹಾಗೂ ಆಫೀಸಗಳಿಗೆ ಯುವಕ ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th, SSLC, PUC, ITI, Degree Pass/ Fail ಆದವರಿಗೆ (ವಿದ್ಯಾರ್ಹತೆಯಿಲ್ಲದವರಿಗೂ) ಉಚಿತ ವಸತಿಯೂಟದೊಂದಿಗೆ ESI/ PF ನೊಂದಿಗೆ ಸಂಬಳ:16,500/ ರಿಂದ 45,000/ ದವರೆಗೆ: 9742260055, 9538133533

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600-62000/-(ಆನ್‌ಲೈನ್ ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 8792252077, ಶಿವಮೊಗ್ಗ. 9008013895

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115
CD Per Sqcm				
	Single Col	Double Col	Multi Col	
	430	450	475	

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾಜ್ಯಮಟ್ಟದ ಕ್ರಾಸ್ ಕಂಟ್ರಿ: ಹಸಿರ ಸಿರಿಯ ನಡುವೆ ಓಟದ ಸಂಭ್ರಮ

ಪರಸಪ್ಪ, ಅರ್ಚನಾಗೆ ಚಿನ್ನದ ಪದಕ

• ಪ್ರಮೋದ

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ದಟ್ಟ ಮಂಜು ಹಾಗೂ ಮೈ ನಡುಗಿಸುವ ಚಳಿಯ ನಡುವೆಯೂ ಬೆವರು ಸುರಿಸಿದ ದಕ್ಷಿಣ ಕನ್ನಡ ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ ಪರಸಪ್ಪ ಮತ್ತು ಮೈಸೂರು ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆಯ ಅರ್ಚನಾ ಕೆ.ಎಂ. ಅವರು ಇಲ್ಲಿ ನಡೆದ 56ನೇ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.

ರಾಜ್ಯ ಅಥ್ಲೆಟಿಕ್ ಸಂಸ್ಥೆ ಮತ್ತು ಉತ್ತರ ಕನ್ನಡ ಜಿಲ್ಲಾ ಅಥ್ಲೆಟಿಕ್ ಸಂಸ್ಥೆಯ ಸಹಯೋಗದಲ್ಲಿ ಸೋಮವಾರ ನಡೆದ ಸ್ಪರ್ಧೆಯಲ್ಲಿ 800 ಕ್ರೀಡಾಪಟುಗಳು ಪಾಲ್ಗೊಂಡಿದ್ದರು.

ಇಲ್ಲಿನ ತಾಲ್ಲೂಕು ಕ್ರೀಡಾಂಗಣದಿಂದ ಆರಂಭವಾದ ಸ್ಪರ್ಧೆಯಲ್ಲಿ ಕ್ರೀಡಾಪಟುಗಳು ಕಿರಿದಾದ ರಸ್ತೆ, ದಿಢೀರನೆ ಎದುರಾದ ತಿರುವುಗಳು, ಓಟದ ಹಾದಿಯಲ್ಲೇ ವಾಹನಗಳ ಓಡಾಟದ ಸವಾಲುಗಳನ್ನು ಎದುರಿಸಿ ಗುರಿ ತಲುಪಿದರು. ರಸ್ತೆಯ ಎರಡೂ ಬದಿ ಮರಗಳೇ ಇರುವ ಗೇರಕೊಂಬೆ ಅರಣ್ಯ ಇಲಾಖೆ ತನಿಖಾ ಠಾಣೆಯ ರಸ್ತೆಯಲ್ಲಿ ಪ್ರಕೃತಿ ಸೊಬಗಿನಲ್ಲಿ ಅಥ್ಲೀಟ್‌ಗಳ ಓಟ ಸಾಗಿತು.

ಇಲ್ಲಿ ಉತ್ತಮ ಸಾಮರ್ಥ್ಯ ತೋರಿದ ಕ್ರೀಡಾಪಟುಗಳು 2022ರ ಜ.15 ಮತ್ತು 16 ರಂದು ನಾಗಾಲ್ಯಾಂಡ್‌ನ ಕೊಹಿಮಾದಲ್ಲಿ ಆಯೋಜನೆಯಾಗಿರುವ ರಾಷ್ಟ್ರೀಯ ಮಟ್ಟದ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದುಕೊಂಡರು. ಮೊದಲ ಆರು ಸ್ಥಾನ ಪಡೆದ ಕ್ರೀಡಾಪಟುಗಳನ್ನು ರಾಜ್ಯ ತಂಡಕ್ಕೆ ಆಯ್ಕೆ ಮಾಡಲಾಗುತ್ತದೆ.

ಯಲ್ಲಾಪುರದಲ್ಲಿ ನಡೆದ ರಾಜ್ಯ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ನ ಮಹಿಳೆಯರ 10 ಕಿ.ಮೀ. ಸ್ಪರ್ಧೆಯಲ್ಲಿ (ಎಡದಿಂದ) ಮೊದಲ ಮೂರು ಸ್ಥಾನ ಪಡೆದ ಅರ್ಚನಾ ಕೆ.ಎಂ.,ಚೈತ್ರಾ ದೇವಾಡಿಗ, ಶಾಹೀನ್ ಎಸ್‌ಡಿ. ವಿಜಯದ ಸಂಕೇತ ತೋರಿಸಿದರು – ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ಫಲಿತಾಂಶಗಳು: (ಮೊದಲ ಮೂರು ಸ್ಥಾನ ಪಡೆದವರು): ಪುರುಷರ 10 ಕಿ.ಮೀ: ಪರಸಪ್ಪ ಎಚ್. (ದಕ್ಷಿಣ ಕನ್ನಡ; 31:39.00ಸೆ.)-1, ರಾಘವೇಂದ್ರ ಆರ್.ಸಿ. (ಉತ್ತರ ಕನ್ನಡ; 33:23.03ಸೆ.)-2, ನಿತಿನ್ ಕುಮಾರ ಎಂ. (ಕೊಡಗು; 33:09.93ಸೆ.)-3.

ಮಹಿಳೆಯರ 10 ಕಿ.ಮೀ: ಅರ್ಚನಾ ಕೆ.ಎಂ. (ಮೈಸೂರು; 37ನಿಮಿಷ:29.04ಸೆಕೆಂಡು.)-1, ಚೈತ್ರಾ ದೇವಾಡಿಗ (ದಕ್ಷಿಣ ಕನ್ನಡ; 38:29.09ಸೆ.)-2, ಶಾಹೀನ್ ಎಸ್.ಡಿ. (ಧಾರವಾಡ;41:11.07ಸೆ.)-3.

ಬಾಲಕರ ವಿಭಾಗ: 16 ವರ್ಷದೊಳಗಿನ 2 ಕಿ.ಮೀ: ಚಿಂತನ ಎಚ್.ವಿ. (ಕೊಡಗು; 6:21.07ಸೆ.)-1, ಭರತ್ ಎಚ್. ಗಿರಿಗೌಡ (6:26.02ಸೆ.)-2, ವೇದವರುಣ್ ಎಸ್. (ಇಬ್ಬರೂ ಮೈಸೂರು; 6:34.09ಸೆ.)-3.

(18 ವರ್ಷದೊಳಗಿನವರ 6 ಕಿ.ಮೀ): ಶಿವಾಜಿ ಪಿ.ಎಂ. (ಬೆಂಗಳೂರು ಗ್ರಾಮಾಂತರ; ಕಾಲ: 18:25.02ಸೆಕೆಂಡ್)-1, ಬಾಲು ಹೆಗ್ರಿ (ಧಾರವಾಡ; 20:55.04ಸೆ.)-2, ಲೋಕೇಶ ಕೆ. (ಬೆಂಗಳೂರು ಗ್ರಾಮಾಂತರ; 21:12.05ಸೆ.)-3.

20 ವರ್ಷದೊಳಗಿನ 8 ಕಿ.ಮೀ: ಅರುಣ್ ಮಳವಿ (ಬೆಳಗಾವಿ; 26:12.03ಸೆ.)-1, ನರಸಿಂಗ ಪಾಟೀಲ (26:15.02ಸೆ.)-2, ವೈಭವ ಪಾಟೀಲ (ಇಬ್ಬರೂ ಬೆಂಗಳೂರು ಗ್ರಾಮಾಂತರ; 26:52.09ಸೆ.)-3.

ಬಾಲಕಿಯರ ವಿಭಾಗ: 16 ವರ್ಷದೊಳಗಿನ 2 ಕಿ.ಮೀ: ಪ್ರಣತಿ (ಬೆಂಗಳೂರು ಗ್ರಾಮಾಂತರ; 7:17.06ಸೆ.)-1, ಪ್ರಿಯಾಂಕಾ (ಧಾರವಾಡ; 7:31.09ಸೆ.)-2, ಶರಣ್ಯಾ ವಿ. (ಬೆಂಗಳೂರು ಗ್ರಾಮಾಂತರ;7:37.08ಸೆ.)

18 ವರ್ಷದೊಳಗಿನ 4 ಕಿ.ಮೀ: ಯುವರಾಣಿ ಬಿ. (ಬೆಂಗಳೂರು ಗ್ರಾಮಾಂತರ; 16:05.07ಸೆ.)-1, ಸ್ಪಂದನಾ ಪಿ.ಎಸ್. (16:10.00ಸೆ.)-2, ರೂಪಶ್ರೀ ಎನ್.ಎಸ್. (ಇಬ್ಬರೂ ದಕ್ಷಿಣ ಕನ್ನಡ; 16:25:03)-3.

20 ವರ್ಷದೊಳಗಿನವರ 6 ಕಿ.ಮೀ: ರಾಶಿ ಸಿ.ಎಂ. (22:55.04ಸೆ.)-1, ಪ್ರಿಯಾಂಕಾ ಸಿ. (ಇಬ್ಬರೂ ಬೆಂಗಳೂರು ಗ್ರಾಮಾಂತರ; 23:41.06ಸೆ.)-2, ಚೈತ್ರಾ ಪಿ. (ದಕ್ಷಿಣ ಕನ್ನಡ; 23:54.08ಸೆ.)-3.

ಬೆಂಗಳೂರು ಗ್ರಾ., ದಕ್ಷಿಣ ಕನ್ನಡಕ್ಕೆ ಸಮಗ್ರ ಪ್ರಶಸ್ತಿ

ಪುರುಷರ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಮತ್ತು ಮಹಿಳಾ ವಿಭಾಗದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಅಥ್ಲೆಟಿಕ್ ಸಂಸ್ಥೆ ಸಮಗ್ರ ಪ್ರಶಸ್ತಿ ಪಡೆದುಕೊಂಡವು.

20 ವರ್ಷದ ಒಳಗಿನವರ ಬಾಲಕರ ಹಾಗೂ ಬಾಲಕಿಯರ ವಿಭಾಗ (ಬೆಂಗಳೂರು ಗ್ರಾಮಾಂತರ), 18 ವರ್ಷದ ಒಳಗಿನವರ ಬಾಲಕರ ವಿಭಾಗ (ಬೆಂಗಳೂರು ಗ್ರಾಮಾಂತರ), ಬಾಲಕಿಯರ ವಿಭಾಗ (ದಕ್ಷಿಣ ಕನ್ನಡ), 16 ವರ್ಷದ ಒಳಗಿನವರ ಬಾಲಕರ ವಿಭಾಗ (ದಕ್ಷಿಣ ಕನ್ನಡ) ಮತ್ತು ಬಾಲಕಿಯರ ವಿಭಾಗ (ಬೆಂಗಳೂರು ಗ್ರಾಮಾಂತರ) ವೈಯಕ್ತಿಕ ಪ್ರಶಸ್ತಿಗಳನ್ನು ಸಂಪಾದಿಸಿದವು.

ಟೆಸ್ಟ್: ಮಳೆಯಲ್ಲಿ ಕೊಚ್ಚಿಹೋದ 2ನೇ ದಿನದಾಟ

ಸೆಂಚುರಿಯನ್ (ಪಿಟಿಐ): ಸೋಮವಾರ ಸುರಿದ ಮಳೆಯಿಂದಾಗಿ ಭಾರತ ಮತ್ತು ದಕ್ಷಿಣ ಆಫ್ರಿಕಾ ನಡುವಣ ಟೆಸ್ಟ್ ಪಂದ್ಯದ ಎರಡನೇ ದಿನದಾಟವು ಒಂದೂ ಎಸೆತ ಕಾಣದೆ ರದ್ದಾಯಿತು.

ಭಾನುವಾರ ಟಾಸ್ ಗೆದ್ದು ಬ್ಯಾಟಿಂಗ್ ಆರಂಭಿಸಿದ್ದ ಭಾರತ ತಂಡವು 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 272 ರನ್ ಗಳಿಸಿತು. ಶತಕ ಗಳಿಸಿದ್ದ ಕೆ.ಎಲ್. ರಾಹುಲ್ ಮತ್ತು ಲಯ ಕಂಡುಕೊಂಡಿದ್ದ ಅಜಿಂಕ್ಯ ರಹಾನೆ ಕ್ರೀಸ್‌ನಲ್ಲಿದ್ದರು. ಆದರೆ ಸೋಮವಾರ ಬೆಳಿಗ್ಗೆಯಿಂದಲೇ ಮಳೆ ಶುರುವಾಗಿದ್ದರಿಂದ ಆಟಗಾರರು ಕಣಕ್ಕಿಳಿಯಲಿಲ್ಲ.

ಮಧ್ಯಾಹ್ನದವರೆಗೂ ಮುಂದುವರಿದ ಮಳೆಯಿಂದಾಗಿ ಪಿಚ್‌ಗೆ ಹಾಕಿದ್ದ ಹೊದಿಕೆಗಳ ಮೇಲೆ ಬಹಳಷ್ಟು ಪ್ರಮಾಣದಲ್ಲಿ ನೀರು ಶೇಖರವಾಗಿತ್ತು. ಈ ಅವಧಿಯಲ್ಲಿ ಎರಡು ಸಲ ಸ್ವಲ್ಪ ಹೊತ್ತು ಮಳೆ ಸ್ಥಗಿತವಾಗಿತ್ತು. ಆಗ ಪಿಚ್ ಮತ್ತು ಹೊರಾಂಗಣದ ಸ್ಥಿತಿಗತಿಯನ್ನು ಅಂಪೈರ್‌ಗಳು ಪರಿಶೀಲಿಸಿದರು.

ಸೆಂಚುರಿಯನ್‌ನಲ್ಲಿ ಸೋಮವಾರ ಮಳೆ ಸುರಿದ ಕಾರಣ ಅಂಗಣಕ್ಕೆ ಹೊದಿಕೆ ಹಾಕಿದ ಕ್ರೀಡಾಂಗಣ ಸಿಬ್ಬಂದಿ –ಎಎಫ್‌ಪಿ ಚಿತ್ರ

ಮೊದಲ ದಿನವೇ ಉತ್ತಮ ಮೊತ್ತ ಕಲೆಹಾಕಿದ್ದ ಭಾರತ ತಂಡವು ಎರಡನೇ ದಿನದಾಟದಲ್ಲಿ 550ಕ್ಕೂ ಹೆಚ್ಚು ರನ್‌ಗಳ ಮೊತ್ತವನ್ನು ಕಲೆ ಹಾಕುವ ಗುರಿ ಹೊಂದಿತ್ತು. ಆದರೆ, ಇದೀಗ ಒಂದಿಡೀ ದಿನದಾಟ ರದ್ದಾದ ಕಾರಣ ತನ್ನ ಯೋಜನೆ ಬದಲಿಸುವ ಸಾಧ್ಯತೆ ಎಂದು ತಂಡದ ಮೂಲಗಳು ತಿಳಿಸಿವೆ. ಇನ್ನುಳಿದ 3 ದಿನಗಳಲ್ಲಿ ಒಟ್ಟು 270 ಓವರ್‌ಗಳ ಆಟ ನಡೆಯುವ ನಿರೀಕ್ಷೆ ಇದೆ. ಆದರೆ, ಮೂರರು ಮತ್ತು ನಾಲ್ಕನೇ ದಿನವೂ ಮೋಡ ಮುಸುಕಿದ ವಾತಾವರಣ ಹಾಗೂ ಕೊನೆಯ ದಿನದಂದು ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರವಿಶಾಸ್ತ್ರಿ ಶ್ಲಾಘನೆ

ಮುಂಬೈ (ಪಿಟಿಐ): ಭಾರತ ಟೆಸ್ಟ್ ಮತ್ತು ಸೀಮಿತ ಓವರ್‌ಗಳ ತಂಡಗಳಿಗೆ ಪ್ರತ್ಯೇಕ ನಾಯಕರನ್ನು ನೇಮಕ ಮಾಡಿರುವುದನ್ನು ಮಾಜಿ ಕ್ರಿಕೆಟಿಗ ರವಿಶಾಸ್ತ್ರಿ ಸ್ವಾಗತಿಸಿದ್ದಾರೆ.

ಟೆಸ್ಟ್ ತಂಡಕ್ಕೆ ವಿರಾಟ್ ಕೊಹ್ಲಿ ಮತ್ತು ಸೀಮಿತ ಓವರ್‌ಗಳ ತಂಡಕ್ಕೆರೋಹಿತ್ ಶರ್ಮಾ ಅವರನ್ನು ಈಚೆಗೆ ನೇಮಕ ಮಾಡಲಾಗಿದೆ. 'ಕೋವಿಡ್ ಕಾಲಘಟ್ಟದಲ್ಲಿ ಕೆಲಸದ ಹೊರೆ ಕಡಿಮೆ ಮಾಡಲು ಇಂತಹ ಕ್ರಮ ಅಗತ್ಯವಾಗಿದೆ ಎಂದು ಸ್ಟಾರ್ ಸ್ಪೋರ್ಟ್ಸ್‌ನಲ್ಲಿ 'ಬೋಲ್ಡ್ ಆ್ಯಂಡ್ ಬ್ರೇವ್: ದ ಶಾಸ್ತ್ರಿ ವೇ' ಕಾರ್ಯಕ್ರಮದಲ್ಲಿ ಅವರು ಹೇಳಿದರು.

ರಣಜಿ ಟ್ರೋಫಿ: ಕರ್ನಾಟಕ–ಉತ್ತರಾಖಂಡ ಮುಖಾಮುಖಿ

ಬೆಂಗಳೂರು: ದೇಶಿ ಕ್ರಿಕೆಟ್‌ನ ರಾಜ ರಣಜಿ ಟ್ರೋಫಿ ಟೂರ್ನಿಯು ಜನವರಿ 13ರಿಂದ ಮಾರ್ಚ್ 20ರವರೆಗೆ ನಡೆಯಲಿದೆ. ಹೋದ ವರ್ಷ ಕೊರೊನಾ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ ರಣಜಿ ಟೂರ್ನಿಯನ್ನು ರದ್ದುಪಡಿಸಲಾಗಿತ್ತು. ಮುಂಬೈ, ಚೆನ್ನೈ, ಅಹಮದಾಬಾದ್, ಥಾಣೆ, ಬೆಂಗಳೂರು ಮತ್ತು ಕೋಲ್ಕತ್ತದಲ್ಲಿ ಗುಂಪು ಹಂತದ ಪಂದ್ಯಗಳು ನಡೆಯಲಿವೆ.

ಕರ್ನಾಟಕ ತಂಡವು ಸಿ ಗುಂಪಿನಲ್ಲಿ ಕಣಕ್ಕಿಳಿಯಲಿದೆ. ಇದೇ ಗುಂಪಿನಲ್ಲಿ ಉತ್ತರಾಖಂಡ, ಹೈದರಾಬಾದ್, ಮಹಾರಾಷ್ಟ್ರ, ಮುಂಬೈ ಮತ್ತು ದೆಹಲಿ ತಂಡಗಳೂ ಇವೆ. ಈ ಗುಂಪಿನ ಪಂದ್ಯಗಳು ಕೋಲ್ಕತ್ತದಲ್ಲಿ ನಡೆಯಲಿವೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಒಟ್ಟು 38 ತಂಡಗಳು ಪೈಪೋಟಿ ನಡೆಸಲಿವೆ. 177 ಪಂದ್ಯಗಳನ್ನು ಆಯೋಜಿಸಲಾಗುತ್ತಿದೆ.

ಕರ್ನಾಟಕದ ಪಂದ್ಯಗಳು (ಗುಂಪು ಹಂತ)

ಆರಂಭ ದಿನಾಂಕ	ಎದುರಾಳಿ
ಜ.13	ಉತ್ತರಾಖಂಡ
ಜ.20	ಹೈದರಾಬಾದ್
ಜ.27	ಮಹಾರಾಷ್ಟ್ರ
ಫೆ3	ಮುಂಬೈ
ಫೆ10	ದೆಹಲಿ
ಸ್ಥಳ: ಕೋಲ್ಕತ್ತ	
ಸಮಯ: ಬೆಳಿಗ್ಗೆ 9.30	

ಮಾಹಿತಿ: ಬಿಸಿಸಿಐ ಡಾಟ್ ಟಿವಿ ವೆಬ್‌ಸೈಟ್

ಆ್ಯಷಸ್: ಆಸ್ಟ್ರೇಲಿಯಾಕ್ಕೆ ಅಲ್ಪ ಮುನ್ನಡೆ

ಮೆಲ್ಬರ್ನ್: ಇಂಗ್ಲೆಂಡ್‌ನ ಅನುಭವಿ ವೇಗದ ಬೌಲರ್ ಜೇಮ್ಸ್ ಆ್ಯಂಡರ್ಸನ್ ಆಸ್ಟ್ರೇಲಿಯಾಕ್ಕೆ ತಿರುಗೇಟು ನೀಡಿದರು. ಅವರ ಶಿಸ್ತಿನ ದಾಳಿಯಿಂದಾಗಿ ಆತಿಥೇಯ ಆಸ್ಟ್ರೇಲಿಯಾ ತಂಡಕ್ಕೆ ಆ್ಯಷಸ್ ಸರಣಿಯ ಮೂರನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಅಲ್ಪಮುನ್ನಡೆ ಗಳಿಸಲು ಮಾತ್ರ ಸಾಧ್ಯವಾಯಿತು.

ಇದರಿಂದಾಗಿ ಇಂಗ್ಲೆಂಡ್ ತಂಡಕ್ಕೆ ಮರುಹೋರಾಟ ಮಾಡುವ ಅವಕಾಶ ದೊರೆಯಿತು. ಆದರೆ, ಎರಡನೇ ಇನಿಂಗ್ಸ್‌ನ ಆರಂಭದಲ್ಲಿಯೇ ಪ್ರವಾಸಿ ಬಳಗವು ಮುಗ್ಗರಿಸಿತು. ಪಂದ್ಯದ ಮೊದಲ ದಿನವಾದ ಭಾನುವಾರ ಇಂಗ್ಲೆಂಡ್ ತಂಡವು 185 ರನ್‌ಗಳಿಗೆ ಆಲೌಟ್ ಆಗಿತ್ತು. ಅದಕ್ಕುತ್ತರವಾಗಿ ಆಸ್ಟ್ರೇಲಿಯಾ 87.5 ಓವರ್‌ಗಳಲ್ಲಿ 267 ರನ್ ಗಳಿಸಿತು. ಆತಿಥೇಯ ಬಳಗವು 82 ರನ್‌ಗಳ ಮುನ್ನಡೆ ಗಳಿಸಿತು. ಸೋಮವಾರ ಎರಡನೇ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ತಂಡವು ದಿನದಾಟದ ಮುಕ್ತಾಯಕ್ಕೆ 12 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 31 ರನ್ ಗಳಿಸಿದೆ. ನಾಯಕ ಜೋ ರೂಟ್ ಮತ್ತು ಬೆನ್ ಸ್ಟೋಕ್ಸ್ ಕ್ರೀಸ್‌ನಲ್ಲಿದ್ದಾರೆ.

ಜೇಮ್ಸ್ ಆ್ಯಂಡರ್ಸನ್ –ರಾಯಿಟರ್ಸ್

ಸರಣಿಯ ಮೊದಲ ಎರಡೂ ಪಂದ್ಯಗಳಲ್ಲಿ ಹೀನಾಯ ಸೋಲು ಅನುಭವಿಸಿರುವ ಪ್ರವಾಸಿ ಬಳಗವು ಇಲ್ಲಿಯೂ ಆತಂಕ ಎದುರಿಸುತ್ತಿದೆ. ಪಂದ್ಯದಲ್ಲಿ ಇನ್ನೂ ಮೂರು ದಿನಗಳ ಆಟ ಬಾಕಿಯಿದೆ. ಬೆಳಿಗ್ಗೆ ಆಸ್ಟ್ರೇಲಿಯಾದ ಇನಿಂಗ್ಸ್‌ಗೆ ಬಲ ತುಂಬಿದ್ದು ಆರಂಭಿಕ ಬ್ಯಾಟರ್ ಮಾರ್ಕಸ್ ಹ್ಯಾರಿಸ್ (76; 189ಎ, 4X7) ಅವರ ಆಟ. ಡೇವಿಡ್ ವಾರ್ನರ್ ಮೊದಲ ದಿನ ಸಂಜೆಯೇ ಔಟಾಗಿದ್ದರು.

ರಾತ್ರಿ ಕಾವಲುಗಾರ ನೇಥನ್ ಲಯನ್ (10; 22ಎ) ಮತ್ತು ಹೋದ ಪಂದ್ಯದಲ್ಲಿ ಶತಕ ಬಾರಿಸಿದ್ದ ಮಾರ್ನಸ್ ಲಾಬುಷೇನ್ (1 ರನ್) ಬೇಗನೆ ನಿರ್ಗಮಿಸಿದರು. ಇದರಿಂದಾಗಿ ತಂಡವು 84 ರನ್‌ಗಳಿಗೇ ಮೂರು ವಿಕೆಟ್ ಕಳೆದುಕೊಂಡಿತು. ಊಟದ ವಿರಾಮದ ನಂತರವೂ ತಂಡದ ಪತನ ಮುಂದುವರಿಯಿತು. ಆ್ಯಂಡರ್ಸನ್ ಬೌಲಿಂಗ್‌ನಲ್ಲಿ ಸ್ಟೀವ್ ಸ್ಮಿತ್ (16 ರನ್) ಮತ್ತು ಟ್ರಾವಿಸ್ ಹೆಡ್ (27 ರನ್) ಔಟಾಗಿದ್ದು ಮಧ್ಯಮ ಕ್ರಮಾಂಕಕ್ಕೆ ಪೆಟ್ಟು ಬಿತ್ತು. ಹ್ಯಾರಿಸ್ ಮಾತ್ರ ಗಟ್ಟಿಯಾಗಿ ನಿಂತರು. ತಾಳ್ಮೆಯಿಂದ ರನ್‌ಗಳನ್ನು ಗಳಿಸಿದರು. ಇದರಿಂದಾಗಿ ತಂಡವು ಇನಿಂಗ್ಸ್ ಹಿನ್ನಡೆಯ ಆತಂಕದಿಂದ ತಪ್ಪಿಸಿಕೊಂಡಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 65.1 ಓವರ್‌ಗಳಲ್ಲಿ 185, ಆಸ್ಟ್ರೇಲಿಯಾ: 87.5 ಓವರ್‌ಗಳಲ್ಲಿ 267 (ಮಾರ್ಕಸ್ ಹ್ಯಾರಿಸ್ 76, ಡೇವಿಡ್ ವಾರ್ನರ್ 38, ಟ್ರಾವಿಸ್ ಹೆಡ್ 27, ಪ್ಯಾಟ್ ಕಮಿನ್ಸ್ 21, ಮಿಚೆಲ್ ಸ್ಟಾರ್ಕ್ ಔಟಾಗದೆ 24, ಜೇಮ್ಸ್ ಆ್ಯಂಡರ್ಸನ್ 33ಕ್ಕೆ4, ಒಲಿ ರಾಬಿನ್ಸನ್ 64ಕ್ಕೆ2, ಮಾರ್ಕ್ ವುಡ್ 71ಕ್ಕೆ2) ಎರಡನೇ ಇನಿಂಗ್ಸ್: ಇಂಗ್ಲೆಂಡ್: 12 ಓವರ್‌ಗಳಲ್ಲಿ 4ಕ್ಕೆ31 (ಜೋ ರೂಟ್ ಬ್ಯಾಟಿಂಗ್ 12, ಬೆನ್ ಸ್ಟೋಕ್ಸ್ ಬ್ಯಾಟಿಂಗ್ 2, ಮಿಚೆಲ್ ಸ್ಟಾರ್ಕ್ 11ಕ್ಕೆ2, ಬೊಲ್ಯಾಂಡ್ 1ಕ್ಕೆ 2)

ರಾಜ್ ಮಿಂಚು: ಭಾರತಕ್ಕೆ ಮಣಿದ ಅಫ್ಗಾನಿಸ್ತಾನ

ದುಬೈ: ಇನಿಂಗ್ಸ್‌ನ ಕೊನೆಯ ಹಂತದಲ್ಲಿ ಮಿಂಚಿದ ರಾಜ್ ಬಾವಾ ಮತ್ತು ಕುಶಾಲ್ ತಾಂಬೆ ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಇಲ್ಲಿ ನಡೆದ 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಐಸಿಸಿ ಅಕಾಡೆಮಿ ಮೈದಾನದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 4 ವಿಕೆಟ್‌ಗಳಿಂದ ಅಫ್ಗಾನಿಸ್ತಾನದ ವಿರುದ್ಧ ಜಯಿಸಿತು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಸುಲಿಮಾನ್ ಸಫಿ (73; 86ಎ, 4X7, 6X1ಸಿ) ಮತ್ತು ಇಜಾಜ್ ಅಹಮದ್ ಅಹಮದ್‌ಝೈ (ಔಟಾಗದೆ 86; 68ಎ, 4X1, 6X7) ಅಫ್ಗಾನಿಸ್ತಾನ ತಂಡವು 50 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 259 ರನ್ ಗಳಿಸಿತು. ಅದಕ್ಕುತ್ತರವಾಗಿ ಭಾರತ ತಂಡವು 48.2 ಓವರ್‌ಗಳಲ್ಲಿ 6ಕ್ಕೆ 262 ರನ್ ಗಳಿಸಿ ಜಯಿಸಿತು. ಆರಂಭಿಕ ಬ್ಯಾಟ್ಸ್‌ಮನ್ ಹರ್ನೂರ್ ಸಿಂಗ್ (65 ರನ್) ಮತ್ತು ಅಂಗಕ್ರಿಷ್ ರಘುವಂಶಿ (35 ರನ್) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 104 ರನ್ ಸೇರಿಸಿದರು.

ಆದರೆ 18ನೇ ಓವರ್ ಬೌಲಿಂಗ್ ಮಾಡಿದ ಚೈನಾಮನ್ ಬೌಲರ್ ನೂರ್ ಅಹಮದ್ ಕೈಚಳಕಕ್ಕೆ ರಘುವಂಶಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. 22ನೇ ಓವರ್‌ನಲ್ಲಿ ಹರ್ನೂರ್ ಸಿಂಗ್ ಕೂಡ ಅದೇ ರೀತಿ ನೂರ್ ಬೌಲಿಂಗ್‌ನಲ್ಲಿ ಔಟಾದರು. ಯಶ್ ಧುಳ್ ವಿಕೆಟ್ ಕೂಡ ನೂರ್ ಪಾಲಾಯಿತು. ಇನ್ನೊಂದು ಬದಿಯಲ್ಲಿ ಬಿಲಾಲ್ ಸಮಿ ಬೌಲಿಂಗ್‌ನಲ್ಲಿ ಶೇಖ್ ರಶೀದ್ ಔಟಾದರು. ಇದರಿಂದಾಗಿ ತಂಡವು ಇನ್ನೂರರ ಗಡಿ ಮುಟ್ಟುವ ಮುನ್ನವೇ ಆರು ವಿಕೆಟ್‌ಗಳನ್ನು ಕಳೆದುಕೊಂಡಿತು.

ಈ ಹಂತದಲ್ಲಿ ಜೊತೆಗೂಡಿದ ರಾಜ ಬಾವಾ (ಔಟಾಗದೆ 43) ಮತ್ತು ಕುಶಾಲ್ ತಾಂಬೆ (ಔಟಾಗದೆ 35) ಮುರಿಯದ ಏಳನೇ ವಿಕೆಟ್ ಜೊತೆಯಾಟದಲ್ಲಿ 65 ರನ್ ಸೇರಿಸುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಇದರೊಂದಿಗೆ ಅಫ್ಗಾನಿಸ್ತಾನದ ವಿರೋಚಿತ ಹೋರಾಟಕ್ಕೆ ತೆರೆಬಿತ್ತು.

ಉಪ ನಿರ್ದೇಶಕರು (ಖಾಗ್ರಾ) ರವರ ಕಛೇರಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ,
ಜಿಲ್ಲಾ ಆಡಳಿತ ಸಂಕೀರ್ಣ, ಸಿ–ಬ್ಲಾಕ್, ಕೊಠಡಿ ಸಂಖ್ಯೆ:–ಸಿ–5, 2ನೇ ಮಹಡಿ ಚಿತ್ತಾಪುರ ರೋಡ್
ಯಾದಗಿರಿ–585202, Ph.: 08473-253791 : E-Mail : ddkviyadgir@gmail.com, Mobile : 7892578523

ಸಂ: ಜಿಪಂಯಾ/ಉನಿ(ಖಾಗ್ರ)/ಇ–ಟೆಂಡರ್/2021–22 ದಿನಾಂಕ : 23–12–2021

ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ (Inviting Tender through E-Procurement)

ಯಾದಗಿರಿ ಜಿಲ್ಲೆಯಲ್ಲಿರುವ ಎಲ್ಲಾ ತಾಲೂಕುಗಳ ಮಹಿಳೆಯರಿಗೆ ಹೊಲಿಗೆಯಂತ್ರ ಹಾಗೂ ವೃತ್ತಿನಿರತ ಕುಶಲಕರ್ಮಿಗಳಿಗೆ ಈ ಕೆಳಕಂಡ ಉಪಕರಣಗಳನ್ನು ಸರಬರಾಜು ಮಾಡಲು ಅಧಿಕೃತ ಸರಬರಾಜುದಾರ ಪ್ರಮಾಣ ಪತ್ರ ಹೊಂದಿದವರಿಂದ ಹಾಗೂ ಉತ್ಪಾದಕರಿಂದ ಇ–ಪ್ರೊಕ್ಯೂರ್ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ.

ಕ್ರ.ಸಂ.	ಸಾಮಗ್ರಿಗಳ ವಿವರ	ಅಂದಾಜು ಮೊತ್ತ	ಇ.ಎಂ.ಡಿ. ಮೊತ್ತ
01	ISI ಮಾರ್ಕ ಹೊಂದಿದ ಹೊಲಿಗೆ ಯಂತ್ರ	53,66,000/-	2,68,300/-
02	ಗೌಂಡಿ	13,61,000/-	68,050/-
03	ಬಡಿಗೆತನ		
	ಒಟ್ಟು	**67,27,000/-**	**3,36,350/-**

ಜಿಲ್ಲಾ ಪಂಚಾಯತಿಯಿಂದ ಬಿಡುಗಡೆಯಾಗುವ ಅನುದಾನಕ್ಕೆ ಎದುರಾಗಿ ಸರಬರಾಜು ಆದೇಶ ನೀಡಲಾಗುವುದು.
ಇ–ಪ್ರೊಕ್ಯೂರ್ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಗಿನಂತಿದೆ.

1) ಟೆಂಡರ್ ನೋಟಿಫಿಕೇಶನ್ ನಂ. : ಜಿಪಂಯಾ/ಉನಿ(ಖಾಗ್ರ)/ಇ–ಟೆಂಡರ್/2021–22, 2) ಟೆಂಡರ್ ನೋಟಿಫಿಕೇಶನ್ ದಿನಾಂಕ : 23–12–2021, 3) ಮಾದರಿ ಉಪಕರಣ ಸಲ್ಲಿಸುವ ದಿನಾಂಕ ಮತ್ತು ಸಮಯ (ಐಎಸ್‌ಟಿ) : 12–01–2021 ರಂದು ಸಂಜೆ 5.00 ಗಂಟೆಯ ಒಳಗಾಗಿ, 4) ಭರ್ತಿ ಮಾಡಿದ ಟೆಂಡರ್ ಫಾರಂ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ (ಐಎಸ್‌ಟಿ) : 21–01–2022 ರಂದು ಸಂಜೆ 5.00 ಗಂಟೆಯ ಒಳಗಾಗಿ, 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಐಎಸ್‌ಟಿ) : 27–01–2022 ರಂದು ಬೆಳಿಗ್ಗೆ 11.00 ಗಂಟೆಗೆ, 6) ಮಾದರಿ ಉಪಕರಣಗಳ ಪರಿಶೀಲನೆ ಮಾಡುವ ದಿನಾಂಕ ಮತ್ತು ಸಮಯ : 29–01–2022 ರಂದು ಸಂಜೆ 4.00 ಗಂಟೆಗೆ, 7) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಐಎಸ್‌ಟಿ) : 31–01–2022 ರಂದು ಬೆಳಿಗ್ಗೆ 11.00 ಗಂಟೆಗೆ, 8) ಟೆಂಡರ್ ತೆರೆಯುವ ಸ್ಥಳ : ಟೆಂಡರ್ ಸಮಿತಿ ಅಧ್ಯಕ್ಷರು ಹಾಗೂ ಉಪ ಕಾರ್ಯದರ್ಶಿಗಳು ಜಿ.ಪಂ. ಇವರ ಕಛೇರಿ ಜಿಲ್ಲಾ ಪಂಚಾಯತ್ ಯಾದಗಿರಿ.

ಟೆಂಡರ್ ದಾಖಲೆಗಳು ಹಾಗೂ ಅವಶ್ಯ ವಿವರಗಳಿಗೆ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ನಿಯಮಾನುಸಾರ ಅರ್ಜಿ ಶುಲ್ಕ ಪಾವತಿಸಿ https://www.eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಉಪ ನಿರ್ದೇಶಕರು (ಖಾಗ್ರಾ)
ವಾ.ಸಾ.ಸಂ.ಇ/ಯಾದಗಿರಿ/299/ಎಂಸಿಎ/2021–22 ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಜಿಲ್ಲಾ ಪಂಚಾಯತ್ ಯಾದಗಿರಿ

ಗೌರವಾನ್ವಿತ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
#16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ,
ವಸಂತನಗರ, ಬೆಂಗಳೂರು–560052 ಇವರ ಮುಂದೆ

ಕೆಳಕಂಡ ವಿಷಯದಲ್ಲಿ, ವಿದ್ಯುತ್ ಕಾಯಿದೆ 2003 ರ ಪ್ರಕರಣ 62 ಮತ್ತು 64 ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ದರ) ನಿಯಮಾವಳಿ 2000ರ ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006 ಮತ್ತು ತಿದ್ದುಪಡಿಗಳ ಪ್ರಕಾರ ಆರ್ಥಿಕ ವರ್ಷ 2020–21 ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ(ಎ.ಪಿ.ಆರ್) ಮತ್ತು 2022–23, 2023–24 ಮತ್ತು 2024–25 ರ ಆರ್ಥಿಕ ವರ್ಷಗಳಿಗೆ ಬಹು ವಾರ್ಷಿಕ ಜಕಾತಿ ನಿಯಮಾವಳಿ ಅನುಸಾರ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ವಾರ್ಷಿಕ ಆದಾಯದ ಅಗತ್ಯತೆ (ಎ.ಆರ್.ಆರ್), ನಿರೀಕ್ಷಿತ ಆದಾಯ (ಇ.ಆರ್.ಸಿ) ಅನುಮೋದನೆಗಾಗಿ ನಿಯಂತ್ರಣ ಆಯೋಗದ ಮುಂದೆ ಸಲ್ಲಿಸಿರುವ ಅರ್ಜಿ ಬಗ್ಗೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ,
ಕಾವೇರಿ ಭವನ, ಬೆಂಗಳೂರು–560009. ....**ಅರ್ಜಿದಾರರು**

ಅಧಿಸೂಚನೆ

ಕವಿಪ್ರನಿನಿಯ ಎಪಿಆರ್ 2020–21 ಮತ್ತು ಎ.ಆರ್.ಆರ್ 2022–23, 2023–24 ಮತ್ತು 2024–25ರ ಬಗ್ಗೆ.

1.0 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006ರ ಪ್ರಕಾರ ಆರ್ಥಿಕ ವರ್ಷ 2020–21ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆ ಮತ್ತು ಆರ್ಥಿಕ ವರ್ಷ 2022–23, 2023–24 ಮತ್ತು 2024–25ರ ವಾರ್ಷಿಕ ಆದಾಯದ ಅಗತ್ಯತೆ (ಎ.ಆರ್.ಆರ್) ಹಾಗು ವಿದ್ಯುತ್ ದರದ ಪರಿಷ್ಕರಣೆಯ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ಗೌರವಾನ್ವಿತ ಆಯೋಗವು ಇವುಗಳ ಪರಿಷ್ಕರಣೆಯ ಬಗ್ಗೆ ಪರಿಶೀಲಿಸುತ್ತಿದೆ.

2.0 ಆರ್ಥಿಕ ವರ್ಷ 2020–21ರ ವಾರ್ಷಿಕ ಕಾರ್ಯಸಾಧನೆ ಪರಿಶೀಲನೆಯಲ್ಲಿ ವಾರ್ಷಿಕ ಆದಾಯದ ಅಗತ್ಯತೆಯು (ವೆಚ್ಚ) ₹ **4077.71** ಕೋಟಿಯಾಗಿರುತ್ತದೆ. ಹಾಗೂ ಒಟ್ಟು ₹ **557.01** ಕೋಟಿ ಕಂದಾಯ ಕೊರತೆ ಬಂದಿರುತ್ತದೆ. ಸದರಿ ಕೊರತೆಯನ್ನು ಆರ್ಥಿಕ ವರ್ಷ 2022–23ರಲ್ಲಿ ವಸೂಲಿ ಮಾಡಲು ಅನುಮೋದನೆ ನೀಡಬೇಕಾಗಿ ಕೋರಲಾಗಿದೆ.

3.0 ಕವಿಪ್ರನಿನಿಯ ಆರ್ಥಿಕ ವರ್ಷ 2022–23, 2023–24 ಮತ್ತು 2024–25ರ ಪ್ರಸ್ತುತ ಆರ್ಥಿಕ ವಾರ್ಷಿಕ ಆದಾಯದ ಅಗತ್ಯತೆಯಾದ ₹ **6193.27**, ₹ **6450.72**, ₹ **7377.37** ಕೋಟಿಗಳನ್ನು ಪ್ರಸ್ತಾವಿತ ಪ್ರಸರಣ ದರ ಪ್ರತಿ ಮೆಗಾವ್ಯಾಟ್‌ಗೆ, ಪ್ರತಿ ತಿಂಗಳಿಗೆ, ಕ್ರಮವಾಗಿ ₹ **179640/–**, ₹ **174221/–**, ₹ **187863/–** ರಂತೆ ವಿದ್ಯುತ್ ಸರಬರಾಜು ಕಂಪನಿಗಳಿಂದ ವಸೂಲಿ ಮಾಡಲು ಪ್ರಸ್ತಾಪಿಸಿದೆ.

4.0 ಪ್ರಸ್ತುತ, ಆಯೋಗದ ಅನುಮೋದಿತ ಪ್ರಸರಣ ದರ ಪ್ರತಿ ಮೆಗಾವ್ಯಾಟ್‌ಗೆ, ಪ್ರತಿ ತಿಂಗಳಿಗೆ ₹ **1,51,518/–** ಇರುತ್ತದೆ.

5.0 ವಿದ್ಯುಚ್ಛಕ್ತಿ ಅಧಿನಿಯಮ 2003ರ ಜೊತೆಗೆ ಓದಿಕೊಳ್ಳಲಾದ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ದರ) ನಿಯಮಾವಳಿ 2000ರ ಮತ್ತು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ (ಪ್ರಸರಣ ದರ ನಿಗದಿಪಡಿಸುವ ನಿಬಂಧನೆ ಹಾಗೂ ಷರತ್ತುಗಳು) ನಿಯಮಾವಳಿ 2006 ಮತ್ತು ತಿದ್ದುಪಡಿಗಳ ಪ್ರಕಾರ ಮೇಲಿನ ಪ್ರಸ್ತಾವನೆಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವವರು ತಮ್ಮ ಆಕ್ಷೇಪಣೆಗಳನ್ನು ತಾವು ಆಧರಿಸುವ ದಾಖಲೆಗಳ ಆರು ಸೆಟ್‌ಗಳೊಂದಿಗೆ ಪ್ರಮಾಣ ಪತ್ರದ(ಅಫಿಡವಿಟ್) ಜೊತೆಗೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ **ಸ್ವೀಕರಣಾಧಿಕಾರಿ, ಕಾರ್ಯದರ್ಶಿಗಳ ಕಛೇರಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, #16ಸಿ–1, ಮಿಲ್ಲರ್ ಟ್ಯಾಂಕ್ ಬೆಡ್ ಏರಿಯ, ವಸಂತನಗರ, ಬೆಂಗಳೂರು–560052** ಅವರಿಗೆ ಸಲ್ಲಿಸಬಹುದು.

6.0 ಆಸಕ್ತಿ ಇರುವವರು ಪರಾಮರ್ಶೆಗಾಗಿ ಅಥವಾ ಕೊಳ್ಳಲು ಇಚ್ಛಿಸಿದಲ್ಲಿ ಎಪಿಆರ್ ಮತ್ತು ಬಹು ವಾರ್ಷಿಕ ದರದ ಪ್ರಸ್ತಾವನೆಯ ಪ್ರತಿಗಳು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮತ್ತು ವಿಸಕಂಗಳ ಈ ಕೆಳಕಂಡ ಕಛೇರಿಗಳಲ್ಲಿ ಲಭ್ಯವಿರುತ್ತದೆ.
1. **ಎಲ್ಲಾ ಮುಖ್ಯ ಇಂಜಿನಿಯರ್(ವಿದ್ಯುತ್), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು, ತುಮಕೂರು, ಹಾಸನ, ಮೈಸೂರು, ಬಾಗಲಕೋಟೆ ಮತ್ತು ಕಲಬುರಗಿ.**
2. **ಲೆಕ್ಕಾಧಿಕಾರಿ(ಸಾರ್ವಜನಿಕ ಸಂಪರ್ಕ), ನಿಗಮ ಕಾರ್ಯಾಲಯ, ಕವಿಪ್ರನಿನಿ, ನೆಲಮಹಡಿ, ಕಾವೇರಿ ಭವನ, ಬೆಂಗಳೂರು.**
3. **ವಿದ್ಯುತ್ ಸರಬರಾಜು ಕಂಪನಿಗಳ ನಿಗಮ ಕಾರ್ಯಾಲಯ, ಬೆಂಗಳೂರು, ಮಂಗಳೂರು, ಮೈಸೂರು, ಹುಬ್ಬಳ್ಳಿ ಮತ್ತು ಕಲಬುರಗಿ.**

7.0 ಎಪಿಆರ್/ಎಆರ್‌ಆರ್ ಪ್ರತಿಗಳನ್ನು ಕೊಳ್ಳಲು ಇಚ್ಛಿಸುವವರು ಎಪಿಆರ್ ನ ಕನ್ನಡ ಭಾಷೆಯ ಪ್ರತಿ ಪುಸ್ತಕಕ್ಕೆ ₹ **103/–** ಹಾಗು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ ₹ **102/–** ರಂತೆ ಮತ್ತು ಎಆರ್‌ಆರ್ ನ ಕನ್ನಡ ಭಾಷೆಯ ಪ್ರತಿ ಪುಸ್ತಕಕ್ಕೆ ₹ **280/–** ಹಾಗು ಆಂಗ್ಲ ಭಾಷೆಯ ಪ್ರತಿ ಪುಸ್ತಕಕ್ಕೆ ₹ **275/–**ರಂತೆ ನಗದು/ಡಿಡಿ ಮೂಲಕ ಪಾವತಿಸಿ ಪೂರ್ಣ ಪ್ರತಿಯನ್ನು ಅಥವಾ ಪ್ರತಿ ಪುಟಕ್ಕೆ ₹ **1/–** ರಂತೆ ಜೆರಾಕ್ಸ್ ವೆಚ್ಚಗಳನ್ನು ಪಾವತಿ ಮಾಡಿ ಪುಸ್ತಕಗಳ ಅಪೇಕ್ಷಿತ ಭಾಗಗಳ ಪ್ರತಿಗಳನ್ನು ಪ್ರಥಮ ಪ್ರಕಟಣೆಯ ದಿನಾಂಕದ **ಹತ್ತು ಕೆಲಸದ ದಿನಗಳೊಳಗಾಗಿ** ಪಡೆಯಲು ಅವಕಾಶವಿರುತ್ತದೆ. ಈ ದಾಖಲೆಗಳು ಕವಿಪ್ರನಿನಿ ವೆಬ್‌ಸೈಟ್ **https://kptcl.karnataka.gov.in** ನಲ್ಲಿ ಸಹ ಲಭ್ಯವಿರುತ್ತದೆ.

8.0 ಆಕ್ಷೇಪಣೆಗಳನ್ನು ಸಲ್ಲಿಸಲು ಇಚ್ಛಿಸುವವರು ಅಧಿಸೂಚನೆ ಹೊರಡಿಸಿದ **30** ದಿನಗಳಲ್ಲಿ ನೇರವಾಗಿ **ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ** ಕಛೇರಿಗೆ ಕಳುಹಿಸಬೇಕು. ಅನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಈ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ದೃಷ್ಟಿಯಿಂದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಕ್ಕೆ ಸಲ್ಲಿಸಿದ ಆಕ್ಷೇಪಣೆಗಳ ಪ್ರತಿಯನ್ನು ನೇರವಾಗಿ **ವ್ಯವಸ್ಥಾಪಕ ನಿರ್ದೇಶಕರು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು** ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಪರವಾಗಿ
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು–560 009.

ಪಾಕಿಸ್ತಾನದ ಕಡೆಯ ಶೆಲ್, ಗುಂಡಿನ ದಾಳಿಯಿಂದ ಗಡಿ ಜನರ ರಕ್ಷಣೆಗಾಗಿ ಕ್ರಮ

ಗಡಿಯಲ್ಲಿ 8,500 ಬಂಕರ್‌ಗಳ ನಿರ್ಮಾಣ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಗಡಿ ಪ್ರದೇಶದ ನಿವಾಸಿಗಳಿಗೆ ಪಾಕಿಸ್ತಾನದ ಷೆಲ್ ಹಾಗೂ ಗುಂಡಿನ ದಾಳಿಯಿಂದ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಜಮ್ಮು ಪ್ರಾಂತ್ಯದಲ್ಲಿ ಕೇಂದ್ರ ಸರ್ಕಾರವು 8,500 ಬಂಕರ್‌ಗಳನ್ನು ನಿರ್ಮಿಸಿದೆ.

ಜಮ್ಮು, ಕತುವಾ, ಸಾಂಬಾ ಜಿಲ್ಲೆಯ ಅಂತರರಾಷ್ಟ್ರೀಯ ಗಡಿ (ಐಬಿ) ವ್ಯಾಪ್ತಿಯ ಗ್ರಾಮಗಳು ಹಾಗೂ ಪೂಂಚ್ ಹಾಗೂ ರಾಜೌರಿ ಜಿಲ್ಲೆಯ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ವ್ಯಾಪ್ತಿಯ ಗ್ರಾಮಗಳಲ್ಲಿ ಕೇಂದ್ರ ಗೃಹ ಸಚಿವಾಲಯದ ಅನುದಾನದಲ್ಲಿ ಬಂಕರ್‌ಗಳನ್ನು ನಿರ್ಮಾಣ ಮಾಡಲಾಗಿದೆ.

ಮೊದಲ ಹಂತದಲ್ಲಿ 8,444 ವೈಯಕ್ತಿಕ ಹಾಗೂ 1,461 ಸಮುದಾಯ ಬಂಕರ್ ಸೇರಿ ಒಟ್ಟು 9,905 ಬಂಕರ್‌ಗಳನ್ನು ನಿರ್ಮಿಸಲಾಗುತ್ತಿದ್ದು, ಈ ಪೈಕಿ ಸುಮಾರು 8,500 ಬಂಕರ್‌ಗಳ ಕಾಮಗಾರಿ ಪೂರ್ಣಗೊಂಡಿದ್ದು, ಪೂರ್ಣಗೊಂಡ ಬಂಕರ್‌ಗಳ ಕೀ ಗಳನ್ನು ಅಲ್ಲಿನ ಜನರಿಗೆ ಹಸ್ತಾಂತರಿಸಲಾಗಿದೆ.

ವೈಯಕ್ತಿಕ ಬಂಕರ್‌ಗಳಲ್ಲಿ 8ರಿಂದ 10 ಮಂದಿ, ಸಮುದಾಯ ಬಂಕರ್‌ಗಳಲ್ಲಿ 20ರಿಂದ 30 ಮಂದಿ ವಾಸ್ತವ್ಯ ಹೂಡಬಹುದಾಗಿದ್ದು, ಕದನ ವಿರಾಮ ಉಲ್ಲಂಘನೆಯ ಸಂದರ್ಭದಲ್ಲಿ ಗಡಿ ಪ್ರದೇಶದತ್ತ ತೂರಿಬರುವ ಗುಂಡುಗಳಿಂದ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಬಂಕರ್‌ಗಳನ್ನು ವಿನ್ಯಾಸಗೊಳಿಸಲಾಗಿದೆ.

'ಈ ಎಲ್ಲಾ ಬಂಕರ್‌ಗಳನ್ನು ಅಂತರರಾಷ್ಟ್ರೀಯ ಗಡಿ (ಐಬಿ) ಹಾಗೂ ಗಡಿ ನಿಯಂತ್ರಣ ರೇಖೆಯಿಂದ ಮೂರು ಕಿ.ಮೀ ವ್ಯಾಪ್ತಿಯ ಒಳಗೆ ನಿರ್ಮಾಣ ಮಾಡಲಾಗಿದೆ. ಪಾಕ್‌ನ ಶೆಲ್ ಹಾಗೂ ಗುಂಡಿನ ದಾಳಿಯಂತಹ ಸಂದರ್ಭಗಳಲ್ಲಿ ಗಡಿ ಭಾಗದ ಜನರು ಈ ಬಂಕರ್‌ಗಳನ್ನು ಉಪಯೋಗಿಸಿಕೊಳ್ಳಬಹುದು. ಸ್ಥಳೀಯ ಆಡಳಿತವು ಈ ಬಂಕರ್‌ಗಳ ಕೀ ಅನ್ನು ಆಯಾ ಗ್ರಾಮಗಳ ಮುಖ್ಯಸ್ಥರಿಗೆ ಹಸ್ತಾಂತರಿಸಿದೆ' ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಸುಮಾರು 8,500 ಬಂಕರ್‌ಗಳ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಬಂಕರ್‌ಗಳ ಕಾಮಗಾರಿಗಳ ಪ್ರಗತಿಯಲ್ಲಿವೆ. ಅಲ್ಲದೇ 15 ಸಾವಿರ ವೈಯಕ್ತಿಕ ಹಾಗೂ ಸಮುದಾಯ ಬಂಕರ್‌ಗಳನ್ನು ಮಂಜೂರು ಮಾಡುವಂತೆ ಜಮ್ಮು ಮತ್ತು ಕಾಶ್ಮೀರ ಆಡಳಿತವು ಕೇಂದ್ರ ಸರ್ಕಾರಕ್ಕೆ ಶೀಘ್ರವೇ ಮನವಿ ಸಲ್ಲಿಸಲಿದೆ' ಎಂದು ಅವರು ಹೇಳಿದರು.

ಭಾರತವು ಪಾಕಿಸ್ತಾನದೊಂದಿಗೆ 3,323 ಕಿ.ಮೀ ಗಡಿಯನ್ನು ಹಂಚಿಕೊಂಡಿದ್ದು, ಇದರಲ್ಲಿ 221 ಕಿ.ಮೀ ಅಂತರರಾಷ್ಟ್ರೀಯ ಗಡಿ ಹಾಗೂ 740 ಕಿ.ಮೀ ಗಡಿ ನಿಯಂತ್ರಣ ರೇಖೆಯು ಜಮ್ಮು ಮತ್ತು ಕಾಶ್ಮೀರದ ಭಾಗದಲ್ಲಿದೆ.

ಕ್ರಿಸ್‌ಮಸ್ ಹಿಂಸಾಚಾರ: 50 ಕಾರ್ಮಿಕರ ಬಂಧನ

ಕೊಚ್ಚಿ (ಪಿಟಿಐ): ಎರ್ನಾಕುಲಂ ಜಿಲ್ಲೆಯ ಕಿಝಕ್ಕಂಬಳಂ ಪ್ರದೇಶದಲ್ಲಿ ಕ್ರಿಸ್‌ಮಸ್ ದಿನದಂದು ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ 50 ಮಂದಿಯನ್ನು ಬಂಧಿಸಲಾಗಿದ್ದು, ಇಲ್ಲಿಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯವೊಂದರ ಮುಂದೆ ಹಾಜರುಪಡಿಸಲಾಗಿದೆ ಎಂದು ಪೊಲೀಸರು ಸೋಮವಾರ ಹೇಳಿದ್ದಾರೆ.

ಕಿಝಕ್ಕಂಬಳಂನಲ್ಲಿ ದೇಶದ ಈಶಾನ್ಯ ಭಾಗದಿಂದ ಬಂದ ವಲಸೆ ಕಾರ್ಮಿಕರು ಶನಿವಾರ ರಾತ್ರಿ ಕ್ರಿಸ್‌ಮಸ್ ಆಚರಿಸುತ್ತಿದ್ದರು. ಆಚರಣೆಯು ಇದ್ದಕ್ಕಿದ್ದಂತೆ ಹಿಂಸಾಚಾರಕ್ಕೆ ತಿರುಗಿತ್ತು. ಅಲ್ಲಿದ್ದ ಪೊಲೀಸರ ಮೇಲೆ ಗಂಭೀರವಾಗಿ ಹಲ್ಲೆ ನಡೆಸಲಾಗಿತ್ತು. 2 ಪೊಲೀಸ್ ಜೀಪುಗಳಿಗೆ ಬೆಂಕಿ ಹಚ್ಚಲಾಗಿತ್ತು.

ಹಿಂಸಾಚಾರದಲ್ಲಿ 8 ಪೊಲೀಸರು ಮತ್ತು ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ಗಾಯಗೊಂಡಿದ್ದಾರೆ. ಪೊಲೀಸರು ಕೊಲೆ ಯತ್ನ ಮತ್ತು ಆಸ್ತಿ ನಾಶ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅಫ್ಗನ್: ಚುನಾವಣಾ ಆಯೋಗ ವಿಸರ್ಜಿಸಿದ ತಾಲಿಬಾನ್ ಸರ್ಕಾರ

ಕಾಬೂಲ್ (ಎಪಿ): ಅಫ್ಗಾನಿಸ್ತಾನದಲ್ಲಿ ಅಧಿಕಾರದಲ್ಲಿರುವ ತಾಲಿಬಾನ್ ಸರ್ಕಾರವು, ಅಲ್ಲಿನ ಚುನಾವಣಾ ಆಯೋಗಗಳು ಹಾಗೂ ಶಾಂತಿ ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯವನ್ನು ವಿಸರ್ಜಿಸಿದೆ.

ದೇಶದ ಸ್ವತಂತ್ರ ಚುನಾವಣಾ ಆಯೋಗ, ಚುನಾವಣಾ ದೂರು ಆಯೋಗ ಹಾಗೂ ಶಾಂತಿ ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯವನ್ನು ವಿಸರ್ಜಿಸಲಾಗಿದೆ ಎಂದು ಸರ್ಕಾರದ ಉಪ ವಕ್ತಾರ ಬಿಲಾಲ್ ಕರೀಮಿ ತಿಳಿಸಿದ್ದಾರೆ.

'ಅಫ್ಗಾನಿಸ್ತಾನದ ಸದ್ಯದ ಸನ್ನಿವೇಶಕ್ಕೆ ಅವು ಅನಗತ್ಯ ಸಂಸ್ಥೆಗಳಾಗಿವೆ' ಎಂದು ಹೇಳಿರುವ ಕರೀಮಿ, ಭವಿಷ್ಯದಲ್ಲಿ ಅವುಗಳ ಅಗತ್ಯವಿದೆ ಎನಿಸಿದರೆ, ತಾಲಿಬಾನ್ ಸರ್ಕಾರ ಪುನರ್ ಸ್ಥಾಪಿಸಲಿದೆ ಎಂದಿದ್ದಾರೆ.

ಆರು ನಕ್ಸಲರ ಹತ್ಯೆ

ಹೈದರಾಬಾದ್/ರಾಯ್‌ಪುರ (ಪಿಟಿಐ): 'ತೆಲಂಗಾಣ ಹಾಗೂ ಛತ್ತೀಸಗಡ ಗಡಿ ಪ್ರದೇಶದಲ್ಲಿರುವ ಕಿಸ್ತಾರಮ್ ಅರಣ್ಯ ವ್ಯಾಪ್ತಿಯಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಆರು ನಕ್ಸಲರು ಹತ್ಯೆಯಾಗಿದ್ದಾರೆ' ಎಂದು ಸೋಮವಾರ ಪೊಲೀಸರು ತಿಳಿಸಿದ್ದಾರೆ.

'ಎನ್‌ಕೌಂಟರ್‌ನಲ್ಲಿ ನಾಲ್ವರು ಮಹಿಳೆಯರು ಸೇರಿದಂತೆ ಒಟ್ಟು ಆರು ಮಂದಿ ಮಾವೋವಾದಿ ನಕ್ಸಲರು ಸಾವಿಗೀಡಾಗಿದ್ದಾರೆ. ಇದು ತೆಲಂಗಾಣ ಹಾಗೂ ಛತ್ತೀಸಗಡ ಪೊಲೀಸರು ಮತ್ತು ಸಿಆರ್‌ಪಿಎಫ್ ನಡೆಸಿದ ಜಂಟಿ ಕಾರ್ಯಾಚರಣೆಯಾಗಿದೆ. ಶೋಧ ಕಾರ್ಯ ಹೆಚ್ಚಿಸಲಾಗಿದೆ' ಎಂದು ಭದ್ರಾದ್ರಿ ಕೊಥಾಗುಡೆಂ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಸುನೀಲ್ ದತ್ ತಿಳಿಸಿದ್ದಾರೆ.

ಅಫ್ಗನ್: ಹೆಚ್ಚಿದ ಚಳಿ, ಚಿಕಿತ್ಸೆಗೂ ಪರದಾಡುತ್ತಿರುವ ಜನರು

ಕಾಬೂಲ್(ಎಪಿ): ಅಫ್ಗಾನಿಸ್ತಾನದಲ್ಲಿ ತೀವ್ರ ಚಳಿಯಿಂದಾಗಿ ಚಿಕ್ಕಮಕ್ಕಳು ತಾತ್ಕಾಲಿಕ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದರೆ, ಅಸ್ವಸ್ಥ ಶಿಶುಗಳು ಆಸ್ಪತ್ರೆಗಳಲ್ಲಿ ತಾಯಂದಿರ ಬುರ್ಖಾದೊಳಗೆ ಆಶ್ರಯ ಪಡೆದಿವೆ. ಹತಾಶ ಸ್ಥಿತಿಯಲ್ಲಿ ಮುಳುಗಿರುವ ಅಫ್ಗಾನಿಸ್ತಾನದಲ್ಲೀಗ ಆಹಾರ ವಿತರಣಾ ಕೇಂದ್ರಗಳ ಮುಂದೆ ಉದ್ದನೆಯ ಸಾಲುಗಳು ಕಂಡು ಬರುತ್ತಿವೆ.

ಆ. 15ರಂದು ಕಾಬೂಲ್ ಅನ್ನು ತಾಲಿಬಾನ್ ಅನ್ನು ಸ್ವಾಧೀನಪಡಿಸಿಕೊಂಡ ನಂತರ ಅಫ್ಗಾನಿಸ್ತಾನದಲ್ಲಿನ ಆರ್ಥಿಕ ಸ್ಥಿತಿಯು ಕುಸಿದಿದ್ದು, ಅಂತರರಾಷ್ಟ್ರೀಯ ದೇಣಿಗೆಗಳಿಂದ ಗುಟುಕು ಜೀವ ಉಳಿಸಿಕೊಂಡಿದೆ. ಅಫ್ಗಾನಿಸ್ತಾನದ ಈ ಹಿಂದಿನ ಸರ್ಕಾರದ ಬಜೆಟ್‌ಗೆ ಅಂತರರಾಷ್ಟ್ರೀಯ ಸಮುದಾಯದಿಂದ ಶೇ 80ರಷ್ಟು ಹಣದ ನೆರವು ಬಂದಿತ್ತು. ಈಗ ಆ ನೆರವೂ ಕಡಿತಗೊಂಡಿದೆ.

ಅಪೌಷ್ಟಿಕತೆಯಿಂದ ಬಳಲುತ್ತಿರುವ ಲಕ್ಷಾಂತರ ಮಕ್ಕಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲು ಪೋಷಕರ ಬಳಿ ಹಣವಿಲ್ಲ. ತೀವ್ರ ಚಳಿಯಲ್ಲಿ ಸಹಾಯ ಯಾಚಿಸಿ ಸರ್ಕಾರಿ ಸಚಿವಾಲಯಗಳಲ್ಲಿ ಹೊರಗೆ ಕಾದು ಕುಳಿತಿರುವ ಲಕ್ಷಾಂತರ ಜನರಿಗೆ ಕಟ್ಟಿಗೆ ಉರಿಯ ಶಾಖವೇ ಚಳಿ ಓಡಿಸುವ ಏಕೈಕ ಮೂಲವಾಗಿದೆ.

'ಶೇ 97ರಷ್ಟು ಅಫ್ಗನರು ಶೀಘ್ರದಲ್ಲೇ ಬಡತನ ರೇಖೆಯ ಕೆಳಗಿಳಿಯಲಿದ್ದಾರೆ' ಎಂದು ವಿಶ್ವಸಂಸ್ಥೆ ತಿಳಿಸಿದೆ.

ಗ್ರೀಸ್‌ನಲ್ಲಿ ಎರಡು ಬಾರಿ ಭೂಕಂಪ

ಅಥೆನ್ಸ್ (ಎಪಿ): ಗ್ರೀಸ್‌ನ ದಕ್ಷಿಣ ಭಾಗದ ಕ್ರೀಟ್ ಮತ್ತು ಇತರ ದ್ವೀಪಗಳ ವ್ಯಾಪ್ತಿಯಲ್ಲಿ ರಿಕ್ಟರ್ ಮಾಪಕದಲ್ಲಿ 5.2 ಮತ್ತು 5.4ರಷ್ಟು ತೀವ್ರತೆಯಿಂದ ಎರಡು ಭೂಕಂಪಗಳು ಸಂಭವಿಸಿದ್ದು, ಹಾನಿಯ ಬಗ್ಗೆ ವರದಿಯಾಗಿಲ್ಲ.

ಕ್ರಮವಾಗಿ 9 ಕಿಲೋ ಮೀಟರ್ ಮತ್ತು 6.3 ಕಿಲೋಮೀಟರ್ ಆಳದಲ್ಲಿ ಭೂಕಂಪನ ಸಂಭವಿಸಿದೆ.

ನಿಧನ ವಾರ್ತೆ

ರಾಜ್ಯಸಭಾ ಸದಸ್ಯ ಮಹೇಂದ್ರ ಪ್ರಸಾದ್

ನವದೆಹಲಿ (ಪಿಟಿಐ): ಸಂಯುಕ್ತ ಜನತಾ ದಳದ ರಾಜ್ಯಸಭಾ ಸದಸ್ಯ ಹಾಗೂ ಉದ್ಯಮಿ ಮಹೇಂದ್ರ ಪ್ರಸಾದ್ (81) ಅವರು ಇಲ್ಲಿಯ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾದರು.

ದೀರ್ಘಕಾಲದ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಸಂಸತ್ತಿನ ಶ್ರೀಮತ ಸದಸ್ಯರಲ್ಲಿ ಒಬ್ಬರಾಗಿದ್ದರು.

ಬಿಹಾರದಿಂದ ಏಳು ಬಾರಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದ ಅವರು, ಒಂದು ಬಾರಿ ಲೋಕಸಭೆಗೂ ಚುನಾಯಿತರಾಗಿದ್ದರು.

ಪ್ರೊ ಕಬಡ್ಡಿ ಲೀಗ್: ತಮಿಳ್ ತಲೈವಾಸ್–ಯು ಮುಂಬಾ ಪಂದ್ಯ ಟೈ

ಪಿಂಕ್ ಪ್ಯಾಂಥರ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ


ಯುಪಿ ಯೋಧಾ ಮತ್ತು ಜೈಪುರ ಪಿಂಕ್ ಪ್ಯಾಂಥರ್ಸ್ ಆಟಗಾರರ ನಡುವಣ ಪೈಪೋಟಿ –ಪ್ರೊ ಕಬಡ್ಡಿ ಟ್ವಿಟರ್ ಚಿತ್ರ

ಬೆಂಗಳೂರು: ಅರ್ಜುನ್ ದೇಶ್ವಾಲ್ ಅವರ ಮಿಂಚಿನ ದಾಳಿಯ ನೆರವಿನಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯಲ್ಲಿ ಸೋಮವಾರ ಯುಪಿ ಯೋಧಾ ಎದುರು ಜಯಿಸಿತು.

ವೈಟ್‌ಫೀಲ್ಡ್‌ನ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಪ್ಯಾಂಥರ್ಸ್ 32–29ರಿಂದ ಯೋಧಾ ವಿರುದ್ಧ ಗೆದ್ದಿತು.

ಅಮೋಘ ದಾಳಿ ಸಂಘಟಿಸಿದ ಅರ್ಜುನ್ 11 ಅಂಕಗಳನ್ನು ಗಳಿಸಿದರು. ನಾಯಕ ದೀಪಕ್ ಹೂಡಾ ಆಲ್‌ರೌಂಡ್ ಆಟದಿಂದ 9 ಅಂಕ ಗಳಿಸಿ ತಂಡದ ಗೆಲುವಿಗೆ ಕಾಣಿಕೆ ನೀಡಿದರು. ಅವರಿಗೆ ನಿತಿನ್ ರಾವಳ್ (4 ಪಾಯಿಂಟ್) ಉತ್ತಮ ಜೊತೆ ನೀಡಿದರು. ಮೊದಲಾರ್ಧದಲ್ಲಿಯೇ ತಂಡವು 19–12ರಿಂದ ಮುನ್ನಡೆ ಸಾಧಿಸಿತ್ತು. ವಿರಾಮದ ನಂತರ ಯೋಧಾ ತಂಡವು ಪೈಪೋಟಿಯೊಡ್ಡಿತು. ಯೋಧಾ ತಂಡದ ಸುರೇಂದರ್ ಗಿಲ್ ಚುರುಕಿನ ದಾಳಿ ಮಾಡಿದರು. 10 ಪಾಯಿಂಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ರೋಹಿತ್ ಕುಮಾರ (7) ಕೂಡ ಮಿಂಚಿದರು.

ಟೈ ಪಂದ್ಯದಲ್ಲಿ ಮುಂಬಾ: ಮಂಜೀತ್ ಮತ್ತು ವಿ. ಅಜಿತ್ ಅವರ ಜಿದ್ದಾಜಿದ್ದಿಯ ಆಟದಿಂದಾಗಿ ತಮಿಳ್ ತಲೈವಾಸ್ ಮತ್ತು ಯು ಮುಂಬಾ ನಡುವಣ ಪಂದ್ಯವು ರೋಚಕ ಟೈನಲ್ಲಿ ಅಂತ್ಯವಾಯಿತು.

ದಿನದ ಮೊದಲ ಪಂದ್ಯದಲ್ಲಿ ಉಭಯ ತಂಡಗಳು 30–30ರಿಂದ ಸಮಬಲ ಸಾಧಿಸಿದವು. ಆದರೆ ಈ ಪಂದ್ಯದ ಮೊದಲಾರ್ಧದಲ್ಲಿ ತಲೈವಾಸ್ ತಂಡವು 17–14ರಿಂದ ಮುನ್ನಡೆಯಲಿತ್ತು. ರೇಡಿಂಗ್‌ನಲ್ಲಿ ಮಿಂಚಿದ್ದ ಮಂಜಿತ್ ಅವರಿಂದಾಗಿ ತಂಡವು ಈ ಮುನ್ನಡೆ ಸಾಧಿಸಿತ್ತು. ರಕ್ಷಣಾ ಪಡೆಯೂ ಕೂಡ ಎದುರಾಳಿ ದಾಳಿಗಾರರನ್ನು ಕಟ್ಟಿಹಾಕುವಲ್ಲಿ ಯಶಸ್ವಿಯಾಗಿದ್ದರು. ಆದರೆ ವಿರಾಮದ ನಂತರ ಪುಟಿದೆದ್ದ ಮುಂಬಾ ತಂಡವು ಅಮೋಘ ಆಟವಾಡಿತು.

ಇಂದಿನ ಪಂದ್ಯ (ರಾತ್ರಿ)

ಪುಣೇರಿ ಪಲ್ಟನ್ Vs ಪಟ್ನಾ ಪೈರೇಟ್ಸ್ 7.30

ತೆಲುಗು ಟೈಟನ್ಸ್ – ಹರಿಯಾಣ ಸ್ಟೀಲರ್ಸ್ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	3	2	-	1	13
ಬೆಂಗಾಲ್ ವಾರಿಯರ್ಸ್	3	2	1	-	11
ಜೈಪುರ ಪಿಂಕ್ ಪ್ಯಾಂಥರ್ಸ್	3	2	1	-	11
ಬೆಂಗಳೂರು ಬುಲ್ಸ್	3	2	1	-	10
ಯು ಮುಂಬಾ	3	1	1	1	9
ಗುಜರಾತ್ ಜೈಂಟ್ಸ್	3	1	1	1	9
ಯುಪಿ ಯೋಧಾ	3	1	2	-	7
ಪಟ್ನಾ ಪೈರೇಟ್ಸ್	2	1	1	-	6
ತಮಿಳ್ ತಲೈವಾಸ್	3	-	1	2	6
ಪುಣೇರಿ ಪಲ್ಟನ್	2	1	1	-	5
ತೆಲುಗು ಟೈಟನ್ಸ್	2	-	1	1	4
ಹರಿಯಾಣ ಸ್ಟೀಲರ್ಸ್	2	-	2	-	2

(ಸೋಮವಾರದ ಪಂದ್ಯಗಳ ಅಂತ್ಯಕ್ಕೆ)

ಹಾಕಿ: ಭಾರತಿದಾಸನ್ ವಿ.ವಿಗೆ ಜಯ

ಗೋಣಿಕೊಪ್ಪಲು (ಕೊಡಗು ಜಿಲ್ಲೆ): ತಮಿಳುನಾಡಿನ ಭಾರತಿದಾಸನ್ ವಿಶ್ವವಿದ್ಯಾಲಯ ತಂಡವು ಸೋಮವಾರ ಇಲ್ಲಿ ಆರಂಭವಾದ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯ ಮಹಿಳಾ ಹಾಕಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಒಟ್ಟು ಐದು ತಂಡಗಳು ಜಯ ಗಳಿಸಿ ಮುಂದಿನ ಸುತ್ತಿಗೆ ಪ್ರವೇಶಿಸಿದವು.

ಮಂಗಳೂರು ವಿಶ್ವವಿದ್ಯಾಲಯ ಹಾಗೂ ವಿರಾಜಪೇಟೆ ಸರ್ಕಾರಿ ಪ್ರಥಮದರ್ಜೆ ಕಾಲೇಜು ಆಶ್ರಯದಲ್ಲಿ ಪೊನ್ನಂಪೇಟೆಯ ಟರ್ಫ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಭಾರತಿದಾಸನ್ ವಿ.ವಿ ತಂಡ 8–0 ಗೋಲುಗಳಿಂದ ಬೆಳಗಾವಿ ವಿಟಿಯು ತಂಡವನ್ನು ಮಣಿಸಿತು. ವಿಜೇತ ತಂಡದ ಪರವಾಗಿ ಸೋನಿಯಾ 3, ಲತಾ 2, ಶಾಂತನಾಪ್ರಿಯ, ಪದ್ಮತಮಿಳ್ ಹಾಗೂ ಕ್ರಿಷ್ಟಿನಾ ತಲಾ ಒಂದು ಗೋಲು ಗಳಿಸಿದರು. ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯ ತಂಡವು 4-0 ಗೋಲುಗಳಿಂದ ಅಳಗಪ್ಪ ವಿ.ವಿ ತಂಡವನ್ನು ಪರಾಭವಗೊಳಿಸಿತು.

ಪೆರಿಯಾರ್ ವಿ.ವಿ ತಂಡವು 1–0 ಗೋಲಿನಿಂದ ಕೇರಳ ವಿ.ವಿ ತಂಡದ ವಿರುದ್ಧ ಜಯಿಸಿತು. ಭಾರತೀಯಾರ್ ವಿ.ವಿ ತಂಡವು 4–0 ಗೋಲುಗಳಿಂದ ಅಣ್ಣಾ ವಿ.ವಿ ತಂಡದ ವಿರುದ್ಧ ಗೆದ್ದು ಮುನ್ನಡೆ ಸಾಧಿಸಿತು. ಮಧುರೈ ಕಾಮರಾಜ್ ವಿ.ವಿ ತಂಡವು 6–0 ಗೋಲುಗಳಿಂದ ತಿರುಪತಿ ವೆಂಕಟೇಶ್ವರ ವಿ.ವಿ ತಂಡವನ್ನು ಸೋಲಿಸಿತು.

ಸ್ಕೇಟಿಂಗ್: ಕರ್ನಾಟಕ ಪಾರಮ್ಯ

ಪ್ರಜಾವಾಣಿ ವಾರ್ತೆ

ಪದಕಗಳೊಂದಿಗೆ ರಿಯಾ ಸಂಭ್ರಮ

ಬೆಂಗಳೂರು: ಕರ್ನಾಟಕದ ರಿಯಾ ಎಲಿಜಬೆತ್ ಆಚಯ್ಯ ಅವರು ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಸ್ಪೀಡ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವು ಸಮಗ್ರ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ದೇಶದಾದ್ಯಂತ 3000ಕ್ಕೂ ಹೆಚ್ಚು ಸ್ಕೇಟಿಂಗ್ ಪಟುಗಳು ಭಾಗವಹಿಸಿದ್ದರು. ರಾಜ್ಯದ ಧನುಷ್ ಬಾಬು ವೇಗದ ಸ್ಕೇಟರ್ ಎಂಬ ಶ್ರೇಯ ಗಳಿಸಿದರೆ, ಸುವರ್ಣಿಕಾ ಆರು ಚಿನ್ನದ ಪದಕ ಗೆದ್ದುಕೊಂಡರು. ಕರ್ನಾಟಕ ಒಟ್ಟು 48 ಚಿನ್ನದ ಪದಕಗಳನ್ನು ತನ್ನದಾಗಿಸಿಕೊಂಡಿತು. 27 ಚಿನ್ನ, 21 ಕಂಚಿನ ಪದಕಗಳು ರಾಜ್ಯ ತಂಡಕ್ಕೆ ಒಲಿದವು. ತಂಡಕ್ಕೆ ಪ್ರತೀಕ್ ರಾವ್ ತರಬೇತಿ ನೀಡಿದ್ದರು.

ರಿಯಾಗೆ ಮೂರು ಚಿನ್ನ: ಚಾಂಪಿಯನ್‌ಷಿಪ್‌ನಲ್ಲಿ ಮೈಸೂರಿನ ರಿಯಾ ಅವರು ಮೂರು ಚಿನ್ನ, ಎರಡು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗೆದ್ದುಕೊಂಡಿದ್ದಾರೆ.500 ಮೀಟರ್ಸ್ ರಿಂಕ್, 15ಕೆ ರಿಲೇ, ಮತ್ತು ರೋಡ್ ಒನ್ ಲ್ಯಾಪ್ ವಿಭಾಗದಲ್ಲಿ ಚಿನ್ನ, 42ಕೆ ಮ್ಯಾರಥಾನ್ ಹಾಗೂ 15ಕೆ ರೋಡ್ ಎಲಿಮಿನೇಷನ್ ವಿಭಾಗದಲ್ಲಿ ಬೆಳ್ಳಿ, 200 ಮೀ. ಡುಬ್ಬಿನ್ ಸ್ಪ್ರಿಂಟ್ ವಿಭಾಗದಲ್ಲಿ ಕಂಚಿನ ಪದಕವು ಅವರಿಗೆ ಒಲಿದಿವೆ.

ರಿಯಾ ಮೈಸೂರಿನ ವಿದ್ಯಾವರ್ಧಕ ಕಾಲೇಜಿನಲ್ಲಿ ಇಂಜಿನಿಯರಿಂಗ್ ಓದುತ್ತಿದ್ದು, 5ನೇ ಸೆಮಿಸ್ಟರ್ ವಿದ್ಯಾರ್ಥಿನಿ. ಅವರಿಗೆ ಕೆ. ಶ್ರೀಕಾಂತ್ ರಾವ್ ಹಾಗೂ ರಾಹುಲ್ ರಾಣಾ ತರಬೇತಿ ನೀಡಿದ್ದಾರೆ. ಮುಂದಿನ ವರ್ಷ ಚೀನಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್ ಅರ್ಹತಾ ಸುತ್ತಿಗೆ ರಿಯಾ ಆಯ್ಕೆಯಾಗಿದ್ದಾರೆ.

ಮಹಿಳಾ ಹಾಕಿ ಶಿಬಿರಕ್ಕೆ 60 ಮಂದಿ

ನವದೆಹಲಿ (ಪಿಟಿಐ): ಉದ್ಯಾನನಗರಿ ಬೆಂಗಳೂರಿನಲ್ಲಿ ಸೋಮವಾರ ಆರಂಭಗೊಂಡಿರುವ ರಾಷ್ಟ್ರೀಯ ಮಹಿಳಾ ಹಾಕಿ ತಂಡದ ಶಿಬಿರದಲ್ಲಿ 60 ಮಂದಿ ಪಾಲ್ಗೊಂಡಿದ್ದಾರೆ.

ಹಾಕಿ ಇಂಡಿಯಾ ಆಯೋಜಿಸಿದ್ದ ಇತರ ದೇಶಿ ಟೂರ್ನಿಗಳಲ್ಲಿ ತೋರಿದ ಸಾಮರ್ಥ್ಯವನ್ನು ಪರಿಗಣಿಸಿ ಶಿಬಿರಕ್ಕೆ ಆಟಗಾರ್ತಿಯರನ್ನು ಆಯ್ಕೆ ಮಾಡಲಾಗಿದೆ.

ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ದಕ್ಷಿಣ ಕೇಂದ್ರದಲ್ಲಿ ಶಿಬಿರ ಆಯೋಜನೆಯಾಗಿದೆ.ಮುಂದಿನ ವರ್ಷ ನಡೆಯಲಿರುವ ಏಷ್ಯಾಕಪ್ ಟೂರ್ನಿಯ ಪೂರ್ವಸಿದ್ಧತೆಗೂ ಮೊದಲು ಆಟಗಾರ್ತಿಯರ ಸಂಖ್ಯೆಯನ್ನು 33ಕ್ಕೆ ಕಡಿತಗೊಳಿಸಲಾಗುತ್ತದೆ ಎಂದು ಹಾಕಿ ಇಂಡಿಯಾ ತಿಳಿಸಿದೆ.

ಮುಂಬೈ ರೇಸ್

ಜುಕ್ಕರೆಲ್ಲಿ ಗೆಲ್ಲುವ ನಿರೀಕ್ಷೆ

ಅರಿಯಾನ್ ಹಾರ್ಸ್ ಕಂಪನಿ ಇಂಡಿಯನ್ 2000 ಗಿನ್ನೀಸ್ ಮಂಗಳವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜುಕರೆಲ್ಲಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ವಿಂಡಿ ಸಿಟಿ 6, ಲ್ಯಾಂಬ್ರೆಟ್ಟ 5, ಟರ್ಮರಿಕ್ ಪೌಡರ್ 2,
2ನೇ ರೇಸ್: ಜೈಂಟ್ ಸ್ಟಾರ್ 2, ಸಕ್ಸಸರ್ 3
3ನೇ ರೇಸ್: ಕೊಲಂಬಿಯನ್ 3, ಫ್ಯೂರೆರ್ 1, ಲೆಕ್ಸ್ ಲುಥರ್ 11
4ನೇ ರೇಸ್: ಬೊಟೆರೊ 6, ಸ್ಪೈಸ್ ಸ್ಟಾರ್ಮ್ 5, ಟ್ರೆಷರ್ ಗೋಲ್ಡ್ 3
5ನೇ ರೇಸ್: ಬೇಬಿ ಬಜೂಕ 5, ಎನ್ಡೆವರ್ 2, ಎಕ್ಸಲರೇಟರ್ 6
6ನೇ ರೇಸ್: ಜುಕ್ಕರೆಲ್ಲಿ 13, ಎ ಸ್ಟಾರ್ ಈಸ್ ಬಾರ್ನ್ 1, ಸ್ಟಾಕ್‌ಬ್ರಿಡ್ಜ್ 12
7ನೇ ರೇಸ್: ಚಾನ್ಸೆಲರ್ 1, ಶೀ ಈಸ್ ಆನ್ ಫೈರ್ 7, ಮೆಮೋರಬಲ್ ಮೂಮೆಂಟ್ಸ್ 4

ಉತ್ತಮ ಬೆಟ್: ವಿಂಡಿ ಸಿಟಿ

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ದೆಶಾರ್ನ್ ಬ್ರೌನ್ ಸಂಭ್ರಮ– ಪಿಟಿಐ ಚಿತ್ರ

ಐಎಸ್‌ಎಲ್: ದೆಶಾರ್ನ್ ಬ್ರೌನ್ ಹ್ಯಾಟ್ರಿಕ್

ಫತೋರ್ಡ (ಪಿಟಿಐ): ದೆಶಾರ್ನ್ ಬ್ರೌನ್ ಹ್ಯಾಟ್ರಿಕ್ ಗೋಲು ಗಳಿಸಿದ ಪಂದ್ಯದಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ಎಫ್‌ಸಿ ತಂಡವು ಮುಂಬೈ ಸಿಟಿ ಎಫ್‌ಸಿಯೊಡನೆ ಡ್ರಾ ಸಾಧಿಸಿತು.

ಸೋಮವಾರ ಇಲ್ಲಿ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಪಂದ್ಯದಲ್ಲಿ ನಾರ್ತ್‌ಈಸ್ಟ್ 3–3ರಿಂದ ಮುಂಬೈ ತಂಡದೊಂದಿಗೆ ಸಮಬಲ ಸಾಧಿಸಿತು. ಬ್ರೌನ್ 29,56 ಮತ್ತು 80ನೇ ನಿಮಿಷಗಳಲ್ಲಿ ನಾರ್ತ್‌ಈಸ್ಟ್ ಪರ ಕಾಲ್ಚಳಕ ತೋರಿದರು. ಎದುರಾಳಿ ತಂಡದ ಇಗರ್ ಅಂಗುಲೊ (33, 52ನೇ ನಿ.), ಬಿಪಿನ್ ಸಿಂಗ್ (40ನೇ ನಿ.) ಗೋಲು ದಾಖಲಿಸಿದರು.

ಒಡಿಶಾಗೆ ಗೆಲುವಿನ ತವಕ: ನಿರಾಸೆಯ ಸರಪಳಿ ಕಳಚುವ ವಿಶ್ವಾಸದಲ್ಲಿರುವ ಒಡಿಶಾ ಎಫ್‌ಸಿ ಹಾಗೂ ಹೈದರಾಬಾದ್ ಎಫ್‌ಸಿ ತಂಡಗಳು ಬ್ಯಾಂಬೊಲಿಮ್‌ನಲ್ಲಿ ಮಂಗಳವಾರ ಮುಖಾಮುಖಿಯಾಗಲಿವೆ.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಪೆಂಕಾಕ್ ಸಿಲಟ್: ಸಮೀಕ್ಷಾಗೆ ಚಿನ್ನ

ಸಮೀಕ್ಷಾ ರೆಡ್ಡಿ

ಬೆಂಗಳೂರು: ಕರ್ನಾಟಕದ ವೈ. ಸಮೀಕ್ಷಾ ರೆಡ್ಡಿ ಅವರು ಹರಿಯಾಣದ ರೊಹ್ತಕ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಪೆಂಕಾಕ್ ಸಿಲಟ್ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಸೋಮವಾರ ಮುಕ್ತಾಯಗೊಂಡ ಟೂರ್ನಿಯಲ್ಲಿ ಸಮೀಕ್ಷಾ, ಟಂಡಿಂಗ್ ವಿಭಾಗದ ಫೈನಲ್‌ನಲ್ಲಿ ಜಮ್ಮು ಮತ್ತು ಕಾಶ್ಮೀರದ ಸ್ಪರ್ಧಿಯ ಸವಾಲು ಮೀರಿ ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ರಾಷ್ಟ್ರಮಟ್ಟದಲ್ಲಿ ಅವರಿಗೆ ಒಲಿದ ಎರಡನೇ ಚಿನ್ನದ ಪದಕ ಇದು.

ಪ್ರಶಸ್ತಿ ವಿಜೇತ ಬ್ಯಾಂಕ್ ಆಫ್ ಬರೋಡಾ ತಂಡ: ನಿಂತವರು (ಎಡದಿಂದ): ದಿನೇಶ್, ಹರೀಶ್, ಅರವಿಂದ ಆರ್ಮುಗಂ, ರಾಜ್‌ಕುಮಾರನ್ (ಕೋಚ್), ಅನಿಲ್, ರಾಜೇಶ್ ಉಪ್ಪಾರ್, ಕಾರ್ತಿಕ್, ನಾಗರಾಜ್. ಮಂಡಿಯೂರಿದವರು: ಮುಫೀಜ್, ಕ್ಲಿಂಟನ್. ಕುಳಿತವರು: ಭಾರತ ತಂಡದ ಮಾಜಿ ಆಟಗಾರ ಪಾರ್ಥಸಾರಥಿ, ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ (ಕೆಎಸ್‌ಬಿಬಿಎ) ಅಧ್ಯಕ್ಷ ಬಿ. ದಯಾನಂದ, ಕಾರ್ಯದರ್ಶಿ ಕೆ.ಗೋವಿಂದರಾಜ್, ಐನ್‌ಫ್ಯಾಬ್ ಗ್ರೂಪ್ ಸ್ಥಾಪಕ ಪ್ರತಾಪ್ ಕೃಷ್ಣ, ಕೆಎಸ್‌ಬಿಬಿಎ ಉಪಾಧ್ಯಕ್ಷರಾದ ಆರ್. ರಾಜನ್, ಎಸ್. ಗುಣಶೇಖರ್.

ಕ್ರಿಕೆಟ್: ಐದು ವಿಕೆಟ್ ಗಳಿಸಿದ ಯಶೋವರ್ಧನ್

ಬೆಂಗಳೂರು: ಐದು ವಿಕೆಟ್ ಗೊಂಚಲು ಗಳಿಸಿದ ಕರ್ನಾಟಕದ ಯಶೋವರ್ಧನ್ ಪರಂತಾಪ್ ಬೌಲಿಂಗ್ ಮುಂದೆ ಪುದುಚೇರಿ ತಂಡವು ಅಲ್ಪಮೊತ್ತಕ್ಕೆ ಕುಸಿಯಿತು.

ವಿಶಾಖಪಟ್ಟಣದಲ್ಲಿ ನಡೆಯುತ್ತಿರುವ ಕೂಚ್ ಬೆಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಸೋಮವಾರ ಆರಂಭವಾದ ಪಂದ್ಯದಲ್ಲಿ ಪುದುಚೇರಿ ತಂಡವು 43.1 ಓವರ್‌ಗಳಲ್ಲಿ 59 ರನ್ ಗಳಿಸಿ ಆಲೌಟ್ ಆಯಿತು. ಅದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ತಂಡವು ದಿನದಾಟದ ಮುಕ್ತಾಯಕ್ಕೆ 44 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 147 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಪುದುಚೇರಿ ಸಿಎ: 43.1 ಓವರ್‌ಗಳಲ್ಲಿ 59 (ಆರ್. ಧನುಷ್ ಗೌಡ 15ಕ್ಕೆ2, ಯಶೋವರ್ಧನ್ ಪರಂತಾಪ್ 8ಕ್ಕೆ5), ಕೆಎಸ್‌ಸಿಎ: 44 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 147 (ವಿಶಾಲ್ ಒನತ್ ಔಟಾಗದೆ 47, ತಿಪ್ಪಾರೆಡ್ಡಿ ಔಟಾಗದೆ 98)

ಅಂಧರ ಕ್ರಿಕೆಟ್: ಭಾರತಕ್ಕೆ ಮಣಿದ ಬಾಂಗ್ಲಾದೇಶ

ಬೆಂಗಳೂರು: ಲೋಕೇಶ್ (142, 77 ಎಸೆತ, 4X23) ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಭಾರತ ಅಂಧರ ಕ್ರಿಕೆಟ್ ತಂಡವು ಮೊದಲ ಏಕದಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎಂಟು ವಿಕೆಟ್‌ಗಳಿಂದ ಸೋಲಿಸಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 1-0ಯಿಂದ ಮುನ್ನಡೆ ಸಾಧಿಸಿತು.

ಮಧ್ಯಪ್ರದೇಶದ ಭೋಪಾಲ್‌ನಲ್ಲಿ ಸೋಮವಾರ ನಡೆದ ಇಂಡಸ್‌ಇಂಡ್ ಬ್ಯಾಂಕ್ ಪ್ರಾಯೋಜಿತ ಟೂರ್ನಿಯ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ಟಾಸ್ ಗೆದ್ದು ಬ್ಯಾಟಿಂಗ್ ಮಾಡಿತು. ನಿಗದಿತ 40 ಓವರ್‌ಗಳಲ್ಲಿ ಎಲ್ಲ ವಿಕೆಟ್ ಕಳೆದುಕೊಂಡು 264 ರನ್ ಗಳಿಸಿತು. ತಂಡದ ಪರ ಮಹಮದ್ ಅಬ್ದುಲ್ ಮಲಿಕ್(72) ಉತ್ತಮವಾಗಿ ಬ್ಯಾಟ್ ಬೀಸಿದರು. ಭಾರತ ತಂಡಕ್ಕೆ ನಾಯಕ ಸುನಿಲ್ ರಮೇಶ್ (72) ಹಾಗೂ ಲೋಕೇಶ್ ತಂಡಕ್ಕೆ ಜಯ ದೊರಕಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಸುನಿಲ್ 35 ಎಸೆತಗಳಲ್ಲಿ 72 ರನ್ ಗಳಿಸಿದರು. ಲೋಕೇಶ್ ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 40 ಓವರ್‌ಗಳಲ್ಲಿ 264 (ಮೊಹಮ್ಮದ್ ಅಬ್ದುಲ್ ಮಲಿಕ್ 72, ಮೊಹಮ್ಮದ್ ಆಶಿಕುರ್ ರೆಹಮಾನ್ 46, ಮೊಹಮ್ಮದ್ ಸಲ್ಮಾನ್ 38; ಸುನಿಲ್ ರಮೇಶ್ 19ಕ್ಕೆ 1, ಲೋಕೇಶ್ 29ಕ್ಕೆ 1, ಕಲ್ಪೇಶ್ ನಿಂಬಾಡಕರ್ 30ಕ್ಕೆ 1 ವಿಜಯಕುಮಾರ್ 14ಕ್ಕೆ 1) ಭಾರತ: 21.5 ಓವರ್‌ಗಳಲ್ಲಿ 2ಕ್ಕೆ 266 (ದುರ್ಗಾರಾವ್ 19, ಲೋಕೇಶ್ 142, ಸುನಿಲ್ ರಮೇಶ್ 72; ಮೊಹಮ್ಮದ್ ರಶೀದ್ 59ಕ್ಕೆ 2). ಫಲಿತಾಂಶ: ಭಾರತಕ್ಕೆ ಎಂಟು ವಿಕೆಟ್‌ಗಳ ಜಯ

ಬ್ಯಾಂಕ್ ಆಫ್ ಬರೋಡಾ, ಬೀಗಲ್ಸ್ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಆಫ್ ಬರೋಡಾ ಮತ್ತು ಬೀಗಲ್ಸ್ ಬಿ.ಸಿ. ತಂಡಗಳು ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಫೈನಲ್ ಪಂದ್ಯದಲ್ಲಿ ಬ್ಯಾಂಕ್ ಆಫ್ ಬರೋಡಾ 92–74ರಿಂದ ಎಂಇಜಿ ಆ್ಯಂಡ್ ಸೆಂಟರ್ ತಂಡವನ್ನು ಸೋಲಿಸಿತು.

ವಿಜೇತ ತಂಡದ ಅರವಿಂದ್ 38 ಪಾಯಿಂಟ್ಸ್ ಗಳಿಸಿದರು.3ನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಐಬಿಬಿಸಿ 64–51ರಿಂದ ಡಿವೈಇಎಸ್ ಬೆಂಗಳೂರು ತಂಡವನ್ನು ಸೋಲಿಸಿತು.

ಮಹಿಳಾ ವಿಭಾಗದ ಫೈನಲ್‌ನಲ್ಲಿ ಬೀಗಲ್ಸ್ ಬಿ.ಸಿ. 71–48ರಿಂದ ರಾಜ್‌ಕುಮಾರ್ ಬಿ.ಸಿ. ತಂಡದ ಎದುರು ಗೆದ್ದಿತು.

ಬೀಗಲ್ಸ್ ತಂಡದ ಚಂದನಾ 32 ಪಾಯಿಂಟ್ಸ್ ಕಲೆ ಹಾಕಿದರು. ರಾಜ್‌ಮಹಲ್ ಬಿ.ಸಿ. ತಂಡವು ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ತಂಡವು 52–49ರಿಂದ ಡಿವೈಇಎಸ್ ವಿದ್ಯಾನಗರ ತಂಡದ ಎದುರು ಗೆದ್ದಿತು.